# ಅಧ್ಯಾಯ-೦೫

# ಕೈಗಾರಿಕೆಗಳು ಮತ್ತು ವಿದ್ಯುಚ್ಛಕ್ತಿ



ಕರ್ನಾಟಕ ರಾಜ್ಯವು ಅಧಿಕ ಪ್ರಮಾಣದ ಉಪಯುಕ್ತ ಖನಿಜಗಳು, ಕಚ್ಚಾ ಸರಕುಗಳು, ಸಾಗರೋತ್ಪನ್ನಗಳು ಮೊದಲಾದವುಗಳನ್ನು ಹೊಂದಿರುವುದರ ಜೊತೆಗೆ ಆಂತರಿಕ ಸಾಧನ ಸೌಲಭ್ಯಗಳಾದ ಸಾರಿಗೆ-ಸಂಪರ್ಕ, ಬ್ಯಾಂಕಿಂಗ್, ತಾಂತ್ರಿಕ ಜ್ಞಾನವನ್ನು ಹೊಂದಿರುವ ಮಾನವಶಕ್ತಿ, ಕೈಗಾರಿಕಾ ವಸಾಹತು, ಕೈಗಾರಿಕಾ ಪ್ರದೇಶ, ಅಂತರರಾಷ್ಟ್ರೀಯ ಮಾಹಿತಿ ತಂತ್ರಜ್ಞಾನ ಪಾರ್ಕ್, ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ, ಎಲೆಕ್ಟ್ರಾನಿಕ್ಸ್ ಮೊದಲಾದ ಸೌಲಭ್ಯಗಳನ್ನು ಹೊಂದಿದೆ. ರಾಷ್ಟ್ರದ ಕೈಗಾರಿಕಾ ನಕ್ಷೆಯಲ್ಲಿ ರಾಜ್ಯವು ಪ್ರಮುಖ ಸ್ಥಾನವನ್ನು ಪಡೆಯಲು ಬಹಳ ಹಿಂದಿನಿಂದಲೂ ಕೈಗಾರಿಕಾ ಬೆಳವಣಿಗೆಗೆ ಹಾಕಿದ ಉತ್ತಮ ಅಡಿಪಾಯ ಮತ್ತು ಕಾರ್ಮಿಕ ಬಾಂಧವ್ಯ ಇದಕ್ಕೆ ಸಹಕಾರಿಯಾಗಿದೆ.

ರಾಜ್ಯದ ಕೈಗಾರಿಕಾ ಬೆಳವಣಿಗೆಗೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಪ್ರತ್ಯೇಕ ಪ್ರೋತ್ಸಾಹ ಮತ್ತು ರಿಯಾಯಿತಿ ಸೌಲಭ್ಯಗಳನ್ನು ಘೋಷಿಸಿವೆ. ರಾಜ್ಯದಲ್ಲಿ ಲಭ್ಯವಿರುವ ಖನಿಜ ಸಂಪನ್ಮೂಲಗಳನ್ನು ಉಪಯೋಗಿಸಿಕೊಂಡು ಕಬ್ಬಿಣ ಮತ್ತು ಉಕ್ಕು, ಮ್ಯಾಂಗನೀಸ್, ಸಿಮೆಂಟ್, ಇಟ್ಟಿಗೆ ಮೊದಲಾದವುಗಳನ್ನು ತಯಾರಿಸುವ ಕೈಗಾರಿಕೆಗಳು ಪ್ರಮುಖ ಸ್ಥಾನವನ್ನು ಪಡೆದಿವೆ. ಕೃಷಿ ಆಧಾರಿತ ಕೈಗಾರಿಕೆಗಳಾದ ಸಕ್ಕರೆ, ಹತ್ತಿಬಟ್ಟೆ, ಎಣ್ಣೆ ತೆಗೆಯುವುದು, ಗೋಡಂಬಿ ಸಂಸ್ಕರಣೆ, ಹಣ್ಣುಗಳ ಸಂಸ್ಕರಣೆ ಮತ್ತು ಆಹಾರ ಪದಾರ್ಥಗಳ ತಯಾರಿಕೆಯೂ ಸಹ ಪ್ರಮುಖವಾಗಿದೆ. ಮರ ಕೊಯ್ಯುವ ಮಿಲ್ಲುಗಳು, ಕಾಗದದ ಕಾರ್ಖಾನೆಗಳು, ಪ್ಲೈವುಡ್, ಪಾಲಿಫೈಬರ್ ಮೊದಲಾದವುಗಳು ರಾಜ್ಯದಲ್ಲಿ ಅಭಿವೃದ್ಧಿ ಹೊಂದುತ್ತಿರುವ ಮರ ಆಧಾರಿತ ಕೈಗಾರಿಕೆಗಳಾಗಿವೆ. ರಾಜ್ಯದ ಕೈಗಾರಿಕಾ ಬೆಳವಣಿಗೆಗೆ ಕೆಲವು ಸಂಸ್ಥೆಗಳು ಪೂರಕವಾಗಬಲ್ಲವು ಎಂಬುದನ್ನರಿತ ಸರ್ಕಾರ ಸ್ವಾತಂತ್ರ್ಯ ಪೂರ್ವದಲ್ಲೇ ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆ (೧೯೧೩), ಮೈಸೂರು ಬ್ಯಾಂಕ್ (೧೯೧೩), ಛೇಂಬರ್ ಆಫ್ ಕಾಮರ್ಸ್ (೧೯೧೫) ಮೊದಲಾದವುಗಳನ್ನು ಕಾರ್ಯಾರಂಭಗೊಳ್ಳುವಂತೆ ಮಾಡಿತು. ರಾಜ್ಯದಲ್ಲಿ ೧೮೮೭ ರಲ್ಲಿ ಮೊಟ್ಟಮೊದಲ ಬಾರಿಗೆ ಗೋಕಾಕ್ ಫಾಲ್ಸ್‌ನಲ್ಲಿ ಕಡಿಮೆ ಪ್ರಮಾಣದಲ್ಲೂ, ೧೯೦೨ ರಲ್ಲಿ ಕೋಲಾರದ ಚಿನ್ನದಗಣಿಗೆ ವಿದ್ಯುತ್ ಪೂರೈಕೆ ಮಾಡಲು ಶಿವನಸಮುದ್ರದಲ್ಲಿ ಅಧಿಕ ಪ್ರಮಾಣದಲ್ಲೂ ಜಲ ವಿದ್ಯುತ್ ಉತ್ಪಾದನೆಗೊಂಡಿತು.

ಭಾರತದ ಕೈಗಾರಿಕಾ ಬೆಳವಣಿಗೆಯಲ್ಲಿ ಕರ್ನಾಟಕವು ಪ್ರಧಾನಪಾತ್ರ ವಹಿಸುತ್ತಿದ್ದು, ಮುಖ್ಯವಾಗಿ ಹೆಚ್ಚಿನ ತಂತ್ರಜ್ಞಾನದ ಕೈಗಾರಿಕೆಗಳಾದ ವಿದ್ಯುತ್ ಹಾಗೂ ವಿದ್ಯುನ್ಮಾನ, ಮಾಹಿತಿ ಮತ್ತು ಸಂಪರ್ಕ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಹಾಗೂ ಇತ್ತೀಚಿನ ನ್ಯಾನೋ ತಂತ್ರಜ್ಞಾನದ ಕೈಗಾರಿಕೆಗಳಲ್ಲಿ ತನ್ನದೇ ಆದ ಕೊಡುಗೆಯನ್ನು ನೀಡುತ್ತಿದೆ. ಒಟ್ಟಿನಲ್ಲಿ ಕರ್ನಾಟಕದ ಕೈಗಾರಿಕಾ ವಿನ್ಯಾಸವು, ಒಂದು ಕಡೆ ಆಧುನಿಕ ಉನ್ನತಮಟ್ಟದ ತಂತ್ರಜ್ಞಾನದ ಬಂಡವಾಳ ವಸ್ತುಗಳು ತೀವ್ರ ಜ್ಞಾನದಾಹಿ ಕೈಗಾರಿಕೆ, ಇನ್ನೊಂದೆಡೆ ಸಾಂಪ್ರದಾಯಿಕ ಗ್ರಾಹಕ ವಸ್ತುಗಳ ಕೈಗಾರಿಕೆಗಳ ಸಮ್ಮಿಶ್ರಣವಾಗಿದೆ. ಇದರೊಂದಿಗೆ ೨೦೧೪-೧೫ನೇ ಸಾಲಿನಲ್ಲಿ ಕರ್ನಾಟಕದ ಕೈಗಾರಿಕಾ ಬೆಳವಣಿಗೆ ಹಾಗೂ ಸರ್ಕಾರವು ತೆಗೆದುಕೊಂಡಿರುವ ಕೈಗಾರಿಕಾ ನೀತಿ ನಿರೂಪಣೆಗಳ ಬಗ್ಗೆ ಸ್ಥೂಲ ವಿವರಣೆಯನ್ನು ಇಲ್ಲಿ ನೀಡಲಾಗಿದೆ.

**ಕೈಗಾರಿಕಾ ಉತ್ಪಾದನೆಗಳ ಸ್ಥಿತಿಗತಿಗಳ ವಿವರ:** ಕರ್ನಾಟಕದಲ್ಲಿ ಖನಿಜ, ತಯಾರಿಕೆ ಹಾಗೂ ವಿದ್ಯುತ್ ವಲಯ ಒಳಗೊಂಡಂತೆ ಕೈಗಾರಿಕಾ ಉತ್ಪಾದನಾ ಸಾಮಾನ್ಯ ಸೂಚ್ಯಂಕವು ೨೦೧೪-೧೫ರಲ್ಲಿ ೧೮೧.೧೫ ಆಗಿತ್ತು. ಕರ್ನಾಟಕದ ಸಂಘಟಿತ ವಲಯದಲ್ಲಿ ಸಾಮಾನ್ಯ ಸೂಚ್ಯಂಕವು ೨೦೧೩-೧೪ಕ್ಕೆ ಹೋಲಿಸಿದಾಗ ೨೦೧೪-೧೫ರಲ್ಲಿ ಶೇ.೨.೩ರಷ್ಟು ಬೆಳವಣಿಗೆಯನ್ನು ಸಾಧಿಸಿದೆ. ಈ ಸಂಘಟಿತ ಕೈಗಾರಿಕಾ ವಲಯದಲ್ಲಿ ಉತ್ಪಾದನಾ ವಲಯವು ಹೆಚ್ಚಿನ ಅಂದರೆ ಶೇ.೨.೯೩ರಷ್ಟು ವಾರ್ಷಿಕ ಬೆಳವಣಿಗೆಯ ದರವನ್ನು ದಾಖಲಿಸಿದ್ದು, ನಂತರದ ಸ್ಥಾನವನ್ನು ವಿದ್ಯುತ್ ವಲಯವು (ಶೇ.೧.೯೧) ಮತ್ತು ಗಣಿ ವಲಯವು ಋಣಾತ್ಮಕ ಬೆಳವಣಿಗೆ (ಶೇ.-೨೩.೧೩) ಹೊಂದಿರುತ್ತವೆ. ಗಣಿಗಾರಿಕೆ ಚಟುವಟಿಕೆಯಲ್ಲಿ ಕುಗ್ಗುವಿಕೆಯಿಂದ ಮತ್ತು ಉತ್ಪಾದನಾ ವಲಯದಲ್ಲಿನ ಮಧ್ಯಮ ಬೆಳವಣಿಗೆಯಿಂದ ಕೈಗಾರಿಕಾ ವಲಯದಲ್ಲಿ ಮಂದಗತಿಯ ಬೆಳವಣಿಗೆಯನ್ನು ಗಮನಿಸಲಾಗಿದೆ.

೨೦೦೫-೦೬ ರಿಂದ ೨೦೧೪-೧೫ರವರೆಗಿನ ಅವಧಿಗೆ ಆಧಾರ ವರ್ಷ ೨೦೦೪-೦೫ರಲ್ಲಿ ಸಂಘಟಿತ ಕೈಗಾರಿಕಾ ವಲಯದ ಸಂಯುಕ್ತ ವಾರ್ಷಿಕ ಸೂಚ್ಯಂಕದ ಬೆಳವಣಿಗೆಯ ದರವು ಸಾಮಾನ್ಯ ವಲಯದಲ್ಲಿ ಶೇ.೬.೧ರಷ್ಟು, ಉತ್ಪಾದನಾ ವಲಯದಲ್ಲಿ ಶೇ.೬.೬ರಷ್ಟು ಹಾಗೂ ವಿದ್ಯುತ್ ವಲಯದಲ್ಲಿ ಶೇ.೭.೫ರಷ್ಟಿದೆ. ರಾಜ್ಯದ ಗಣಿ ವಲಯದ ಉತ್ಪಾದನೆಯಲ್ಲಿ ಶೇ.೮.೯ರಷ್ಟು ಇಳಿಕೆ ಕಂಡುಬಂದಿದೆ. ೨೦೧೩-೧೪ರಲ್ಲಿ ಬಳಕೆಯಾಧಾರಿತ ಕೈಗಾರಿಕಾ ನಾಲ್ಕು ಪ್ರಮುಖ ಗುಂಪುಗಳಲ್ಲಿ ಗ್ರಾಹಕ ವಸ್ತುಗಳು ಶೇ.೫.೮೩ರಷ್ಟು ಹೆಚ್ಚಿನ ಬೆಳವಣಿಗೆಯನ್ನು ಹೊಂದಿದ್ದು, ಉಳಿದಂತೆ ಮೂಲ ವಸ್ತುಗಳು ಶೇ. ೧.೯೧, ಬಂಡವಾಳ ವಸ್ತುಗಳು ಶೇ. ೧.೭೦ ಮತ್ತು ಮಧ್ಯವರ್ತಿ ವಸ್ತುಗಳು ಶೇ. ೧.೫೪ರಷ್ಟು ಬೆಳವಣಿಗೆ ಹೊಂದಿದೆ.

**ಕೈಗಾರಿಕಾ ವಾರ್ಷಿಕ ಸಮೀಕ್ಷೆ:** ಕೈಗಾರಿಕಾ ವಾರ್ಷಿಕ ಸಮೀಕ್ಷೆಯು ಸಂಘಟಿತ ಕೈಗಾರಿಕಾ ಉತ್ಪಾದನಾ ವಲಯದ ಅಂಕಿ-ಅಂಶಗಳ ವಿವರಗಳನ್ನು ನೀಡುತ್ತಿದ್ದು, ೨೦೧೨-೧೩ನೇ ಸಾಲಿಗೆ ಭಾರತದಲ್ಲಿ ಒಟ್ಟು ನೋಂದಣಿಯಾದ ಕೈಗಾರಿಕಾ ಘಟಕಗಳ ಪೈಕಿ ಶೇ. ೫.೨೯ರಷ್ಟು ಭಾಗ ಕರ್ನಾಟಕದ್ದಾಗಿದೆ. ಸದರಿ ಸಾಲಿನಲ್ಲಿ ನೋಂದಣಿಯಾದ ಈ ಕೈಗಾರಿಕಾ ಘಟಕಗಳು ಸ್ಥಿರ ಬಂಡವಾಳದಲ್ಲಿ ಶೇ. ೬.೬೬ರಷ್ಟು, ಒಟ್ಟು ಹುಟ್ಟುವಳಿಯಲ್ಲಿ ಶೇ. ೬.೬೩ರಷ್ಟು ಹಾಗೂ ಶೇ. ೬.೬ರಷ್ಟು ಒಟ್ಟು ಮೌಲ್ಯವರ್ಧಿತ ಕೊಡುಗೆಯನ್ನು ನೀಡಿರುತ್ತವೆ. ಪ್ರತಿ ಕಾರ್ಮಿಕನ ಮೌಲ್ಯವರ್ಧಿತ ಕೊಡುಗೆಯಲ್ಲಿ, ರೂ.೪೯,೮೦೧.೦೦ ಮೌಲ್ಯ ಹೊಂದಿದ್ದು ಕರ್ನಾಟಕವು ರಾಷ್ಟ್ರಮಟ್ಟದ ಸರಾಸರಿಯಾದ ರೂ.೪೪,೩೪೭.೦೦ಕ್ಕಿಂತ ಉತ್ತಮ ಸ್ಥಿತಿಯಲ್ಲಿದೆ.

**ಅತಿ ಸಣ್ಣ, ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳು:** ೨೦೧೪-೧೫ನೇ ಸಾಲಿಗೆ ರೂ.೨,೭೯,೨೯೧ ಲಕ್ಷಗಳ ಬಂಡವಾಳದಿಂದ ೨೮,೭೪೨ ಅತಿ ಸಣ್ಣ ಮತ್ತು ಮಧ್ಯಮ ಕೈಗಾರಿಕಾ ಘಟಕಗಳ ನೋಂದಣಿಯಾಗಿದ್ದು ೧,೭೫,೪೬೯ ಜನರಿಗೆ ಉದ್ಯೋಗಾವಕಾಶಗಳನ್ನು ಒದಗಿಸಿದೆ. ೨೦೧೩-೧೪ನೇ ಸಾಲಿಗೆ ಹೋಲಿಸಿದಾಗ, ೨೦೧೪-೧೫ರಲ್ಲಿ ನೋಂದಣಿಯಾದ ಘಟಕಗಳು ಶೇ. ೧೦.೬೯ರಷ್ಟು ಹೆಚ್ಚಳವಾಗಿದ್ದು, ಕ್ರಮವಾಗಿ ಬಂಡವಾಳ ಹೂಡಿಕೆ ಮತ್ತು ಉದ್ಯೋಗಾವಕಾಶವು ಶೇ. ೨.೦೨ರಷ್ಟು ಹಾಗೂ ಶೇ. ೪.೮೫ರಷ್ಟು ಹೆಚ್ಚಾಗಿರುವುದು ಕಂಡುಬಂದಿದೆ.

**ನೂತನ ಜವಳಿ ನೀತಿ:** ಕರ್ನಾಟಕ ರಾಜ್ಯವು ದೇಶದಲ್ಲಿಯೇ ನೂತನ ಜವಳಿ ನೀತಿ ೨೦೧೩-೧೮ ಅನ್ನು ದಿ: ೩೧.೧೦.೨೦೧೩ ರಿಂದ ಜಾರಿಗೆ ತಂದ ಪ್ರಥಮ ರಾಜ್ಯವಾಗಿದೆ. ಸುವರ್ಣ ವಸ್ತ್ರ ನೀತಿ ೨೦೦೮-೧೩ ಪೂರ್ಣಗೊಂಡ ನಂತರ 'ನೂತನ ಜವಳಿ ನೀತಿ ೨೦೧೩-೧೮' ಜಾರಿಗೊಂಡಿದೆ. ಕರ್ನಾಟಕದಲ್ಲಿ ೨೦೧೫-೧೬ನೇ ಸಾಲಿನ ಡಿಸೆಂಬರ್ ೨೦೧೫ರ ಅಂತ್ಯಕ್ಕೆ ೩೮.೬೮ ಮಿಲಿಯನ್ ಮೀಟರುಗಳಷ್ಟು ಕೈಮಗ್ಗ ಜವಳಿಗಳನ್ನು ಉತ್ಪಾದಿಸಿದ್ದು, ೧.೦೬ಲಕ್ಷ ಜನರಿಗೆ ಉದ್ಯೋಗವನ್ನು ಒದಗಿಸಿದೆ. ಆದರೆ ೨೦೧೪-೧೫ರಲ್ಲಿ ಇದು ೪೩.೫೮ ಮಿಲಿಯನ್ ಮೀಟರುಗಳಷ್ಟು ಕೈಮಗ್ಗ ಜವಳಿಗಳನ್ನು ಉತ್ಪಾದಿಸಿದ್ದು, ೦.೮೫ ಲಕ್ಷ ಜನರಿಗೆ ಉದ್ಯೋಗವನ್ನು ಒದಗಿಸಿತ್ತು.

**ರೇಷ್ಮೆ:** ಪ್ರಮುಖ ಉದ್ಯೋಗಜನಕ ಕ್ಷೇತ್ರಗಳಲ್ಲಿ ರೇಷ್ಮೆ ಕೈಗಾರಿಕೆ ಒಂದಾಗಿದ್ದು ಕರ್ನಾಟಕದ ಗ್ರಾಮಾಂತರ ಪ್ರದೇಶಗಳಲ್ಲಿ ಉದ್ಯೋಗಾವಕಾಶವನ್ನು ಕಲ್ಪಿಸುವುದರಲ್ಲಿ ಇದರ ಬೆಳವಣಿಗೆ ವಿಶೇಷ ಪಾತ್ರವನ್ನು ವಹಿಸುತ್ತಿದೆ. ಡಿಸೆಂಬರ್ ೨೦೧೫ರ ಡಿಸೆಂಬರ್ ಅಂತ್ಯಕ್ಕೆ ಹಿಪ್ಪುನೇರಳೆ ಬೆಳೆದ ಪ್ರದೇಶವು ರಾಜ್ಯದಲ್ಲಿ ಸುಮಾರು ೮೭,೯೨೭.೦೫ ಹೆಕ್ಟೇರ್‌ಗಳಾಗಿದೆ. ಇದೇ ಅವಧಿಯಲ್ಲಿ ರೇಷ್ಮೆ ಗೂಡಿನ ಉತ್ಪಾದನೆ ೫೩ ಸಾವಿರ ಮೆಟ್ರಿಕ್ ಟನ್, ರೇಷ್ಮೆ ಗೂಡುಗಳ ಮಾರಾಟ ೪೧.೪೩ ಸಾವಿರ ಮೆಟ್ರಿಕ್ ಟನ್, ಉತ್ಪಾದಿಸಲ್ಪಟ್ಟ ಕಚ್ಚಾ ರೇಷ್ಮೆ ೭.೩೮೧ ಮೆಟ್ರಿಕ್ ಟನ್ ಹಾಗೂ ಕೈಗಾರಿಕಾ ಉದ್ಯೋಗಾವಕಾಶ ೧೧.೪೩ ಲಕ್ಷಗಳಷ್ಟಾಗಿದ್ದು, ೨೦೧೪-೧೫ಕ್ಕೆ ಹೋಲಿಸಿದಾಗ ೨೦೧೫ರಲ್ಲಿ ಕುಂಠಿತವಾಗಿರುವುದು ಕಂಡುಬಂದಿದೆ. ೨೦೧೪-೧೫ನೇ ಸಾಲಿನಲ್ಲಿ ಹಿಪ್ಪುನೇರಳೆಯ ಉತ್ಪಾದನೆಯು ಭಾರತದಲ್ಲಿ ಸುಮಾರು ೨೧೨೮೦ ಮೆಟ್ರಿಕ್ ಟನ್ ಎಂದು ಅಂದಾಜು ಮಾಡಲಾಗಿದ್ದು ಅದರಲ್ಲಿ ೯೫೪೬ ಮೆಟ್ರಿಕ್ ಟನ್‌ಗಳಷ್ಟು ಕರ್ನಾಟಕ ಪಾಲು ನೀಡಿದೆ. ೨೦೧೪-೧೫ರಲ್ಲಿ ಮಂಡಳಿಯು ೨೩೧೦.೦೦ ಲಕ್ಷಗಳ ವಹಿವಾಟು ನಡೆಸಿದ್ದು, ಹಿಂದಿನ ವರ್ಷದಲ್ಲಿ ವಹಿವಾಟು ರೂ. ೩೮೬೦.೦೦ ಲಕ್ಷಗಳು ಇದ್ದಿತು. ಪ್ರಸ್ತುತ ವರ್ಷ ಡಿಸೆಂಬರ್ ೨೦೧೫ರವರೆಗೆ ವಹಿವಾಟು ರೂ. ೮೦೩.೯೮ ಲಕ್ಷಗಳು ಆಗಿರುತ್ತದೆ.

ಕಿಯೋನಿಕ್ಸ್ ಸಂಸ್ಥೆಯು ಮಾಹಿತಿ ತಂತ್ರಜ್ಞಾನ ಹೂಡಿಕೆ ವಲಯದ (ITIR) ಯೋಜನೆ ಕಾರ್ಯಗತಗೊಳಿಸುವುದರಲ್ಲಿ ಪ್ರಮುಖ ಪಾತ್ರವನ್ನು ನಿರ್ವಹಿಸುತ್ತಿದ್ದು, ಕರ್ನಾಟಕ ಹಾಗೂ ಭಾರತ ಸರ್ಕಾರದ ವತಿಯಿಂದ ಬೆಂಗಳೂರಿನ ಸಮೀಪವಿರುವ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದ ಹತ್ತಿರ ಅಭಿವೃದ್ಧಿಗೊಳಿಸಲಾಗುತ್ತಿದೆ. ಮೊದಲ ಹಂತದಲ್ಲಿ ಕಾರ್ಯವನ್ನು ರೂ. ೧೬೦೦ ಕೋಟಿ ಹೂಡಿಕೆಯೊಂದಿಗೆ ಸುಮಾರು ೨೧೦೦ ಎಕರೆ ವ್ಯಾಪ್ತಿ ಪ್ರದೇಶದಲ್ಲಿ ಕೈಗೊಳ್ಳಲಾಗುತ್ತಿದೆ. ನಗರದಲ್ಲಿ ಇತರೆ ಉಪಕೈಗಾರಿಕೆಗಳೊಂದಿಗೆ ಐಟಿ ಎಸ್.ಈ.ಝೆಡ್, ಎಲೆಕ್ಟ್ರಾನಿಕ್ ಹಾರ್ಡ್‌ವೇರ್ ಪಾರ್ಕ್‌ಗಳನ್ನು ಹೊಂದಲು ಒಂದು ಸಮಗ್ರ ವಸತಿ ಯೋಜನೆಯನ್ನು ನೀಡಲು ಉದ್ದೇಶಿಸಿದೆ.

ಉತ್ತಮವಾಗಿ ಕಾರ್ಯನಿರ್ವಹಿಸುವ ಮೂರು ಸಾರ್ವಜನಿಕ ಉದ್ದಿಮೆಗಳನ್ನು ಗುರುತಿಸಿ ಅವುಗಳ ಕಾರ್ಯಕ್ಷಮತೆಯನ್ನು ಪ್ರೇರೇಪಿಸಲು ಹಾಗೂ ಪ್ರಶಂಸಿಸಲು 'ವಾರ್ಷಿಕ ಮುಖ್ಯಮಂತ್ರಿ ರತ್ನ ಪ್ರಶಸ್ತಿ'ಯನ್ನು ಪ್ರತಿವರ್ಷವೂ ೩ ಅತ್ಯುತ್ತಮ ಸಾರ್ವಜನಿಕ ಉದ್ದಿಮೆಗಳಿಗೆ ನೀಡಲಾಗುತ್ತಿದೆ. ೧) ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ, ಬೆಂಗಳೂರು ೨) ಮಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ ಮತ್ತು ೩) ಡಾ. ಬಿ. ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮ ನಿಯಮಿತ, ಬೆಂಗಳೂರು ಇವು ಪ್ರಸ್ತುತ ೨೦೧೫-೧೬ನೇ ಸಾಲಿನ ಪ್ರಶಸ್ತಿ ವಿಜೇತ ಮೂರು ಕಂಪನಿಗಳು.

### ಜಾಗತಿಕ ಬಂಡವಾಳ ಸಮಾವೇಶ - ಫೆಬ್ರುವರಿ ೨೦೧೬

ಯಶಸ್ವಿ ಹೂಡಿಕೆದಾರರ ಸಮಾವೇಶ ಇನ್ವೆಸ್ಟ್ ಕರ್ನಾಟಕ ೨೦೧೬ ಫೆಬ್ರುವರಿ ೩ ರಿಂದ ೫ರ ವರೆಗೆ ಹಮ್ಮಿಕೊಂಡಿದ್ದು, ಸರ್ಕಾರವು ರೂ. ೩ ಲಕ್ಷ ಕೋಟಿಗಿಂತ ಹೆಚ್ಚು ಹೂಡಿಕೆಯನ್ನು ಆಕರ್ಷಿಸಿದ್ದು, ಇದರಲ್ಲಿ ರೂ. ೧.೭೭ ಲಕ್ಷ ಕೋಟಿಗಳ ೧೦೮೦ ಯೋಜನೆಗಳಿಗೆ ಅನುಮೋದನೆಯನ್ನು ನೀಡಲಾಗಿರುತ್ತದೆ. ಇದು ೪.೮೨ ಲಕ್ಷ ಮಂದಿಗೆ ಉದ್ಯೋಗವನ್ನು ಸೃಷ್ಟಿಸುವ ಸಾಮರ್ಥ್ಯವನ್ನು

ಹೊಂದಿರುತ್ತದೆ. ಮುಂದುವರಿದು, ಉಳಿದ ವಲಯಗಳ ರೂ. ೧.೨೭ ಲಕ್ಷ ಕೋಟಿಗಳ ಸಾಮರ್ಥ್ಯದ ಹೂಡಿಕೆಗೆ ಮತ್ತು ೧.೭ ಲಕ್ಷ ಮಂದಿಗೆ ಉದ್ಯೋಗ ಸೃಷ್ಟಿಯ ತಿಳುವಳಿಕೆ/ಆಸಕ್ತಿ ಅಭಿವ್ಯಕ್ತಿ ಪತ್ರಗಳಿಗೆ ಸಹಿಯಾಗಿರುತ್ತದೆ.

## ಪ್ರವಾಸೋದ್ಯಮ

ರಾಜ್ಯಕ್ಕೆ ಭೇಟಿ ನೀಡುತ್ತಿರುವ ಪ್ರವಾಸಿಗರ ಸಂಖ್ಯೆಯೂ ಕ್ರಮವಾಗಿ ಏರಿಕೆಯಾಗುತ್ತಿದ್ದು ೨೦೧೧ರಲ್ಲಿ ೮.೪೧ ಕೋಟಿ ಇದ್ದದ್ದು, ೨೦೧೪ರಲ್ಲಿ ೧೧.೮೨ ಕೋಟಿ ತಲುಪಿದ್ದು, ಶೇ. ೪೦.೫೪ರಷ್ಟು ಏರಿಕೆಯಾಗಿದೆ. ರಾಜ್ಯದಲ್ಲಿ ಗಾಲ್ಫ್ ಟೂರಿಸಂ ಅನ್ನು ಅಭಿವೃದ್ಧಿಪಡಿಸಲು ಇಲಾಖೆಯು ಆಸಕ್ತಿ ಹೊಂದಿದ್ದು, ಇಲಾಖೆಯು ಇದಕ್ಕಾಗಿ ಖಾಸಗಿ ಗಾಲ್ಫ್ ಕ್ಲಬ್‌ಗಳಿಗೆ ಪ್ರವಾಸಿ ಸೌಲಭ್ಯಗಳನ್ನು ಅಭಿವೃದ್ಧಿಪಡಿಸುವ ಸಲುವಾಗಿ ಅನುದಾನ ಒದಗಿಸಿ ಉತ್ತೇಜಿಸುತ್ತಿದೆ. ೨೦೧೫ನೇ ಸಾಲಿನಲ್ಲಿ ಕರ್ನಾಟಕ ಪ್ರವಾಸೋದ್ಯಮ ತಾಣವಾದ ಕೊಡಗು, ಕಾಂಡೆ ನಾಸ್ಟ್ ಇಂಡಿಯಾ ಟ್ರಾವೆಲರ್ ಸಂಸ್ಥೆಯ ೫ನೇ ಆವೃತ್ತಿಯ ರೀಡರ್ಸ್ ಛಾಯ್ಸ್ ವಿಭಾಗದಲ್ಲಿ ನೆಚ್ಚಿನ ಉದಯೋನ್ಮುಖ ತಾಣವಾಗಿ ಪ್ರಶಸ್ತಿಗೆ ಆಯ್ಕೆಯಾಗಿರುತ್ತದೆ. ಸಮಗ್ರ ಪ್ರವಾಸೋದ್ಯಮ ಅಭಿವೃದ್ಧಿಗಾಗಿ ಈಗಾಗಲೇ ನೂತನ ಪ್ರವಾಸೋದ್ಯಮ ನೀತಿ ೨೦೧೫-೨೦ನ್ನು ಪ್ರಕಟಿಸಲಾಗಿದೆ. ಈ ವರ್ಷಗಳ ಅವಧಿಯಲ್ಲಿ ಹೆಚ್ಚಿನ ಬಂಡವಾಳವು ಹೂಡಿಕೆಯಾಗಲಿದ್ದು, ಹೊಸ ಉದ್ಯೋಗಗಳ ಸೃಷ್ಟಿಯಾಗಲಿದೆ. ಮೆಗಾ ಯೋಜನೆಗಳ ಅನುಷ್ಠಾನಕ್ಕಾಗಿ ಖಾಸಗಿ ವಲಯ ಅಥವಾ ಪಿ.ಪಿ.ಪಿ. ಯೋಜನೆಗಳಿಂದ ಹೂಡಿಕೆ ನಿರೀಕ್ಷಿಸಲಾಗುತ್ತಿದೆ. ವರ್ಲ್ಡ್ ಟ್ರಾವೆಲ್ ಅಂಡ್ ಟೂರಿಸಂ ಕೌನ್ಸಿಲ್ ವರದಿಯ ಪ್ರಕಾರ ೨೦೧೨ರಲ್ಲಿ ಭಾರತದಲ್ಲಿ ಪ್ರವಾಸೋದ್ಯಮವು ಒಟ್ಟಾರೆ ಜಿ.ಡಿ.ಪಿ.ಗೆ ಶೇ.೬.೬ರಷ್ಟು ಕೊಡುಗೆ ನೀಡಿರುತ್ತದೆ.

## ಕೈಗಾರಿಕೆ ಉತ್ಪಾದನೆಯ ಪ್ರವೃತ್ತಿಗಳು

ಕೈಗಾರಿಕಾ ಉತ್ಪಾದನೆ ಪ್ರವೃತ್ತಿಗಳನ್ನು ಉತ್ಪಾದನಾ ಸೂಚ್ಯಂಕದಲ್ಲಿ ಬದಲಾವಣೆಗಳಿಂದ ವಿಶ್ಲೇಷಿಸಬಹುದಾಗಿದೆ. ಸೂಚ್ಯಂಕದ ಲೆಕ್ಕವನ್ನು ಆಧಾರ ವರ್ಷದಲ್ಲಿ ವಿವಿಧ ಕ್ಷೇತ್ರ ಹಾಗೂ ಉಪ ವಿಭಾಗಗಳಲ್ಲಿನ ತೂಕ ಆಧರಿಸಿ ಉದ್ಯಮದ ಒಟ್ಟು ಮೌಲ್ಯಾಧಾರಿತ ಕೊಡುಗೆಯ ಮೇರೆಗೆ ವಹಿಸಿಕೊಡಲಾಗುತ್ತದೆ. ಉತ್ಪಾದನಾ ವಲಯವು ಶೇ.೮೧.೧೧ರಷ್ಟು ಹೆಚ್ಚಿನ ತೂಕವನ್ನು ಹೊಂದಿದ್ದು, ನಂತರದ ಸ್ಥಾನದಲ್ಲಿ ವಿದ್ಯುತ್ ವಲಯ (ಶೇ.೧೧.೮) ಹಾಗೂ ಗಣಿ ವಲಯ (ಶೇ.೬.೯) ಇರುತ್ತದೆ.

ಕರ್ನಾಟಕದಲ್ಲಿ ಖನಿಜ, ತಯಾರಿಕೆ ಹಾಗೂ ವಿದ್ಯುತ್ ವಲಯ ಒಳಗೊಂಡಂತೆ ಕೈಗಾರಿಕಾ ಉತ್ಪಾದನಾ ಸಾಮಾನ್ಯ ಸೂಚ್ಯಂಕವು ೨೦೧೪-೧೫ರಲ್ಲಿ ಶೇ.೧೮೧.೧೫ (ಆಧಾರ ವರ್ಷ ೨೦೦೪-೦೫) ಆಗಿತ್ತು. ೨೦೧೨-೧೩ ರಿಂದ ೨೦೧೪-೧೫ರ ವರೆಗೆ ಈ ಸೂಚ್ಯಂಕಗಳನ್ನು ಕೋಷ್ಟಕ ೫.೧ರಲ್ಲಿ ನೀಡಲಾಗಿದೆ. ಕರ್ನಾಟಕ ಸಂಘಟಿತ ಕೈಗಾರಿಕಾ ವಲಯದಲ್ಲಿ ಸಾಮಾನ್ಯ ಸೂಚ್ಯಂಕವು ೨೦೧೩-೧೪ಕ್ಕೆ ಹೋಲಿಸಿದಾಗ ೨೦೧೪-೧೫ ರಲ್ಲಿ ಶೇ.೨.೦೬ರಷ್ಟು ವಾರ್ಷಿಕ ಬೆಳವಣಿಗೆಯನ್ನು ಸಾಧಿಸಿದೆ. ಈ ಸಂಘಟಿತ ಕೈಗಾರಿಕಾ ವಲಯದಲ್ಲಿ ಉತ್ಪಾದನಾ ವಲಯವು ಅತಿ ಹೆಚ್ಚಿನ ಅಂದರೆ ಶೇ.೨.೯೩ ರಷ್ಟು ವಾರ್ಷಿಕ ಸೂಚ್ಯಂಕ ಬೆಳವಣಿಗೆಯ ದರವನ್ನು ದಾಖಲಿಸಿದ್ದು, ನಂತರದ ಸ್ಥಾನವನ್ನು ವಿದ್ಯುತ್ ವಲಯವು (ಶೇ.೧.೯೧) ಹಾಗೂ ಗಣಿ ವಲಯವು ಋಣಾತ್ಮಕ ಬೆಳವಣಿಗೆ (ಶೇ.-೨೬.೧೬) ಹೊಂದಿರುತ್ತದೆ. ಗಣಿ ಕೈಗಾರಿಕೆ ಚಟುವಟಿಕೆಯಲ್ಲಿ ಕುಗ್ಗುವಿಕೆಯಿಂದ ಮತ್ತು ಉತ್ಪಾದನಾ ವಲಯದಲ್ಲಿನ ಮಧ್ಯಮ ಬೆಳವಣಿಗೆಯಿಂದ ಕೈಗಾರಿಕಾ ವಲಯದಲ್ಲಿ ಮಂದಗತಿಯ ಬೆಳವಣಿಗೆಯನ್ನು ಗಮನಿಸಲಾಗಿದೆ.

**ಕೋಷ್ಟಕ ೫.೧: ೨೦೧೨-೧೩ ರಿಂದ ೨೦೧೪-೧೫ರವರೆಗೆ ಕರ್ನಾಟಕ ಕೈಗಾರಿಕಾ ಉತ್ಪಾದನಾ ಸೂಚ್ಯಂಕ.**

ಆಧಾರ ವರ್ಷ : ೨೦೦೪-೦೫

| ವಲಯ | ಪ್ರಮಾಣ | ೨೦೧೨-೧೩ | ೨೦೧೩-೧೪ | ೨೦೧೪-೧೫ |
|---|---|---|---|---|
| ೧. ಗಣಿ | ೬೯.೮೩೨೧ | ೩೬.೪೨ **(-೨೬.೮೫) | ೫೩.೦೫ **(೪೫.೬೬) | ೩೯.೧೭ *(-೨೬.೧೬) |
| ೨. ತಯಾರಿಕೆ* | ೮೧೧.೩೫೯೧ | ೧೭೯.೧೯ (೮.೫೬) | ೧೮೪.೪೪ (೨.೯೨) | ೧೮೯.೮೫ (೨.೯೩) |
| ೩. ವಿದ್ಯುಚ್ಛಕ್ತಿ | ೧೧೮.೮೦೮೯ | ೧೮೦.೫೯ (೫.೭೦) | ೨೦೧.೩೪ (೧೧.೪೯) | ೨೦೫.೧೯ (೧.೯೧) |
| ಸಾಮಾನ್ಯ ಸೂಚ್ಯಂಕ | ೧೦೦೦.೦೦೦ | ೧೬೯.೩೮ (೭.೪೧) | ೧೭೭.೪೯ (೪.೭೯) | ೧೮೧.೧೫ (೨.೦೬) |

ಟಿಪ್ಪಣಿ: ೧) ಆವರಣದಲ್ಲಿರುವ ಸಂಖ್ಯೆಗಳು ಹಿಂದಿನ ವರ್ಷಕ್ಕೆ ಹೋಲಿಸಿದಾಗ ಆದ ಶೇಕಡಾವಾರು ವ್ಯತ್ಯಾಸಗಳನ್ನು ಸೂಚಿಸುತ್ತದೆ. ೨) *ತಾತ್ಕಾಲಿಕ ೩) ** ಐಬಿಎಮ್ ನಾಗಪುರ ಇವರ ಮಾಹಿತಿಯಂತೆ ಪರಿಷ್ಕರಿಸಿದೆ. ಮೂಲ: ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯ, ಬೆಂಗಳೂರು.

ಸಂಘಟಿತ ಕೈಗಾರಿಕಾ ವಲಯದ ಸಾಮಾನ್ಯ ಹಾಗೂ ಗಣಿ, ಉತ್ಪಾದನಾ ಹಾಗೂ ವಿದ್ಯುತ್ ವಲಯಗಳ ವಾರ್ಷಿಕ ಸರಾಸರಿ ಸೂಚ್ಯಂಕ ಬೆಳವಣಿಗೆಯ ಪ್ರಮಾಣವನ್ನು ಕೋಷ್ಟಕ ೫.೧ ರಲ್ಲಿ ನೀಡಲಾಗಿದೆ. ಸಂಘಟಿತ ಕೈಗಾರಿಕಾ ವಲಯದ ಸಂಯುಕ್ತ ವಾರ್ಷಿಕ ಸೂಚ್ಯಂಕದ ಬೆಳವಣಿಗೆಯ ದರವು ಸಾಮಾನ್ಯ ವಲಯದಲ್ಲಿ ಶೇ.೬.೧ರಷ್ಟು ಇದ್ದರೆ, ಉತ್ಪಾದನಾ ವಲಯದಲ್ಲಿ ಶೇ.೬.೬ರಷ್ಟು ಹಾಗೂ ವಿದ್ಯುತ್ ವಲಯದಲ್ಲಿ ಶೇ.೭.೪ರಷ್ಟಿದೆ. ರಾಜ್ಯದ ಗಣಿ ವಲಯದ ಉತ್ಪಾದನೆಯಲ್ಲಿ ಶೇ.೮.೯ ರಷ್ಟು ಇಳಿಕೆ ಕಂಡುಬಂದಿದೆ.

ಕೈಗಾರಿಕಾ ಉತ್ಪಾದನಾ ಸೂಚ್ಯಂಕದ ತ್ರೈಮಾಸಿಕ ಬೆಳವಣಿಗೆ ೨೦೧೩-೧೪ ರಿಂದ ೨೦೧೫-೧೬ರವರೆಗೆ ಆಧಾರ ವರ್ಷ ೨೦೦೪-೦೫ರಲ್ಲಿ ಮೂರು ತ್ರೈಮಾಸಿಕ ವಿವರಗಳನ್ನು ಕೋಷ್ಟಕ ೫.೨ರಲ್ಲಿ ನೀಡಲಾಗಿದೆ. ಗಣಿ ವಲಯವು ಸತತವಾಗಿ ಮೂರು ತ್ರೈಮಾಸಿಕಗಳಲ್ಲಿ ಶೇ.೪೨.೩೬, ಶೇ.೫೪.೭೦ ಮತ್ತು ಶೇ.೫೨.೪೬ ರಷ್ಟು ಋಣಾತ್ಮಕ ಬೆಳವಣಿಗೆ ಸಾಧಿಸಿದೆ. ತಯಾರಿಕಾ ವಲಯವು ಮೂರು ತ್ರೈಮಾಸಿಕಗಳಲ್ಲಿ ಧನಾತ್ಮಕ ಬೆಳವಣಿಗೆ ಸಾಧಿಸಿದೆ ಮತ್ತು ವಿದ್ಯುತ್ ವಲಯವು ಮೊದಲನೇ ಮತ್ತು ಮೂರನೇ ತ್ರೈಮಾಸಿಕದಲ್ಲಿ ಋಣಾತ್ಮಕ ಬೆಳವಣಿಗೆ ಹಾಗೂ ಎರಡನೇ ತ್ರೈಮಾಸಿಕದಲ್ಲಿ ಧನಾತ್ಮಕ ಬೆಳವಣಿಗೆ ಸಾಧಿಸಿದ್ದು, ಇದರಿಂದಾಗಿ ಶೇ.೧.೧೦, ಶೇ.೧.೫೫ ಮತ್ತು ಶೇ.೧.೦೨ ರಷ್ಟು ಸಾಮಾನ್ಯ ಸೂಚ್ಯಂಕದಲ್ಲಿ ಬೆಳವಣಿಗೆ ದಾಖಲಿಸಿದೆ.

**ಕೋಷ್ಟಕ ೫.೨: ೨೦೧೩-೧೪ ರಿಂದ ೨೦೧೫-೧೬ ವರೆಗೆಕೈಗಾರಿಕಾ ಉತ್ಪಾದನಾ ಸೂಚ್ಯಂಕದ ತ್ರೈಮಾಸಿಕ ಬೆಳವಣಿಗೆ (ತ್ರೈಮಾಸಿಕ ೧, ೨ ಮತ್ತು ೩) (ಆಧಾರ ವರ್ಷ: ೨೦೦೪-೦೫)**

| ಅವಧಿ | ಗಣಿ | ತಯಾರಿಕೆ** | ವಿದ್ಯುಚ್ಛಕ್ತಿ | ಸಾಮಾನ್ಯ |
|---|---|---|---|---|
| ಪ್ರಮಾಣ | ೬೯.೮೩ | ೮೧೧.೩೬ | ೧೧೮.೮೧ | ೧೦೦೦ |
| ೨೦೧೩-೧೪ ತ್ರೈ೧ ಏಪ್ರಿಲ್ ೧೩ - ಜೂನ್ ೧೩ | ೪೦.೩೯* | ೧೭೦.೧೨ | ೧೯೨.೦೭ | ೧೬೩.೬೭ |
| | (೨೩.೭೪) | (೪.೪೩) | (೫.೯೧) | (೪.೯೨) |
| ತ್ರೈ೨ ಜುಲೈ ೧೩ - ಸೆಪ್ಟೆಂಬರ್ ೧೩ | ೪೬.೨೬* | ೧೮೪.೬೩ | ೧೮೨.೯೮ | ೧೭೪.೭೭ |
| | (೪೧.೩೮) | (೨.೫೨) | (೧೫.೮೩) | (೪.೫೪) |
| ತ್ರೈ೩ ಅಕ್ಟೋಬರ್ ೧೩ - ಡಿಸೆಂಬರ್ ೧೩ | ೫೨.೬೦* | ೧೯೨.೨೯ | ೨೦೩.೩೩ | ೧೮೩.೮೫ |
| | (೫೩.೮೫) | (೩.೮೩) | (೧೨.೧೨) | (೫.೫೫) |
| ೨೦೧೪-೧೫ ತ್ರೈ೧ ಏಪ್ರಿಲ್ ೧೪ - ಜೂನ್ ೧೪ | ೫೧.೨೦* | ೧೭೩.೮೫ | ೨೦೩.೫೭ | ೧೬೮.೮೧ |
| | (೨೬.೭೬) | (೨.೧೯) | (೫.೯೯) | (೩.೧೪) |
| ತ್ರೈ೨ ಜುಲೈ ೧೪ - ಸೆಪ್ಟೆಂಬರ್ ೧೪ | ೫೧.೦೮* | ೧೮೮.೦೪ | ೧೮೫.೭೫ | ೧೭೮.೨೦ |
| | (೧೦.೪೧) | (೧.೮೫) | (೧.೫೧) | (೧.೯೬) |
| ತ್ರೈ೩ ಅಕ್ಟೋಬರ್ ೧೪ - ಡಿಸೆಂಬರ್ ೧೪ | ೬೦.೩೨* | ೧೯೭.೪೭ | ೨೦೨.೨೯ | ೧೮೮.೪೬ |
| | (೧೪.೬೭) | (೨.೬೯) | (-೦.೫೧) | (೨.೫೦) |
| ೨೦೧೫-೧೬ ತ್ರೈ೧ ಏಪ್ರಿಲ್ ೧೫ - ಜೂನ್ ೧೫ | ೨೯.೫೧** (-೪೨.೩೬) | ೧೭೮.೦೩ (೨.೪೦) | ೨೦೩.೪೦ (-೦.೦೮) | ೧೭೦.೬೭ (೧.೧೦) |
| ತ್ರೈ೨ ಜುಲೈ ೧೫ - ಸೆಪ್ಟೆಂಬರ್ ೧೫ | ೨೩.೧೪** | ೧೯೨.೯೧ | ೧೯೨.೧೫ | ೧೮೦.೯೭ |
| | (-೫೪.೭೦) | (೨.೫೯) | (೩.೪೫) | (೧.೫೫) |
| ತ್ರೈ೩ ಅಕ್ಟೋಬರ್ ೧೫ - ಡಿಸೆಂಬರ್ ೧೫ | ೨೮.೬೭** | ೨೦೧.೦೩ | ೧೮೦.೩೬ | ೧೮೬.೫೩) |
| | (-೫೨.೪೬) | (೧.೮೦) | (-೧೦.೮೪) | (-೧.೦೨) |

* ಐಬಿಎಮ್ ನಾಗಪುರ ಇವರ ಮಾಹಿತಿಯಂತೆ ಪರಿಷ್ಕರಿಸಿದೆ. ಮೂಲ: ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯ, ಬೆಂಗಳೂರು

ಆವರಣಗಳಲ್ಲಿರುವ ಸಂಖ್ಯೆಗಳು ಹಿಂದಿನ ವರ್ಷಕ್ಕೆ ಹೋಲಿಸಿದಾಗ ಆದ ಶೇಕಡವಾರು ವ್ಯತ್ಯಾಸಗಳನ್ನು ಸೂಚಿಸುತ್ತವೆ.

### ಬಳಕೆಯಾಧಾರಿತ ಕೈಗಾರಿಕಾ ಗುಂಪುಗಳ ಉತ್ಪಾದನಾ ಬೆಳವಣಿಗೆ

ಸಂಘಟಿತ ಕೈಗಾರಿಕಾ ವಲಯದ ಬಳಕೆಯಾಧಾರಿತ ಕೈಗಾರಿಕಾ ಗುಂಪುಗಳ ಉತ್ಪಾದನಾ ಬೆಳವಣಿಗೆಯನ್ನು ೧) ಮೂಲ ವಸ್ತುಗಳು ೨) ಬಂಡವಾಳ ವಸ್ತುಗಳು ೩) ಮಧ್ಯವರ್ತಿ ವಸ್ತುಗಳು ೪) ಗ್ರಾಹಕ ವಸ್ತುಗಳು ಎಂದು ನಾಲ್ಕು ವಿಭಾಗಗಳಾಗಿ ವಿಂಗಡಿಸಲಾಗಿದೆ. ಕೈಗಾರಿಕಾ ಉತ್ಪಾದನಾ ವಲಯದ ನಾಲ್ಕು ವಿಭಾಗಗಳಲ್ಲಿ ಗ್ರಾಹಕ ವಸ್ತುಗಳ ವಲಯವು ಅತಿ ಹೆಚ್ಚಿನ ತೂಕ ಹೊಂದಿದ್ದು, ನಂತರದ ಸ್ಥಾನವನ್ನು ಮೂಲ ವಸ್ತುಗಳ ಗುಂಪು ಹೊಂದಿದೆ. ಗ್ರಾಹಕ ವಸ್ತುಗಳ ವಲಯದ ಶೇ. ೨೮.೫ ತೂಕದಲ್ಲಿ ಸ್ಥಿರವಲ್ಲದ ಗ್ರಾಹಕ ವಸ್ತುಗಳ ತೂಕ ಶೇ. ೨೪.೮ ಹಾಗೂ ಸ್ಥಿರ ಗ್ರಾಹಕ ವಸ್ತುಗಳು ಶೇ. ೩.೭ ತೂಕ ಹೊಂದಿವೆ. ಕರ್ನಾಟಕ ತಯಾರಿಕಾ ವಲಯದ ವಿವಿಧ ವರ್ಗೀಕರಣದ ತೂಕ ಅನುಪಾತವು ಈ ನಾಲ್ಕು ಗುಂಪುಗಳ ತೂಕಗಳಿಗೆ ಮೂಲ ಆಧಾರವಾಗಿರುತ್ತದೆ.

ಕೋಷ್ಟಕ ೫.೩ರಲ್ಲಿ ಬಳಕೆಯಾಧಾರಿತ ಕೈಗಾರಿಕಾ ಗುಂಪುಗಳ ಸರಾಸರಿ ಉತ್ಪಾದನಾ ಬೆಳವಣಿಗೆಯನ್ನು ನಾಲ್ಕು ಪ್ರಮುಖ ವಿಭಾಗಗಳು ಹಾಗೂ ಗ್ರಾಹಕ ವಸ್ತುಗಳ ಎರಡು ಉಪ ವಿಭಾಗಗಳನ್ನು ವಿಂಗಡಿಸಿ ೨೦೧೨-೧೩ ರಿಂದ ೨೦೧೪-೧೫ರ ವರೆಗೆ (ಆಧಾರ ವರ್ಷ ೨೦೦೪-೦೫ರಲ್ಲಿ) ನೀಡಲಾಗಿದೆ. ೨೦೧೪-೧೫ರಲ್ಲಿ ನಾಲ್ಕು ಪ್ರಮುಖ ಗುಂಪುಗಳಲ್ಲಿ ಗ್ರಾಹಕ ವಸ್ತುಗಳು ಶೇ. ೫.೮೩ ರಷ್ಟು ಹೆಚ್ಚಿನ ಬೆಳವಣಿಗೆ ಹೊಂದಿದ್ದು, ಉಳಿದಂತೆ ಮೂಲ ವಸ್ತುಗಳು ಶೇ. ೧.೯೧, ಬಂಡವಾಳ ವಸ್ತುಗಳು ಶೇ. ೧.೭೦ ಮತ್ತು ಮಧ್ಯವರ್ತಿ ವಸ್ತುಗಳು ಶೇ. ೧.೫೪ ರಷ್ಟು ಬೆಳವಣಿಗೆ ಹೊಂದಿವೆ. ೨೦೦೫-೦೬ ರಿಂದ ೨೦೧೪-೧೫ ರವರೆಗೆ ಬಳಕೆಯಾಧಾರಿತ ಸಾಮಾನ್ಯ ಸೂಚ್ಯಂಕದ ಸಂಯೋಜಿತ ವಾರ್ಷಿಕ ಬೆಳವಣಿಗೆ ಶೇ. ೬.೬೨ ರಷ್ಟು ಆಗಿದೆ. ಇದರಲ್ಲಿ ಮೂಲ ವಸ್ತುಗಳು ಶೇ.೬.೫೩ ರಷ್ಟು, ಬಂಡವಾಳ ವಸ್ತುಗಳು ಶೇ. ೭.೪೧ ರಷ್ಟು, ಮಧ್ಯವರ್ತಿ ವಸ್ತುಗಳು ಶೇ. ೮.೩೫ ರಷ್ಟು ಹಾಗೂ ಗ್ರಾಹಕ ವಸ್ತುಗಳು ಶೇ. ೫.೦೮ ರಷ್ಟು ಬೆಳವಣಿಗೆಯನ್ನು ಸಾಧಿಸಿವೆ. ವಿವರಗಳನ್ನು ಕೋಷ್ಟಕ ೫.೩ ರಲ್ಲಿ ನೀಡಲಾಗಿದೆ.

**ಕೋಷ್ಟಕ ೫.೩: ಕರ್ನಾಟಕದ ಸಂಘಟಿತ ತಯಾರಿಕಾ ವಲಯದ ಕೈಗಾರಿಕಾ ಉತ್ಪಾದನಾ ಸೂಚ್ಯಂಕದ ಬಳಕೆಯಾಧಾರಿತ ವರ್ಗೀಕರಣ ೨೦೧೨-೧೩ ರಿಂದ ೨೦೧೪-೧೫**

| ಕ್ರ. ಸಂ. | ಕೈಗಾರಿಕಾ ಸಮೂಹ | ಪ್ರಮಾಣ | ೨೦೧೨-೧೩* | ೨೦೧೩-೧೪* | ೨೦೧೪-೧೫* |
|---|---|---|---|---|---|
| ೧ | ಮೂಲ ವಸ್ತುಗಳು | ೨೧೯.೮೩೭೭ | ೧೭೮.೧೪ | ೧೮೪.೬೪ | ೧೮೮.೧೭ |
| | | | (೧೫.೮೫) | (೩.೬೪) | (೧.೯೧) |
| ೨ | ಬಂಡವಾಳ ವಸ್ತುಗಳು | ೧೩೨.೮೬೯೯ | ೧೯೪.೬೯ | ೨೦೦.೯೫ | ೨೦೪.೩೭ |
| | | | (೧.೩೮) | (೩.೨೧) | (೧.೭೦) |
| ೩ | ಮಧ್ಯವರ್ತಿ ವಸ್ತುಗಳು | ೧೭೩.೫೭೪೭ | ೨೧೧.೦೭ | ೨೧೯.೬೭ | ೨೨೩.೦೫ |
| | | | (೧೨.೪೬೦ | (೪.೦೭) | (೧.೫೪) |
| ೪ | ಗ್ರಾಹಕ ವಸ್ತುಗಳು | ೨೮೫.೦೭೬೯ | ೧೫೩.೩೭ | ೧೫೫.೧೩ | ೧೬೪.೧೭ |
| | | | (೪.೦೫) | (೧.೧೪) | (೫.೮೩) |
| ೫ | ಅ. ಸ್ಥಿರ ಗ್ರಾಹಕ ವಸ್ತುಗಳು | ೩೭.೪೩೩೦ | ೧೧೬.೫೧ | ೧೨೦.೩೬ | ೧೨೨.೧೪ |
| | | | (-೩೬.೬೨) | (೩.೩೦) | (೧.೪೮) |
| ೬ | ಆ. ಸ್ಥಿರವಲ್ಲದ ಗ್ರಾಹಕ ವಸ್ತುಗಳು | ೨೪೭.೬೪೩೯ | ೧೫೬.೭೦ | ೧೬೫.೨೦ | ೧೭೦.೫೩ |
| | | | (೧೦.೪೩) | (೫.೪೨) | (೩.೨೨) |
| ೭ | ಸಾಮಾನ್ಯ ಸೂಚ್ಯಂಕ | ೮೧೧.೩೫೯೧ | ೧೭೯.೧೯ | ೧೮೪.೪೪ | ೧೮೯.೮೬ |
| | | | (೯೮.೫೬) | (೨.೯೨) | (೨.೯೩) |

ಟಿಪ್ಪಣಿ: ೧) ಆವರಣದಲ್ಲಿರುವ ಸಂಖ್ಯೆಗಳು ಅದರ ಹಿಂದಿನ ವರ್ಷಕ್ಕೆ ಹೋಲಿಸಿದಾಗ ಆದ ಶೇಕಡವಾರು ವ್ಯತ್ಯಾಸಗಳನ್ನು ಸೂಚಿಸುತ್ತವೆ. ೨) * ತಾತ್ಕಾಲಿಕ
೩) ಮೂಲ: ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯ, ಬೆಂಗಳೂರು.

- ೨೦೧೨-೧೩ಕ್ಕೆ ಮೂಲ ವಸ್ತುಗಳ ವಲಯದಲ್ಲಿ ಶೇ.೧೫.೮ರಷ್ಟು ಎರಡು ಅಂಕಿಗಳ ಬೆಳವಣಿಗೆ ಕಂಡು ಬಂದಿದ್ದು, ೨೦೧೩-೧೪ರಲ್ಲಿ ಇದರ ಬೆಳವಣಿಗೆಯು ಕೇವಲ ಶೇ.೩.೬ರಷ್ಟಿದೆ ಹಾಗೂ ೨೦೧೪-೧೫ರಲ್ಲಿ ಉತ್ಪಾದನಾ ಬೆಳವಣಿಗೆಯು ಶೇ.೧.೯೧ಕ್ಕೆ ಇಳಮುಖವಾಗಿದೆ.

- ಬಂಡವಾಳ ವಸ್ತುಗಳ ವಲಯದಲ್ಲಿ ೨೦೧೨-೧೩ಕ್ಕೆ ಉತ್ಪಾದನಾ ಬೆಳವಣಿಗೆಯು ಶೇ.೧.೪ ರಷ್ಟಿದ್ದರೆ, ೨೦೧೩-೧೪ರಲ್ಲಿ ಈ ಬೆಳವಣಿಗೆಯು ಶೇ.೩.೨ರಷ್ಟು ಏರಿಕೆಯಾಗಿದೆ. ಆದರೆ ೨೦೧೪-೧೫ರಲ್ಲಿ ಉತ್ಪಾದನಾ ಬೆಳವಣಿಗೆಯು ಮತ್ತೊಮ್ಮೆ ಶೇ.೧.೭೦ಗೆ ಇಳಿದಿದೆ.

- ಮಧ್ಯವರ್ತಿ ವಸ್ತುಗಳ ವಲಯದಲ್ಲಿ ೨೦೧೨-೧೩ರಲ್ಲಿ ಶೇ.೪೬ರಷ್ಟು ಉತ್ಪಾದನಾ ಬೆಳವಣಿಗೆ ಆಗಿದ್ದರೆ, ೨೦೧೩-೧೪ರಲ್ಲಿ ಶೇ. ೪.೦೭ ಹಾಗೂ ೨೦೧೪-೧೫ರಲ್ಲಿ ಶೇ. ೧.೫೪ರಷ್ಟು ಆಗಿತ್ತು.

- ಗ್ರಾಹಕ ವಸ್ತುಗಳ ವಲಯದ ಬೆಳವಣಿಗೆಯಲ್ಲಿ ೨೦೧೨-೧೩ಕ್ಕೆ ಶೇ.೪.೦೫ರಷ್ಟಿದ್ದರೆ, ೨೦೧೩-೧೪ರಲ್ಲಿ ಶೇ.೧.೧೪ಗೆ ಇಳಮುಖವಾಗಿದ್ದು, ೨೦೧೪-೧೫ ರಲ್ಲಿ ಶೇ.೫.೮೩ಕ್ಕೆ ಏರಿಕೆ ಕಂಡಿದೆ.

- ಗ್ರಾಹಕ ವಸ್ತುಗಳ ಒಳವಲಯಗಳಾದ ಸ್ಥಿರ ಗ್ರಾಹಕ ವಸ್ತುಗಳ ಹಾಗೂ ಸ್ಥಿರವಲ್ಲದ ಗ್ರಾಹಕ ವಸ್ತುಗಳ ಉತ್ಪಾದನಾ ಬೆಳವಣಿಗೆಯು ಕ್ರಮವಾಗಿ ೨೦೧೨-೧೩ರಲ್ಲಿ ಶೇ.-೩೬.೬ ಹಾಗೂ ಶೇ.೧೦.೪ರಷ್ಟು ಪ್ರಮಾಣದಲ್ಲಿತ್ತು. ಆದರೆ ೨೦೧೩-೧೪ರಲ್ಲಿ ಸ್ಥಿರ ಗ್ರಾಹಕ ವಸ್ತುಗಳ ಉತ್ಪಾದನಾ ಬೆಳವಣಿಗೆಯು ಗಮನಾರ್ಹವಾಗಿ ಶೇ.೩.೩ ರಷ್ಟು ಏರಿಕೆಯಾಗಿದ್ದರೆ, ಸ್ಥಿರವಲ್ಲದ ಗ್ರಾಹಕ ವಸ್ತುಗಳ ಉತ್ಪಾದನಾ ಬೆಳವಣಿಗೆಯು ಶೇ.೫.೪ಕ್ಕೆ ಇಳಮುಖವಾಗಿದೆ ಹಾಗೂ ೨೦೧೪-೧೫ರಲ್ಲಿ ಸ್ಥಿರ ಗ್ರಾಹಕ ವಸ್ತುಗಳ ಉತ್ಪಾದನಾ ಬೆಳವಣಿಗೆ ಶೇ.೧.೪೮ ಕ್ಕೆ ಇಳಿದಿದ್ದರೆ, ಸ್ಥಿರವಲ್ಲದ ಗ್ರಾಹಕ ವಸ್ತುಗಳ ಉತ್ಪಾದನೆಯು ಶೇ.೩.೨೨ಕ್ಕೆ ಇಳಿದಿರುತ್ತದೆ.

### ವಾರ್ಷಿಕ ಉತ್ಪಾದನಾ ಕೈಗಾರಿಕಾ ವಲಯದ ಪ್ರಮುಖ ಗುಂಪುಗಳಲ್ಲಿ ಉತ್ಪಾದನಾ ಬೆಳವಣಿಗೆ

ರಾಷ್ಟ್ರೀಯ ಕೈಗಾರಿಕಾ ಸಂಕೇತ- ೨೦೦೪ರ ಎರಡು ಅಂಕಿಗಳ ಮಟ್ಟದಲ್ಲಿ ಕೈಗಾರಿಕಾ ಉತ್ಪಾದನಾ ವಲಯವನ್ನು ಒಟ್ಟು ೨೨ ಪ್ರಮುಖ ಗುಂಪುಗಳಾಗಿ ವಿಂಗಡಿಸಲಾಗಿದೆ. ಕೋಷ್ಟಕ ೫.೪ರಲ್ಲಿ ಕೈಗಾರಿಕಾ ಉತ್ಪಾದನಾ ಸೂಚ್ಯಂಕದನ್ವಯ ಈ ಪ್ರಮುಖ ಗುಂಪುಗಳಿಗೆ ತೂಕವನ್ನು ನೀಡಲಾಗಿದೆ. ಮೂಲ ಲೋಹ ವಸ್ತುಗಳು (೧೧೯.೯೩ ರಷ್ಟು) ಅತ್ಯಧಿಕ ತೂಕವನ್ನು ಹೊಂದಿದ್ದು, ನಂತರದಲ್ಲಿ ರಾಸಾಯನಿಕ ಉತ್ಪನ್ನಗಳು (೧೦೭.೮೯) ಮತ್ತು ಆಹಾರೋತ್ಪನ್ನಗಳು ಹಾಗೂ ಪಾನೀಯಗಳು (೭೧.೩೦) ಇರುತ್ತವೆ. ಈ ಮೂರು ಗುಂಪುಗಳು ೨೦೦೪-೦೫ರ ಆಧಾರ ವರ್ಷದ ಒಟ್ಟು (೮೧೧.೩೫೯೧) ತೂಕದಲ್ಲಿ ೧/೩ರಷ್ಟು ಭಾಗದಷ್ಟು ತೂಕವನ್ನು ಹೊಂದಿವೆ.

## ಕೋಷ್ಟಕ ೫.೪: ಕರ್ನಾಟಕದಲ್ಲಿನ ತಯಾರಿಕೆ ವಿಭಾಗದ ಪ್ರಧಾನ ಸಮೂಹಗಳ ಸೂಚ್ಯಂಕಗಳು ೨೦೧೦-೧೧ ರಿಂದ ೨೦೧೪-೧೫ರ ವರೆಗೆ

| ಕ್ರ. ಸಂ. | ಕೈ. ಸಂಕೇತ. | ಕೈಗಾರಿಕೆ ಸಮೂಹಗಳು | ವಲಯವಾರು ತೂಕ | ೨೦೧೦-೧೧ | ೨೦೧೧-೧೨ | ೨೦೧೨-೧೩ | ೨೦೧೩-೧೪ | ೨೦೧೪-೧೫ |
|---|---|---|---|---|---|---|---|---|
| ೧ | ೧೫ | ಆಹಾರೋತ್ಪನ್ನಗಳ ತಯಾರಿಕೆ | ೭೧.೨೯೭೮ | ೨೦೬.೮೭ | ೧೬೩.೮೧ | ೧೭೯.೯೨ | ೧೮೮.೪೮ | ೧೯೬.೫೫ |
| ೨ | ೧೬ | ಹೊಗೆಸೊಪ್ಪಿನ ಉತ್ಪನ್ನಗಳ ತಯಾರಿಕೆ | ೫೦.೧೪೭೩ | ೧೫೩.೩೩ | ೧೩೦.೦೦ | ೧೪೨.೪೪ | ೧೪೮.೩೨ | ೧೫೩.೭೪ |
| ೩ | ೧೭ | ಬಟ್ಟೆಗಳ ತಯಾರಿಕೆ | ೨೦.೪೪೩೨ | ೧೨೮.೭೮ | ೧೫೦.೮೮ | ೧೬೭.೯೫ | ೧೭೫.೭೬ | ೧೮೨.೭೯ |
| ೪ | ೧೮ | ಸಿದ್ಧ ಉಡುಪುಗಳ ತಯಾರಿಕೆ | ೫೧.೭೮೫೧ | ೧೩೭.೩೦ | ೧೩೬.೬೧ | ೧೫೦.೨೯ | ೧೫೮.೪೫ | ೧೬೫.೬೧ |
| ೫ | ೧೯ | ಚರ್ಮದ ಉತ್ಪನ್ನಗಳ ತಯಾರಿಕೆ | ೧.೬೯೭೦ | ೧೩೯.೦೦ | ೧೩೪.೮೪ | ೧೪೫.೨೪ | ೧೪೯.೨೪ | ೧೫೨.೫೪ |
| ೬ | ೨೦ | ಮರ ಮತ್ತು ಮರ ಆಧಾರಿತ ಉತ್ಪಾದನೆಗಳು | ೦.೯೫೫೯ | ೧೦೬.೯೯ | ೨೦೫.೮೪ | ೨೨೧.೪೮ | ೨೩೧.೩೮ | ೨೪೦.೦೨ |
| ೭ | ೨೧ | ಕಾಗದ ಮತ್ತು ಕಾಗದದ ಉತ್ಪನ್ನಗಳ ತಯಾರಿಕೆ | ೧೩.೪೮೯೨ | ೧೭೦.೫೧ | ೧೭೧.೨೯ | ೧೯೦.೫೬ | ೧೯೭.೬೭ | ೨೦೫.೫೪ |
| ೮ | ೨೨ | ಪ್ರಕಟಣೆ ಮತ್ತು ಮುದ್ರಣ ಸಾಮಗ್ರಿಗಳ ತಯಾರಿಕೆ | ೮.೪೧೫೫ | ೨೪೧.೮೩ | ೨೦೦.೧೨ | ೩೦೭.೦೬ | ೩೧೫.೨೩ | ೩೨೮.೯೯ |
| ೯ | ೨೩ | ಕಲ್ಲಿದ್ದಲು, ಶುದ್ಧೀಕರಿಸಿದ ಪೆಟ್ರೋಲಿಯಂ, ಪರಮಾಣು ಉತ್ಪನ್ನಗಳ ತಯಾರಿಕೆ | ೬೮.೦೦೩೨ | ೧೬೭.೮೩ | ೧೪೮.೬೧ | ೧೬೨.೨೬ | ೧೬೯.೧೦ | ೧೭೫.೨೪ |
| ೧೦ | ೨೪ | ರಾಸಾಯನಿಕ ಮತ್ತು ರಾಸಾಯನಿಕ ವಸ್ತುಗಳ ತಯಾರಿಕೆ | ೧೦೭.೮೯೨೧ | ೧೧೯.೯೩ | ೧೩೭.೪೨ | ೧೫೩.೩೧ | ೧೫೬.೬೧ | ೧೬೨.೩೭ |
| ೧೧ | ೨೫ | ರಬ್ಬರ್ ಮತ್ತು ಪ್ಲಾಸ್ಟಿಕ್ ವಸ್ತುಗಳ ತಯಾರಿಕೆ | ೧೨.೪೬೭೦ | ೧೯೫.೯೫ | ೧೭೭.೯೨ | ೧೯೬.೫೩ | ೨೦೦.೩೮ | ೨೦೫.೪೦ |
| ೧೨ | ೨೬ | ಇತರೆ ಲೋಹರಹಿತ ಖನಿಜ ವಸ್ತುಗಳ ತಯಾರಿಕೆ | ೩೭.೦೨೨೪ | ೧೫೫.೪೧ | ೧೮೩.೩೫ | ೧೯೩.೦೩ | ೧೯೬.೨೫ | ೨೦೧.೦೧ |
| ೧೩ | ೨೭ | ಮೂಲ ಲೋಹ ವಸ್ತುಗಳ ತಯಾರಿಕೆ | ೧೧೯.೯೨೬೧ | ೧೭೯.೦೩ | ೧೫೩.೪೫ | ೧೭೩.೨೪ | ೧೭೬.೩೩ | ೧೭೯.೯೧ |
| ೧೪ | ೨೮ | ಸಿದ್ಧಪಡಿಸಿದ ಲೋಹ ಉತ್ಪನ್ನಗಳ ತಯಾರಿಕೆ | ೧೩.೦೭೬೩ | ೧೩೧.೭೨ | ೧೮೩.೨೨ | ೨೦೩.೮೧ | ೨೦೮.೧೪ | ೨೧೨.೯೫ |
| ೧೫ | ೨೯ | ಯಂತ್ರೋಪಕರಣಗಳ ತಯಾರಿಕೆ | ೫೦.೪೪೧೭ | ೧೨೦.೩೨ | ೧೯೬.೩೯ | ೨೧೩.೭೩ | ೨೧೮.೭೬ | ೨೨೭.೧೦ |
| ೧೬ | ೩೦ | ಕಚೇರಿಯಲ್ಲಿ ಉಪಯೋಗಿಸುವ ಲೆಕ್ಕ ಹಾಗೂ ಗಣಕ ಯಂತ್ರಗಳ ತಯಾರಿಕೆ | ೭.೧೭೩೩ | ೧೯೭.೫೧ | ೧೮೭.೨೦ | ೧೮೯.೪೬ | ೧೯೬.೯೭ | ೨೦೧.೭೫ |
| ೧೭ | ೩೧ | ವಿದ್ಯುತ್ ಉಪಕರಣಗಳ ತಯಾರಿಕೆ | ೩೩.೪೧೭೬ | ೧೩೦.೩೦ | ೨೦೯.೨೪ | ೨೦೯.೭೫ | ೨೧೪.೧೭ | ೨೧೬.೪೫ |
| ೧೮ | ೩೨ | ದೂರದರ್ಶನ ಹಾಗೂ ದೂರ ಸಂಪರ್ಕ ಉತ್ಪನ್ನಗಳ ತಯಾರಿಕೆ | ೨೫.೨೦೭೬ | ೧೮೨.೬೧ | ೧೯೪.೯೬ | ೧೯೮.೪೩ | ೨೦೩.೦೪ | ೨೦೬.೪೦ |
| ೧೯ | ೩೩ | ವೈದ್ಯಕೀಯ ಉಪಕರಣಗಳ ತಯಾರಿಕೆ | ೩೬.೦೫೩೫ | ೧೩೦.೭೭ | ೧೬೪.೯೧ | ೧೭೩.೭೫ | ೧೭೭.೪೧ | ೧೮೧.೧೧ |
| ೨೦ | ೩೪ | ವಾಹನ, ಸೆಮಿ ಟ್ರೇಲರ್‌ಗಳ ತಯಾರಿಕೆ | ೫೪.೨೮೧೭ | ೧೩೬.೪೫ | ೨೨೮.೬೪ | ೨೩೨.೪೨ | ೨೩೮.೪೫ | ೨೪೧.೫೯ |
| ೨೧ | ೩೫ | ಇತರೆ ಸಾರಿಗೆ ಸಾಧನಗಳ ತಯಾರಿಕೆ | ೮.೨೦೮೯ | ೭೧.೦೨ | ೨೦೧.೩೯ | ೨೦೪.೫೮ | ೨೧೩.೦೫ | ೨೧೯.೨೬ |
| ೨೨ | ೩೬ | ಪೀಠೋಪಕರಣಗಳ ತಯಾರಿಕೆ | ೧೯.೯೫೭೦ | ೧೫೧.೭೪ | ೧೬೧.೫೬ | ೧೬೩.೩೯ | ೧೬೭.೨೫ | ೧೬೯.೭೪ |
| | | ತಯಾರಿಕಾ ವಲಯದ ಸೂಚ್ಯಂಕ* | ೮೧೧.೩೫೯೧ | ೧೬೧.೧೮ | ೧೬೫.೦೫ | ೧೭೯.೧೯ | ೧೮೪.೪೪ | ೧೮೯.೮೫ |
| | | | | (೯.೭೨) | (೨.೪೦) | (೮.೫೬) | (೨.೯೩) | (೨.೯೩) |

ಟಿಪ್ಪಣಿ: ೧) ಆವರಣದಲ್ಲಿರುವ ಸಂಖ್ಯೆಗಳು ಹಿಂದಿನ ವರ್ಷಕ್ಕೆ ಹೋಲಿಸಿದಾಗ ಆದ ಶೇಕಡವಾರು ವ್ಯತ್ಯಾಸಗಳನ್ನು ಸೂಚಿಸುತ್ತವೆ.

೨) ತಾತ್ಕಾಲಿಕ ೩) ಮೂಲ: ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯ, ಬೆಂಗಳೂರು. ** CARG: ಸಂಯುಕ್ತ ವಾರ್ಷಿಕ ಬೆಳವಣಿಗೆ

೨೦೧೪–೧೫ರಲ್ಲಿ ಎರಡು ಅಂಕಿಗಳ ಕೈಗಾರಿಕಾ ವಲಯದಲ್ಲಿ ಅತಿ ಹೆಚ್ಚಿನ ಸೂಚ್ಯಂಕವನ್ನು ೨೨–ಪ್ರಕಟಣೆ ಮತ್ತು ಮುದ್ರಣ ಸಾಮಗ್ರಿಗಳ ತಯಾರಿಕೆ (೩೨೮.೯೯) ಹೊಂದಿದ್ದು, ಉಳಿದಂತೆ ೩೪–ವಾಹನ, ಸೆಮಿ ಟ್ರೇಲರ್ಸ್‌ಗಳ ತಯಾರಿಕೆ (೨೪೧.೫೯), ೨೦ – ಮರ ಮತ್ತು ಮರ ಆಧಾರಿತ ಉತ್ಪಾದನೆಗಳು (೨೪೦.೦೨), ೨೯–ಯಂತ್ರೋಪಕರಣಗಳು (೨೨೭.೧೦) ಹಾಗೂ ೩೫–ಇತರೆ ಸಾರಿಗೆ ಸಾಧನಗಳ ತಯಾರಿಕೆ (೨೧೯.೨೬) ಹೊಂದಿವೆ. ಕೈಗಾರಿಕಾ ವಲಯದ ಪ್ರಮುಖ ಗುಂಪುಗಳಲ್ಲಿ ೨೦೦೮–೦೯ ರಲ್ಲಿ ಬೆಳವಣಿಗೆ ಕುಂಠಿತಗೊಂಡಿದ್ದು, ೨೦೦೯–೧೦ರಲ್ಲಿ ಹಠಾತ್ ಬೆಳವಣಿಗೆಯನ್ನು ಸಾಧಿಸಿದೆ ಹಾಗೂ ೨೦೧೧–೧೨, ೨೦೧೨–೧೩ರ ಬೆಳವಣಿಗೆಯಲ್ಲಿ ಏರಿಳಿತ ಕಂಡಿದ್ದು, ೨೦೧೩–೧೪ ಮತ್ತು ೨೦೧೪–೧೫ರ ಇಳಿಕೆ ಕಂಡು ಬಂದಿದೆ.

### ಕೈಗಾರಿಕಾ ಉತ್ಪಾದನಾ ವಲಯ

ಕೈಗಾರಿಕಾ ವಾರ್ಷಿಕ ಸಮೀಕ್ಷೆಯು ಸಂಘಟಿತ ಕೈಗಾರಿಕಾ ವಲಯದ ಉತ್ಪಾದನಾ ವಲಯದ ಅಂಕಿ ಅಂಶಗಳ ವಿವರಗಳನ್ನು ನೀಡುತ್ತದೆ. ೨೦೧೧–೧೨ ಹಾಗೂ ೨೦೧೨–೧೩ರಲ್ಲಿ ನೋಂದಣಿಯಾದ ಕೈಗಾರಿಕೆಗಳ ಕೈಗಾರಿಕಾ ವಾರ್ಷಿಕ ಸಮೀಕ್ಷೆಯ ವಿವರಗಳನ್ನು ಕೋಷ್ಟಕ ೫.೫ರಲ್ಲಿ ನೀಡಲಾಗಿದೆ. ೨೦೧೨–೧೩ನೇ ಸಾಲಿಗೆ ಭಾರತದಲ್ಲಿ ಒಟ್ಟು ನೋಂದಣಿಯಾದ ಕೈಗಾರಿಕಾ ಘಟಕಗಳ ಪೈಕಿ ಶೇ.೫.೨೯ರಷ್ಟು ಭಾಗ ಕರ್ನಾಟಕದ್ದಾಗಿದೆ. ಸದರಿ ಸಾಲಿನಲ್ಲಿ ನೋಂದಣಿಯಾದ ಈ ಕೈಗಾರಿಕೆಗಳು ಸ್ಥಿರ ಬಂಡವಾಳದಲ್ಲಿ ಶೇ.೬.೬೬ರಷ್ಟು, ಒಟ್ಟು ಹುಟ್ಟುವಳಿಯಲ್ಲಿ ಶೇ.೬.೬೩ರಷ್ಟು ಹಾಗೂ ಶೇ.೬.೩೫ರಷ್ಟು ಮೌಲ್ಯವರ್ಧಿತ (GVA) ಕೊಡುಗೆಯನ್ನು ನೀಡಿರುತ್ತವೆ. ೨೦೧೧–೧೨ಕ್ಕೆ ಹೋಲಿಸಿದಾಗ ೨೦೧೨–೧೩ರಲ್ಲಿ ನೋಂದಣಿಯಾದ ಕೈಗಾರಿಕಾ ಘಟಕಗಳು ಸ್ವಲ್ಪ ಪ್ರಮಾಣದಲ್ಲಿ ಏರಿಕೆಯಾಗಿದ್ದರೂ ಸಹ ಒಟ್ಟು ಹೂಡುವಳಿಯಲ್ಲಿ, ಒಟ್ಟು ಹುಟ್ಟುವಳಿಯಲ್ಲಿ ಏರಿಕೆಯಾಗಿರುವುದು ಕಂಡುಬಂದಿದೆ. ಆದಾಗ್ಯೂ, ರಾಷ್ಟ್ರೀಯ ಕೈಗಾರಿಕಾ ಪ್ರದರ್ಶನದ ತುಲನಾತ್ಮಕ ಕೊಡುಗೆಯಲ್ಲಿ ಕರ್ನಾಟಕದಲ್ಲಿ ನೋಂದಣಿಯಾದ ಕೈಗಾರಿಕಾ ಘಟಕಗಳಲ್ಲಿ ಇದೇ ಅವಧಿಯಲ್ಲಿ ಒಟ್ಟು ಹಾಗೂ ನಿವ್ವಳ ಮೌಲ್ಯವರ್ಧಿತ ಮತ್ತು ಲಾಭ ಗಳಿಕೆಯಲ್ಲಿ ಏರಿಕೆಯಾಗಿರುವುದು ಕಂಡು ಬಂದಿದೆ.

**ಕೋಷ್ಟಕ ೫.೫: ಭಾರತ ಹಾಗೂ ಕರ್ನಾಟಕದಲ್ಲಿ ನೋಂದಣಿಯಾದ ಕೈಗಾರಿಕೆಗಳ ಆಯ್ದ ಮಹತ್ವದ ಸೂಚ್ಯಂಕಗಳು (ಕೋಟಿ ರೂ.ಗಳಲ್ಲಿ)**

| ವಿವರಗಳು | ೨೦೧೧–೧೨* | | | ೨೦೧೨–೧೩ | | |
|---|---|---|---|---|---|---|
| | ಕರ್ನಾಟಕ | ಭಾರತ | % ಪಾಲು | ಕರ್ನಾಟಕ | ಭಾರತ | % ಪಾಲು |
| ಕೈಗಾರಿಕೆಗಳು (ಸಂಖ್ಯೆ) | ೧೧,೪೬೦ | ೨,೧೭,೫೫೪ | ೫.೨೭ | ೧೧,೭೫೩ | ೨,೨೨,೧೨೦ | ೫.೨೯ |
| ಸ್ಥಿರ ಬಂಡವಾಳ | ೧.೩೧.೯೨೧ | ೧೯,೪೯,೫೫೦ | ೬.೭೭ | ೧,೪೫,೧೫೧ | ೨೧,೮೦,೨೬೦ | ೬.೬೬ |
| ಕಾರ್ಯಾಚರಣೆ ಬಂಡವಾಳ | ೫೧,೨೦೫ | ೫,೯೧,೦೭೮ | ೮.೬೬ | ೪೮,೭೫೧ | ೬,೦೩,೪೧೧ | ೮.೦೮ |
| ಒಟ್ಟು ಹುಟ್ಟುವಳಿ | ೩,೩೭,೬೭೩ | ೫೬,೯೩,೬೯೪ | ೫.೯೩ | ೩,೯೯,೫೦೮ | ೬೦,೨೫,೯೪೫ | ೬.೬೩ |
| ಒಟ್ಟು ಹೂಡುವಳಿ | ೨,೮೨,೧೨೭ | ೪೭,೮೯,೫೨೬ | ೫.೮೯ | ೩,೩೫,೫೯೬ | ೫೦,೧೮,೬೬೫ | ೬.೬೯ |
| ಒಟ್ಟು ಮೌಲ್ಯವರ್ಧಿತ | ೫೫,೫೪೫ | ೯,೦೫,೨೦೮ | ೬.೧೪ | ೬೩,೯೧೨ | ೧೦,೦೭,೨೭೯ | ೬.೩೫ |
| ನಿವ್ವಳ ಮೌಲ್ಯವರ್ಧಿತ | ೪೬,೨೦೩ | ೭,೫೭,೮೮೩ | ೬.೧೦ | ೫೩,೪೭೯ | ೮,೫೧,೯೪೮ | ೬.೨೮ |
| ಲಾಭ | ೨೦,೪೬೪ | ೩,೮೫,೬೭೮ | ೫.೩೧ | ೨೪,೪೮೭ | ೪,೪೪,೨೬೨ | ೫.೫೧ |

ಮೂಲ: ಕೇಂದ್ರೀಯ ಸಾಂಖ್ಯಿಕ ಕಚೇರಿ, ಭಾರತ ಸರ್ಕಾರ * ಕೇ.ಸಾಂ.ಕ. ಭಾರತ ಸರ್ಕಾರ, ಇವರ ಮಾಹಿತಿಯಂತೆ ಪರಿಷ್ಕರಿಸಿದೆ

೨೦೧೨–೧೩ರ ಕೈಗಾರಿಕಾ ವಾರ್ಷಿಕ ಸಮೀಕ್ಷೆ (ರಾ. ಕೈ.ಸ. ೨೦೦೮) ಯ ಪ್ರಕಾರ ಕರ್ನಾಟಕದಲ್ಲಿ ನೋಂದಣಿಯಾದ ಕೈಗಾರಿಕಾ ವಲಯದ ಪ್ರಮುಖ ಕೈಗಾರಿಕಾ ಗುಂಪುಗಳ ಶೇಕಡವಾರು ವಿಂಗಡಣೆ (ಒಟ್ಟು ಹುಟ್ಟುವಳಿ ಆಧಾರಿತ) ಈ ರೀತಿ ಇದೆ: (೧) ಕಲ್ಲಿದ್ದಲು ಶುದ್ಧೀಕರಣ ಪೆಟ್ರೋಲಿಯಂ (ಶೇ.೧೭.೫೭), (೨) ಆಹಾರೋತ್ಪನ್ನ ಮತ್ತು ಪಾನೀಯಗಳು (ಶೇ.೧೩.೫೩), (೩) ಮೂಲ ಲೋಹ ಉತ್ಪನ್ನ (ಶೇ.೧೧.೫೨), (೪) ಇತರೆ ಉತ್ಪಾದನಾ ಸಾಧನಗಳು (ಶೇ.೮.೫೮), (೫) ವಾಹನ, ಸೆಮಿ ಟ್ರೇಲರ್‌ಗಳು (ಶೇ.೭.೫೨), (೬) ಯಂತ್ರೋಪಕರಣಗಳು (ಶೇ.೬.೯೮) ಹಾಗೂ (೭) ಇತರೆ (ಶೇ.೫.೪೯). ೨೦೧೨–೧೩ಕ್ಕೆ ಕರ್ನಾಟಕದಲ್ಲಿ ನೋಂದಣಿಯಾದ ಕೈಗಾರಿಕೆಗಳ ಒಟ್ಟು ಹುಟ್ಟುವಳಿಯಲ್ಲಿ ಶೇ.೭೧.೧೯ರಷ್ಟು ಪಾಲು ಈ ಏಳು ಪ್ರಮುಖ ಗುಂಪುಗಳಿಂದ ಬಂದಿರುತ್ತದೆ. ಕರ್ನಾಟಕದಲ್ಲಿ ನೋಂದಣಿಯಾದ ಕೈಗಾರಿಕೆಗಳ ಕೈಗಾರಿಕಾ ವಲಯವಾರು ವಿಂಗಡಣೆಯನ್ನು (ರಾಷ್ಟ್ರೀಯ ಕೈಗಾರಿಕಾ ಸಂಕೇತ ೨೦೦೮ರ ೨ ಅಂಕಿಗಳ ಅನ್ವಯ) ಕೋಷ್ಟಕ ೫.೬ರಲ್ಲಿ ನೀಡಲಾಗಿದೆ.

**ಕೋಷ್ಟಕ ೫.೬: ಕೈಗರಿಕಾ ವಾರ್ಷಿಕ ಸಮೀಕ್ಷೆಯನ್ವಯ ೨ ಅಂಕಿಗಳ ಕೈಗಾರಿಕಾ ಸಂಯೋಜನೆ (ರಾಷ್ಟ್ರೀಯ ಕೈಗಾರಿಕಾ ಸಂಕೇತ ೨೦೦೮)**

| ಕ್ರ. ಸಂ. | ಕೈಗಾರಿಕೆ ಸಮೂಹ (ಕೈಗಾರಿಕಾ ಸಂಕೇತ ೨೦೦೮) | ಹುಟ್ಟುವಳಿಯ ಮೌಲ್ಯ (ರೂ.ಲಕ್ಷಗಳಲ್ಲಿ) | ಶೇಕಡಾವಾರು |
|---|---|---|---|
| ೧. | ವ್ಯವಸಾಯ ಹಾಗೂ ಸಂಬಂಧಿಸಿದ ಚಟುವಟಿಕೆಗಳು (೦೧) | ೧೬೫೧೨೩ | ೦.೪೧ |
| ೨. | ಆಹಾರೋತ್ಪನ್ನಗಳ ತಯಾರಿಕೆ (೧೦) | ೫೪೦೫೧೫೬ | ೧೩.೫೩ |
| ೩. | ಪಾನೀಯ ತಯಾರಿಕೆ (೧೧) | ೪೭೩೨೪೭ | ೧.೧೮ |
| ೪. | ಹೊಗೆಸೊಪ್ಪಿನ ಉತ್ಪನ್ನಗಳ ತಯಾರಿಕೆ (೧೨) | ೧೮೯೪೪೯ | ೦.೪೭ |
| ೫. | ಬಟ್ಟೆ ತಯಾರಿಕೆ (೧೩) | ೩೬೦೯೨೨ | ೦.೯೦ |
| ೬. | ಸಿದ್ಧ ಉಡುಪುಗಳ ತಯಾರಿಕೆ (೧೪) | ೧೨೪೫೯೩೯ | ೩.೧೨ |
| ೭. | ಚರ್ಮ ಹಾಗೂ ಚರ್ಮ ಆಧಾರಿತ ಉತ್ಪನ್ನಗಳ ತಯಾರಿಕೆ (೧೫) | ೧೧೯೯೨೧ | ೦.೩೦ |
| ೮. | ಮರ ಹಾಗೂ ಮರ ಆಧಾರಿತ ಉತ್ಪನ್ನಗಳ ತಯಾರಿಕೆ (೧೬) | ೮೩೩೯೪ | ೦.೨೧ |
| ೯. | ಕಾಗದ ಹಾಗೂ ಕಾಗದ ಆಧಾರಿತ ಉತ್ಪನ್ನಗಳ ತಯಾರಿಕೆ (೧೭) | ೩೬೮೨೫೦ | ೦.೯೨ |
| ೧೦. | ಪ್ರಕಟಣೆ ಹಾಗೂ ಮುದ್ರಣ ಸಾಮಗ್ರಿಗಳ ತಯಾರಿಕೆ (೧೮) | ೪೧೬೦೫ | ೧.೦೪ |
| ೧೧. | ಕಲ್ಲಿದ್ದಲು, ಶುದ್ಧೀಕರಿಸಿದ ಪೆಟ್ರೋಲಿಯಂ ಉತ್ಪನ್ನಗಳ ತಯಾರಿಕೆ (೧೯) | ೭೦೨೦೦೩೪ | ೧೭.೫೭ |
| ೧೨. | ರಾಸಾಯನಿಕ ಮತ್ತು ರಾಸಾಯನಿಕ ವಸ್ತುಗಳ ತಯಾರಿಕೆ (೨೦) | ೯೮೫೭೦೭ | ೨.೪೭ |
| ೧೩. | ಔಷಧ ಹಾಗೂ ಸಂಬಂಧಿಸಿದ ಉತ್ಪನ್ನಗಳ ತಯಾರಿಕೆ (೨೧) | ೧೨೩೨೬೧೬ | ೩.೦೯ |
| ೧೪. | ರಬ್ಬರ್ ಉತ್ಪನ್ನಗಳ ತಯಾರಿಕೆ (೨೨) | ೮೭೪೬೬೨ | ೨.೧೯ |
| ೧೫. | ಇತರೆ ಲೋಹ ರಹಿತ ಖನಿಜ ವಸ್ತುಗಳ ತಯಾರಿಕೆ (೨೩) | ೧೧೪೭೨೩೯ | ೨.೮೭ |
| ೧೬. | ಮೂಲ ಲೋಹ ವಸ್ತುಗಳ ತಯಾರಿಕೆ (೨೪) | ೪೬೦೪೩೧೪ | ೧೧.೫೨ |
| ೧೭. | ಸಿದ್ಧಪಡಿಸಿದ ಲೋಹ ಉತ್ಪನ್ನಗಳ ತಯಾರಿಕೆ (೨೫) | ೬೩೫೧೨೫ | ೧.೫೯ |
| ೧೮. | ಗಣಕ ಯಂತ್ರ ವಿದ್ಯುನ್ಮಾನ ಹಾಗೂ ದೃಷ್ಟಿ ಸಂಬಂಧ ಉತ್ಪನ್ನಗಳ ತಯಾರಿಕೆ (೨೬) | ೯೮೭೨೨೯ | ೨.೪೭ |
| ೧೯. | ವಿದ್ಯುತ್ ಉಪಕರಣಗಳ ತಯಾರಿಕೆ (೨೭) | ೧೭೩೯೦೨೦ | ೪.೩೫ |
| ೨೦. | ಯಂತ್ರೋಪಕರಣಗಳ ತಯಾರಿಕೆ (೨೮) | ೨೭೮೯೬೭೨ | ೬.೯೮ |
| ೨೧. | ವಾಹನ, ಸೆಮಿ ಟ್ರೇಲರ್‌ಗಳ ತಯಾರಿಕೆ (೨೯) | ೩೦೦೪೭೩೩ | ೭.೫೨ |
| ೨೨. | ಇತರೆ ಸಾರಿಗೆ ಸಾಧನಗಳ ತಯಾರಿಕೆ (೩೦) | ೩೮೫೮೮೪ | ೦.೯೭ |
| ೨೩. | ಪೀಠೋಪಕರಣ ತಯಾರಿಕೆ (೩೧) | ೭೭೨೫೫ | ೦.೧೯ |
| ೨೪. | ಇತರೆ ಉತ್ಪಾದನಾ ಸಾಮಗ್ರಿಗಳು (೩೨) | ೩೪೨೭೬೧ | ೮.೫೮ |
| ೨೫. | ರಿಪೇರಿ ಹಾಗೂ ಯಂತ್ರೋಪಕರಣ ಸ್ಥಾಪನಾ ಉತ್ಪನ್ನ (೩೩) | ೯೮೮೬ | ೦.೦೨ |
| ೨೬. | ವಿಲೇವಾರಿ ಚಟುವಟಿಕೆ (೩೮) | ೧೦೪೪೨ | ೦.೦೩ |
| ೨೭. | ಇತರೆ | ೨೧೯೨೧೯೬ | ೫.೪೯ |
|  | ರಾಜ್ಯ ಮೊತ್ತ | ೩೯೯೫೦೮೮೧ | ೧೦೦.೦೦ |

**ಮೂಲ: ಕೇಂದ್ರೀಯ ಸಾಂಖ್ಯಿಕ ಕಚೇರಿ (ಕೈಗಾರಿಕೆ), ಕೋಲ್ಕತ್ತ**

೨೦೧೧-೧೨ ಹಾಗೂ ೨೦೧೨-೧೩ರ ಕೈಗಾರಿಕಾ ವಾರ್ಷಿಕ ಸಮೀಕ್ಷೆಯ ಫಲತಾಂಶ ಆಧಾರಿತ ನೋಂದಾಯಿತ ತಲಾ ಕೈಗಾರಿಕೆಗಳ ಕೆಲವು ಪ್ರಮುಖ ಸೂಚಕಗಳನ್ನು ಕೋಷ್ಟಕ ೫.೭ರಲ್ಲಿ ನೀಡಲಾಗಿದೆ. ಸ್ಥಿರ ಬಂಡವಾಳದಲ್ಲಿ ಹೂಡಿಕೆ, ಉದ್ಯೋಗ, ಹುಟ್ಟುವಳಿ ಹಾಗೂ ಒಟ್ಟು ಮೌಲ್ಯವರ್ಧಿತ ಕರ್ನಾಟಕದ ಪ್ರಮುಖ ಸೂಚಕಗಳನ್ನು ಭಾರತದೊಂದಿಗೆ ಹೋಲಿಸಿದಾಗ ಕರ್ನಾಟಕದಲ್ಲಿ ನೋಂದಣಿಯಾದ ಕೈಗಾರಿಕೆಗಳಲ್ಲಿ ಸರಾಸರಿ ಬಂಡವಾಳ ಹೂಡಿಕೆ ಅಧಿಕವಾಗಿದ್ದರೂ, ಉದ್ಯೋಗಾವಕಾಶಕ್ಕೆ ಹೆಚ್ಚು ಅವಕಾಶ ಕಲ್ಪಿಸಿದ್ದು ಒಟ್ಟು ಹುಟ್ಟುವಳಿ ಹಾಗೂ ಒಟ್ಟು ಮೌಲ್ಯವರ್ಧಿತ ಇದರಿಂದಾಗಿ ಹೆಚ್ಚಾಗಿದೆ.

**ಕೋಷ್ಟಕ ೫.೭: ಭಾರತ ಹಾಗೂ ಕರ್ನಾಟಕದಲ್ಲಿ ನೋಂದಣಿಯಾದ ತಲಾ ಕೈಗಾರಿಕೆಗಳ ಪ್ರಮುಖ ಸೂಚ್ಯಂಕಗಳು**

| ಸೂಚಕಗಳು | ಪರಿಮಾಣ | ೨೦೧೧-೧೨* | | ೨೦೧೨-೧೩ | |
|---|---|---|---|---|---|
| | | ಕರ್ನಾಟಕ | ಭಾರತ | ಕರ್ನಾಟಕ | ಭಾರತ |
| ಸ್ಥಿರ ಬಂಡವಾಳದಲ್ಲಿ ಹೂಡಿಕೆ | ರೂ.ಲಕ್ಷ | ೧೧೫೧.೧೫ | ೮೯೬.೧೨ | ೧೨೩೫.೦೧ | ೯೮೧.೫೭ |
| ಉದ್ಯೋಗ | ಸಂಖ್ಯೆ | ೭೯.೦೫ | ೬೧.೭೩ | ೭೩.೩೬ | ೫೮.೩೦ |
| ಒಟ್ಟು ಹುಟ್ಟುವಳಿ | ರೂ.ಲಕ್ಷ | ೨೯೪೬.೫೪ | ೨೬೧೭.೧೪ | ೩೩೯೯.೨೧ | ೨೭೧೨.೯೨ |
| ಒಟ್ಟು ಮೌಲ್ಯವರ್ಧಿತ | ರೂ.ಲಕ್ಷ | ೪೮೪.೬೯ | ೪೧೬.೦೮ | ೫೪೩.೭೯ | ೪೫೩.೪೮ |

ಮೂಲ: ಕೇಂದ್ರೀಯ ಸಾಂಖ್ಯಿಕ ಕಚೇರಿ, ಭಾರತ ಸರ್ಕಾರ* ಕೇ.ಸಾಂ.ಕ. ಭಾರತ ಸರ್ಕಾರ, ಇವರ ಮಾಹಿತಿಯಂತೆ ಪರಿಷ್ಕರಿಸಿದೆ

ಭಾರತ ಹಾಗೂ ಕರ್ನಾಟಕದಲ್ಲಿಯ ತಲಾ ಕೆಲಸಗಾರರ ಆಧಾರಿತ ಕೆಲವು ಆಯ್ದ ಆರ್ಥಿಕ ಸೂಚಕಗಳನ್ನು ಕೋಷ್ಟಕ ೫.೮ರಲ್ಲಿ ನೀಡಲಾಗಿದೆ. ೨೦೧೨-೧೩ರಲ್ಲಿ ಭಾರತಕ್ಕೆ ಹೋಲಿಸಿದಾಗ ಕರ್ನಾಟಕದಲ್ಲಿ ನಿವ್ವಳ ಮೌಲ್ಯವರ್ಧಿತ ಕಾರ್ಮಿಕ ಆದಾಯ, ತಲಾ ಕೆಲಸಗಾರರ ಒಟ್ಟು ಹುಟ್ಟುವಳಿ, ತಲಾ ಕೆಲಸಗಾರರ ವಾರ್ಷಿಕ ಆದಾಯವು ಭಾರತಕ್ಕೆ ಹೋಲಿಸಿದಾಗ ಉತ್ತಮವಾಗಿರುವುದು ಕಂಡು ಬಂದಿದೆ. ಆದರೆ ತಲಾ ಸಂಬಳಕ್ಕೆ ನಿವ್ವಳ ಮೌಲ್ಯವು ಭಾರತಕ್ಕೆ ಹೋಲಿಸಿದಾಗ ಕಡಿಮೆಯಾಗಿರುವುದು ಕಂಡು ಬಂದಿದೆ.

**ಕೋಷ್ಟಕ ೫.೮: ಕೈಗಾರಿಕೆಗಳ ಆಯ್ದ ಆರ್ಥಿಕ ಸೂಚಕಗಳು (೨೦೦೮-೦೯ ರಿಂದ ೨೦೧೨-೧೩ರ ವರೆಗೆ)**

| ವರ್ಷ | ಕಾರ್ಮಿಕ ಉತ್ಪನ್ನ (ತಲಾ ಸಂಬಳಕ್ಕೆ ನಿವ್ವಳ ಮೌಲ್ಯ) (ರೂ.) | | ತಲಾ ಕೆಲಸಗಾರರ ಒಟ್ಟು ಹೂಡುವಳಿ (ರೂ.ಲಕ್ಷ) | | ತಲಾ ಕೆಲಸಗಾರರ ಒಟ್ಟು ಹುಟ್ಟುವಳಿ (ರೂ.ಲಕ್ಷ) | | ತಲಾ ಕೆಲಸಗಾರರ ತಲಾ ವಾರ್ಷಿಕ ಆದಾಯ (ರೂ.) | |
|---|---|---|---|---|---|---|---|---|
| | ಕರ್ನಾಟಕ | ಭಾರತ | ಕರ್ನಾಟಕ | ಭಾರತ | ಕರ್ನಾಟಕ | ಭಾರತ | ಕರ್ನಾಟಕ | ಭಾರತ |
| ೨೦೦೮-೦೯ | ೯.೯ | ೮.೮ | ೨೯.೬ | ೩೦.೩ | ೩೭.೮ | ೩೭.೩ | ೭೧,೧೨೦ | ೬೮,೧೦೩ |
| ೨೦೦೯-೧೦ | ೭.೭ | ೮.೪ | ೩೨.೫ | ೩೩.೧ | ೪೦.೧ | ೪೦.೬ | ೮೩,೨೧೮ | ೭೫,೨೭೭ |
| ೨೦೧೦-೧೧ | ೬.೮ | ೮.೩ | ೩೮.೯ | ೩೮.೮ | ೪೬.೯ | ೪೭.೨ | ೯೭,೪೦೬ | ೮೬,೪೪೯ |
| ೨೦೧೧-೧೨* | ೬.೫ | ೭.೬ | ೩೯.೯ | ೪೫.೯ | ೪೭.೮ | ೫೪.೬ | ೯೯,೯೪೮ | ೯೫,೬೬೨ |
| ೨೦೧೨-೧೩ | ೬.೦ | ೭.೭ | ೫೦.೦ | ೪೯.೦ | ೬೦.೦ | ೫೯.೯ | ೧,೩೪,೩೬೪ | ೧,೧೦,೩೨೭ |

ಮೂಲ: ಕೇಂದ್ರೀಯ ಸಾಂಖ್ಯಿಕ ಕಚೇರಿ, ಭಾರತ ಸರ್ಕಾರ * ಕೇ.ಸಾಂ.ಕ. ಭಾರತ ಸರ್ಕಾರ, ಇವರ ಮಾಹಿತಿಯಂತೆ ಪರಿಷ್ಕರಿಸಿದೆ

### ಅಸಂಘಟಿತ ಉತ್ಪಾದನಾ ವಲಯ

ಕರ್ನಾಟಕದ ಕೈಗಾರಿಕಾ ಉತ್ಪಾದನೆಯಲ್ಲಿ ಅಸಂಘಟಿತ ಅಥವಾ ನೋಂದಣಿಯಾಗದ ಉತ್ಪಾದನಾ ವಲಯವು ಪ್ರಮುಖ ಭಾಗವಾಗಿದೆ. ಸಂಘಟಿತ ಉತ್ಪಾದನಾ ವಲಯದ ಅಂಕಿ ಅಂಶಗಳನ್ನು ನಿಯತಕಾಲಿಕವಾಗಿ ಕಲೆ ಹಾಕಿ ಪ್ರಕಟಿಸುವಂತೆ, ಅಸಂಘಟಿತ ಉತ್ಪಾದನಾ ವಲಯದ ಅಂಕಿ ಅಂಶಗಳನ್ನು ಅಖಿಲ ಭಾರತ ಮಟ್ಟದಲ್ಲಿಯೂ ಪ್ರಕಟಿಸುತ್ತಿಲ್ಲ. ಇವುಗಳ ಮೂಲ ಸ್ವರೂಪದಿಂದಾಗಿ ಅಸಂಘಟಿತ ಉತ್ಪಾದನಾ ವಲಯದ ಚಟುವಟಿಕೆಗಳ ಮಾಹಿತಿಯನ್ನು ಸಮೀಕ್ಷೆ ಮೂಲಕ ಮಾತ್ರ ಕಲೆ ಹಾಕಲಾಗುತ್ತಿದೆ. ಭಾರತ ಸರ್ಕಾರದ ಸಾಂಖ್ಯಿಕ ಮತ್ತು ಕಾರ್ಯಕ್ರಮ ಅನುಷ್ಠಾನ ಮಂತ್ರಾಲಯದ ರಾಷ್ಟ್ರೀಯ ಮಾದರಿ ಸಮೀಕ್ಷೆಯ ಸಂಸ್ಥೆಯು ಅಸಂಘಟಿತ ವಲಯದ ಸಮೀಕ್ಷೆಯನ್ನು ರಾಷ್ಟ್ರೀಯ ಮಟ್ಟದಲ್ಲಿ ನಿಯತಕಾಲಿಕವಾಗಿ ಕೈಗೊಳ್ಳುತ್ತಿದೆ ಮತ್ತು ಮಾಹಿತಿ ಕಲೆ ಹಾಕುತ್ತಿದೆ. ಇತ್ತೀಚೆಗೆ ರಾಷ್ಟ್ರೀಯ ಮಾದರಿ ಸಮೀಕ್ಷೆ ಸಂಸ್ಥೆಯು ತನ್ನ ೬೭ನೇ ಸುತ್ತಿನ ಸಮೀಕ್ಷೆಯಡಿ ೨೦೧೦-೧೧ರಲ್ಲಿ ಅಸಂಘಟಿತ ಕೈಗಾರಿಕಾ ಉತ್ಪಾದನಾ ಉದ್ಯಮಗಳ ಸಮೀಕ್ಷೆಯನ್ನು ಕೈಗೊಂಡಿರುತ್ತದೆ. ರಾಷ್ಟ್ರೀಯ ಮಾದರಿ ಸಮೀಕ್ಷೆಯ ೬೭ನೇ ಸುತ್ತಿನ ರಾಜ್ಯವಾರು ಅಸಂಘಟಿತ ಕೈಗಾರಿಕಾ ಉತ್ಪಾದನಾ ಉದ್ಯಮಗಳ ಮುಖ್ಯ ಮಾಹಿತಿಯನ್ನು ಕೋಷ್ಟಕ ೫.೯ರಲ್ಲಿ ನೀಡಲಾಗಿದೆ. ೨೦೧೦-೧೧ನೇ ಸಾಲಿನ ಈ ಸಮೀಕ್ಷೆಯ ಪ್ರಕಾರ ಕರ್ನಾಟಕವು ಭಾರತದ ಒಟ್ಟು ಅಸಂಘಟಿತ ಕೈಗಾರಿಕಾ ಉದ್ಯಮಗಳ ಶೇ.೪.೩೭ರಷ್ಟು ಹಾಗೂ ಒಟ್ಟು ಅಸಂಘಟಿತ ತಯಾರಿಕಾ ಉದ್ಯೋಗದ ಶೇ.೪.೩೩ರಷ್ಟು ಪಾಲನ್ನು ಹೊಂದಿದೆ.

**ಕೋಷ್ಟಕ ೫.೯: ಅಸಂಘಟಿತ ಕೈಗಾರಿಕಾ ಉತ್ಪಾದನಾ ಉದ್ಯಮಗಳು ೨೦೧೦-೧೧**

| ರಾಜ್ಯ | ಅಸಂಘಟಿತ ಕೈಗಾರಿಕಾ ಉತ್ಪಾದನಾ ಸಂಖ್ಯೆ (ಲಕ್ಷಗಳಲ್ಲಿ) | | ಒಟ್ಟು ಮೌಲ್ಯವರ್ಧಿತ (ರೂ.ಗಳಲ್ಲಿ) | |
|---|---|---|---|---|
| | ಉದ್ಯಮಗಳು | ಕೆಲಸಗಾರರು | ತಲಾ ಉದ್ಯಮಗಳು | ತಲಾ ಕೆಲಸಗಾರರು |
| ಆಂಧ್ರ ಪ್ರದೇಶ | ೧೬.೨೦ | ೩೧.೦೪ | ೭೪೦೧೨ | ೩೮೬೩೪ |
| ಬಿಹಾರ | ೪.೪೮ | ೭.೫೧ | ೬೮೪೩೪ | ೪೦೮೧೬ |
| ಛತ್ತೀಸ್‌ಗಡ್ | ೧.೬೫ | ೩.೫೨ | ೬೮೩೭೯ | ೩೨೦೧೮ |
| ಗುಜರಾತ್ | ೧೪.೧೭ | ೩೨.೧೫ | ೧೩೧೪೦೬ | ೫೭೯೦೩ |
| **ಕರ್ನಾಟಕ** | **೮.೬೧** | **೧೫.೦೯** | **೮೭೨೯೯** | **೪೯೮೦೧** |
| ಮಧ್ಯಪ್ರದೇಶ | ೮.೮೪ | ೧೫.೩೫ | ೪೨೭೧೪ | ೨೪೬೦೩ |
| ಮಹಾರಾಷ್ಟ್ರ | ೧೩.೮೫ | ೩೨.೧೯ | ೧೪೬೫೫೩ | ೬೩೦೬೯ |
| ಒರಿಸ್ಸಾ | ೬.೧೫ | ೧೨.೬೬ | ೪೪೭೮೬ | ೨೧೭೬೨ |
| ರಾಜಸ್ತಾನ್ | ೬.೨೭ | ೧೨.೨೦ | ೧೧೦೦೨೪ | ೫೬೫೯೦ |
| ತಮಿಳುನಾಡು | ೧೬.೫೨ | ೩೫.೧೪ | ೧೧೭೩೫೦ | ೫೫೧೭೮ |
| ಉತ್ತರ ಪ್ರದೇಶ | ೨೩.೪೧ | ೫೨.೨೬ | ೬೪೭೧೬ | ೨೮೯೯೨ |
| ಭಾರತ | ೧೯೭.೧೨ | ೩೪೮.೮೮ | ೮೯೯೦೦ | ೪೪೩೪೭ |

**ಮೂಲ: ರಾಷ್ಟ್ರೀಯ ಮಾದರಿ ಸಮೀಕ್ಷೆ ಸಂಸ್ಥೆ**

ರಾಜ್ಯದ ಕೈಗಾರಿಕೆಗೆ ತಯಾರಿಕಾ ವಲಯವು ಅಲ್ಲದೆ ಸೇವಾ ವಲಯವು ಮಹತ್ವದ ಬೆಂಬಲವನ್ನು ನೀಡುತ್ತಿದೆ. ರಾಷ್ಟ್ರೀಯ ಮಾದರಿ ಸಮೀಕ್ಷೆಯ ೬೭ನೇ ಸುತ್ತಿನಲ್ಲಿ ಸೇವಾ ವಲಯ (ಮಾರಾಟ ಹೊರತುಪಡಿಸಿ) ಸಮೀಕ್ಷೆಯನ್ನು ೨೦೧೦-೧೧ರಲ್ಲಿ ಕೈಗೊಂಡಿದ್ದು, ರಾಜ್ಯವಾರು ಪ್ರಮುಖ ಮಾಹಿತಿಯನ್ನು ಕೋಷ್ಟಕ ೫.೧೦ರಲ್ಲಿ ನೀಡಲಾಗಿದೆ. ಈ ಕೋಷ್ಟಕದಲ್ಲಿ ಉದ್ಯಮಗಳು ಹಾಗೂ ಉದ್ಯೋಗಿಗಳ ಸಂಖ್ಯೆಯನ್ನು ತಲಾ ಘಟಕವಾರು ಹಾಗೂ ತಲಾ ಕೆಲಸಗಾರರ ಒಟ್ಟು ಮೌಲ್ಯದೊಂದಿಗೆ ನೀಡಲಾಗಿದೆ. ಕರ್ನಾಟಕವು ಸೇವಾ ವಲಯದಲ್ಲಿ ಶೇ.೪.೯ರಷ್ಟು ಉದ್ಯಮಗಳನ್ನು ಹಾಗೂ ಶೇ.೪.೮ರಷ್ಟು ಉದ್ಯೋಗಿಗಳನ್ನು ಭಾರತದ ಒಟ್ಟು ಪ್ರಮಾಣದಲ್ಲಿ ಹೊಂದಿದೆ.

**ಕೋಷ್ಟಕ ೫.೧೦: ಸೇವಾ ವಲಯದ ಉದ್ಯಮಗಳು (ಮಾರಾಟ ಹೊರತುಪಡಿಸಿ) ೨೦೧೦-೧೧**

| ರಾಜ್ಯ | ಸಂಖ್ಯೆ (ಲಕ್ಷಗಳಲ್ಲಿ) | | ವಾರ್ಷಿಕ ಒಟ್ಟು ಮೌಲ್ಯ (ರೂ.ಗಳಲ್ಲಿ) | |
|---|---|---|---|---|
| | ಉದ್ಯಮಗಳು | ಕೆಲಸಗಾರರು | ತಲಾ ಉದ್ಯಮಗಳು | ತಲಾ ಕೆಲಸಗಾರರು |
| ಆಂಧ್ರ ಪ್ರದೇಶ | ೫೬.೦೦ | ೧೨೨.೧೨ | ೯೭೪೨೦ | ೪೪೬೭೫ |
| ಬಿಹಾರ | ೨೩.೦೯ | ೩೪.೩೭ | ೭೭೦೭೨ | ೫೧೭೭೪ |
| ಛತ್ತೀಸ್‌ಗಡ್ | ೬.೭೬ | ೧೬.೬೧ | ೯೦೦೭೬ | ೪೪೭೫೫ |
| ಗುಜರಾತ್ | ೩೬.೩೫ | ೬೯.೭೦ | ೧೧೭೨೨೮ | ೬೧೧೩೭ |
| **ಕರ್ನಾಟಕ** | **೨೮.೧೧** | **೫೩.೯೦** | **೧೪೬೫೮೩** | **೭೬೪೫೯** |
| ಮಧ್ಯಪ್ರದೇಶ | ೨೫.೯೪ | ೪೪.೪೧ | ೭೩೬೦೪ | ೪೨೯೯೭ |
| ಮಹಾರಾಷ್ಟ್ರ | ೫೧.೫೬ | ೧೦೧.೩೭ | ೧೪೯೦೬೩ | ೭೫೮೨೪ |
| ಒರಿಸ್ಸಾ | ೨೪.೪೫ | ೪೯.೩೨ | ೫೫೨೩೫ | ೨೭೩೭೮ |
| ರಾಜಸ್ತಾನ್ | ೨೧.೪೨ | ೩೭.೮೨ | ೧೧೭೬೪೭ | ೬೬೬೪೯ |
| ತಮಿಳುನಾಡು | ೪೪.೬೭ | ೯೦.೬೫ | ೧೪೬೪೯೪ | ೭೨೧೯೧ |
| ಉತ್ತರ ಪ್ರದೇಶ | ೮೩.೮೩ | ೧೫೭.೭೯ | ೭೮೫೩೭ | ೪೧೭೨೯ |
| ಭಾರತ | ೫೭೬.೭೩ | ೧೦೭೯.೭೯ | ೧೦೮೫೯೧ | ೫೮೧೯೩ |

**ಮೂಲ: ರಾಷ್ಟ್ರೀಯ ಮಾದರಿ ಸಮೀಕ್ಷೆ ಸಂಸ್ಥೆ**

## ಸಾಂಪ್ರದಾಯಿಕ ಕೈಗಾರಿಕೆಗಳು

ರಾಜ್ಯದಲ್ಲಿ ಅನೇಕ ಕಸುಬು ಹಾಗೂ ಕೈಗಾರಿಕೆಗಳು ಬಹಳ ಹಿಂದಿನಿಂದಲೂ ಸಮೃದ್ಧವಾಗಿ ಬೆಳೆದು ಬಂದಿವೆ. ಕರ್ನಾಟಕದ ಹಳೆಯ ಕೈಗಾರಿಕೆಗಳ ಪೈಕಿ ಬಟ್ಟೆ ತಯಾರಿಕೆ ಒಂದು ಮುಖ್ಯ ಕೈಗಾರಿಕೆಯಾಗಿದೆ. ಇದು ರಾಜ್ಯಾದ್ಯಂತ ಕೇಂದ್ರೀಕರಣಗೊಂಡಿರುವುದು ಮತ್ತು ಅವುಗಳಲ್ಲಿ ಚಿನ್ನಮಂಗಲ, ಐಗೊಂಡಪುರ (ಬೆಂಗಳೂರು ಜಿಲ್ಲೆ), ಬಳ್ಳಿಗಾವಿ (ಶಿವಮೊಗ್ಗ ಜಿಲ್ಲೆ), ಅರಸೀಕೆರೆ (ಹಾಸನ ಜಿಲ್ಲೆ) ಮತ್ತು ಚಿನ್ಮಳ್ಳಿ (ರಾಯಚೂರು ಜಿಲ್ಲೆ) ಪ್ರಮುಖ ಕೇಂದ್ರಗಳಾಗಿದ್ದವೆಂಬುದು ಶಾಸನಗಳಿಂದ ತಿಳಿದು ಬರುತ್ತದೆ. ಮಧ್ಯಯುಗದ ಕಾಲದಲ್ಲಿ ಹುಬ್ಬಳ್ಳಿ, ಗದಗ, ಬಾದಾಮಿ, ಇಳಕಲ್, ಕೊಡಿಯಾಲ, ಗುಳೇದಗುಡ್ಡ, ಬೆಂಗಳೂರು ಮತ್ತು ದೊಡ್ಡಬಳ್ಳಾಪುರಗಳು ಹೆಸರಾಂತ ಜವಳಿ ಕೇಂದ್ರಗಳಾಗಿದ್ದವು. ವಿಜಯಪುರ (ಬಿಜಾಪುರ)ದ ಆದಿಲ್‌ಶಾಹಿ ಅರಸರ ಆಳ್ವಿಕೆಗೆ ಒಳಪಟ್ಟಿದ್ದ ಉತ್ತರ ಕರ್ನಾಟಕದ ಪ್ರದೇಶಗಳಲ್ಲಿ ಕಾಗದ ಮತ್ತು ಅಗರಬತ್ತಿ ತಯಾರಿಕಾ ಕಾರ್ಯ ಪ್ರಾರಂಭಗೊಂಡಿತೆಂದು ತಿಳಿದುಬರುತ್ತದೆ. ೧೬೩೮ರಲ್ಲಿ ಬ್ರಿಟೀಷರು ಕಾಳನದಿಯ ದಡದಲ್ಲಿರುವ ಕಾಡವಾಡದಲ್ಲಿ ಸ್ಥಾಪಿಸಿದ ಮಳಿಗೆಯ ಮೂಲಕ ಹುಬ್ಬಳ್ಳಿಯಲ್ಲಿ ತಯಾರಾದ ಬಟ್ಟೆಯನ್ನು ರಫ್ತು ಮಾಡಲಾಗುತ್ತಿತ್ತು. ಮೈಸೂರಿನ ಒಡೆಯರಾದ ಚಿಕ್ಕದೇವರಾಯರ ಕಾಲದಲ್ಲಿ ೧೨,೦೦೦ ನೇಯ್ಗೆ ಕುಟುಂಬಗಳನ್ನು ಬೆಂಗಳೂರಿನಲ್ಲಿ ನೆಲೆಗೊಳ್ಳುವಂತೆ ಮತ್ತು ದೊಡ್ಡಬಳ್ಳಾಪುರ ಒಂದು ಪ್ರಮುಖ ಬಟ್ಟೆ ಉತ್ಪಾದಕ ಕೇಂದ್ರವಾಗಿ ಬೆಳೆಯುವಂತೆ ಮಾಡಲಾಯಿತು. ಟಿಪ್ಪು ಸುಲ್ತಾನನ ಕಾಲದಲ್ಲಿ ತಮಿಳುನಾಡಿನ ಬಾರಾಮಹಲ್‌ನಿಂದ ಅನೇಕ ಬಟ್ಟೆ ನೇಯ್ಗೆಯವರು ಬಂದು ಬೆಂಗಳೂರು ಹಾಗೂ ಅದರ ಸುತ್ತಮುತ್ತಲಿನ ಪ್ರದೇಶದಲ್ಲಿ ನೆಲಸಿದರು. ಬುಕಾನನ್ ತನ್ನ ಮೈಸೂರು ರಾಜ್ಯದ ಪ್ರವಾಸದ ಕಾಲದಲ್ಲಿ ಕಂಡುಬಂದ ನೇಯ್ಗೆ ಕೆಲಸ ಮಾಡುವ ಒಂದು ಜನಾಂಗವನ್ನು 'ತೊಗಟರು'ಎಂದು ಕರೆಯಲಾಗುತ್ತಿತ್ತೆಂದು, ಅವರು ದಪ್ಪ ಹಾಗೂ ಒರಟು ಬಟ್ಟೆಯನ್ನು ಹಾಗೂ ಕೆಂಪು ಅಂಚು ಇರುವ ಬಿಳಿಯ ಹತ್ತಿಬಟ್ಟೆಯನ್ನು ತಯಾರಿಸುತ್ತಿದ್ದರೆಂದು ಮತ್ತು ಹೊಲೆಯರು ಎಂಬ ಇನ್ನೊಂದು ಜನಾಂಗ 'ಪರಕಾಲ' ಎಂಬ ಒರಟು ಹಾಗೂ ಗಟ್ಟಿಯಾದ ಬಟ್ಟೆಯನ್ನು ನೇಯ್ಗೆ ಮಾಡುತ್ತಿದ್ದರೆಂದು ತಿಳಿಸಿರುವನು. ಕರ್ನಾಟಕದ ಹೆಂಗಸರು ಚರಕದಿಂದ ನೂಲು ತೆಗೆಯುತ್ತಿದ್ದರೆಂದು ಮತ್ತು ಅವರ ದುಡಿಮೆಯು ಕೃಷಿ ಕಾರ್ಮಿಕರ ದುಡಿಮೆಯಷ್ಟೆ ಇರುತ್ತಿತ್ತೆಂದು ತಿಳಿಸಿರುತ್ತಾನೆ. ಆದರೆ, ಕೈಗಾರಿಕಾ ಕ್ರಾಂತಿಯು ನೂಲುವುದನ್ನು ಉದ್ಯೋಗವಾಗಿರಿಸಿ ಕೊಂಡವರನ್ನು ನಾಶಮಾಡಿದುದರ ಜೊತೆಗೆ ಅಧಿಕ ಪ್ರಮಾಣದ ನೇಯ್ಗೆ ಕಾರ್ಯವನ್ನು ಕತ್ತು ಹಿಸುಕಿ ಉಸಿರು ಕಟ್ಟುವಂತೆ ಮಾಡಿತು.

ರಾಜ್ಯದಲ್ಲಿ ಕಂಬಳಿ ತಯಾರಿಕೆ ಸಮೃದ್ಧವಾಗಿತ್ತೆಂದು ಮತ್ತು ದಾವಣಗೆರೆ ಹಾಗೂ ದೊಡ್ಡಬಳ್ಳಾಪುರ ಪ್ರಮುಖ ಕೇಂದ್ರಗಳಾಗಿದ್ದವೆಂದು ಶಾಸನಗಳಿಂದ ತಿಳಿದುಬರುತ್ತದೆ. ಚಿತ್ರದುರ್ಗ ಜಿಲ್ಲೆಯ ಬೂದಿಹಾಳು ಸೆಣಬು ಮತ್ತು ನಾರಿನಿಂದ ಬಟ್ಟೆ ತಯಾರಿಸುವ ಕೇಂದ್ರವಾಗಿತ್ತೆಂದು ಡಾ. ಎ. ಅಪ್ಪದೊರೈ ತಿಳಿಸಿರುತ್ತಾರೆ. ಗದಗ ಜಿಲ್ಲೆಯ ಲಕ್ಷ್ಮೇಶ್ವರ ಮತ್ತು ಹಾವೇರಿ ಜಿಲ್ಲೆಯ ವರಗಿರಿಯಲ್ಲಿ ಪಟ್ಟೆಗಾರರು ರೇಷ್ಮೆಯಿಂದ ಬಟ್ಟೆ ತಯಾರಿಸುತ್ತಿದ್ದರೆಂಬುದು ಶಾಸನಗಳಿಂದ ತಿಳಿದು ಬರುತ್ತದೆ. ಹಿಂದಿನ ಕಾಲದಲ್ಲಿ ಕಚ್ಚಾ ರೇಷ್ಮೆಯನ್ನು ಆಮದು ಮಾಡಿಕೊಳ್ಳುತ್ತಿದ್ದಾಗ್ಯೂ, ಟಿಪ್ಪು ಸುಲ್ತಾನ್ ಮೈಸೂರು ರಾಜ್ಯದಲ್ಲಿ ರೇಷ್ಮೆ ಕೃಷಿಯನ್ನು ಹೆಚ್ಚಿನ ಪ್ರಮಾಣದಲ್ಲಿ ಪ್ರಾರಂಭಗೊಳ್ಳುವಂತೆ ಮಾಡಿದನು. ಖತ್ರೀಸ್ (ಗುಜರಾತಿನ ದಕ್ಷಿಣ ಭಾಗದ ಕ್ಷತ್ರಿಯರು) ಬೆಂಗಳೂರಿನಲ್ಲಿ ನೆಲಸಿ ಗಟ್ಟಿಯಾದ ಮತ್ತು ಹೆಚ್ಚು ಬೆಲೆ ಬಾಳುವ ಬಟ್ಟೆಯನ್ನು ತಯಾರಿಸುತ್ತಿದ್ದರೆಂದು ಬುಕಾನನ್ ತಿಳಿಸಿರುತ್ತಾನೆ. ಅಲ್ಲದೆ, ಅವರು ನೇಯ್ದ ಬಟ್ಟೆಗೆ ಬಣ್ಣ ಹಾಕುತ್ತಿದ್ದರೆಂದು ಮತ್ತು ಅವರು ಬೇರೆ ನೇಯ್ಗೆವರಿಗಿಂತ ಹೆಚ್ಚು ಶ್ರೀಮಂತರಾಗಿದ್ದರೆಂದು ತಿಳಿಸಿರುವನು. ಇದೇ ಜನಾಂಗ ಹುಬ್ಬಳ್ಳಿಯಲ್ಲಿಯೂ ಅಧಿಕ ಪ್ರಮಾಣದಲ್ಲಿ ನೆಲೆಗೊಂಡಿದ್ದರು. ಅವರಿಗೆ ಜರತಾರಿ ಹಾಕುವ ಕೆಲಸವು ಸಹ ತಿಳಿದಿತ್ತು. ರಾಜ್ಯದಲ್ಲಿ ತೈಲ ತೆಗೆಯುವ ಕಾರ್ಯವು ಅಧಿಕ ಪ್ರಮಾಣದಲ್ಲಿ ನಡೆಯುತ್ತಿತ್ತು ಮತ್ತು ಎಳ್ಳು, ಅಗಸೇಬೀಜ, ಸೋಯಾಬೀನ್, ಹುಚ್ಚೆಳ್ಳು, ರೇಪ್‌ಸೀಡ್, ಸಾಸಿವೆ, ಸೂರ್ಯಕಾಂತಿ, ಹೊಂಗೆ, ಹರಳು, ಕೊಬ್ಬರಿ, ಕುಸುಬೆ ಮೊದಲಾದವುಗಳನ್ನು ಉಪಯೋಗಿಸಿ ಎಣ್ಣೆ ತೆಗೆಯಲಾಗುತ್ತಿತ್ತು.

ರಾಜ್ಯದ ಕಮ್ಮಾರರು, ಅಕ್ಕಸಾಲಿಗರು, ತಾಮ್ರಗಾರರು, ಕಂಚುಗಾರರು ಮತ್ತು ಬಡಗಿಗಳನ್ನು ಪಾಂಚಾಳ ಜಾತಿಗೆ ಸೇರಿದವರಾಗಿರುವರೆಂದು ಮತ್ತು ವಿಶ್ವಕರ್ಮಿಗಳೆಂದೂ ಕರೆಯಲಾಗುತ್ತದೆ. ಕಮ್ಮಾರರು ಕತ್ತಿಗಳನ್ನು ತಯಾರಿಸುವ ಪರಿಣತಿಯನ್ನು ಪಡೆದಿದ್ದರೆಂಬುದು ಮೈಸೂರು ಜಿಲ್ಲೆಯ ೧೧ನೇ ಶತಮಾನದ ಶಾಸನದಿಂದ ವ್ಯಕ್ತಪಡುತ್ತದೆ. ಮೈಸೂರು ಅರಸರ ಆಳ್ವಿಕೆಯ ಕಾಲದಲ್ಲಿ ಚಿಕ್ಕದೇವರಾಯ ಒಡೆಯರು ಕಬ್ಬಿಣದ ಸಾಧನ ಮತ್ತು ಸಾಮಗ್ರಿಗಳ ಉತ್ಪಾದನೆ ಮತ್ತು ಮಾರಾಟದ ಮೇಲ್ವಿಚಾರಣೆಗಾಗಿ ಕಬ್ಬಿಣದ ಚಾವಡಿಯನ್ನು ಸ್ಥಾಪಿಸಿದ್ದರು. ಟಿಪ್ಪುಸುಲ್ತಾನ್ ಇದರ ಏಕಸ್ವಾಮ್ಯತೆಯನ್ನು ಮುಂದುವರೆಸಿಕೊಂಡು ಬಂದುದರ ಜೊತೆಗೆ ಕನಕಪುರದಲ್ಲಿ ಫಿರಂಗಿ ತಯಾರಿಸುವ ಒಂದು ಕುಲುಮೆಯನ್ನು ಸ್ಥಾಪಿಸಿದ್ದನು. ಮಧುಗಿರಿ, ಚನ್ನರಾಯನದುರ್ಗ, ಹಾಗಲವಾಡಿ ಮತ್ತು ದೇವರಾಯನ ದುರ್ಗಗಳಲ್ಲಿ ಮಳೆಗಾಲದಲ್ಲಿ ಮರಳನ್ನು ಸಂಗ್ರಹಿಸಿ ಕಬ್ಬಿಣವನ್ನು ತಯಾರಿಸುತ್ತಿದ್ದರೆಂದು ಬುಕಾನನ್ ವ್ಯಕ್ತಪಡಿಸಿರುವನು. ಈ ಸ್ಥಳಗಳಲ್ಲಿ ಕಬ್ಬಿಣವನ್ನು ಕರಗಿಸುವ ತಾಂತ್ರಿಕ ವಿವರಣೆಯನ್ನು ಕೊಟ್ಟಿರುವನು.

ಮಾಗಡಿ ತಾಲೂಕಿನ ಗಟ್ಟಿಪುರದ ಕಬ್ಬಿಣದ ಅದಿರನ್ನು ಸಹ ಪ್ರಸ್ತಾಪಿಸಿರುವನು. ಕಬ್ಬಿಣದ ಪಟ್ಟಿ ಮತ್ತು ಕಲ್ಲು ತುಂಡರಿಸುವ ಉಳಿಗಳನ್ನು ತಯಾರಿಸಲು ಬೇಕಾಗುವ ಉಕ್ಕನ್ನು ಬೆಂಗಳೂರು ಸಮೀಪದ ಮಾಗಡಿ ಮತ್ತು ಇತರ ಸ್ಥಳಗಳಲ್ಲಿ ತಯಾರಿಸುತ್ತಿದ್ದರೆಂದೂ ಸಹ ತಿಳಿಸಿರುವನು. ಚನ್ನಪಟ್ಟಣವು ಸಾರ್ವತ್ರಿಕ ಬೇಡಿಕೆ ಇರುವ ಮತ್ತು ಸಂಗೀತ ವಾದ್ಯಗಳಿಗಾಗಿ ಉಪಯೋಗಿಸುವ ಉಕ್ಕಿನ ತಂತಿಯನ್ನು ತಯಾರಿಸುವ ಕೇಂದ್ರವಾಗಿತ್ತೆಂದು ತಿಳಿಸಿದ್ದಾನೆ. ಧಾರವಾಡ ಸಮೀಪವಿರುವ ತೇಗೂರು, ಮಂಡ್ಯ ಜಿಲ್ಲೆಯ ಮಳವಳ್ಳಿ ಸಮೀಪವಿರುವ ಹಲಗೂರು, ಬೆಂಕಿಪುರ (ಈಗಿನ ಭದ್ರಾವತಿ) ಮೊದಲಾದ ಸ್ಥಳಗಳು ಕಬ್ಬಿಣ ತಯಾರಿಕಾ ಪ್ರಮುಖ ಕೇಂದ್ರಗಳಾಗಿದ್ದವು. ಕಬ್ಬಿಣವನ್ನು ಕರಗಿಸಲು ಬೇಕಾಗಿರುವ ಇದ್ದಿಲನ್ನು ಪಶ್ಚಿಮ ಘಟ್ಟಗಳ ಅರಣ್ಯಗಳಿಂದ ಪಡೆಯಬಹುದಾಗಿದ್ದು ಈ ಪ್ರದೇಶವು ಅಧಿಕ ಪ್ರಮಾಣದ ಕಬ್ಬಿಣದ ಅದಿರನ್ನು ಹೊಂದಿರುವ ಗಣಿಗಳ ಕೇಂದ್ರವು ಸಹ ಆಗಿರುವುದು.

ಆಭರಣಗಳ ತಯಾರಿಕೆಯೂ ಕೂಡ ಏಳಿಗೆಯಲ್ಲಿದ್ದ ಕೈಗಾರಿಕೆಯಾಗಿತ್ತು. ಮಾನಸೋಲ್ಲಾಸವು ಗಂಡಸರು ಮತ್ತು

ಹೆಂಗಸರು ಧರಿಸುತ್ತಿದ್ದ ಒಡವೆಗಳ ಒಂದು ಉದ್ದನೆಯ ಪಟ್ಟಿಯನ್ನು ಕೊಡುತ್ತದೆ. ಅಕ್ಕಸಾಲಿಗರು ಪಾಂಚಾಳರಲ್ಲಿನ ಒಂದು ವರ್ಗದವರಾಗಿದ್ದು ಆಭರಣಗಳನ್ನು ತಯಾರಿಸುತ್ತಿದ್ದರು. ಅಲ್ಲದೆ ಬಹಳ ಹಿಂದೆ ಸರ್ಕಾರಕ್ಕೆ 'ಟಂಕಾ' ಎಂಬ ತೆರಿಗೆಯನ್ನು ಕೊಟ್ಟು ನಾಣ್ಯಗಳನ್ನು ಟಂಕಿಸುತ್ತಿದ್ದರು. ಲಕ್ಕುಂಡಿ, ಸೂಡಿ, ಕುಡುತಿನಿ, ಬೆಳಗಾವಿ, ಮಂಗಳೂರು, ಬಾರಕೂರು ಹಾಗೂ ಇತರ ಮುಖ್ಯ ನಗರಗಳಲ್ಲಿ ಸರ್ಕಾರದ ಟಂಕಾ ಶಾಲೆಗಳಿದ್ದವು. ಕಾಸಾರರು ಅಥವಾ ಕಂಚುಗಾರರು-ಕಂಚಿನ ಪಾತ್ರೆಗಳು, ಗಂಟೆಗಳು, ಕಹಳೆಗಳು ಮೊದಲಾದ ವಾದ್ಯಗಳು, ವಿವಿಧ ಮಾದರಿಯ ದೀಪಗಳು, ಕನ್ನಡಿಗಳು, ಅನೇಕ ದೇವರ ಪ್ರತಿಮೆಗಳು ಮೊದಲಾದ ಬಳಕೆಯ ವಸ್ತುಗಳನ್ನು ತಯಾರಿಸುತ್ತಿದ್ದ ಬಗ್ಗೆ ಅನೇಕ ದಾಖಲೆಗಳಲ್ಲಿ ಉಲ್ಲೇಖವಿದ್ದು, ಅವುಗಳಲ್ಲಿ ಒಂದಾದ ಎಂಟನೇ ಶತಮಾನದ ಲಕ್ಷ್ಮೇಶ್ವರದಲ್ಲಿನ ಶಾಸನವು ಬಹಳ ಮುಖ್ಯವಾದುದು. ಮರಗೆಲಸವು ಪಾಂಚಾಳರ ಮತ್ತೊಂದು ಉದ್ಯೋಗವಾಗಿದ್ದು, ವ್ಯವಸಾಯೋಪಕರಣಗಳ ಜೊತೆಗೆ ಗೃಹೋಪಯೋಗಿ ಸಾಮಾನುಗಳು, ರಥಗಳು ಮತ್ತು ಪಲ್ಲಕ್ಕಿಗಳನ್ನು ತಯಾರಿಸುತ್ತಿದ್ದರು. ಅಲಂಕೃತ ಕಂಬಗಳು, ಬಾಗಿಲುವಾಡಗಳು ಮತ್ತು ಒಳಮಾಳಿಗೆಗಳಿಂದ ಕೂಡಿದ ಅರಮನೆಗಳನ್ನು ಅವರು ಕಟ್ಟುತ್ತಿದ್ದರು. ಹಳೆಯ ಅರಮನೆಗಳು ಸಾಮಾನ್ಯವಾಗಿ ಮರದಿಂದ ನಿರ್ಮಿತಗೊಂಡವುಗಳಾಗಿದ್ದವು. ಅವುಗಳಲ್ಲಿ ನಾಶವಾಗದೆ ಉಳಿದಿರುವ ಕೆಲವನ್ನು ಶಿವಮೊಗ್ಗ, ಬೆಂಗಳೂರು ಮತ್ತು ಶ್ರೀರಂಗಪಟ್ಟಣಗಳಲ್ಲಿ ಕಾಣಬಹುದು.

ಚರ್ಮವನ್ನು ಉಪಯೋಗಿಸಿ ಪಾದರಕ್ಷೆಗಳು, ನೀರಿನ ಚೀಲಗಳು, ಗುರಾಣಿಗಳು, ಹಾಸಿಗೆಗಳು, ಸೋಫಾ ಸೆಟ್ಟುಗಳು, ನಗಾರಿಗಳು ಮೊದಲಾದವುಗಳನ್ನು ತಯಾರಿಸುವವರನ್ನು ಸಮಗಾರರು ಮತ್ತು ಮೋಚಿಗಳೆಂದು ಕರೆಯುತ್ತಿದ್ದರು. ಅವರು ತಯಾರಿಸುತ್ತಿದ್ದ ಪಾದರಕ್ಷೆಗಳು ವಿವಿಧ ಬಣ್ಣಗಳಿಂದ ಮತ್ತು ನಮೂನೆಗಳಿಂದ ಕೂಡಿದ್ದವೆಂದು ಮಾನಸೋಲ್ಲಾಸದಲ್ಲಿ ಉಲ್ಲೇಖವಿದೆ. ಬಾದಾಮಿ ಶಾಸನವು ಈ ಸಮಾಜದವರ ಸಂಘವಿದ್ದುದನ್ನು ಉಲ್ಲೇಖಿಸುತ್ತದೆ. ಕುಂಬಾರರು ಅಥವಾ ಮಡಕೆ ಮಾಡುವವರು ಮಣ್ಣಿನ ಪಾತ್ರೆಗಳನ್ನು ಮತ್ತು ಹೆಂಚುಗಳನ್ನು ಕೈ ಮತ್ತು ಚಕ್ರದ ಸಹಾಯದಿಂದ ತಯಾರಿಸುತ್ತಿದ್ದರು. ಉಪ್ಪು ಮತ್ತು ಸುಣ್ಣ ತಯಾರಿಕೆಗಳೆರಡೂ ಇತರ ಗಮನಾರ್ಹ ಕೈಗಾರಿಕೆಗಳಾಗಿದ್ದವು. ಸಮುದ್ರದ ತೀರಪ್ರದೇಶದಲ್ಲಿ ಸಮುದ್ರದ ನೀರಿನಿಂದ ಮತ್ತು ಒಳನಾಡಿನಲ್ಲಿ ಉಪ್ಪಿನ ಗಣಿಗಳಿಂದ ಉಪ್ಪನ್ನು ತಯಾರಿಸುತ್ತಿದ್ದರು. ಅನೇಕ ಕಡೆ ಉಪ್ಪಿನ ಮೊಳೆಗಳಿದ್ದವೆಂದು ದಾಖಲೆಗಳು ತಿಳಿಸುತ್ತವೆ. ಉಪ್ಪಿನ ಕುದುರು, ಉಪ್ಪಿನ ಮೊಗರು, ಉಪ್ಪಿನ ಪಟ್ಣ, ಉಪ್ಪೂರು, ಉಪ್ಪಳ್ಳಿ, ಉಪ್ಪಿನಂಗಡಿ ಮೊದಲಾದವುಗಳು ಉಪ್ಪು ತಯಾರಿಕಾ ಕೇಂದ್ರಗಳಾಗಿದ್ದವೆಂಬುದನ್ನು ನೆನಪಿಸುತ್ತವೆ. ಉಪ್ಪಾರರು ಉಪ್ಪು ತಯಾರಿಕೆಯಲ್ಲಿ ನಿರತರಾದ ಒಂದು ಜನಾಂಗ. ಸಾವಿರಾರು ಜನರಿಗೆ ಆಸರೆಯಾಗಿದ್ದ ಈ ಸಾಂಪ್ರದಾಯಕ ಉದ್ಯಮವನ್ನು ಬ್ರಿಟಿಷರು, ಉಪ್ಪು ತಯಾರಿಕೆಯು ರಾಜ್ಯ ಸರ್ಕಾರದ ಸ್ವಾಮ್ಯವೆಂದು ತೀರ್ಮಾನಿಸಿದ ನಂತರ ಅದು ಸ್ಥಗಿತಗೊಂಡಿತು. ಈ ಉದ್ಯಮವು ಕೋಲಾರ ಜಿಲ್ಲೆಯ ಟೇಕಲ್‌ನಲ್ಲಿ ಪ್ರವರ್ಧಮಾನ ಸ್ಥಿತಿಯಲ್ಲಿದ್ದು, ಅದರ ಉತ್ಪಾದನೆಗೆ ಅವರು ಅಳವಡಿಸಿಕೊಂಡಿದ್ದ ತಾಂತ್ರಿಕ ವಿಧಾನವನ್ನು ಬುಕಾನನ್ ವಿವರಿಸಿದ್ದಾನೆ. ಸುಣ್ಣವನ್ನು ಸಮುದ್ರ ತೀರದಲ್ಲಿ ದೊರಕುವ ಕಪ್ಪೆಚಿಪ್ಪಿನಿಂದ ಮತ್ತು ಗಣಿಗಳಿಂದ ತೆಗೆಯಲ್ಪಟ್ಟ ಸುಣ್ಣದ ಕಲ್ಲಿನಿಂದ ತಯಾರಿಸಲಾಗುತ್ತದೆ. ವೈಟ್‌ಫೀಲ್ಡ್ (ಬೆಂಗಳೂರು ಜಿಲ್ಲೆ) ಸಮೀಪವಿರುವ ಕಾಡುಗೋಡಿಯಲ್ಲಿನ ಭಟ್ಟಿಗಳನ್ನು ಬುಕಾನನ್ ವರ್ಣಿಸಿರುವನು. ಸುಣಗಾರರೆಂಬ ಒಂದು ಜನಾಂಗ ಈ ಉದ್ಯಮವನ್ನು ತಮ್ಮ ಕಾಯಕವನ್ನಾಗಿಸಿ ಕೊಂಡಿದ್ದರು.

ಗಾಜಿನ ಬಳೆಗಳನ್ನು ತಯಾರಿಸುವ ಉದ್ಯಮವು ಸಹ ಏಳಿಗೆಯಲ್ಲಿತ್ತು. ೧೧೬೧ ರ ಬೆಳಗಾವಿ ಜಿಲ್ಲೆಯ ಒಂದು ಶಾಸನವು ಸೇನಹಳ್ಳಿ , ಕಲ್ಲಕುಂದರ್ಗೆ (ಕಲ್ಲುಂದ್ರಿ) ಮತ್ತು ನಿಟ್ಟೂರು ಇವು ಈ ಕೈಗಾರಿಕೆಯ ಕೇಂದ್ರಗಳಾಗಿದ್ದವೆಂದು ತಿಳಿಸುತ್ತದೆ. ಬಳೆಗಾರರು ತಮ್ಮದೇ ಆದ ಒಂದು ಪ್ರತ್ಯೇಕ ಜಾತಿಯನ್ನು ರಚಿಸಿಕೊಂಡಿದ್ದು, ಕನ್ನಡದ ಕವಿ ರನ್ನನು ಈ ಜಾತಿಗೆ ಸೇರಿದವನಾಗಿದ್ದನು. ಅವರಲ್ಲಿ ಕೆಲವರಿಗೆ ಶೆಟ್ಟಿ ಎಂಬ ಉಪ ನಾಮವಿತ್ತೆಂದು ಶಾಸನಗಳಿಂದ ತಿಳಿದುಬರುತ್ತದೆ. ಚಿತ್ರದುರ್ಗ ಜಿಲ್ಲೆಯ ಮುತ್ತೋಡು, ಬಳೆಗಳ ತಯಾರಿಕಾ ಕೇಂದ್ರವಾಗಿತ್ತೆಂದು, ಈ ಬಳೆಗಳು ಕಪ್ಪು, ಹಸಿರು, ಕೆಂಪು, ನೀಲಿ ಮತ್ತು ಹಳದಿ ಬಣ್ಣಗಳಿಂದ ಕೂಡಿದ್ದವೆಂದು ಬುಕಾನನ್ ತಿಳಿಸಿರುತ್ತಾನೆ. ಅಲ್ಲಿ ತಯಾರಿಸಲಾಗುತ್ತಿದ್ದ ಗಾಜು ಅಪಾರದರ್ಶಕ ಮತ್ತು ದಪ್ಪವಾಗಿರುತ್ತಿತ್ತೆಂದು, ಗಾಜನ್ನು ತಯಾರಿಸಲು ಉಪಯೋಗಿಸುತ್ತಿದ್ದ ಕಚ್ಚಾ ವಸ್ತುಗಳು ಆ ಸ್ಥಳದ ಅಕ್ಕ ಪಕ್ಕಗಳಲ್ಲಿ ದೊರಕುತ್ತಿದ್ದವೆಂದು ತಿಳಿಸಿದ್ದಾನೆ. ಚನ್ನಪಟ್ಟಣದಲ್ಲಿ ಗಾಜಿನ ಬಳೆಗಳು ಮತ್ತು ಶೀಶೆಗಳನ್ನು ತಯಾರಿಸುವ ಕೈಗಾರಿಕೆಯು ಟಿಪ್ಪುವಿನ ಪ್ರೋತ್ಸಾಹದಿಂದ ಪ್ರಾರಂಭಗೊಂಡಿರುವುದೆಂಬುದನ್ನು ವಿವರಿಸಿದ್ದಾನೆ.

ಬೆಲ್ಲ, ಸಕ್ಕರೆ ಮತ್ತು ಕಲ್ಲುಸಕ್ಕರೆ ತಯಾರಿಕೆಯು ರಾಜ್ಯದ ಇತರೆ ಗಮನಾರ್ಹ ಕೈಗಾರಿಕೆಗಳಾಗಿದ್ದವು. ಕಬ್ಬಿನ ರಸವನ್ನು ಕುದಿಸಿ ಬೆಲ್ಲವನ್ನು ತಯಾರಿಸುತ್ತಿದ್ದ ಆಲೆಮನೆಗಳು ಕರ್ನಾಟಕದ ಅನೇಕ ಕಡೆಗಳಲ್ಲಿದ್ದವೆಂಬುದು ಶಾಸನಗಳಿಂದ ತಿಳಿದು ಬರುತ್ತದೆ. ಮದ್ದೂರು ಮತ್ತು ಸುತ್ತಮುತ್ತಲಿನ ಹಳ್ಳಿಗಳಲ್ಲಿ ಬೆಲ್ಲ ತಯಾರಿಕೆಯನ್ನು ತಾನು ಕಂಡಿರುವುದಾಗಿ ಬುಕಾನನ್ ಹೇಳಿದ್ದಾನೆ. ಬೆಲ್ಲವನ್ನು ತಯಾರಿಸಲು ತಾಳೆಯ ರಸವನ್ನು ಕೂಡ ಉಪಯೋಗಿಸುತ್ತಿದ್ದರು. ಟಿಪ್ಪು ಸಕ್ಕರೆ ಕೈಗಾರಿಕೆಯನ್ನು ಬಲಪಡಿಸಲು ವಿಶೇಷ ಪ್ರಯತ್ನವನ್ನು ನಡೆಸಿದ್ದುದರ ಜೊತೆಗೆ ಚೀನಾದ ತಂತ್ರಜ್ಞರ ನೆರವನ್ನು ಸಹ ಪಡೆದಿದ್ದನು. ಚಿಕ್ಕಬಳ್ಳಾಪುರದಲ್ಲಿ ತಯಾರಿಸಲ್ಪಡುತ್ತಿದ್ದ ಸಕ್ಕರೆಯು ಬೆಳ್ಳಗೂ ಮತ್ತು ಚೆನ್ನಾಗಿಯೂ ಇತ್ತೆಂದು ಮತ್ತು ಅಲ್ಲಿನ ಕಲ್ಲುಸಕ್ಕರೆಯು ಚೀನಾದ ಕಲ್ಲುಸಕ್ಕರೆಗೆ ಸಮಾನವಾಗಿತ್ತೆಂದು ಬುಕಾನನ್ ವರ್ಣಿಸಿದ್ದಾನೆ. ೧೮೪೭ರಲ್ಲಿ ಮಂಡ್ಯ ಜಿಲ್ಲೆಯ ಪಾಲಹಳ್ಳಿಯಲ್ಲಿ ಸ್ಥಾಪಿತವಾಗಿದ್ದ ಅಷ್ಟಗ್ರಾಮ ಶುಗರ್ ವರ್ಕ್ಸ್‌ನಲ್ಲಿ ತಯಾರಿಸಲಾಗುತ್ತಿದ್ದ ಅರಳು ಸಕ್ಕರೆಯು ಬಹಳ ಪ್ರಸಿದ್ಧಿಯನ್ನು ಪಡೆದಿತ್ತು. ಇದು ೧೮೫೦, ೧೮೬೧ ಮತ್ತು ೧೮೬೭ರಲ್ಲಿ ಲಂಡನ್ನಿನಲ್ಲಿ ನಡೆದ ಅಂತರರಾಷ್ಟ್ರೀಯ ಪ್ರಾತ್ಯಕ್ಷಿಕೆಯಲ್ಲಿ ಭಾಗವಹಿಸುವ ವಿಶೇಷ ಅಧಿಕಾರವನ್ನು ಪಡೆದುಕೊಂಡಿದ್ದುದೇ ಅಲ್ಲದೆ ಬಹುಮಾನವನ್ನೂ ಸಹ ಪಡೆದಿತ್ತು. ಆದರೆ, ಅನೇಕ ಕಾರಣಗಳಿಂದಾಗಿ ಇದರ ಉತ್ಪಾದನಾ ಕಾರ್ಯ ಆನಂತರ ಸ್ಥಗಿತಗೊಂಡಿತು.

ಸುಗಂಧದ್ರವ್ಯಗಳ ತಯಾರಿಕೆಯು ರಾಜ್ಯದ ಮತ್ತೊಂದು ಕೈಗಾರಿಕೆಯಾಗಿತ್ತು. 'ಮಾನಸೋಲ್ಲಾಸದ' ಸ್ನಾನಭೋಗ ಎಂಬ ಪ್ರಕರಣದಲ್ಲಿ ಸುಗಂಧ ತೈಲ ಮತ್ತು ಲೇಪನಗಳ ಬಗ್ಗೆ ಹಾಗೂ

ವನಸ್ಪತಿಗಳಿಂದ ಪಡೆದ ಕಚ್ಚಾ ವಸ್ತುಗಳನ್ನು ಉಪಯೋಗಿಸಿ ಅವುಗಳನ್ನು ತಯಾರಿಸುವ ಕಾರ್ಯವಿಧಾನದ ಬಗ್ಗೆ ತಿಳಿಸಲಾಗಿದೆ. ವಿಶೇಷವಾಗಿ ಹಳ್ಳಿಗಳಲ್ಲಿ ವಾಸಿಸುತ್ತಿದ್ದ ಕುಶಲಕರ್ಮಿಗಳು ಭಾಗಶಃ ವ್ಯವಸಾಯಗಾರರಾಗಿದ್ದುಕೊಂಡು ಅನುವಂಶಿಕವಾಗಿ ಬಂದಿದ್ದ ಕುಲಕಸುಬನ್ನು ಮುಂದುವರಿಸಿಕೊಂಡು ಹೋಗುತ್ತಿದ್ದರು. ಈ ಕಸುಬಿಗೆ ಸಂಬಂಧಪಟ್ಟ ತರಬೇತಿಯು ತಂದೆಯಿಂದ ಮಗನಿಗೆ ದೊರಕುತ್ತಿತ್ತು. ಕುಶಲಕರ್ಮಿಗಳು ತಮ್ಮದೇ ಆದ ಸಂಘಗಳನ್ನು ಹೊಂದಿದ್ದರು. ಶಾತವಾಹನರ ಕಾಲದ ದಾಖಲೆಗಳಲ್ಲಿ ಅವುಗಳನ್ನು ನಿಗಮಗಳು, ನಿಕಾಯಗಳು ಅಥವಾ ಶ್ರೇಣಿಗಳು ಎಂದು ಸಂಸ್ಕೃತದಲ್ಲಿ ಕರೆಯುತ್ತಿದ್ದರು. ಕನ್ನಡದಲ್ಲಿ ಸಂಘಗಳನ್ನು ಕೊಟ್ಟಳ, ಶ್ರೇಣಿ, ಸಮಯ, ಸಮೂಹ ಅಥವಾ ಹಿಟ್ಟು ಎಂದು ಕರೆಯುತ್ತಿದ್ದರು. ಬಾದಾಮಿಯ ಚಾಲುಕ್ಯರ ಕಾಲದ ರಾಜಧಾನಿಯ ಒಂದು ದಾಖಲೆಯು ಅಲ್ಲಿನ ಮಾಲೆಕಾರರು, ಮೋಚಿಗಳು ಮೊದಲಾದವರ ಸಂಘಗಳ ಬಗ್ಗೆ ತಿಳಿಸುತ್ತದೆ. ಅದೇ ರಾಜಮನೆತನದ ಕಾಲದ ಲಕ್ಷ್ಮೇಶ್ವರದ ಒಂದು ದಾಖಲೆಯು ಕಂಚುಗಾರರ ಮತ್ತು ಪಟ್ಟೇಗಾರರ (ರೇಷ್ಮೆ ನೇಯ್ಗೆಯವರ) ಸಂಘಗಳ ಬಗ್ಗೆ ತಿಳಿಸಿದೆ. ಸಂಘಗಳು ಮತ್ತು ಅವುಗಳ ವಿಶೇಷಾಧಿಕಾರವನ್ನು ರಾಜ್ಯ ಸರ್ಕಾರ ಸಂರಕ್ಷಣೆ ಮಾಡುತ್ತಿತ್ತು. ನೇಯ್ಗೆಯವರ ಸಂಘಗಳನ್ನು ಸಾಲಿಗ ಸಮಯ ಅಥವ ಜೇಡಗೊತ್ತಳ, ಕಲ್ಲು ಕುಟಿಗರ ಸಂಘವನ್ನು ಒಡ್ಡಗೊತ್ತಳ, ಗಾಣಿಗರ ಸಂಘವನ್ನು ತೆಲ್ಲಿಗನಕರ ಎಂದು ಕರೆಯುತ್ತಿದ್ದರೆಂದು ಶಾಸನಗಳಲ್ಲಿ ಹೇಳಲಾಗಿದೆ. ಕೆಲವು ಸಂಘಗಳು ಅವರ ಉದ್ಯೋಗದ ಹೆಸರಿನ ಮುಂದೆ ಸೇರಿಕೊಂಡಿರುವ ಸಂಖ್ಯೆಗಳಿಂದ ಸೂಚಿತವಾಗಿವೆ. 'ತೆಲ್ಲಿಗ ಐವತ್ತು' ಅಥವಾ ಉಗುರು ಮುನ್ನೂರು (ಉಗುರಿನಿಂದ ವೀಳ್ಯದ ಎಲೆ ಕೊಯ್ಯುವವರು), ಗಳೆ ಮುನ್ನೂರು (ಹಣ್ಣಿನ ತೋಟಗಳಲ್ಲಿ ಹಣ್ಣು ಕೀಳುವವರು) ಎಂದು ಕರೆಯಲಾಗುತ್ತಿತ್ತು. ವಿಶೇಷ ಅರ್ಥದಲ್ಲಿ ಉಗುರೆಂದರೆ ಉಗುರಿಗೆ ಸಣ್ಣ ಉಳಿಗಳನ್ನು (ಉಗುರುಳಿ) ಹಾಕಿಕೊಂಡು ಎಲೆಗಳನ್ನು ಕೀಳುವವರು ಎಂದು ಅರ್ಥ. ಹಣ್ಣುಗಳನ್ನು ಕೀಳುವವರು ಬೊಂಬುಗಳನ್ನು ಉಪಯೋಗಿಸುತ್ತಿದ್ದರು.

### ಆಧುನಿಕ ಕೈಗಾರಿಕೆಗಳ ಆರಂಭ

ಟಿಪ್ಪು ಸಕ್ಕರೆ, ಗಾಜು ಮುಂತಾದವುಗಳನ್ನು ತಯಾರಿಸಲು ಆಧುನಿಕ ತಂತ್ರಜ್ಞಾನಗಳನ್ನು ಆಚರಣೆಗೆ ತರಲು ಮತ್ತು ಹೊಸ ಕೈಗಾರಿಕೆಗಳನ್ನು ಸ್ಥಾಪಿಸಲು ವಿಶೇಷವಾಗಿ ಶ್ರಮಿಸಿದನು. ಹೊಸ ತಂತ್ರಜ್ಞಾನದ ಮೂಲಕ ಅಗಲವಾದ ಬಟ್ಟೆ, ಕಾಗದ, ಕೈ ಗಡಿಯಾರಗಳು, ಕತ್ತರಿ ಮತ್ತು ಚಾಕುಗಳನ್ನು ತಯಾರಿಸಲು ಟಿಪ್ಪು ವಿಶೇಷ ವ್ಯವಸ್ಥೆ ಮಾಡಿದ್ದನೆಂದು ಬುಕಾನನ್ ತಿಳಿಸಿದ್ದಾನೆ. ಸಕ್ಕರೆ ಉತ್ಪಾದನೆಯನ್ನು ವೃದ್ಧಿಗೊಳಿಸಲು ಹೊಸ ತಂತ್ರಜ್ಞರನ್ನು ಚೀನಾದಿಂದಲೂ, ರೇಷ್ಮೆ ಕೃಷಿಗೆ ಬಂಗಾಳದಿಂದಲೂ, ಕೈಗಡಿಯಾರಗಳು, ಚಾಕು ಕತ್ತರಿಗಳನ್ನು ತಯಾರಿಸಲು ಯುರೋಪಿನ ಅದರಲ್ಲೂ ವಿಶೇಷವಾಗಿ ಫ್ರೆಂಚ್ ತಂತ್ರಜ್ಞರನ್ನು ಕರೆಸಿಕೊಂಡಿದ್ದನು. ೧೮೮೧ ರಷ್ಟು ಹಿಂದೆಯೇ ದಿವಾನ್ ರಂಗಾಚಾರ್ಲುರವರು 'ಯಾವ ದೇಶವೂ ಅದರ ವ್ಯವಸಾಯ ಮತ್ತು ಉತ್ಪಾದನಾ ಕೈಗಾರಿಕೆಗಳು ಸರಿಸಮನಾಗಿ ಬಲಗೊಳ್ಳದಿದ್ದರೆ ಸಮೃದ್ಧವಾಗಲಾರದು' ಎಂದು ದೃಢವಾಗಿ ನಂಬಿದ್ದರು. ಆನಂತರದ ದಿವಾನರುಗಳಾದ ಶೇಷಾದ್ರಿ ಐಯ್ಯರ್, ಸರ್.ಎಂ. ವಿಶ್ವೇಶ್ವರಯ್ಯ ಮತ್ತು ಸರ್ ಮಿರ್ಜಾ ಇಸ್ಮಾಯಿಲ್ ಸಹ ಇದೇ ರೀತಿಯ ಅಭಿಪ್ರಾಯವನ್ನು ಹೊಂದಿದವರಾಗಿದ್ದು, ಅದೇ ಆಧಾರದ ಮೇಲೆ ತಮ್ಮ ನೀತಿಗಳನ್ನು ರೂಪಿಸಿದ್ದರು.

ರಾಜರ ಆಡಳಿತದಲ್ಲಿದ್ದ ಮೈಸೂರು ಪ್ರಾಂತ್ಯವು ಬ್ರಿಟಿಷರ ಆಡಳಿತಕ್ಕೆ ಒಳಪಟ್ಟ ಮೇಲೆ ಬ್ರಿಟಿಷ್ ಮೈನಿಂಗ್ ಕಂಪನಿಯ ಜಾನ್ ಟೇಲರ್ ಮತ್ತು ಮಕ್ಕಳು ೧೮೮೦ ರಲ್ಲಿ ಕೋಲಾರದ ಚಿನ್ನದ ಗಣಿಯ ಕಾರ್ಯವನ್ನು ಪ್ರಾರಂಭಿಸಿದರು. ರೈಲು ಹಳಿಗಳನ್ನು ಹಾಕಿ ರೈಲು ಓಡಾಟ ಪ್ರಾರಂಭಗೊಂಡ ಮೇಲೆ ಕೈಗಾರಿಕಾ ಬೆಳವಣಿಗೆಗೆ ಹೆಚ್ಚಿನ ಅನುಕೂಲವಾಯಿತು. ೧೯೦೦ರ ಹೊತ್ತಿಗೆ ಬೆಂಗಳೂರಿನಲ್ಲಿ ಎರಡು ಬೃಹತ್ ಜವಳಿ ಗಿರಣಿಗಳಾದ ಬೆಂಗಳೂರ್ ಉಲ್ಲನ್ ಕಾಟನ್ ಅಂಡ್ ಸಿಲ್ಕ್ ಮಿಲ್ಸ್ ಲಿ. (೧೮೮೪) ಮತ್ತು ಮೈಸೂರ್ ಸ್ಪಿನ್ನಿಂಗ್ ಅಂಡ್ ಮ್ಯಾನುಫ್ಯಾಕ್ಚರಿಂಗ್ ಕಂಪೆನಿ ಲಿ., (೧೮೯೪) ಪ್ರಾರಂಭಗೊಂಡವು. ೧೮೯೭ ರಲ್ಲಿ ರಾಜ್ಯಸರ್ಕಾರವು ಒಂದು ಕೇಂದ್ರ ಕೈಗಾರಿಕಾ ಕಾರ್ಯಾಗಾರವನ್ನು ಬೆಂಗಳೂರಿನಲ್ಲಿ ಪ್ರಾರಂಭಿಸಿತು. ೧೯೦೨-೦೩ ರಲ್ಲಿ ರಾಜ್ಯದ ಆಧುನಿಕ ಕೈಗಾರಿಕೆಗೆ ಪ್ರೋತ್ಸಾಹದಾಯಕವೆಂದು ಕರೆಯಲ್ಪಡುವ ರಾಜ್ಯ ಸರ್ಕಾರದ ಉದ್ಯಮವಾದ ಜಲವಿದ್ಯುತ್ ಉತ್ಪಾದನಾ ಘಟಕವು ಮಂಡ್ಯ ಜಿಲ್ಲೆಯ ಶಿವನಸಮುದ್ರದಲ್ಲಿ ಕಾರ್ಯಾರಂಭ ಮಾಡಿತು. ಹಳೆಯ ಹೈದರಾಬಾದ್ ಮತ್ತು ಬೊಂಬಾಯಿ (ಮುಂಬೈ) ಕರ್ನಾಟಕ ಭಾಗಗಳಲ್ಲೂ ಕೂಡ ಕೈಗಾರಿಕಾಭಿವೃದ್ಧಿಯಾಗಿತ್ತು. ಆದರೆ ಅದು ಕೇವಲ ಆಕಸ್ಮಿಕ ಅಭಿವೃದ್ಧಿಯೇ ಹೊರತು ಯಾವುದೇ ಯೋಜನೆ ಆಧಾರಿತವಾಗಿರಲಿಲ್ಲ. ೧೮೮೪ರಲ್ಲಿ ಹೈದರಾಬಾದಿನ ನಿಜಾಮನ ಸರ್ಕಾರಕ್ಕೆ ಉದ್ಯೋಗಶೀಲರ ಬೆಂಬಲ ಕೊಡುವ ಉದ್ದೇಶದಿಂದ ಮಹಮೂದ್‌ಶಾಹಿ ಕಲುಬುರಗಿ ಮಿಲ್ಸ್, ಕಲುಬುರಗಿಯಲ್ಲಿ ಪ್ರಾರಂಭಗೊಂಡಿತು. ೧೮೮೮ರಲ್ಲಿ ಎಂ.ಎಸ್. ಕೆ. ಮಿಲ್ಸ್ ಕಂಪೆನಿ ಲಿ., ಭಾರತದ ಕಂಪೆನಿಯ ಕಾಯ್ದೆ ಅಡಿಯಲ್ಲಿ ಪುನರ್ ನೋಂದಣಿಗೊಂಡಿರುವುದು. ಈ ಗಿರಣಿಯು ೧೯೬೦ ರ ದಶಕದಲ್ಲಿ ಸಂಕಷ್ಟದಲ್ಲಿದ್ದಾಗ ಅದರ ಹಿತವನ್ನು ಕಾಪಾಡುವ ಉದ್ದೇಶದಿಂದ ಕರ್ನಾಟಕ ಸರ್ಕಾರ ೧೯೭೩ ರಲ್ಲಿ ಅದನ್ನು ತನ್ನ ಸ್ವಾಧೀನಕ್ಕೆ ತೆಗೆದುಕೊಂಡಿತು. ನಂತರ ೧೯೭೩ರಲ್ಲಿ ಈ ಗಿರಣಿಯನ್ನು ನ್ಯಾಷನಲ್ ಟೆಕ್ಸ್‌ಟೈಲ್ ಕಾರ್ಪೋರೇಷನ್ ತನ್ನ ವಶಕ್ಕೆ ತೆಗೆದುಕೊಂಡಿತು.

೧೮೮೫ರಲ್ಲಿ ಗೋಕಾಕ್ ಫಾಲ್ಸ್‌ನಲ್ಲಿ ಸ್ಥಾಪನೆಗೊಂಡು ಬ್ರಿಟಿಷರ ಸ್ವಾಧೀನದಲ್ಲಿದ್ದ ಗೋಕಾಕ್ ಜವಳಿ ಗಿರಣಿ ಮತ್ತು ೧೮೯೯ ರಲ್ಲಿ ಹುಬ್ಬಳ್ಳಿಯಲ್ಲಿ ಸ್ಥಾಪಿತವಾದ ಜವಳಿ ಗಿರಣಿಗಳನ್ನುಳಿದು ಬೇರೆ ಯಾವ ಬೃಹತ್ ಕೈಗಾರಿಕೆಗಳು ಮುಂಬೈ ಕರ್ನಾಟಕ ಭಾಗದಲ್ಲಿರಲಿಲ್ಲ. ಕೆಲವು ಕುಶಲ ಕಸಬುಗಳಾದ ಬಿದಿರು ಉದ್ಯಮ ಬೀದರ್ ತಾಲೂಕಿನಲ್ಲೂ, ಕೈಮಗ್ಗ ಉದ್ಯಮ ಬಿಜಾಪುರ, ಬಾಗಲಕೋಟೆ, ಧಾರವಾಡ, ಗದಗ ಮತ್ತು ಹಾವೇರಿ ಜಿಲ್ಲೆಗಳಲ್ಲೂ ಇದ್ದವು. ೨೦ನೇ ಶತಮಾನದ ೧೯೩೦ ಮತ್ತು ೧೯೪೦ರ ದಶಕಗಳಲ್ಲಿ ಕೆಲವು ಕೈಗಾರಿಕೆಗಳು ಹುಟ್ಟಿಕೊಂಡವು. ಅವುಗಳ ಪೈಕಿ ಕಲಬುರಗಿ ಜಿಲ್ಲೆಯ ಶಹಬಾದ್ ಮತ್ತು ವಾಡಿಗಳಲ್ಲಿನ ಸಿಮೆಂಟ್ ಕಾರ್ಖಾನೆಗಳು, ಬೆಳಗಾವಿ ಜಿಲ್ಲೆಯ ಅಥಣಿ ತಾಲೂಕಿನ ಕಿತ್ತೂರು ಮತ್ತು ಉಗಾರ್‌ಖುರ್ದ್‌ನ ಸಕ್ಕರೆ ಕಾರ್ಖಾನೆಗಳು ಮುಖ್ಯವಾದವುಗಳು. ಸ್ವದೇಶಿ ಚಳವಳಿಯಿಂದಾಗಿ ಕರ್ನಾಟಕದ ಸಮುದ್ರ ತೀರ ಪ್ರದೇಶದಲ್ಲಿ ಪಿಂಗಾಣಿ ಹಾಗೂ ಅನೇಕ ಸಣ್ಣ ಕೈಗಾರಿಕಾ ಘಟಕಗಳು ಹುಟ್ಟಿಕೊಂಡವು. ಬೀಡಿ ತಯಾರಿಕೆಯು

ಗೃಹ ಕೈಗಾರಿಕೆಯಾಗಿ ಬೆಳವಣಿಗೆಯನ್ನು ಹೊಂದಿತು. ೧೯೧೪ ರಲ್ಲಿ ಮಹಾಲಕ್ಷ್ಮಿ ಬೀಡಿ ವರ್ಕ್ಸ್ ಪಾಣಿ ಮಂಗಳೂರಿನಲ್ಲಿ ಪ್ರಾರಂಭಗೊಂಡು ಆನಂತರ ಪಿ.ವಿ.ಎಸ್. ಬೀಡಿಗಳು (೧೯೧೮), ಭಾರತ್ ಬೀಡಿಗಳು ಮತ್ತು ಗಣೇಶ ಬೀಡಿಗಳು (ಎರಡೂ ೧೯೩೦), ಇವುಗಳ ತಯಾರಿಕಾ ಘಟಕಗಳು ಹುಟ್ಟಿಕೊಂಡವು. ಜರ್ಮನಿಯ ಧರ್ಮ ಪ್ರಚಾರ ಸಮಿತಿಯು ೧೮೬೫ ರಲ್ಲಿ ಪ್ರಾರಂಭಿಸಿದ ಬಾಸೆಲ್ ಮಿಷನ್ ಟೈಲ್ ವರ್ಕ್ಸ್ ಕೈಗಾರಿಕಾ ಬೆಳವಣಿಗೆಗೆ ನಾಂದಿಯಾಗಿರುತ್ತದೆ. ಗೋಡಂಬಿ ಸಂಸ್ಕರಣವು ಇಲ್ಲಿನ ಮತ್ತೊಂದು ಉದ್ಯಮವಾಗಿರುವುದು.

### ಆರ್ಥಿಕ ಸಮ್ಮೇಳನ

ನಿಶ್ಚಿತ ಆರ್ಥಿಕ ಪ್ರಗತಿಯ ಪರಿಕಲ್ಪನೆ ಮತ್ತು ರಾಜ್ಯದ ಕೈಗಾರಿಕಾ ನೀತಿಯ ಮೊದಲ ಹೆಜ್ಜೆಯಾಗಿ ೧೯೦೯ರಲ್ಲಿ ಸರ್ ಎಂ. ವಿಶ್ವೇಶ್ವರಯ್ಯನವರನ್ನು ಮುಖ್ಯ ಎಂಜಿನಿಯರ್ ಆಗಿ ನೇಮಕ ಮಾಡಿಕೊಳ್ಳುವುದರೊಂದಿಗೆ ಆರಂಭಗೊಂಡಿತು. ಅವರು ಸತತವಾಗಿ ಐದು ದಶಕಗಳ ಕಾಲ ಕೈಗಾರಿಕಾ ಕ್ಷೇತ್ರದಲ್ಲಿ ಅತ್ಯಂತ ಪ್ರಮುಖ ಪಾತ್ರವಹಿಸಿದ್ದರು. ಅವರ ಕೋರಿಕೆಯಿಂದಾಗಿ ಪ್ರಥಮ ಮೈಸೂರು ಆರ್ಥಿಕ ಸಮ್ಮೇಳನ ೧೯೧೧ರಲ್ಲಿ ನಡೆಯಿತು. ಆ ಸಮ್ಮೇಳನದ ವರದಿಯಲ್ಲಿ ರಾಜ್ಯದಲ್ಲಿನ ಸ್ವಾಭಾವಿಕ ಸಂಪನ್ಮೂಲಗಳ ವಿವರ ಹಾಗೂ ಕೈಗಾರಿಕಾ ಬೆಳವಣಿಗೆಗೆ ಇರುವ ಅವಕಾಶಗಳನ್ನು ಗುರುತಿಸಲಾಗಿದೆ. ಆರ್ಥಿಕ ಸಮ್ಮೇಳನದ ಶಿಫಾರಸ್ಸನ್ನು ಅಂಗೀಕರಿಸಿದ ಸರ್ಕಾರ ೧೯೧೩ ರಲ್ಲಿ ಕೈಗಾರಿಕಾ ಮತ್ತು ವಾಣಿಜ್ಯ ಇಲಾಖೆಯನ್ನು ಸ್ಥಾಪಿಸಿತು. ಈ ಇಲಾಖೆಯು ೧೯೨೨ ರಲ್ಲಿ ಪುನರ್‌ರೂಪಗೊಂಡು ಸಾರ್ವಜನಿಕ ಮತ್ತು ಖಾಸಗಿ ವಲಯಗಳಲ್ಲಿನ ಉದ್ಯಮಶೀಲರ ಅವಶ್ಯಕತೆಗಳನ್ನು ಪೂರೈಕೆ ಮಾಡುವ ಸಾಮರ್ಥ್ಯವನ್ನು ಹೆಚ್ಚಿಸಿಕೊಂಡಿತು.

ಗಂಧದ ಎಣ್ಣೆಯನ್ನು ತೆಗೆಯುವುದು ಮತ್ತು ಅದರ ಉತ್ಪಾದನೆಯನ್ನು ಹೆಚ್ಚಿಸುವ ಉದ್ದೇಶದಿಂದ ೧೯೧೬ರಲ್ಲಿ ಮೈಸೂರಿನಲ್ಲಿ ಮತ್ತು ೧೯೪೪ ರಲ್ಲಿ ಶಿವಮೊಗ್ಗದಲ್ಲಿ ಸರ್ಕಾರದ ಗಂಧದ ಎಣ್ಣೆ ಕಾರ್ಖಾನೆಗಳು ಪ್ರಾರಂಭಿಸಲ್ಪಟ್ಟವು. ಬಿ.ಪಿ. ದರ್ಜೆಯ ಗಂಧದ ಎಣ್ಣೆ, ವಿಶೇಷ 'ಎ' ದರ್ಜೆಯ ಗಂಧದ ಎಣ್ಣೆ, ಎಣ್ಣೆ ತೆಗೆದ ನಂತರ ಉಳಿಯುವ ಮಡ್ಡಿ ಮತ್ತು ನವಿರಾದ ಗಂಧದ ಪುಡಿ ಇವು ಈ ಕಾರ್ಖಾನೆಗಳಲ್ಲಿ ತಯಾರಿಸಲ್ಪಡುವ ಉತ್ಪನ್ನಗಳು.

ಬಟ್ಟೆ ಸ್ವಚ್ಛಗೊಳಿಸುವ ಸಾಬೂನು, ಮೈ ಸ್ವಚ್ಛಗೊಳಿಸುವ ಮೈಸೂರು ಸ್ಯಾಂಡಲ್ ಸಾಬೂನು, ಶೇವಿಂಗ್ ಸಾಬೂನು ಮೊದಲಾದವುಗಳನ್ನು ಶ್ರೀಗಂಧ, ಮಲ್ಲಿಗೆ ಮತ್ತು ಸುಗಂಧ ದ್ರವ್ಯಗಳನ್ನು ಉಪಯೋಗಿಸಿ ತಯಾರಿಸುವ ಉದ್ದೇಶದಿಂದ ಸರ್ಕಾರಿ ಸಾಬೂನು ಕಾರ್ಖಾನೆಯನ್ನು ೧೯೧೮ ರಲ್ಲಿ ಬೆಂಗಳೂರಿನಲ್ಲಿ ಸ್ಥಾಪಿಸಲಾಯಿತು. ಸರ್ಕಾರಿ ವಲಯದ ಉದ್ಯಮ ಸಂಸ್ಥೆಯಾದ 'ದಿ ಕರ್ನಾಟಕ ಸೋಪ್ಸ್ ಅಂಡ್ ಡಿಟರ್‌ಜೆಂಟ್ಸ್ ಲಿ.', ೧೯೮೦ ರಲ್ಲಿ ಬೆಂಗಳೂರಿನ ಸಾಬೂನು ಕಾರ್ಖಾನೆ ಮತ್ತು ಮೈಸೂರು ಹಾಗೂ ಶಿವಮೊಗ್ಗಗಳಲ್ಲಿನ ಗಂಧದ ಎಣ್ಣೆ ಕಾರ್ಖಾನೆಗಳನ್ನು ತನ್ನ ಆಡಳಿತದ ತೆಕ್ಕೆಗೆ ತೆಗೆದುಕೊಂಡಿತು. ಕಂಪೆನಿಯು ಈಗ ಹೊಂದಿರುವ ಘಟಕಗಳು ಹೀಗಿವೆ– (೧) ೧೯೭೬ ರಲ್ಲಿ ಪ್ರಾರಂಭಿಸಲ್ಪಟ್ಟ ಡಿಟರ್‌ಜೆಂಟ್ ಘಟಕ (೨) ೧೯೮೧ ರಲ್ಲಿ ಪ್ರಾರಂಭಿಸಲಾಗಿದ್ದ ಫ್ಯಾಟಿ ಆಸಿಡ್ (ಕೊಬ್ಬಿನ ಆಮ್ಲ) ಘಟಕ, (೩) ಸಾಬೂನು ತಯಾರಿಕಾ ಪ್ರಮಾಣವನ್ನು ೬೦೦೦ ಟನ್‌ಗಳಿಂದ ೨೬,೦೦೦ ಟನ್‌ಗಳಿಗೆ ಹೆಚ್ಚಳಗೊಳಿಸಲು ಪ್ರಾರಂಭಿಸಿದ್ದ ಸಾಬೂನು ವಿಸ್ತರಣಾ ಯೋಜನೆ (೪) ಮೈಸೂರು ಮತ್ತು ಶಿವಮೊಗ್ಗಗಳಲ್ಲಿರುವ ಗಂಧದ ಎಣ್ಣೆ ವಿಭಾಗಗಳು ಮತ್ತು (೫) ಗಂಧದ ವಿಭಾಗಗಳಲ್ಲಿರುವ ಅಗರಬತ್ತಿ ಘಟಕಗಳು.

ಖಾಸಗಿ ವಲಯದ ಉದ್ಯಮವಾದ ಮಿನರ್ವ ಮಿಲ್ಸ್ ೧೯೧೯ ರಲ್ಲಿ ಬೆಂಗಳೂರಿನಲ್ಲಿ ಪ್ರಾರಂಭಗೊಂಡಿತು. ಇದು ೧೦ ರಿಂದ ೪೦ ಮೀಟರ್‌ವರೆಗಿನ ಒಂಟಿ ಮಡಿಕೆಯ ಬಟ್ಟೆಗಳು, ಷರಟಿನ ಬಟ್ಟೆ, ಲಾಂಗ್ ಕ್ಲಾತ್, ಪಂಚೆಗಳು, ದುಪ್ಪಟಿಗಳು ಮತ್ತು ಟವಲ್ಲುಗಳನ್ನು ತಯಾರಿಸುತಿತ್ತು. ಬಾಬಾ ಬುಡನ್‌ಗಿರಿಯ ತಪ್ಪಲಿನಲ್ಲಿರುವ ಕೆಮ್ಮಣ್ಣುಗುಂಡಿಯಲ್ಲಿ ಹೇರಳವಾಗಿ ದೊರಕುವ ಕಬ್ಬಿಣದ ಅದಿರನ್ನು ಉಪಯೋಗಿಸಿ ಬೀಡು ಕಬ್ಬಿಣ ಮತ್ತು ತತ್ಸಂಬಂಧ ವಸ್ತುಗಳನ್ನು ಉತ್ಪಾದಿಸುವ ಉದ್ದೇಶದಿಂದ ೧೯೨೩ರಲ್ಲಿ ಸರ್ಕಾರಿ ಕ್ಷೇತ್ರದ ಪ್ರಥಮ ಬೃಹತ್ ಉದ್ಯಮವಾದ ಮೈಸೂರು ಕಬ್ಬಿಣ ಮತ್ತು ಉಕ್ಕು ಕಾರ್ಖಾನೆ ಭದ್ರಾವತಿಯಲ್ಲಿ ಸ್ಥಾಪಿತವಾಯಿತು. ಎರಕಹೊಯ್ದ ಕಬ್ಬಿಣದ ಕೊಳವೆ, ಓಪನ್ ಹರ್ತ್ ಕುಲುಮೆ, ರೋಲಿಂಗ್ ಮಿಲ್ಸ್ ಮತ್ತು ಒಂದು ಸಿಮೆಂಟ್ ಉತ್ಪಾದನಾ ಘಟಕ ಮೊದಲಾದವುಗಳನ್ನು ಅದಕ್ಕೆ ಸೇರಿಸಿ ಅದರ ಹೆಸರನ್ನು 'ದಿ ಮೈಸೂರ್ ಐರನ್ ಅಂಡ್ ಸ್ಟೀಲ್ ವರ್ಕ್ಸ್' ಎಂದು ಮಾರ್ಪಡಿಸಲಾಯಿತು. ೧೯೬೨ರಲ್ಲಿ ಅದನ್ನು ಒಂದು ಕಂಪನಿಯನ್ನಾಗಿ ಮಾಡಿ ಕೇಂದ್ರ ಸರ್ಕಾರದಿಂದ ಶೇಕಡ ೪೦ರಷ್ಟು ಪಾಲು ಬಂಡವಾಳ ಪಡೆದು 'ಮೈಸೂರು ಕಬ್ಬಿಣ ಮತ್ತು ಉಕ್ಕು ಲಿ.', ಎಂದು ಹೆಸರಿಸಲಾಯಿತು. ಇಲಾಖಾ ಅಧೀನದ ಕಾರ್ಖಾನೆಯಾದ ಇದು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ೪೦:೬೦ ಅನುಕ್ರಮ ಅನುಪಾತದ ಬಂಡವಾಳ ಹೂಡಿಕೆಯ ಜಂಟಿ ಸ್ವಾಮ್ಯದ ಸರ್ಕಾರಿ ಕಂಪನಿಯಾಗಿ ಪರಿವರ್ತನೆಗೊಂಡಿತು. ೧೯೭೫ರಲ್ಲಿ ಇದರ ಸಂಸ್ಥಾಪಕರ ಸ್ಮರಣಾರ್ಥವಾಗಿ ಅದರ ಹೆಸರನ್ನು ವಿಶ್ವೇಶ್ವರಯ್ಯ ಕಬ್ಬಿಣ ಮತ್ತು ಉಕ್ಕು ಲಿ., ಎಂದು ಬದಲಾಯಿಸಲಾಯಿತು. ಈಗ ಇದು "ಸ್ಟೀಲ್ ಅಥಾರಿಟಿ ಆಫ್ ಇಂಡಿಯಾದ" ಆಡಳಿತ ವ್ಯಾಪ್ತಿಗೊಳಪಟ್ಟಿದೆ.

೧೯೨೦ರ ದಶಕದ ಪೂರ್ವಾರ್ಧದಲ್ಲಿ ಪಿಯರ್‌ಲೆಸ್ಸೀ ಮತ್ತು ಕಂಪನಿ (೧೯೨೪) ಮಂಗಳೂರಿನಲ್ಲೂ, ಸಿದ್ದೇಶ್ವರ ಮತ್ತು ಕಂಪೆನಿ ಹುಬ್ಬಳ್ಳಿಯಲ್ಲೂ ಕಾರ್ಯಾರಂಭಿಸಿದವು. ಮೊದಲ ಕಂಪೆನಿಯು ಗೇರುಬೀಜ ಸಂಸ್ಕರಣಾ ಕಾರ್ಯದಲ್ಲೂ, ಎರಡನೆಯದು ಕಬ್ಬಿಣದ ತಿಜೋರಿ ಮತ್ತು ಉಕ್ಕಿನ ಪೀಠೋಪಕರಣಗಳ ತಯಾರಿಕಾ ಕಾರ್ಯದಲ್ಲೂ ತೊಡಗಿಸಿಕೊಂಡಿದ್ದವು.

೨೦ನೇ ಶತಮಾನದ ಉತ್ತರಾರ್ಧದಲ್ಲಿ ಕೋಲಾರದ ಚಿನ್ನದಗಣಿ, ಜವಳಿ, ಜಲವಿದ್ಯುತ್ ಕಾರ್ಯಗಳನ್ನು ಹೊರತುಪಡಿಸಿ ೨೬ ಬೃಹತ್ ಕೈಗಾರಿಕೆಗಳು ಹಳೇ ಮೈಸೂರು ಪ್ರಾಂತ್ಯದಲ್ಲಿದ್ದವು. ರಾಜ್ಯಗಳ ಪುನರ್ ವಿಂಗಡಣೆಗೂ ಪೂರ್ವದಲ್ಲಿ (೧೯೫೬) ಅಂದರೆ ೧೯೩೧–೧೯೪೧ ರ ದಶಕದಲ್ಲಿ ಮೈಸೂರಿನ ಆರ್ಥಿಕ ಪ್ರಗತಿಯು ಅತ್ಯಂತ ಚುರುಕಿನಿಂದ ಕೂಡಿತ್ತು.

೧೯೩೧ರಲ್ಲಿ ಔಷಧಿಗಳು, ರಾಸಾಯನಿಕ ವಸ್ತುಗಳು, ಪಿಷ್ಟ ಪದಾರ್ಥಗಳು, ವಿಶೇಷ ಔಷಧಿ ಗುಣಗಳಿರುವವುಗಳನ್ನು ತಯಾರಿಸಿ ಪರೀಕ್ಷಿಸುವ ಉದ್ದೇಶದಿಂದ ಮೈಸೂರು ಇಂಡಸ್ಟ್ರೀಯಲ್ ಅಂಡ್ ಟೆಸ್ಟಿಂಗ್ ಲ್ಯಾಬೊರೇಟರಿಯನ್ನು ಸರ್ಕಾರ ಪ್ರಾರಂಭಿಸಿತು. ಇದು

೧೯೪೫ರಲ್ಲಿ ಸರ್ಕಾರದ ಪ್ರತಿಶತ ೪೦ ರ ಪಾಲುದಾರಿಕೆಯೊಂದಿಗೆ ಒಂದು ಕೂಡುಬಂಡವಾಳ ಸಂಸ್ಥೆ(ಜಾಯಿಂಟ್ ಸ್ಟಾಕ್ ಕಂಪೆನಿ) ಯಾಗಿ ಪರಿವರ್ತನೆಗೊಂಡಿತು. ಇದೇ ಕಾಲಾವಧಿಯಲ್ಲಿ ಶಿವಮೊಗ್ಗದಲ್ಲಿ ಪ್ರಾರಂಭಗೊಂಡ ಮೈಸೂರು ಮ್ಯಾಚ್ ಕಂಪೆನಿ ಮತ್ತೊಂದು ಉದ್ಯಮವಾಗಿರುವುದು. ಉತ್ತಮ ಗುಣಮಟ್ಟದ ರೇಷ್ಮೆ ವಸ್ತ್ರ, ಸೀರೆ, ರವಕೆ (ಕುಪ್ಪಸ) ಮೊದಲಾದವುಗಳನ್ನು ತಯಾರಿಸುವುದಕ್ಕಾಗಿ ಸರ್ಕಾರಿ ರೇಷ್ಮೆ ನೇಯ್ಗೆ ಕಾರ್ಖಾನೆ ೧೯೩೨ರಲ್ಲಿ ಮೈಸೂರಿನಲ್ಲಿ ಕಾರ್ಯಾರಂಭಗೊಂಡಿತು.

ವಿದ್ಯುತ್ ಟ್ರಾನ್ಸ್‌ಫಾರ್ಮರ್‌ಗಳು, ಮೋಟಾರುಗಳು, ಪಂಪುಗಳು, ಟ್ರಾನ್ಸ್‌ಮಿಷನ್ ಟವರ್‌ಗಳು ಮೊದಲಾದವುಗಳನ್ನು ಉತ್ಪಾದಿಸುವ ಉದ್ದೇಶದಿಂದ ಸರ್ಕಾರಿ ವಿದ್ಯುತ್ ಕಾರ್ಖಾನೆ ೧೯೩೪ರಲ್ಲಿ ಬೆಂಗಳೂರಿನಲ್ಲಿ ಪ್ರಾರಂಭಗೊಂಡಿತು. ಸಕ್ಕರೆ ಉತ್ಪಾದನೆಯ ಜೊತೆಗೆ ಇತರ ಉತ್ಪನ್ನಗಳಾದ ಮಧ್ಯತಯಾರಿಕೆ, ಕೈಗಾರಿಕಾ ಸ್ಪಿರಿಟ್, ಪವರ್ ಆಲ್ಕೊಹಾಲ್ ಮೊದಲಾದವುಗಳನ್ನು ಉತ್ಪಾದಿಸಲು ೧೯೩೩ ರಲ್ಲಿ ಮಂಡ್ಯದಲ್ಲಿ ಮೈಸೂರು ಶುಗರ್ ಕಂಪೆನಿಯನ್ನು ಸರ್ಕಾರದ ಶೇ. ೫೫ ರಷ್ಟು ಬಂಡವಾಳದೊಂದಿಗೆ ಪ್ರಾರಂಭಿಸಲಾಯಿತು. ಸರ್ಕಾರದ ಒಂದು ಭಾಗ ಷೇರು ಬಂಡವಾಳದೊಂದಿಗೆ ೧೯೩೬ರಲ್ಲಿ ಭದ್ರಾವತಿಯಲ್ಲಿ ಮೈಸೂರು ಪೇಪರ್ ಮಿಲ್ಸ್(ಲಿ.) ಕಾಗದದ ಕಾರ್ಖಾನೆಯನ್ನು ಸ್ಥಾಪಿಸಲಾಯಿತು. ಕ್ರೀಮ್ ಲೈಡ್ಸ್ (Cream Laids), ಬರವಣಿಗೆ ಮತ್ತು ಮುದ್ರಣ ಕಾಗದ, ಅಝುರ್‌ಲೈಡ್ಸ್ (Azarelaids), ಲೆಡ್ಜರ್ ಪೇಪರ್ ಮತ್ತು ಬಗೆ ಬಗೆಯ ಇತರೆ ಕಾಗದಗಳು ಇದರ ಉತ್ಪನ್ನಗಳಾಗಿವೆ. ನಿರುಪಯುಕ್ತ ರೇಷ್ಮೆಯನ್ನು ಉಪಯೋಗಿಸಿ ಬಟ್ಟೆ ತಯಾರಿಸಲು ೧೯೩೬ ರಲ್ಲಿ ಚನ್ನಪಟ್ಟಣದಲ್ಲಿ ಮೈಸೂರು ಸ್ಪನ್‌ಸಿಲ್ಕ್ ಮಿಲ್ಸ್ ಒಂದು ಪಬ್ಲಿಕ್ ಲಿಮಿಟೆಡ್ ಕಂಪೆನಿಯಾಗಿ ಪ್ರಾರಂಭಗೊಂಡಿತು. ಇದರಲ್ಲಿ ರೇಷ್ಮೆದಾರ, ಕಚ್ಚಾ ರೇಷ್ಮೆ ವಸ್ತ್ರಗಳು, ಸೀರೆಗಳು, ಜಮಖಾನಗಳು, ಕೋಟು ಮತ್ತು ಅಂಗಿ ಬಟ್ಟೆ ಮೊದಲಾದವುಗಳನ್ನು ಉತ್ಪಾದಿಸಲಾಗುತ್ತಿತ್ತು. ಇದು ಹೆಚ್ಚು ನಷ್ಟದಿಂದಾಗಿ ದಿವಾಳಿಯಾಗುವ ಸ್ಥಿತಿ ತಲುಪಿದಾಗ ೧೯೬೦ರಲ್ಲಿ ಸರ್ಕಾರವೇ ವಹಿಸಿಕೊಂಡಿತು. ಈಗ ಇದು ಸರ್ಕಾರದ ಉದ್ಯಮವಾಗಿ ಮುಂದುವರೆದಿದೆ.

ಹತ್ತಿ ನೂಲು, ಕೋರಾ ಹಾಗೂ ಬಿಳಿಯ ನವಿರಾದ ಬಟ್ಟೆ, ಲಾಂಗ್ ಕ್ಲಾತ್, ಪಂಚೆ ಮೊದಲಾದವುಗಳನ್ನು ತಯಾರಿಸಲು ೧೯೩೬ರಲ್ಲಿ ದಾವಣಗೆರೆ ಹತ್ತಿ ಗಿರಣಿ ಒಂದು ಖಾಸಗಿ ವಲಯದ ಉದ್ಯಮವಾಗಿ ಪ್ರಾರಂಭಗೊಂಡಿತು. ೧೯೩೬ರಲ್ಲಿ ಪ್ರಜ್ವಲವಾದ ವಿದ್ಯುತ್ ದೀಪಗಳು, ನಿಯಾನ್‌ಸೈನ್‌ಗಳು ಮತ್ತು ಇತರೆ ಬಿಡಿಭಾಗಗಳನ್ನು ತಯಾರಿಸುವ ಉದ್ದೇಶದಿಂದ ಸರ್ಕಾರದ ಶೇ.೧೭.೬ ಷೇರು ಬಂಡವಾಳದೊಂದಿಗೆ ಬೆಂಗಳೂರಿನಲ್ಲಿ ಮೈಸೂರು ಲ್ಯಾಂಪ್ ವರ್ಕ್ಸ್ ಆರಂಭಗೊಂಡಿತು.

೧೯೩೭ರಲ್ಲಿ ಬೆಂಗಳೂರಿನ ಸಮೀಪವಿರುವ ಚಿಕ್ಕಬಾಣಾವರದಲ್ಲಿ ಮೈಸೂರು ಸ್ಟೋನ್‌ವೇರ್ ಪೈಪ್ ಮತ್ತು ಪಾಟರೀಸ್ ಲಿ., ಕಾರ್ಯಾರಂಭಿಸಿತು. ಮೈಸೂರು ಕೈಗಾರಿಕಾಭಿವೃದ್ಧಿ ಕಂಪೆನಿಯ ಆಡಳಿತ ವ್ಯಾಪ್ತಿಗೊಳಪಟ್ಟಿರುವ ಇದರಲ್ಲಿ ಸ್ಟೋನ್‌ವೇರ್ ಪೈಪುಗಳು ಮತ್ತು ಮಣ್ಣಿನ ಇತರ ಸರಕುಗಳನ್ನು ಉತ್ಪಾದಿಸಲಾಗುತ್ತಿತ್ತು. ೧೯೩೭ರಲ್ಲಿ ಮೈಸೂರಿನಲ್ಲಿ ತಂಬಾಕನ್ನು ಸಂಸ್ಕರಿಸುವ ಮೈಸೂರು ಟೊಬ್ಯಾಕೊ ಕಂಪೆನಿ ಲಿ., ಸ್ಥಾಪಿತವಾಯಿತು. ಇದರ ಸಂಸ್ಕರಣಾ ಕೇಂದ್ರಗಳನ್ನು ಮಂಡ್ಯ, ಮೈಸೂರು ಮತ್ತು ಕೋಲಾರಗಳಲ್ಲೂ, ವರ್ಗೀಕರಣ ಕೇಂದ್ರವನ್ನು ಬೆಂಗಳೂರಿನ ಸಮೀಪವಿರುವ ವೈಟ್‌ಫೀಲ್ಡ್‌ನಲ್ಲೂ ಹೊಂದಿದೆ.

೧೯೩೭ರಲ್ಲಿ ಮಂಡ್ಯ ಜಿಲ್ಲೆಯ ಬೆಳಗೊಳದಲ್ಲಿ ಮೈಸೂರು ಕೆಮಿಕಲ್ಸ್ ಮತ್ತು ಫರ್ಟಿಲೈಸರ್ಸ್ ಲಿ., ಸ್ಥಾಪಿತಗೊಂಡು ಅಮೋನಿಯಂ ಸಲ್ಫೇಟ್, ಗಂಧಕಾಮ್ಲ, ಸೂಪರ್ ಫಾಸ್ಫೇಟ್, ನೈಟ್ರಿಕ್‌ಆಮ್ಲ, ಆಲಿಯಂ, ಎನ್ಹಿಡ್ರಾಸ್ ಅಮೋನಿಯ, ಅಮೋನಿಯಂ ಉಪ್ಪು ಮೊದಲಾದವುಗಳ ತಯಾರಿಕೆ ಕಾರ್ಯದಲ್ಲಿ ತೊಡಗಿತ್ತು. ಇಲ್ಲಿ ಸ್ಥಾಪಿತವಾಗಿರುವ ಸಿಂಥಟಿಕ್ ಅಮೋನಿಯಂ ಸ್ಥಾವರ ಅಥವಾ ರಾಸಾಯನಿಕ ಗೊಬ್ಬರದ ಘಟಕ ಭಾರತದಲ್ಲಿಯೇ ಮೊಟ್ಟ ಮೊದಲನೆಯದಾಗಿರುವುದು.

ಮೈಸೂರು ಸರ್ಕಾರವು ವಿದುಚ್ಛಕ್ತಿ ಇಲಾಖೆಗೆ ಅವಶ್ಯಕವಾಗಿ ಬೇಕಾಗುವ ಇನ್ಸುಲೇಟರ್‌ಗಳನ್ನು ತಯಾರಿಸಲು ಮೊಟ್ಟಮೊದಲ ಸರ್ಕಾರಿ ಪಿಂಗಾಣಿ ಕಾರ್ಖಾನೆಯನ್ನು ೧೯೩೨ರಲ್ಲಿ ಪ್ರಾರಂಭಿಸಿತು. ೧೯೫೭ರಲ್ಲಿ ಜಪಾನಿನ ನಾಗೋಯ ಎನ್.ಜಿ.ಕೆ. ಇನ್ಸೂಲೇಟರ್ಸ್ ಲಿ., ಜೊತೆ ಒಪ್ಪಂದ ಮಾಡಿಕೊಂಡು, ಮೊದಲ ಹಂತದ ವಿಸ್ತರಣೆಯಲ್ಲಿ ತಿಂಗಳಿಗೆ ೫೦ ಟನ್ ಪಿಂಗಾಣಿಯಿಂದ ೨೦೦ ಟನ್ ಪಿಂಗಾಣಿಗೆ ಹೆಚ್ಚಳವನ್ನು ಸಾಧಿಸಿತು. ಎರಡನೇ ಹಂತದ ವಿಸ್ತರಣೆಯಿಂದ ೧೯೬೭ರಲ್ಲಿ ಮಾಸಿಕ ೬೦೦ ಟನ್‌ಗಳ ಉತ್ಪಾದನೆಯನ್ನು ಸಾಧಿಸಿತು. ಅದೇ ವರ್ಷ ಈ ಸಂಸ್ಥೆಯನ್ನು ಸರ್ಕಾರವೇ ವಹಿಸಿಕೊಂಡು ಅದಕ್ಕೆ ಮೈಸೂರು ಪೋರ್ಸಿಲೀನ್ಸ್ ಲಿ., ಎಂದು ಮರುನಾಮಕರಣ ಮಾಡಿತು. ೧೯೭೬ರಲ್ಲಿ ಈ ಕಂಪೆನಿಯು ಕೇಂದ್ರ ಉದ್ಯಮವಾದ ಭಾರತ್ ಹೆವಿ ಇಲೆಕ್ಟ್ರಿಕಲ್ಸ್ ಲಿ., ಸಂಸ್ಥೆಯ ಅಂಗಸಂಸ್ಥೆಯಾಯಿತು. ಈ ಕಾರ್ಖಾನೆಯಲ್ಲಿ ಉತ್ಪಾದಿಸಲಾಗುವ ಇನ್ಸುಲೇಟರ್‌ಗಳು ವಿಶಿಷ್ಟ ಗುಣಮಟ್ಟವುಳ್ಳವಾಗಿದ್ದು, ಅಂತರರಾಷ್ಟ್ರೀಯ ಗುಣಮಟ್ಟದ ದರ್ಜೆಯನ್ನು ಹೊಂದಿವೆ.

೧೯೩೮ರಲ್ಲಿ ಬೆಂಗಳೂರಿನಲ್ಲಿ **ಮೈಸೂರ್ ವೆಜಿಟಬಲ್ ಆಯಿಲ್ ಪ್ರಾಡಕ್ಟ್ಸ್ ಲಿ.**, ಸಂಸ್ಥೆಯನ್ನು ತೆರೆಯಲಾಯಿತು. ಇದರ ಉತ್ಪಾದನೆಗಳು ವನಸ್ಪತಿ ಮತ್ತು ರಿಫೈನ್ಡ್ ಖಾದ್ಯ ತೈಲಗಳು. ೧೯೩೮ರಲ್ಲಿ **ಮೈಸೂರು ಕಾಫಿ ಕ್ಯೂರಿಂಗ್ ವರ್ಕ್ಸ್ ಲಿ.**, ಅನ್ನು ಚಿಕ್ಕಮಗಳೂರಿನಲ್ಲಿ ಸ್ಥಾಪಿಸಲಾಯಿತು. ಇದರ ಉತ್ಪನ್ನಗಳು ಸಂಸ್ಕರಿಸಿದ ಕಾಫಿ ಬೀಜ, ಉಗಿಗೊಡ್ಡಿದ ಮೂಳೆ ಪುಡಿ ಮತ್ತು ಇತರೆ ಸರಕುಗಳಾಗಿವೆ. ಕೃಷಿ, ಎಸ್ಟೇಟ್ ಮತ್ತು ತೋಟಗಾರಿಕೆಗೆ ಬೇಕಾಗುವ ಉಪಕರಣಗಳು, ಗೃಹೋಪಯೋಗಿ ಉಪಕರಣಗಳು, ಚಾಕು, ಕತ್ತರಿಗಳು, ತಗಡಿನ ಸಾಮಾನುಗಳು, ಹಗುರಾದ ಚೌಕಟ್ಟುಗಳು, ಅಂದವಾಗಿ ಕಾಣುವ ಗೇಟು ಮತ್ತು ಗ್ರಿಲ್‌ಗಳು ಮೊದಲಾದವುಗಳನ್ನು ತಯಾರಿಸಲು **ದ ಮೈಸೂರ್ ಇಂಪ್ಲಿಮೆಂಟ್ಸ್ ಫ್ಯಾಕ್ಟರಿ** ೧೯೩೯ರಲ್ಲಿ ಹಾಸನದಲ್ಲಿ ಆರಂಭಗೊಂಡಿತು. ೧೯೫೬ರ ಕಂಪೆನಿ ಕಾಯಿದೆಯನ್ವಯ ೧೯೭೫ರಲ್ಲಿ **ಕರ್ನಾಟಕ ಇಂಪ್ಲಿಮೆಂಟ್ಸ್ ಅಂಡ್ ಮೆಷಿನರಿ ಕಂಪೆನಿ ಲಿ.**, (ಕಿಂಕೋ) ಸ್ಥಾಪಿಸಲಾಯಿತು. ಸರ್ಕಾರದ ಇಲಾಖಾ ಆಡಳಿತ ವ್ಯಾಪ್ತಿಗೊಳಪಟ್ಟಿದ್ದ **ಬೆಂಗಳೂರು ಸೆಂಟ್ರಲ್ ಇಂಡಸ್ಟ್ರೀಯಲ್ ವರ್ಕ್‌ಶಾಪ್** ಮತ್ತು **ಹಾಸನದ ಮೈಸೂರ್ ಇಂಪ್ಲಿಮೆಂಟ್ಸ್ ಫ್ಯಾಕ್ಟರಿ** ಇವುಗಳ ವಿಲೀನದಿಂದ ಕಿಂಕೋ ಅಸ್ತಿತ್ವಕ್ಕೆ ಬಂದಿತು. ಬೆಂಗಳೂರು ಫ್ಯಾಕ್ಟರಿಯ ಈಗಿನ ಪ್ರಮುಖ ಉತ್ಪಾದನೆ ೨೦ ಟನ್ ಹಾಗೂ ೧೦೦ ಟನ್‌ಗಳ ಟ್ರೈಲರ್‌ಗಳು, ರೋಡ್ ರೋಲರ್‌ಗಳು, ಕಾಂಕ್ರೀಟ್ ಮಿಕ್ಸರ್ಸ್, ಟಾರ್ ಬಾಯಿಲರ್‌ಗಳು,

ವೈಟ್ ವಾಷಿಂಗ್ ಮೆಷಿನ್ಸ್ ಮೊದಲಾದವುಗಳು ಇದರ ಇತರ ಉತ್ಪನ್ನಗಳು. ಹಾಸನದ ಘಟಕವು ವ್ಯವಸಾಯೋಪಕರಣಗಳಾದ ಸಲಿಕೆ, ಗುದ್ದಲಿ, ಕೊಡಲಿ ಮೊದಲಾದವುಗಳನ್ನು ತಯಾರಿಸುತ್ತದೆ.

ಎರಡನೇ ಮಹಾಯುದ್ಧವು ರಾಜ್ಯದ ಎಲ್ಲಾ ಉದ್ಯಮಗಳಿಗೆ ಉತ್ತೇಜನ ನೀಡಿತ್ತಲ್ಲದೆ ಅವುಗಳಿಗೆ ಆರ್ಥಿಕ ಸ್ವಾವಲಂಬನೆಯ ಸಾಮರ್ಥ್ಯವನ್ನು ಒದಗಿಸಿತು. ವಿದೇಶಿ ವಸ್ತುಗಳು, ಯಂತ್ರೋಪಕರಣಗಳು ಹಾಗೂ ಬಿಡಿ ಭಾಗಗಳ ಆಮದು ನಿಂತು ಹೋದ್ದರಿಂದ ಅವುಗಳ ಉತ್ಪಾದನೆಗೆ ಎಂದೂ ಕಾಣದ ಬೇಡಿಕೆ ಬರಲಾರಂಭಿಸಿತು. ಯುದ್ಧ ಭೂಮಿಗೆ ಅವಶ್ಯಕವಾಗಿ ಬೇಕಾಗಿದ್ದ ಸರಕುಗಳ ಆಮದು ನಿಂತು ಹೋಗಿ ಅವುಗಳ ಬೇಡಿಕೆಯೂ ಗಣನೀಯವಾಗಿ ಹೆಚ್ಚಳಗೊಂಡಿದ್ದರಿಂದ ಕೈಗಾರಿಕಾ ಚಟುವಟಿಕೆ ಪರಿಣಾಮಕಾರಿಯಾಗಿ ವಿಸ್ತರಣೆಗೊಂಡಿತು.

### ಅತಿ ಸಣ್ಣ, ಸಣ್ಣ ಮತ್ತು ಮಧ್ಯಮ ಕೈಗಾರಿಕಾ ಘಟಕಗಳು

ಕರ್ನಾಟಕ ಕೈಗಾರಿಕಾ ವಲಯದಲ್ಲಿ ಅತಿ ಸಣ್ಣ, ಸಣ್ಣ ಮತ್ತು ಮಧ್ಯಮ ಕೈಗಾರಿಕಾ ಘಟಕಗಳು (ಎಂ.ಎಸ್.ಎಂ.ಇ.) ಪ್ರಮುಖ ಹಾಗೂ ಬೆಳವಣಿಗೆ ಹೊಂದುತ್ತಿರುವ ಭಾಗವಾಗಿದೆ. ಎಂ.ಎಸ್.ಎಂ.ಇ. ಕಾಯಿದೆ ೨೦೦೬ ಅನುಸಾರವಾಗಿ ಎಂ.ಎಸ್.ಎಂ.ಇ. ಕೈಗಾರಿಕೆ ಘಟಕಗಳನ್ನು ತಯಾರಿಕೆ ಹಾಗೂ ಸೇವಾ ಘಟಕಗಳೆಂದು ಸ್ಥೂಲವಾಗಿ ವಿಂಗಡಿಸಲಾಗಿದೆ. ಈ ಕಾಯ್ದೆಯನ್ವಯ ಅತಿ ಸಣ್ಣ, ಸಣ್ಣ ಮತ್ತು ಮಧ್ಯಮ ಕೈಗಾರಿಕಾ ಘಟಕಗಳನ್ನು ಈ ಕೆಳಗಿನಂತೆ ವಿಂಗಡಿಸಲಾಗಿದೆ.

| ಉದ್ಯಮ | ಯಂತ್ರೋಪಕರಣಗಳ ಮೇಲಿನ ಬಂಡವಾಳ ಹೂಡಿಕೆ (ತಯಾರಿಕೆ) | ಸಾಧನ ಸಾಮಗ್ರಿಗಳ ಮೇಲಿನ ಬಂಡವಾಳ ಹೂಡಿಕೆ (ಸೇವೆ) |
|---|---|---|
| ಅತಿ ಸಣ್ಣ | ರೂ.೨೫ ಲಕ್ಷಗಳವರೆಗೆ | ರೂ.೧೦ ಲಕ್ಷಗಳವರೆಗೆ |
| ಸಣ್ಣ | ರೂ.೨೫ ಲಕ್ಷಗಳಿಗಿಂತ ಮೇಲ್ಪಟ್ಟು ರೂ.೫ ಕೋಟಿಗಳವರೆಗೆ | ರೂ.೧೦ ಲಕ್ಷಗಳಿಗಿಂತ ಮೇಲ್ಪಟ್ಟು ರೂ.೨ ಕೋಟಿಗಳವರೆಗೆ |
| ಮಧ್ಯಮ | ರೂ.೫ ಕೋಟಿಗಳಿಗಿಂತ ಮೇಲ್ಪಟ್ಟು ರೂ.೧೦ ಕೋಟಿಗಳವರೆಗೆ | ರೂ.೨ ಕೋಟಿಗಳಿಗಿಂತ ಮೇಲ್ಪಟ್ಟು ರೂ.೫ ಕೋಟಿಗಳವರೆಗೆ |

೨೦೧೪-೧೫ರಲ್ಲಿ ಈ ವಲಯದಲ್ಲಿ ೨೮,೭೪೨ ಅತಿ ಸಣ್ಣ ಮತ್ತು ಮಧ್ಯಮ ಕೈಗಾರಿಕಾ ಘಟಕಗಳ ನೋಂದಣಿಯು ರೂ.೨೭೯೨೯೧.೨೪ ಲಕ್ಷಗಳ ಬಂಡವಾಳದಿಂದ ೧,೭೫,೪೪೯ ಜನರಿಗೆ ಉದ್ಯೋಗಾವಕಾಶಗಳನ್ನು ನೀಡಲಾಗಿದೆ. ರಾಜ್ಯದಲ್ಲಿ ಎಂ.ಎಸ್.ಎಂ.ಇ. ಘಟಕಗಳ ನೋಂದಣಿ ಮತ್ತು ಘಟಕಗಳಿಂದ ನೇಮಿಸಲ್ಪಟ್ಟ ಉದ್ಯೋಗಿಗಳ ಮಾಹಿತಿಯನ್ನು ೨೦೧೫-೧೬ನೇ ಸಾಲಿನ ಡಿಸೆಂಬರ್ ೧೫ರ ವರೆಗೆ ಪ್ರತಿ ನೋಂದಾಯಿಸಿದ ಘಟಕವಾರು ಉದ್ಯೋಗದ ಮಾಹಿತಿಯನ್ನು ಕೋಷ್ಟಕ ೫.೧೧ರಲ್ಲಿ ನೀಡಲಾಗಿದೆ.

**ಕೋಷ್ಟಕ ೫.೧೧: ಜಿಲ್ಲಾವಾರು ೨೦೧೫-೧೬ರಲ್ಲಿ ಎಂ.ಎಸ್.ಎಂ.ಇ (MSME) ಘಟಕಗಳ ವಿವರ**

| ಕ್ರ. ಸಂ. | ಜಿಲ್ಲೆಗಳು | ವಾರ್ಷಿಕ ಅಂಕಿ ಅಂಶ ೨೦೧೫-೧೬ ರವರೆಗೆ | | |
|---|---|---|---|---|
| | | ಎಂ.ಎಸ್.ಎಂ.ಇ. ಉದ್ಯಮಗಳು | ಉದ್ಯೋಗ | ಉದ್ಯೋಗ ಪ್ರತಿ ಉದ್ಯಮಕ್ಕೆ |
| ೧ | ಬಾಗಲಕೋಟೆ | ೭೨೩೨ | ೩೬೭೫೮.೮೪ | ೩೪೯೪೦ |
| ೨ | ಬಳ್ಳಾರಿ | ೨೪೪೪೭ | ೧೬೮೪೪೩.೯೯ | ೧೩೨೫೨೩ |
| ೩ | ಬೆಳಗಾವಿ | ೪೩೯೯೮ | ೧೬೩೦೫೩.೧ | ೧೯೮೪೫೩ |
| ೪ | ಬೆಂಗಳೂರು ನಗರ | ೧೦೧೨೯೮ | ೯೭೦೬೭೯.೬೯ | ೯೬೫೬೩೬ |
| ೫ | ಬೆಂಗಳೂರು (ಗ್ರಾ) | ೨೪೫೮೧ | ೧೨೮೧೯೯.೦೮ | ೧೮೬೮೬೭ |
| ೬ | ಬೀದರ್ | ೮೭೯೧ | ೩೧೯೭೯.೮೫ | ೫೧೩೦೮ |
| ೭ | ಚಾಮರಾಜನಗರ | ೩೧೮೦ | ೮೭೮೮.೫೬ | ೧೬೦೨೧ |
| ೮ | ಚಿಕ್ಕಮಗಳೂರು | ೧೧೨೦೧ | ೨೧೦೬೨.೦೭ | ೪೩೬೪೭ |
| ೯ | ಚಿಕ್ಕಬಳ್ಳಾಪುರ | ೨೨೪೫ | ೧೭೭೮೧.೨೧ | ೧೩೬೧೩ |
| ೧೦ | ಚಿತ್ರದುರ್ಗ | ೧೪೯೧೪ | ೩೯೫೬೪.೬೨ | ೭೧೪೧೪ |
| ೧೧ | ದಕ್ಷಿಣ ಕನ್ನಡ | ೩೧೦೩೩ | ೧೦೦೯೯೪.೩೯ | ೧೮೯೮೮೩ |
| ೧೨ | ದಾವಣಗೆರೆ | ೭೩೮೦ | ೩೦೯೦೬.೭೨ | ೨೮೪೯೨ |
| ೧೩ | ಧಾರವಾಡ | ೩೩೭೨೧ | ೧೨೦೭೭೦.೫೩ | ೧೭೬೧೨೮ |
| ೧೪ | ಗದಗ | ೪೭೨೦ | ೧೪೫೨೫.೮೭ | ೨೦೦೬೨ |
| ೧೫ | ಹಾಸನ | ೧೫೨೬೮ | ೩೪೫೦೨.೭೭ | ೬೩೫೮೩ |

| | | | | |
|---|---|---|---|---|
| ೧೬ | ಹಾವೇರಿ | ೬೨೨೦ | ೨೧೦೦೯.೪ | ೨೨೯೩೯ |
| ೧೭ | ಕಲಬುರಗಿ | ೨೦೫೭೦ | ೫೫೭೫೪.೪೬ | ೮೫೫೭೪ |
| ೧೮ | ಕೊಡಗು | ೪೪೮೪ | ೧೨೬೬೫.೯೯ | ೨೭೭೦೯ |
| ೧೯ | ಕೋಲಾರ | ೧೬೯೧೩ | ೯೩೩೩೭.೫೩ | ೧೦೬೪೦೬ |
| ೨೦ | ಕೊಪ್ಪಳ | ೫೪೧೪ | ೫೦೩೧೧.೯ | ೨೬೭೦೮ |
| ೨೧ | ಮಂಡ್ಯ | ೧೨೧೭೬ | ೩೫೨೯೦.೭೫ | ೫೬೬೭೩ |
| ೨೨ | ಮೈಸೂರು | ೩೩೫೫೧ | ೧೧೨೩೮೪.೦೭ | ೧೭೨೦೬೪ |
| ೨೩ | ರಾಯಚೂರು | ೧೩೨೮೫ | ೬೬೪೧೦.೫೩ | ೭೨೪೭೮ |
| ೨೪ | ರಾಮನಗರ | ೩೮೨೭ | ೫೧೪೨೦.೯೧ | ೩೧೪೦೭ |
| ೨೫ | ಶಿವಮೊಗ್ಗ | ೨೨೪೨೭ | ೫೦೦೯೯.೪೫ | ೧೦೨೧೫೬ |
| ೨೬ | ತುಮಕೂರು | ೨೮೦೬೨ | ೧೧೪೮೫೧.೬೧ | ೧೪೯೧೭೧ |
| ೨೭ | ಉಡುಪಿ | ೭೦೫೩ | ೫೦೪೮೨.೮೩ | ೫೪೨೭೯ |
| ೨೮ | ಉತ್ತರ ಕನ್ನಡ | ೧೩೭೬೫ | ೩೩೩೬೯.೩ | ೬೪೨೫೮ |
| ೨೯ | ವಿಜಯಪುರ | ೧೫೮೩೭ | ೩೨೧೫೪.೦೭ | ೭೪೬೭೩ |
| ೩೦ | ಯಾದಗಿರಿ | ೧೩೫೪ | ೭೪೧೦.೯೬ | ೪೯೦೪ |
| | **ಒಟ್ಟು** | **೫೩೮೯೪೭** | **೨೬೭೪೯೬೫.೦೪** | **೩೨೪೩೯೬೯** |

**ಮೂಲ: ಕೈಗಾರಿಕೆ ಮತ್ತು ವಾಣಿಜ್ಯ ನಿರ್ದೇಶನಾಲಯ**

೨೦೧೩-೧೪ನೇ ಸಾಲಿಗೆ ಹೋಲಿಸಿದಾಗ, ೨೦೧೪-೧೫ರಲ್ಲಿ ನೋಂದಣಿಯಾದ ಘಟಕಗಳು ಶೇ.೧೦.೬೯ರಷ್ಟು ಹೆಚ್ಚಳವಾಗಿದ್ದು, ಕ್ರಮವಾಗಿ ಬಂಡವಾಳ ಹೂಡಿಕೆ ಮತ್ತು ಉದ್ಯೋಗಾವಕಾಶವು ಶೇ.೨.೦೨ರಷ್ಟು ಹಾಗೂ ಶೇ.೪.೮೫ರಷ್ಟು ಹೆಚ್ಚಾಗಿರುವುದು ಕಂಡು ಬಂದಿರುತ್ತದೆ. ೨೦೧೫ರ ಮೊದಲ ಒಂಬತ್ತು ತಿಂಗಳುಗಳವರೆಗೆ (ಏಪ್ರಿಲ್-ಡಿಸೆಂಬರ್ ೨೦೧೫) ೧೯೨೦೮ ಘಟಕಗಳು ರೂ.೨,೮೯,೮೧೦.೨೧ ಲಕ್ಷಗಳ ಬಂಡವಾಳದೊಂದಿಗೆ ನೋಂದಣಿಯಾಗಿದ್ದು, ೧,೪೬,೨೨೫ ಜನರಿಗೆ ಉದ್ಯೋಗಾವಕಾಶ ದೊರಕಿರುತ್ತದೆ. ಕಳೆದ ಸಾಲಿನ ಇದೇ ಅವಧಿಗೆ ಹೋಲಿಸಿದಾಗ (ಏಪ್ರಿಲ್-ಡಿಸೆಂಬರ್ ೨೦೧೪), ಅತಿ ಸಣ್ಣ, ಸಣ್ಣ ಮತ್ತು ಮಧ್ಯಮ ಉದ್ಯಮಗಳಲ್ಲಿ ನೋಂದಣಿಯಾದ ಘಟಕಗಳ ಸಂಖ್ಯೆಯಲ್ಲಿ ಶೇ.-೨.೬೦ ರಷ್ಟು ಕಡಿಮೆಯಾಗಿದ್ದು, ಬಂಡವಾಳ ಹೂಡಿಕೆಯಲ್ಲಿ ಶೇ.೫೧.೦೧ರಷ್ಟು ಹಾಗೂ ಉದ್ಯೋಗಾವಕಾಶದಲ್ಲಿ ಶೇ.೧೯.೫೭ ರಷ್ಟು ಹೆಚ್ಚಳ ಕಂಡು ಬಂದಿರುತ್ತದೆ. ಕರ್ನಾಟಕದಲ್ಲಿ ೨೦೦೭-೦೮ ರಿಂದ ಘಟಕಗಳ ನೋಂದಣಿಯು ಹೆಚ್ಚಾಗುತ್ತಿರುವುದು ಕಂಡು ಬಂದಿದ್ದು ವಿವರಗಳನ್ನು ಕೋಷ್ಟಕ ೫.೧೨ರಲ್ಲಿ ನೀಡಲಾಗಿದೆ.

**ಕೋಷ್ಟಕ ೫.೧೨: ಕರ್ನಾಟಕದಲ್ಲಿ ನೋಂದಣಿಯಾದ ಎಂ.ಎಸ್.ಎಂ.ಇ. ಘಟಕಗಳು(೨೦೧೧-೧೨ ರಿಂದ ೨೦೧೫-೧೬)**

| ವರ್ಷ | ಅತಿ ಸಣ್ಣ | | | ಸಣ್ಣ | | | ಮಧ್ಯಮ | | | ಒಟ್ಟು | | |
|---|---|---|---|---|---|---|---|---|---|---|---|---|
| | ಘಟಕ (ಸಂಖ್ಯೆ) | ಹೂಡಿಕೆ (ರೂ.ಲಕ್ಷ) | ಉದ್ಯೋಗ (ಸಂಖ್ಯೆ) | ಘಟಕ (ಸಂಖ್ಯೆ) | ಹೂಡಿಕೆ (ರೂ.ಲಕ್ಷ) | ಉದ್ಯೋಗ (ಸಂಖ್ಯೆ) | ಘಟಕ (ಸಂಖ್ಯೆ) | ಹೂಡಿಕೆ (ರೂ.ಲಕ್ಷ) | ಉದ್ಯೋಗ (ಸಂಖ್ಯೆ) | ಘಟಕ (ಸಂಖ್ಯೆ) | ಹೂಡಿಕೆ (ರೂ.ಲಕ್ಷ) | ಉದ್ಯೋಗ (ಸಂಖ್ಯೆ) |
| ೨೦೧೧-೧೨ | ೧೯೬೧೦ | ೪೩೬೫೦ | ೮೬೨೧೬ | ೧೩೭೦ | ೯೧೨೬೬ | ೩೪೪೦೦ | ೪೧ | ೨೪೭೨೪ | ೭೭೭೧ | ೨೧೦೨೧ | ೧೫೯೬೪೧ | ೧೨೮೩೮೭ |
| ೨೦೧೨-೧೩ | ೨೨೧೬೯ | ೬೬೦೧೯ | ೧೦೫೦೨೯ | ೧೯೮೧ | ೧೧೬೭೯೧ | ೪೬೦೨೯ | ೫೬ | ೩೪೦೪೧ | ೪೪೯೩ | ೨೪೨೦೬ | ೨೧೬೮೫೧ | ೧೫೫೫೫೧ |
| ೨೦೧೩-೧೪ | ೨೩೨೨೯ | ೭೯೪೧೬ | ೧೧೦೦೭೦ | ೨೬೬೧ | ೧೪೪೦೯೬ | ೪೬೭೪೧ | ೭೬ | ೬೧೫೪೫ | ೧೦೫೩೬ | ೨೫೯೬೬ | ೨೮೫೦೫೬ | ೧೬೭೩೪೭ |
| ೨೦೧೪-೧೫ | ೨೬೦೦೫ | ೮೭೬೦೯ | ೧೨೧೫೯೯ | ೨೬೬೧ | ೧೩೮೫೧೬ | ೪೭೩೧೧ | ೭೧ | ೫೩೧೬೮ | ೬೫೬೩ | ೨೮೭೪೨ | ೨೭೯೨೯೧ | ೧೭೫೪೬೯ |
| ೨೦೧೫-೧೬ (ಡಿಸೆಂಬರ್ ೧೫ ವರೆಗೆ) | ೧೬೬೨೨ | ೧೭೨೩೨೪ | ೧೦೯೧೧೧ | ೨೪೯೪ | ೧೦೦೫೨೦ | ೩೪೭೬೨ | ೯೨ | ೧೯೯೬೫ | ೨೩೫೨ | ೧೯೨೦೮ | ೨೮೯೮೧೦ | ೧೪೬೨೨೫ |

**ಮೂಲ: ಕೈಗಾರಿಕೆ ಮತ್ತು ವಾಣಿಜ್ಯ ನಿರ್ದೇಶನಾಲಯ**

೨೦೧೪-೧೫ರಲ್ಲಿ ನೋಂದಣಿಯಾದ ಒಟ್ಟು ೨೮೭೪೨ ಘಟಕಗಳಲ್ಲಿ ಸುಮಾರು ಶೇ ೨೩.೫೩ ಭಾಗದಷ್ಟು (೬೭೬೫ ಘಟಕಗಳು) ಸಿದ್ಧ ಉಡುಪುಗಳ ತಯಾರಿಕೆ, ತುಪ್ಪಳ ಹದಗೊಳಸುವುದು ಮತ್ತು ತುಪ್ಪಳಕ್ಕೆ ಬಣ್ಣ ಹಾಕುವುದಕ್ಕೆ ಸಂಬಂಧಿಸಿದ್ದು, ಮೊದಲ ಸ್ಥಾನದಲ್ಲಿವೆ. ಶೇ.೧೧.೧೬ರಷ್ಟಿರುವ ಮರ ಹಾಗೂ ಮರದ ಉತ್ಪನ್ನ ವಸ್ತುಗಳು ನಂತರದ ಸ್ಥಾನದಲ್ಲಿರುತ್ತವೆ ಮೊದಲ ಅತಿ ಹೆಚ್ಚು ನೋಂದಣಿಯಾದ ೧೦ ತಯಾರಿಕಾ ಉತ್ಪನ್ನಗಳ (ಘಟಕಗಳ ಸಂಖ್ಯೆ) ವಿವರಗಳನ್ನು ಕೋಷ್ಟಕ ೫.೧೩ರಲ್ಲಿ ನೀಡಲಾಗಿದೆ.

**ಕೋಷ್ಟಕ ೫.೧೩: ೨೦೧೪-೧೫ರಲ್ಲಿ ಅತಿ ಹೆಚ್ಚು ನೋಂದಣಿಯಾದ ಮೊದಲ ೧೦ ತಯಾರಿಕಾ ಉತ್ಪನ್ನಗಳು (ಘಟಕಗಳ ಸಂಖ್ಯೆಗಳಗನುಗುಣವಾಗಿ)**

| ಕ್ರ. ಸಂ. | ಉತ್ಪನ್ನ | ರಾಕೈಸ ೨೦೦೮ | ಘಟಕ (ಸಂಖ್ಯೆ) | ಹೂಡಿಕೆ (ರೂ.ಲಕ್ಷಗಳಲ್ಲಿ) | ಉದ್ಯೋಗಾವಕಾಶ (ಸಂಖ್ಯೆ) |
|---|---|---|---|---|---|
| ೧ | ಸಿದ್ಧ ಉಡುಪುಗಳ ತಯಾರಿಕೆ, ತುಪ್ಪಳ ಹದಗೊಳಸುವುದು ಮತ್ತು ತುಪ್ಪಳಕ್ಕೆ ಬಣ್ಣ ಹಾಕುವುದು | ೧೮ | ೬೭೬೫ | ೪೬೨೬೭.೮೮ | ೩೫೭೯೮ |
| ೨ | ಮರ ಹಾಗೂ ಮರದ ಉತ್ಪನ್ನ ವಸ್ತುಗಳು | ೧೭ | ೩೨೦೯ | ೧೦೪೯೩.೩೮ | ೧೧೧೬ |
| ೩ | ಬಟ್ಟೆ ತಯಾರಿಕೆ | ೨೦ | ೨೭೬೯ | ೨೨೨೧೮.೮೬ | ೧೬೮೫೫ |
| ೪ | ಆಹಾರೋತ್ಪನ್ನಗಳು ಹಾಗೂ ಪಾನೀಯಗಳು | ೧೫ | ೨೩೪೫ | ೩೨೫೯೯.೩೬ | ೧೭೯೧೨ |
| ೫ | ಯಂತ್ರೋಪಕರಣಗಳನ್ನು ಹೊರತುಪಡಿಸಿ, ಸಿದ್ಧಪಡಿಸಿದ ಲೋಹದ ಉತ್ಪನ್ನ | ೨೮ | ೨೦೪೨ | ೨೩೭೦೫.೪೫ | ೧೨೪೫೨ |
| ೬ | ಇತರೆ ಲೋಹವಲ್ಲದ ಖನಿಜಗಳ ಉತ್ಪನ್ನ | ೩೬ | ೧೩೦೫ | ೧೫೩೪೪.೯೯ | ೧೦೧೪೩ |
| ೭ | ರಾಸಾಯನಿಕ ಕಾಗೂ ರಾಸಾಯನಿಕ ಉತ್ಪನ್ನಗಳು | ೨೯ | ೧೨೮೧ | ೧೯೮೫೬.೭೯ | ೯೮೪೯ |
| ೮ | ಯಂತ್ರೋಪಕರಣ ತಯಾರಿಕೆ | ೨೬ | ೧೨೪೪ | ೨೨೩೦೪.೪೯ | ೧೧೧೯೮ |
| ೯ | ಪೀಠೋಪಕರಣ ತಯಾರಿಕೆ | ೨೪ | ೧೧೨೭ | ೪೫೨೭ | ೪೩೧೨ |
| ೧೦ | ಪ್ರಕಟಣೆ, ಮುದ್ರಣ ಹಾಗೂ ಧ್ವನಿ ಮುದ್ರಣ ಮಾಧ್ಯಮಗಳ ಉತ್ಪಾದನೆ | ೨೨ | ೭೯೫ | ೧೦೦೭೩.೭೯ | ೫೨೦೧ |
| | ೨೦೧೪-೧೫ರಲ್ಲಿ ಒಟ್ಟು ಮೊತ್ತ (೬೩ ವರ್ಗೀಕರಣಗಳಿಗೆ) | | ೨೮೭೪೨ | ೨೭೯೨೯೧ | ೧೭೫೪೪೬ |

**ಮೂಲ: ಕೈಗಾರಿಕೆ ಮತ್ತು ವಾಣಿಜ್ಯ ನಿರ್ದೇಶನಾಲಯ**

೨೦೧೪-೧೫ರಲ್ಲಿ ಶೇ.೧೬.೫೬ ರಷ್ಟು ಬಂಡವಾಳವು ಸಿದ್ಧ ಉಡುಪುಗಳ ತಯಾರಿಕೆ, ತುಪ್ಪಳ ಹದಗೊಳಸುವುದು ಮತ್ತು ತುಪ್ಪಳಕ್ಕೆ ಬಣ್ಣ ಹಾಕುವುದಕ್ಕೆ ಸಂಬಂಧಿಸಿದಂತೆ ಮೊದಲ ಸ್ಥಾನದಲ್ಲಿದ್ದು, ಶೇ.೧೧.೬೭ರಷ್ಟು ಬಂಡವಾಳದೊಂದಿಗೆ ಆಹಾರೋತ್ಪನ್ನಗಳು ನಂತರದ ಸ್ಥಾನದಲ್ಲಿದೆ. ೨೦೧೪-೧೫ರಲ್ಲಿ ಅತಿ ಹೆಚ್ಚು ಬಂಡವಾಳ ಹೂಡಿರುವ ಮೊದಲ ೧೦ ತಯಾರಿಕಾ ಉತ್ಪನ್ನಗಳ ವಿವರಗಳನ್ನು ಕೋಷ್ಟಕ ೫.೧೪ರಲ್ಲಿ ನೀಡಲಾಗಿದೆ.

**ಕೋಷ್ಟಕ ೫.೧೪: ೨೦೧೪-೧೫ರಲ್ಲಿ ಅತಿ ಹೆಚ್ಚು ಬಂಡವಾಳ ಹೂಡಿರುವ ಮೊದಲ ೧೦ ತಯಾರಿಕಾ ಉತ್ಪನ್ನಗಳು**

| ಕ್ರ. ಸಂ. | ಉತ್ಪನ್ನ | ರಾಕೈಸ ೨೦೦೮ | ಘಟಕ (ಸಂಖ್ಯೆ) | ಹೂಡಿಕೆ (ರೂ.ಲಕ್ಷಗಳಲ್ಲಿ) | ಉದ್ಯೋಗಾವಕಾಶ (ಸಂಖ್ಯೆ) |
|---|---|---|---|---|---|
| ೧ | ಸಿದ್ಧ ಉಡುಪುಗಳ ತಯಾರಿಕೆ, ತುಪ್ಪಳ ಹದಗೊಳಸುವುದು ಮತ್ತು ತುಪ್ಪಳಕ್ಕೆ ಬಣ್ಣ ಹಾಕುವುದು | ೧೮ | ೬೭೬೫ | ೪೬೨೬೭.೮೮ | ೩೫೭೯೮ |
| ೨ | ಆಹಾರೋತ್ಪನ್ನಗಳು ಹಾಗೂ ಪಾನೀಯಗಳು | ೧೫ | ೨೩೪೫ | ೩೨೫೯೯.೩೬ | ೧೭೯೧೨ |
| ೩ | ಯಂತ್ರೋಪಕರಣಗಳನ್ನು ಹೊರತುಪಡಿಸಿ, ಸಿದ್ಧಪಡಿಸಿದ ಲೋಹದ ಉತ್ಪನ್ನ | ೨೮ | ೨೦೪೨ | ೨೩೭೦೫.೪೫ | ೧೨೪೫೨ |
| ೪ | ಇತರೆ ಯಂತ್ರೋಪಕರಣಗಳು | ೨೬ | ೧೨೪೪ | ೨೨೩೦೪.೪೯ | ೧೧೧೯೮ |
| ೫ | ಬಟ್ಟೆ ತಯಾರಿಕೆ | ೨೦ | ೨೭೬೯ | ೨೨೨೧೮.೮೬ | ೧೬೮೫೫ |

| | | | | | |
|---|---|---|---|---|---|
| ೬ | ರಾಸಾಯನಿಕ ಕಾಗೂ ರಾಸಾಯನಿಕ ಉತ್ಪನ್ನಗಳು | ೨೦ | ೨೭೬೯ | ೨೨೨೧೮.೮೬ | ೧೬೮೫೫ |
| ೭ | ಇತರೆ ಲೋಹವಲ್ಲದ ಖನಿಜಗಳು | ೩೬ | ೧೩೦೫ | ೧೫೩೪೪.೯೯ | ೧೦೧೪೩ |
| ೮ | ರಬ್ಬರ್ ಮತ್ತು ಪ್ಲಾಸ್ಟಿಕ್ ವಸ್ತುಗಳ ತಯಾರಿಕೆ | – | ೫೩೭ | ೧೨೪೦೧.೮೫ | ೪೨೩೪ |
| ೯ | ಮರ ಹಾಗೂ ಮರದ ಉತ್ಪನ್ನ ವಸ್ತುಗಳು | ೧೭ | ೩೨೦೯ | ೧೦೪೯೩.೩೮ | ೧೧೧೬ |
| ೧೦ | ಪ್ರಕಟಣೆ, ಮುದ್ರಣ ಹಾಗೂ ಧ್ವನಿ ಮುದ್ರಣ ಮಾಧ್ಯಮಗಳ ಉತ್ಪಾದನೆ | ೨೨ | ೭೯೫ | ೧೦೦೭೩.೭೯ | ೫೨೦೧ |
| ೨೦೧೪-೧೫ರಲ್ಲಿ ಒಟ್ಟು ಮೊತ್ತ (೬೩ ವರ್ಗೀಕರಣಗಳಿಗೆ) | | | ೨೮೭೪೨ | ೨೭೯೨೯೧ | ೧೭೫೪೬೯ |

**ಮೂಲ: ಕೈಗಾರಿಕೆ ಮತ್ತು ವಾಣಿಜ್ಯ ನಿರ್ದೇಶನಾಲಯ**

ಉದ್ಯೋಗಕ್ಕೆ ಸಂಬಂಧಿಸಿದಂತೆ, ೨೦೧೪-೧೫ರಲ್ಲಿ ಶೇ.೨೦.೪೮ರಷ್ಟು ಉದ್ಯೋಗವು ಸಿದ್ಧ ಉಡುಪುಗಳ ತಯಾರಿಕೆ, ತುಪ್ಪಳ ಹದಗೊಳಸುವುದು ಮತ್ತು ತುಪ್ಪಳಕ್ಕೆ ಬಣ್ಣ ಹಾಕುವುದು ಮೊದಲ ಸ್ಥಾನದಲ್ಲಿದ್ದು, ನಂತರದಲ್ಲಿ ಶೇ.೧೦.೨೧ ರಷ್ಟು ಉದ್ಯೋಗವು ಆಹಾರೋತ್ಪನ್ನಗಳು ಹಾಗೂ ಪಾನೀಯಗಳದಾಗಿರುತ್ತದೆ. ೨೦೧೪-೧೫ರಲ್ಲಿ ಅತಿ ಹೆಚ್ಚು ಉದ್ಯೋಗ ಕಲ್ಪಿಸಲಾಗಿರುವ ಮೊದಲ ೧೦ ತಯಾರಿಕಾ ಉತ್ಪನ್ನಗಳ ವಿವರಗಳನ್ನು ಕೋಷ್ಟಕ ೫.೧೫ರಲ್ಲಿ ನೀಡಲಾಗಿದೆ.

**ಕೋಷ್ಟಕ ೫.೧೫: ೨೦೧೪-೧೫ರಲ್ಲಿ ಅತಿ ಹೆಚ್ಚು ಉದ್ಯೋಗ ಕಲ್ಪಿಸಲಾಗಿರುವ ಮೊದಲ ೧೦ ತಯಾರಿಕಾ ಉತ್ಪನ್ನಗಳು**

| ಕ್ರಮ ಸಂಖ್ಯೆ | ಉತ್ಪನ್ನ | ರಾಕೈಸ ೨೦೦೮ | ಘಟಕ (ಸಂಖ್ಯೆಗಳಲ್ಲಿ) | ಹೂಡಿಕೆ (ರೂ.ಲಕ್ಷಗಳಲ್ಲಿ) | ಉದ್ಯೋಗಾವಕಾಶ (ಸಂಖ್ಯೆಗಳಲ್ಲಿ) |
|---|---|---|---|---|---|
| ೧ | ಸಿದ್ಧ ಉಡುಪುಗಳ ತಯಾರಿಕೆ, ತುಪ್ಪಳ ಹದಗೊಳಸುವುದು ಮತ್ತು ತುಪ್ಪಳಕ್ಕೆ ಬಣ್ಣ ಹಾಕುವುದು | ೧೮ | ೬೭೬೫ | ೪೬೨೬೭.೮೮ | ೩೫೭೯೮ |
| ೨ | ಆಹಾರೋತ್ಪನ್ನಗಳು ಹಾಗೂ ಪಾನೀಯಗಳು | ೧೫ | ೨೩೪೫ | ೩೨೫೯೯.೩೬ | ೧೭೯೧೨ |
| ೩ | ಬಟ್ಟೆ ತಯಾರಿಕೆ | ೧೭ | ೨೭೬೯ | ೨೨೨೧೮.೮೬ | ೧೬೮೫೫ |
| ೪ | ಯಂತ್ರೋಪಕರಣಗಳನ್ನು ಹೊರತುಪಡಿಸಿ, ಸಿದ್ಧಪಡಿಸಿದ ಲೋಹದ ಉತ್ಪನ್ನ | ೨೮ | ೨೦೪೨ | ೨೩೭೦೫.೪೫ | ೧೨೪೫೨ |
| ೫ | ಇತರೆ ಯಂತ್ರೋಪಕರಣಗಳು | ೨೯ | ೧೨೪೪ | ೨೨೩೦೪.೪೯ | ೧೧೧೯೮ |
| ೬ | ಮರ ಹಾಗೂ ಮರದ ಉತ್ಪನ್ನ ವಸ್ತುಗಳು | ೨೦ | ೩೨೦೯ | ೧೦೪೯೩.೩೮ | ೧೧೧೬ |
| ೭ | ಇತರೆ ಲೋಹವಲ್ಲದ ಖನಿಜ ಉತ್ಪನ್ನಗಳು | ೨೬ | ೧೩೦೫ | ೧೫೩೪೪.೯೯ | ೧೦೧೪೩ |
| ೮ | ರಾಸಾಯನಿಕ ಕಾಗೂ ರಾಸಾಯನಿಕ ಉತ್ಪನ್ನಗಳು | ೨೪ | ೨೭೬೯ | ೨೨೨೧೮.೮೬ | ೧೬೮೫೫ |
| ೯ | ಪ್ರಕಟಣೆ, ಮುದ್ರಣ ಹಾಗೂ ಧ್ವನಿ ಮುದ್ರಣ ಮಾಧ್ಯಮಗಳ ಉತ್ಪಾದನೆ | ೨೨ | ೭೯೫ | ೧೦೦೭೩.೭೯ | ೫೨೦೧ |
| ೧೦ | ಇತರೆ ವ್ಯಾಪಾರ ಚಟುವಟಿಕೆ | ೩೬ | ೫೧೮ | ೩೪೩೬.೨೨ | ೪೫೫೪ |
| ೨೦೧೪-೧೫ರಲ್ಲಿ ಒಟ್ಟು ಮೊತ್ತ (೬೩ ವರ್ಗೀಕರಣಗಳಿಗೆ) | | | ೨೮೭೪೨ | ೨೭೯೨೯೧ | ೧೭೫೪೬೯ |

**ಮೂಲ: ಕೈಗಾರಿಕೆ ಮತ್ತು ವಾಣಿಜ್ಯ ನಿರ್ದೇಶನಾಲಯ**

ರಾಜ್ಯದಲ್ಲಿ ಒಟ್ಟು ೭೮೧ ಬೃಹತ್ ಕೈಗಾರಿಕೆಗಳಿದ್ದು, ಇವುಗಳಲ್ಲಿ ರೂ. ೧,೫೯,೪೫೫.೩೭ ಕೋಟಿ ಬಂಡವಾಳ ತೊಡಗಿಸಲಾಗಿತ್ತು. ೭೮೧ ಉದ್ಯಮಗಳು ೩,೯೭,೭೨೨ ಮಂದಿಗೆ ಉದ್ಯೋಗ ಒದಗಿಸಿದ್ದವು. ೨೦೧೫-೧೬ರಲ್ಲಿದ್ದ ಜಿಲ್ಲಾವಾರು ಬೃಹತ್ ಕೈಗಾರಿಕೆಗಳ ವಿವರಗಳನ್ನು ಕೋಷ್ಟಕ ೫.೧೬ರಲ್ಲಿ ನೀಡಲಾಗಿದೆ.

**ಕೋಷ್ಟಕ ೫.೧೬: ೨೦೧೫–೧೬ರಲ್ಲಿದ್ದಂತೆ ಜಿಲ್ಲಾವಾರು ಬೃಹತ್ ಕೈಗಾರಿಕೆಗಳ ವಿವರ**

| ಕ್ರ. ಸಂ. | ಜಿಲ್ಲೆಗಳು | ಒಟ್ಟು ಘಟಕಗಳು | ಬಂಡವಾಳ ಹೂಡಿಕೆ (ರೂ.ಕೋಟಿಗಳಲ್ಲಿ) | ಉದ್ಯೋಗಿಗಳ ಸಂಖ್ಯೆ |
|---|---|---|---|---|
| ೧ | ಬಾಗಲಕೋಟೆ | ೧೭ | ೪೧೨೨.೦೨ | ೭೩೦೪ |
| ೨ | ಬೆಂಗಳೂರು ನಗರ | ೩೧೫ | ೧೪೮೩೨.೪೯ | ೧೯೪೬೭೪ |
| ೩ | ಬೆಳಗಾವಿ | ೩೫ | ೫೧೯೭.೦೦ | ೨೨೩೬೨ |
| ೪ | ಬಳ್ಳಾರಿ | ೬೦ | ೪೯೩೬೧.೩೬ | ೧೫೧೩೮ |
| ೫ | ಬೆಂಗಳೂರು (ಗ್ರಾ) | ೭೨ | ೪೩೩೫.೨೧ | ೨೭೬೬೩ |
| ೬ | ಬೀದರ್ | ೯ | ೪೩೨.೫೦ | ೩೩೩೦ |
| ೭ | ಚಾಮರಾಜನಗರ | ೩ | ೨೦೫.೮೧ | ೩೬೮ |
| ೮ | ಚಿಕ್ಕಬಳ್ಳಾಪುರ | ೨ | ೪೩೭.೨೦ | ೧೭೮೬ |
| ೯ | ಚಿಕ್ಕಮಗಳೂರು | ೨ | ೧೦೪.೮೬ | ೩೭೩ |
| ೧೦ | ಚಿತ್ರದುರ್ಗ | ೨ | ೧೭೮.೦೦ | ೨೧೪ |
| ೧೧ | ದಕ್ಷಿಣ ಕನ್ನಡ | ೧೬ | ೨೨೬೬.೭೨ | ೬೭೨೨ |
| ೧೨ | ದಾವಣಗೆರೆ | ೭ | ೭೫೮.೭೧ | ೨೦೫೩ |
| ೧೩ | ಧಾರವಾಡ | ೯ | ೮೧೮.೬೩ | ೫೧೬೮ |
| ೧೪ | ಗದಗ | ೩ | ೫೨೧.೬೯ | ೯೦೬ |
| ೧೫ | ಹಾಸನ | ೧೦ | ೧೪೫೯.೫೮ | ೪೪೭೭ |
| ೧೬ | ಹಾವೇರಿ | ೯ | ೯೩೬.೭೯ | ೩೭೧೬ |
| ೧೭ | ಕಲಬುರಗಿ | ೧೨ | ೮೫೩೧.೬೪ | ೬೨೩೫ |
| ೧೮ | ಕೊಡಗು | ೧ | ೧೦೩.೪೯ | ೧೫೯ |
| ೧೯ | ಕೋಲಾರ | ೨೧ | ೪೩೩೫.೨೭ | ೧೨೫೭೮ |
| ೨೦ | ಕೊಪ್ಪಳ | ೧೮ | ೧೦೬೦೮.೪೫ | ೪೧೫೧ |
| ೨೧ | ಮಂಡ್ಯ | ೧೨ | ೧೧೬೮.೧೦ | ೭೩೯೯ |
| ೨೨ | ಮೈಸೂರು | ೪೯ | ೪೪೬೪.೭೨ | ೧೯೦೬೦ |
| ೨೩ | ರಾಯಚೂರು | ೬ | ೪೨೬೫.೯೨ | ೬೫೪೯ |
| ೨೪ | ರಾಮನಗರ | ೩೦ | ೫೩೦೮.೩೦ | ೧೯೭೩೩ |
| ೨೫ | ಶಿವಮೊಗ್ಗ | ೧೦ | ೧೬೧೨.೯೧ | ೯೧೬೦ |
| ೨೬ | ತುಮಕೂರು | ೨೯ | ೧೦೯೨.೩೧ | ೫೭೭೪ |
| ೨೭ | ಉಡುಪಿ | ೯ | ೭೩೮೮.೫೮ | ೪೦೩೭ |
| ೨೮ | ಉತ್ತರ ಕನ್ನಡ | ೩ | ೨೨೨೧.೦೦ | ೨೮೫೨ |
| ೨೯ | ವಿಜಯಪುರ | ೯ | ೧೭೬೩.೬೫ | ೩೫೨೧ |
| ೩೦ | ಯಾದಗಿರಿ | ೧ | ೨೨೨.೪೬ | ೨೬೦ |
| | | ೭೮೧ | ೧೫೯೪೫೫.೩೭ | ೩೯೭೭೨೨ |

## ಸಾರ್ವಜನಿಕ ವಲಯದ ಕೈಗಾರಿಕಾ ಘಟಕಗಳು

ಭಾರತದ ಸ್ವಾತಂತ್ರ್ಯ ನಂತರ ಕೇಂದ್ರ ಸರ್ಕಾರ ಕೈಗಾರಿಕೆಗಳನ್ನು ಸ್ಥಾಪಿಸಲು ಬೆಂಗಳೂರನ್ನು ಆಯ್ಕೆಮಾಡಿಕೊಂಡಿತು. ಕೇಂದ್ರ ಸರ್ಕಾರ ರಾಜ್ಯದಲ್ಲಿ ಸ್ಥಾಪಿಸಿದ ಉದ್ಯಮಗಳಲ್ಲಿ ಪ್ರಮುಖವಾದವುಗಳು: ಭಾರತ್ ಅರ್ಥ್ ಮೂವರ್ಸ್ ಲಿ., (ಬಿ.ಇ.ಎಂ.ಎಲ್) ಜನವರಿ ೧, ೧೯೬೫ರಲ್ಲಿ ಬೆಂಗಳೂರಿನಲ್ಲಿ ಕಾರ್ಯಾರಂಭ ಮಾಡಿತು. ಇದು ಉತ್ತಮ ತಾಂತ್ರಿಕತೆಯನ್ನು ಹೊಂದಿರುವ ಸಾಗಾಣಿಕಾ ಯಂತ್ರಗಳ ತಯಾರಿಕಾ ಕಾರ್ಯದಲ್ಲಿ ತೊಡಗಿದೆ. ಭಾರತ್ ಎಲೆಕ್ಟ್ರಾನಿಕ್ ಲಿ., (ಬಿ.ಇ.ಎಲ್) ಸಂಸ್ಥೆಯು ೧೯೫೪ ರಲ್ಲಿ ೧೦ ಕೋಟಿ ರೂಪಾಯಿ ಬಂಡವಾಳ ಹೂಡಿಕೆಯೊಂದಿಗೆ ಬೆಂಗಳೂರಿನಲ್ಲಿ ಸ್ಥಾಪಿತವಾಯಿತು. ಇದು ರಕ್ಷಣಾ ಇಲಾಖೆ, ಆಲ್ ಇಂಡಿಯಾ ರೇಡಿಯೋ, ಮಿಟರಾಲಜಿ ಇಲಾಖೆ ಹಾಗೂ ಅಂಚೆ ಮತ್ತು ತಂತಿ ಇಲಾಖೆಗಳಿಗೆ ಬೇಕಾಗುವ ಎಲೆಕ್ಟ್ರಾನಿಕ್ ಹಾಗೂ ಸಂಪರ್ಕ ಸಾಧನಗಳನ್ನು ತಯಾರಿಸುತ್ತಿದೆ. ಬೆಂಗಳೂರು ಶಾಖೆಯು ತನಗೆ ಬೇಕಾಗುವ ಬಿಡಿ ಭಾಗಗಳನ್ನು ಸಿದ್ಧಪಡಿಸಿ ಸರಬರಾಜು ಮಾಡುವ ೧೯ ಸಹಾಯಕ ಘಟಕಗಳನ್ನು ಹೊಂದಿರುವುದು. ಭಾರತ್ ಹೆವಿ ಎಲೆಕ್ಟ್ರಿಕಲ್ ಲಿಮಿಟೆಡ್ (ಬಿ.ಹೆಚ್.ಇ.ಎಲ್) ೧೯೭೬ರಲ್ಲಿ ಬೆಂಗಳೂರಿನಲ್ಲಿ ಕಾರ್ಯಾರಂಭಗೊಂಡು ದೇಶದಲ್ಲಿಯೇ ಮೊದಲ ಬಾರಿಗೆ ಯಥಾರ್ಥವಾದ ಡಿಸ್ಟ್ರಿಬ್ಯೂಟೆಡ್ ಕಂಟ್ರೋಲ್ ಸಿಸ್ಟಮ್‌ಗಳ ಉತ್ಪಾದನಾ ಕಾರ್ಯದಲ್ಲಿ ತೊಡಗಿರುವುದು. ೧೯೫೩ ರಲ್ಲಿ ಹಿಂದೂಸ್ತಾನ್ ಮೆಷಿನ್ ಟೂಲ್ಸ್ ಲಿ., (ಹೆಚ್.ಎಂ.ಟಿ) ಬೆಂಗಳೂರಿನಲ್ಲಿ ಪ್ರಾರಂಭಗೊಂಡು ೧೯೮೭–೮೮ರಲ್ಲಿ ಸೋವಿಯತ್ ಯೂನಿಯನ್ (ರಷ್ಯಾ) ಮತ್ತು ಬಲ್ಗೇರಿಯಗಳೊಡನೆ ರೂ. ೨೪.೧೫ ಕೋಟಿ ಮೌಲ್ಯದ ಉತ್ಪಾದನಾ ವಸ್ತುಗಳನ್ನು ರಫ್ತು ಮಾಡುವ ಒಪ್ಪಂದ ಮಾಡಿಕೊಂಡಿತು. ಇದು ಆಲ್ಜೀರಿಯಾದ ಟೆಲಿಫೋನ್ ತಯಾರಿಕಾ ಘಟಕಕ್ಕೆ ತಾಂತ್ರಿಕ ನೆರವನ್ನೊದಗಿಸಲು ಒಪ್ಪಂದವನ್ನೂ ಸಹ ಮಾಡಿಕೊಂಡಿರುವುದು. ಇದು ಬೆಂಗಳೂರು ಹಾಗೂ ತುಮಕೂರುಗಳಲ್ಲಿ ಕೈಗಡಿಯಾರ ತಯಾರಿಕಾ ಘಟಕಗಳನ್ನು ಹೊಂದಿದೆ. ದೇಶ ಸ್ವಾತಂತ್ರ್ಯಗಳಿಸಿದ ಮೇಲೆ ಮೊಟ್ಟಮೊದಲು ಪ್ರಾರಂಭಿಸಲ್ಪಟ್ಟ ಸಾರ್ವಜನಿಕ ವಲಯದ ಕೈಗಾರಿಕೆಯಾದ ಇಂಡಿಯನ್ ಟೆಲಿಫೋನ್ ಇಂಡಸ್ಟ್ರೀಸ್ ಲಿ., (ಐಟಿಐ) ೧೯೪೮ ರಲ್ಲಿ ಬೆಂಗಳೂರಿನಲ್ಲಿ ಐದು ವಿಭಾಗಗಳೊಂದಿಗೆ ಪ್ರಾರಂಭಗೊಂಡಿತು. ಒಂದೊಂದು ವಿಭಾಗದಲ್ಲೂ ಒಂದೊಂದರಂತೆ ಸ್ಟ್ರೋಗರ್, ಕ್ರಾಸ್‌ಬಾರ್ ಟ್ರಾನ್ಸ್‌ಮಿಷನ್, ಟೆಲಿಫೋನ್‌ಗಳು ಮತ್ತು ರಕ್ಷಣಾ ಸಲಕರಣೆಗಳ ತಯಾರಿಕಾ ಕಾರ್ಯದಲ್ಲಿ ತೊಡಗಿದ್ದವು. ಇದು ಏಳನೆಯ ಪಂಚವಾರ್ಷಿಕ ಯೋಜನೆಯ ಅವಧಿಯಲ್ಲಿ ಇನ್ನೂ ಮೂರು ಎಲೆಕ್ಟ್ರಾನಿಕ್ ಸ್ವಿಚಿಂಗ್ ಘಟಕಗಳನ್ನು ಪ್ರಾರಂಭಿಸಿತು.

ಹಿಂದೂಸ್ತಾನ್ ಏರೋನಾಟಿಕ್ಸ್ ಲಿ., (ಎಚ್.ಎ.ಎಲ್) ಕಾರ್ಖಾನೆಯನ್ನು ಖ್ಯಾತ ಕೈಗಾರಿಕೋದ್ಯಮಿ ವಾಲ್‌ಚಂದ್ ಹಿರಾಚಂದ್ ಅವರು ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಸಹಭಾಗಿತ್ವದೊಂದಿಗೆ ೧೯೪೦ ರಲ್ಲಿ ಬೆಂಗಳೂರಿನಲ್ಲಿ ಸ್ಥಾಪಿಸಿದರು. ಅವರ ಮೂಲ ಉದ್ದೇಶ ಆಟೋ ಮೊಬೈಲ್ ಕಾರ್ಖಾನೆಯನ್ನು ಸ್ಥಾಪಿಸುವುದಾಗಿತ್ತು. ಆದರೆ, ಬ್ರಿಟನ್ನಿನ ಕಾರು ತಯಾರಕರು ತಂದ ಒತ್ತಡದ ಫಲವಾಗಿ ಈ ಉದ್ಯಮವನ್ನು ವಿಮಾನ ಜೋಡಣೆಯ ಘಟಕವನ್ನಾಗಿ ಪರಿವರ್ತಿಸಲಾಯಿತು. ಎರಡನೆಯ ಮಹಾಯುದ್ಧದ ಕಾಲದಲ್ಲಿ ವಿಮಾನಗಳ ರಿಪೇರಿ ಮತ್ತು ಓವರ್‌ಹಾಲ್ ಕಾರ್ಯವನ್ನು ಅದು ನಿರ್ವಹಿಸಿತು. ವಿಮಾನ ತಯಾರಿಕಾ ಘಟಕವು ಪ್ರಾರಂಭಗೊಂಡ ಆರು ತಿಂಗಳೊಳಗಾಗಿಯೇ ಮೊದಲ ಫೈಟರ್ ಜೆಟ್ ವಿಮಾನವನ್ನು ತಯಾರಿಸಿತು. ಯುದ್ಧ ನಡೆಯುತ್ತಿದ್ದ ಅವಧಿಯಲ್ಲಿ ಕಾರ್ಖಾನೆಯ ಕಾರ್ಮಿಕರ ಸಂಖ್ಯೆ ೧೬,೦೦೦ ಆಗಿತ್ತು. ಆನಂತರ ಅದನ್ನು ೩೦೦೦ಕ್ಕೆ ಇಳಿಸಲಾಯಿತು. ಹೆಚ್.ಎ.ಎಲ್.ನ ರೈಲ್ವೆ ಕೋಚ್ ವಿಭಾಗವು ೧೯೪೭ರಿಂದ ಕಾರ್ಯಾರಂಭಿಸಿತು. ೧೯೫೧ರಲ್ಲಿ ಕಾರ್ಖಾನೆಯ ಆಡಳಿತವನ್ನು ಕೈಗಾರಿಕೆ ಮತ್ತು ವಾಣಿಜ್ಯ ಸಚಿವ ಖಾತೆಯೂ, ಆನಂತರ ರಕ್ಷಣಾ ಸಚಿವ ಖಾತೆಯೂ ವಹಿಸಿಕೊಂಡಿತು.

ರಸ್ತೆ ಸಾರಿಗೆ ವಾಹನಗಳ ನಿರ್ಮಾಣದಲ್ಲಿ ಎಚ್.ಎ.ಎಲ್. ಗಮನಾರ್ಹ ಸೇವೆಯನ್ನು ಸಲ್ಲಿಸುತ್ತಿದೆ. ಸಾರಿಗೆ ಬಸ್ಸುಗಳ ಪ್ರಮಾಣಬದ್ಧ ರಚನೆಗೆ ಬೇಕಾದ ಸರಕುಗಳನ್ನು ಉತ್ಪಾದಿಸುವ ಏರೋ ಇಂಜಿನ್ ಇದರ ವಿಶೇಷತೆ. ೧೯೬೪ರಲ್ಲಿ ಇದರ ಎಲ್ಲಾ ಏರೋ ಇಂಜಿನ್ ಘಟಕಗಳನ್ನು ಒಂದುಗೂಡಿಸಿ ಹಿಂದೂಸ್ತಾನ್ ಏರೋನಾಟಿಕ್ಸ್ ಲಿ., ಎಂದು ನಾಮಕರಣ ಮಾಡಲಾಯಿತು. ಇದರ ರೈಲ್ ಕೋಚ್ ವಿಭಾಗವನ್ನು ಭಾರತ್ ಅರ್ಥ್ ಮೂವರ್ಸ್ ಲಿ., ಸಂಸ್ಥೆಗೆ ಮರು ವರ್ಗಾವಣೆ ಮಾಡಲಾಯಿತು. ವಿಮಾನಗಳು, ಅದರ ಎಂಜಿನ್‌ಗಳು, ಬಿಡಿ ಭಾಗಗಳ ರಿಪೇರಿ ಹಾಗೂ ಅವುಗಳ ಕಾರ್ಯದಕ್ಷತೆಯ ಕುರಿತ ಪರಿಶೀಲನೆಯ ವಿಷಯದಲ್ಲಿ ಈ ಸಂಸ್ಥೆಯು ಗ್ರಾಹಕರ ವಿಶ್ವಾಸ ಗಳಿಸುವಲ್ಲಿ ಯಶಸ್ವಿಯಾಗಿದ್ದು ಉಲ್ಲೇಖಾರ್ಹ.

ವೈವಿಧ್ಯದಲ್ಲಿ ಸಾಕಷ್ಟು ಉನ್ನತ ಪ್ರಗತಿ ಸಾಧಿಸಿರುವ ಹಿಂದೂಸ್ತಾನ್ ಏರೋನಾಟಿಕ್ಸ್ ಲಿಮಿಟೆಡ್ ದೇಶೀಯ ವಿನ್ಯಾಸದಿಂದಲೇ ಚಲಿಸುವ ಹಾಗೂ ಸ್ಥಿರವಾದ ರೆಕ್ಕೆಗಳ ವಿಮಾನವನ್ನು ತಯಾರಿಸಿರುವುದಲ್ಲದೆ, ಅವುಗಳ ಚಾಲನ ಶಕ್ತಿಯಾಗಿ ಜೆಟ್ ಹಾಗೂ ಪಿಸ್ಟನ್ ಬಳಸುವ ಎಂಜಿನ್‌ಗಳನ್ನೂ ಯಶಸ್ವಿಯಾಗಿ ಉತ್ಪಾದಿಸಿದೆ. ಮಿಂಚಿನದಾಳಿ, ಮುಖಾಮುಖಿ ಹಾಗೂ ಏರಿ ಬಂದ ಶತ್ರು ವಿಮಾನವನ್ನು ಅಡ್ಡಗಟ್ಟಬಲ್ಲ ಸಾಮರ್ಥ್ಯವುಳ್ಳ ಶಬ್ದವೇದಿ ಆಕಾಶ ನೌಕೆಗಳನ್ನು ತಯಾರಿಸುತ್ತಿದೆ. ಅಲ್ಲದೆ ವೀಕ್ಷಣೆ ಹಾಗೂ ಬೇಹುಗಾರಿಕೆ ಕಾರ್ಯಗಳಿಗೂ ಸಮರ್ಥವಾದ ವಿಶೇಷ ಸಾಧನ ಸಲಕರಣೆಗಳಿಂದ ಕೂಡಿದ ವಿಮಾನಗಳ ತಯಾರಿಕೆಯೂ ಅಲ್ಲಿ ನಡೆದಿದೆ. ನಾಗರಿಕರ ಅಗತ್ಯಗಳಾದ ಕೃಷಿ, ಸಾರಿಗೆ, ತರಬೇತಿ, ಸರಕು ಸಾಗಣೆಗಳ ವಿಮಾನ ತಯಾರಿಕೆಯ ಬಗೆಗೂ ಅದು ಗಮನ ನೀಡಿದೆ.

ರೈಲು ಅಚ್ಚು ಮತ್ತು ಗಾಲಿ ಕಾರ್ಖಾನೆಯು ಸೆಪ್ಟೆಂಬರ್ ೧೫, ೧೯೮೪ ರಲ್ಲಿ ರೂ. ೧೪೬ ಕೋಟಿ ಬಂಡವಾಳ ಹೂಡಿಕೆಯೊಂದಿಗೆ ಬೆಂಗಳೂರಿನ ಯಲಹಂಕದಲ್ಲಿ ಪ್ರಾರಂಭಿಸಲ್ಪಟ್ಟಿತು. ಇತ್ತೀಚಿನ ವಿನ್ಯಾಸ ಮತ್ತು ತಾಂತ್ರಿಕತೆಯಿಂದ ಕೂಡಿದ ಚಕ್ರಗಳನ್ನು ತಯಾರಿಸುವುದರಲ್ಲಿ ಕಾರ್ಖಾನೆಯು ಎಣೆಯಿಲ್ಲದ ಸಾಮರ್ಥ್ಯವನ್ನು ಹೊಂದಿರುವುದು. ಕಾರ್ಖಾನೆಯು ಪ್ರಾರಂಭಗೊಂಡ ಸಂದರ್ಭದಲ್ಲಿ ಇದರ ಉತ್ಪಾದನಾ ಸಾಮರ್ಥ್ಯ ೫೬,೭೦೦ ಗಾಲಿಗಳು ಮತ್ತು ೨೩,೦೦೦ ಅಚ್ಚುಗಳು. ೧೯೯೦ರಲ್ಲಿ ಜಾರಿಗೆ ಬಂದ ಉತ್ಪಾದನೆಗೆ ಹೊಂದಿಕೊಂಡ ಸೌಲಭ್ಯ ಯೋಜನೆಯಿಂದಾಗಿ ಸ್ಥಾವರದ

ಉತ್ಪಾದನಾ ಸಾಮರ್ಥ್ಯವನ್ನು ೬೭,೫೦೦ ಗಾಲಿಗಳು ಮತ್ತು ೩೫,೨೫೦ ಅಚ್ಚುಗಳು ಎಂದು ನಿಗದಿಪಡಿಸಲಾಯಿತು.

೧೯೯೧-೯೨ನೇ ಸಾಲಿನಲ್ಲಿ ೬೯,೮೮೭ ಗಾಲಿಗಳು ಮತ್ತು ४३,४२० ಅಚ್ಚುಗಳನ್ನು ಇಲ್ಲಿ ತಯಾರಿಸಲಾಯಿತು.

ಈ ಎಲ್ಲಾ ಕೈಗಾರಿಕೆಗಳ ಜೊತೆಗೆ ಮೈಸೂರಿನ ದಕ್ಷಿಣ ರೈಲ್ವೆ ಕಾರ್ಯಾಗಾರ ಹಾಗೂ ಹುಬ್ಬಳ್ಳಿಯ ರೈಲ್ವೆ ಕಾರ್ಯಾಗಾರಗಳೇ ಅಲ್ಲದೆ ಇನ್ನೂ ಅನೇಕ ಕೇಂದ್ರದ ಸಾರ್ವಜನಿಕ ವಲಯದ ಕೈಗಾರಿಕೆಗಳು ಗಮನಾರ್ಹವಾಗಿವೆ.

ಕರ್ನಾಟಕ ಸರ್ಕಾರವು ಅನೇಕ ಕೈಗಾರಿಕಾ ಉದ್ಯಮಗಳನ್ನು ನಡೆಸುತ್ತಿರುವುದು. ಅವುಗಳನ್ನು ಪ್ರಧಾನವಾಗಿ ಏಳು ವಿಭಾಗಗಳಾಗಿ ವಿಂಗಡಿಸಲಾಗಿದೆ. ಅವು ಯಾವುವೆಂದರೆ.

### ೧) ಸಾರ್ವಜನಿಕ ಉಪಯುಕ್ತ ಸಂಸ್ಥೆಗಳು

ಅ) ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

ಆ) ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ

ಇ) ಕರ್ನಾಟಕ ವಿದ್ಯುತ್ ನಿಗಮ

### ೨) ಹಣಕಾಸು ಸಂಸ್ಥೆಗಳು

ಅ) ಕರ್ನಾಟಕ ರಾಜ್ಯ ಹಣಕಾಸು ನಿಗಮ ನಿಯಮಿತ

ಆ) ಕರ್ನಾಟಕ ರಾಜ್ಯ ಕೈಗಾರಿಕಾ ಬಂಡವಾಳ ಮತ್ತು ಅಭಿವೃದ್ಧಿ ನಿಗಮ ನಿಯಮಿತ

### ೩) ಅಭಿವೃದ್ಧಿ ಸಂಸ್ಥೆಗಳು (ವಾಣಿಜ್ಯೇತರ)

ಅ) ಕರ್ನಾಟಕ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಅಭಿವೃದ್ಧಿ ನಿಗಮ ನಿಯಮಿತ

ಆ) ಕರ್ನಾಟಕ ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ ನಿಯಮಿತ

ಇ) ಕರ್ನಾಟಕ ರಾಜ್ಯ ಪೋಲೀಸ್ ಗೃಹ ನಿರ್ಮಾಣ (ಹೌಸಿಂಗ್) ನಿಗಮ ನಿಯಮಿತ

ಈ) ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮ ನಿಯಮಿತ

ಉ) ಕರ್ನಾಟಕ ರಾಜ್ಯ ಮಹಿಳೆಯರ ಅಭಿವೃದ್ಧಿ ನಿಗಮ

### ೪) ಅಭಿವೃದ್ಧಿ ಸಂಸ್ಥೆಗಳು (ವಾಣಿಜ್ಯ)

ಅ) ಕರ್ನಾಟಕ ರಾಜ್ಯ ಕರಕುಶಲ ಅಭಿವೃದ್ಧಿ ನಿಗಮ ನಿಯಮಿತ

ಆ) ಕರ್ನಾಟಕ ಆಗ್ರೋ ಇಂಡಸ್ಟ್ರೀಸ್ ನಿಗಮ ನಿಯಮಿತ

ಇ) ಕರ್ನಾಟಕ ಚಿತ್ರೋದ್ಯಮ ಅಭಿವೃದ್ಧಿ ನಿಗಮ ನಿಯಮಿತ

ಈ) ಕರ್ನಾಟಕ ಮೀನುಗಾರಿಕೆ ಅಭಿವೃದ್ಧಿ ನಿಗಮ ನಿಯಮಿತ

ಉ) ಕರ್ನಾಟಕ ಅರಣ್ಯಾಭಿವೃದ್ಧಿ ನಿಗಮ ನಿಯಮಿತ

ಊ) ಕರ್ನಾಟಕ ಕಾಂಪೋಸ್ಟ್ ಅಭಿವೃದ್ಧಿ ನಿಗಮ ನಿಯಮಿತ

ಋ) ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮ ನಿಯಮಿತ

ೠ) ಕರ್ನಾಟಕ ಚರ್ಮೋದ್ಯಮ ಅಭಿವೃದ್ಧಿ ನಿಗಮ ನಿಯಮಿತ

ಎ) ಕರ್ನಾಟಕ ರಾಜ್ಯ ಎಲೆಕ್ಟ್ರಾನಿಕ್ಸ್ ಅಭಿವೃದ್ಧಿ ನಿಗಮ ನಿಯಮಿತ

ಏ) ಕರ್ನಾಟಕ ಗೋಡಂಬಿ ಅಭಿವೃದ್ಧಿ ನಿಗಮ ನಿಯಮಿತ

ಐ) ಕರ್ನಾಟಕ ಒಳನಾಡಿನ ಮೀನುಗಾರಿಕೆ ಅಭಿವೃದ್ಧಿ ನಿಗಮ ನಿಯಮಿತ

ಒ) ಕರ್ನಾಟಕ ರಾಜ್ಯ ನಾರು ಅಭಿವೃದ್ಧಿ ನಿಗಮ ನಿಯಮಿತ

ಓ) ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ

ಔ) ಕರ್ನಾಟಕ ರಾಜ್ಯ ಕೈಗಾರಿಕಾ ಬಂಡವಾಳ ಹೂಡಿಕೆ ಮತ್ತು ಅಭಿವೃದ್ಧಿ ನಿಗಮ

### ೫) ಸೇವಾ ಸಂಸ್ಥೆಗಳು

ಅ) ಕರ್ನಾಟಕ ಗೃಹ ಮಂಡಳಿ

ಆ) ಕರ್ನಾಟಕ ರಾಜ್ಯ ಉಗ್ರಾಣ ನಿಗಮ

ಇ) ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕಾಭಿವೃದ್ಧಿ ನಿಗಮ ನಿಯಮಿತ

ಈ) ಶ್ರೀ ಕಂಠೀರವ ಸ್ಟೂಡಿಯೋಸ್ ನಿಯಮಿತ

ಉ) ಕರ್ನಾಟಕ ರಾಜ್ಯ ನಿರ್ಮಾಣ ನಿಗಮ ನಿಯಮಿತ

ಊ) ಕರ್ನಾಟಕ ನಗರ ಪ್ರದೇಶಾಭಿವೃದ್ಧಿ ನಿಗಮ ನಿಯಮಿತ

ಋ) ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮ ನಿಯಮಿತ

ೠ) ಕರ್ನಾಟಕ ರಾಜ್ಯ ಆಹಾರ ಮತ್ತು ನಾಗರೀಕ ಸರಬರಾಜು ನಿಗಮ ನಿಯಮಿತ

ಎ) ಕರ್ನಾಟಕ ಭೂಸೈನ್ಯ ನಿಗಮ ನಿಯಮಿತ

ಏ) ಅರಣ್ಯ ವಸತಿ ಗೃಹಗಳು ಮತ್ತು ರೆಸಾರ್ಟ್ಸ್ ನಿಯಮಿತ

ಐ) ಡಿ. ದೇವರಾಜ್ ಅರಸ್ ಟ್ರಕ್ ಟರ್ಮಿನಲ್ಸ್ ನಿಯಮಿತ

ಒ) ಕೃಷ್ಣಾ ಕಣಿವೆ (ಬೇಸಿನ್) ಏತ ನೀರಾವರಿ ನಿಗಮ ನಿಯಮಿತ

ಓ) ಕಾವೇರಿ ಕಣಿವೆ (ಬೇಸಿನ್) ಏತ ನೀರಾವರಿ ನಿಗಮ ನಿಯಮಿತ

### ೬) ತಯಾರಿಕಾ ಸಂಸ್ಥೆಗಳು

ಅ) ಮೈಸೂರು ಸಕ್ಕರೆ ಕಂಪೆನಿ (ಮೈಸೂರ್ ಶುಗರ್ ಕಂಪೆನಿ) ನಿಯಮಿತ

ಆ) ಮೈಸೂರು ಕಾಗದದ ಕಾರ್ಖಾನೆ ನಿಯಮಿತ

ಇ) ಮೈಸೂರ್ ಲ್ಯಾಂಪ್ ವರ್ಕ್ಸ್ ನಿಯಮಿತ

ಈ) ಮೈಸೂರು ಟೊಬಾಕೋ ಕಂಪೆನಿ ನಿಯಮಿತ

ಉ) ಮೈಸೂರು ಪೈಂಟ್ಸ್ ಅಂಡ್ ವಾರ್ನಿಸಸ್ ಕಂಪೆನಿ ನಿಯಮಿತ

ಊ) ಮೈಸೂರು ಚೆಂಕಿಪೊಟ್ಟಣ ಕಂಪೆನಿ ನಿಯಮಿತ

ಋ) ಮೈಸೂರು ಕ್ರೋಮ್ ಟ್ಯಾನಿಂಗ್ ಕಂಪೆನಿ ನಿಯಮಿತ

ೠ) ಮೈಸೂರು ಎಲೆಕ್ಟ್ರಿಕಲ್ ಇಂಡಸ್ಟ್ರೀಸ್ ನಿಯಮಿತ

ಎ) ಹಟ್ಟಿ ಚಿನ್ನದ ಗಣಿ ಕಂಪೆನಿ ನಿಯಮಿತ
ಏ) ಕರ್ನಾಟಕ ನೂತನ ಸರ್ಕಾರಿ ವಿದ್ಯುತ್ ಕಾರ್ಖಾನೆ ನಿಯಮಿತ
ಐ) ಮೈಸೂರು ಅಸಿಟೇಟ್ ಮತ್ತು ಕೆಮಿಕಲ್ ಕಂಪೆನಿ ನಿಯಮಿತ
ಒ) ಮೈಸೂರ್ ಮಿನರಲ್ಸ್ ನಿಯಮಿತ
ಓ) ಮೈಸೂರ್ ಕಾಸ್ಮೆಟಿಕ್ಸ್ ನಿಯಮಿತ
ಔ) ಕರ್ನಾಟಕ ರಾಜ್ಯ ಆಗ್ರೋ ಕಾರನ್ ಪ್ರಾಡಕ್ಟ್ಸ್ ನಿಯಮಿತ
ಅಂ) ಕರ್ನಾಟಕ ರಾಜ್ಯ ಅರಣ್ಯ ಉದ್ಯಮಗಳ ನಿಗಮ ನಿಯಮಿತ
ಅಃ) ಕರ್ನಾಟಕ ರಾಜ್ಯ ಮರದ ತೆಳು ಹೊದಿಕೆ (ವೆನೀರ್ಸ್) ನಿಯಮಿತ
ಕ) ಚಾಮುಂಡಿ ಮೆಷಿನ್ ಟೂಲ್ಸ್ ನಿಯಮಿತ
ಖ) ಕರ್ನಾಟಕ ಇಂಪ್ಲಿಮೆಂಟ್ಸ್ ಅಂಡ್ ಮೆಷಿನ್ಸ್ ಕಂಪನಿ ನಿಯಮಿತ
ಗ) ಕರ್ನಾಟಕ ಆಗ್ರೋ ಪ್ರೋಟಿನ್ಸ್ ನಿಯಮಿತ
ಘ) ಕರ್ನಾಟಕ ವಿದ್ಯುತ್ ಕಾರ್ಖಾನೆ ನಿಯಮಿತ
ಙ) ಕರ್ನಾಟಕ ರೇಷ್ಮೆ ಕೈಗಾರಿಕೆಗಳ ನಿಗಮ ನಿಯಮಿತ
ಚ) ಕರ್ನಾಟಕ ಸೋಪ್ಸ್ ಅಂಡ್ ಡಿಟರ್‌ಜೆಂಟ್ಸ್ ನಿಯಮಿತ
ಛ) ಕರ್ನಾಟಕ ಹಾಲು ಉತ್ಪಾದನೆ ನಿಯಮಿತ
ಜ) ಕರ್ನಾಟಕ ಹಾಲು ಉತ್ಪಾದಕರ ಸಹಕಾರ ಮಹಾಮಂಡಳ ನಿಯಮಿತ
ಝ) ಕರ್ನಾಟಕ ರಾಜ್ಯ ಟೆಕ್ಸ್‌ಟೈಲ್ಸ್ ನಿಯಮಿತ
ಞ) ಕರ್ನಾಟಕ ಟೆಲಿಕಾಂ ನಿಯಮಿತ
ಟ) ಕರ್ನಾಟಕ ಪ್ಲೈವುಡ್ ನಿಯಮಿತ
ಠ) ಕರ್ನಾಟಕ ಟಂಗ್‌ಸ್ಟೆನ್ ಮೋಲಿ ನಿಯಮಿತ
ಡ) ನೂತನ ಸರ್ಕಾರಿ ವಿದ್ಯುತ್ ಕಾರ್ಖಾನೆ (ಹುಬ್ಬಳ್ಳಿ) ನಿಯಮಿತ

### ೨) ಮಾರುಕಟ್ಟೆ ಮತ್ತು ಜಾಹಿರಾತು ಸಂಸ್ಥೆಗಳು

ಅ) ಮೈಸೂರ್ ಸೇಲ್ಸ್ ಇಂಟರ್ ನ್ಯಾಷನಲ್ ನಿಯಮಿತ
ಆ) ಮಾರ್ಕೆಟಿಂಗ್ ಕನ್ಸಲ್‌ಟೆಂಟ್ಸ್ ಅಂಡ್ ಏಜೆನ್ಸಿಸ್ ನಿಯಮಿತ
ಇ) ಕರ್ನಾಟಕ ರಾಜ್ಯ ಬೀಜ ನಿಗಮ ನಿಯಮಿತ
ಈ) ಕರ್ನಾಟಕ ಮಾಂಸ ಮತ್ತು ಕೋಳಿ ಮಾರುಕಟ್ಟೆ ನಿಗಮ ನಿಯಮಿತ
ಉ) ಕರ್ನಾಟಕ ರೇಷ್ಮೆ ಮಾರುಕಟ್ಟೆ ಮಂಡಳಿ ನಿಯಮಿತ
ಊ) ಕರ್ನಾಟಕ ಸಣ್ಣ ಕೈಗಾರಿಕೆಗಳ ಮಾರುಕಟ್ಟೆ ನಿಗಮ ನಿಯಮಿತ

### ರಾಜ್ಯ ಸರ್ಕಾರದ ಕೈಗಾರಿಕೆಗಳು

ಎರಡನೆಯ ಮಹಾಯುದ್ಧಾನಂತರ ರಾಜ್ಯಸರ್ಕಾರ ಪ್ರಾರಂಭಿಸಿದ ಕೈಗಾರಿಕೆಗಳಲ್ಲಿ ರೆಂಕೋ ಗಮನಾರ್ಹವಾದುದು. ರೇಡಿಯೋ ಮತ್ತು ಅದರ ಬಿಡಿ ಭಾಗಗಳು, ವಿದ್ಯುಚ್ಛಕ್ತಿ ಮತ್ತು ವಾಟರ್ ಮೀಟರ್‌ಗಳು, ಪಿ.ವಿ.ಸಿ. ತಂತಿಗಳು ಮತ್ತು ಕೇಬಲ್‌ಗಳನ್ನು ತಯಾರಿಸಲು ರಾಜ್ಯ ಸರ್ಕಾರ ೧೯೪೬ರಲ್ಲಿ ರೇಡಿಯೋ ಮತ್ತು ಎಲೆಕ್ಟ್ರಿಕಲ್ ತಯಾರಿಕಾ ಕಂಪೆನಿ (ನಿಯಮಿತ) (ರೆಂಕೋ) ಯನ್ನು ಬೆಂಗಳೂರಿನಲ್ಲಿ ಪ್ರಾರಂಭಿಸಿತು. ಇದು ರೇಡಿಯೋ ವಿಭಾಗ, ಪ್ಲಾಸ್ಟಿಕ್ ವಿಭಾಗ ಮತ್ತು ಲೋಹ ವಿಭಾಗ ಎಂಬ ಮೂರು ವಿಭಾಗಗಳನ್ನು ಹೊಂದಿದೆ. ಇದರ ರೇಡಿಯೋ ವಿಭಾಗಕ್ಕೆ ತೊಡಗಿಸಲಾಗಿರುವ ಬಂಡವಾಳ ರೂ.೨೫ ಲಕ್ಷವಿದ್ದು, ಇದರಲ್ಲಿ ರಾಜ್ಯ ಸರ್ಕಾರದ ಪಾಲುದಾರಿಕೆ ಪ್ರತಿಶತ ೬೦ರಷ್ಟಿತ್ತು. ಉಳಿದ ಎರಡು ವಿಭಾಗಗಳೂ ಸಂಪೂರ್ಣವಾಗಿ ರಾಜ್ಯ ಸರ್ಕಾರದ ಸ್ವಾಮ್ಯಕ್ಕೊಳಪಟ್ಟಿವೆ. ದೇಶೀಯ ಮತ್ತು ಸಾಮೂಹಿಕ ಒಡೆತನದ ರೇಡಿಯೋ ಗ್ರಾಹಕಗಳು ಮತ್ತು ಅವುಗಳ ಬಿಡಿ ಭಾಗಗಳನ್ನು ರೇಡಿಯೋ ವಿಭಾಗದಲ್ಲಿ ತಯಾರಿಸಲಾಗುತ್ತದೆ. ಇದರ ಕಾರ್ಯ ಕ್ಷೇತ್ರವನ್ನು ಪ್ಲಾಸ್ಟಿಕ್ ಇನ್ಸುಲೇಟೆಡ್ (ಪ್ರತ್ಯೇಕ) ತಂತಿಗಳು ಮತ್ತು ಕೇಬಲ್‌ಗಳ ತಯಾರಿಕೆಗಳಿಗೆ ವಿಸ್ತರಿಸಲಾಗಿದೆ. ಇದು ಭಾರತದ ಹೆವಿ ಇಲೆಕ್ಟ್ರಿಕಲ್‌ನ ಸಹಾಯಕ ಘಟಕವಾಗಿ ಮುಂದುವರಿದು ತದನಂತರ ಅದು ಈಗ ಬಿ.ಎಚ್.ಇ.ಎಲ್ ಸಂಪೂರ್ಣ ಸ್ವಾಮ್ಯದಲ್ಲಿದೆ.

### ಕರ್ನಾಟಕ ರಾಜ್ಯ ಅರಣ್ಯ ಉದ್ಯಮಗಳ ನಿಗಮ

ಇದನ್ನು ರಾಜ್ಯಸರ್ಕಾರ ೧೯೭೩ರಲ್ಲಿ ರೂ. ೨೦೦ ಲಕ್ಷಗಳ ಸಮಭಾಗಿತ್ವದ ಷೇರು ಬಂಡವಾಳದೊಡನೆ ಸ್ಥಾಪಿಸಿತು. ಅವಶ್ಯಕ ತೈಲಗಳನ್ನು ಭಟ್ಟಿ ಇಳಿಸಿ ತೆಗೆಯುವುದು, ಅನಾನಸ್ ಕೃಷಿ ಮಾಡುವುದು, ಪೌಷ್ಟಿಕಾಂಶವುಳ್ಳ ಹುಲ್ಲಿನ ಕೃಷಿ ಮಾಡುವುದು, ಪೌಷ್ಟಿಕಾಂಶವುಳ್ಳ ಹುಲ್ಲಿನ ತೇವಾಂಶವನ್ನು ತೆಗೆದು ಸಣ್ಣ ಕಟ್ಟುಗಳನ್ನು ಮಾಡುವುದು ಮತ್ತು ಮರ ಕೊಯ್ಯುವ ಮಿಲ್ಲುಗಳನ್ನು ನಡೆಸುವುದು ಮೊದಲಾದ ಯೋಜನೆಗಳನ್ನು ಈ ನಿಗಮವು ಕೈಗೆತ್ತಿಕೊಂಡಿರುವುದು. ಮರದ ಅಲಂಕಾರಿಕ ತೆಳು ಹೊದಿಕೆ (ವೆನೀರ್) ತಯಾರಿಕಾ ಕಾರ್ಖಾನೆಯನ್ನು ದಾಂಡೇಲಿಯಲ್ಲಿನ ಇಟಾಲಿಯನ್ ಪ್ಲೈವುಡ್ ಮ್ಯಾನುಫ್ಯಾಕ್ಚರಿಂಗ್ ಕಂಪೆನಿಯ ಸಹಯೋಗದೊಂದಿಗೆ ೧೯೭೪ ರಲ್ಲಿ ಉತ್ತರ ಕನ್ನಡ ಜಿಲ್ಲೆಯ ಸಿದ್ದಾಪುರ ತಾಲೂಕಿನ ಕವಚೂರಿನಲ್ಲಿ ಸ್ಥಾಪಿಸಲಾಗಿದೆ. ಇದು ವಿವಿಧ ಬಗೆಯ ಬಣ್ಣದ ಆಕರ್ಷಣೀಯ ಮರದ ತೆಳು ಹೊದಿಕೆಗಳನ್ನು ಉತ್ಪಾದಿಸುತ್ತಿದೆ. ವೆಸ್ಟ್ ಇಂಡಿಯಾ ಮ್ಯಾಚಸ್ ಕಂಪೆನಿಯೊಂದಿಗೆ ಒಪ್ಪಂದ ಮಾಡಿಕೊಳ್ಳುವ ಮೂಲಕ ಶಿವಮೊಗ್ಗದ ಸಮೀಪವಿದ್ದ ಮೈಸೂರು ಬೆಂಕಿಪೊಟ್ಟಣ ಕಾರ್ಖಾನೆಯನ್ನು ಪುನಃ ಆರಂಭಿಸಲಾಗಿದೆ. ಉತ್ತರ ಕನ್ನಡ ಜಿಲ್ಲೆಯಲ್ಲಿ ಮರಕೊಯ್ಯುವ ಎರಡು ಘಟಕಗಳನ್ನು ಪ್ರಾರಂಭಿಸಿರುವುದರಿಂದ ಮರಕೊಯ್ಯುವ ಉದ್ಯಮ ವಿಸ್ತಾರಗೊಂಡಿರುವುದು.

### ಕರ್ನಾಟಕ ಚರ್ಮೋದ್ಯಮ ಅಭಿವೃದ್ಧಿ ನಿಗಮ ನಿಯಮಿತ

ಇದನ್ನು ೧೯೭೬ರ ಅಕ್ಟೋಬರ್ ತಿಂಗಳಲ್ಲಿ ಬೆಂಗಳೂರಿನಲ್ಲಿ ಸ್ಥಾಪಿಸಲಾಯಿತು. ಚರ್ಮೋದ್ಯಮಗಳಿಗೆ ಮೂಲಭೂತ ಸೌಲಭ್ಯ ಒದಗಿಸುವ ಕೇಂದ್ರಗಳ ಸ್ಥಾಪನೆ, ಕಚ್ಚಾ ಸರಕುಗಳ ಶೇಖರಣಾ ಡಿಪೋಗಳ ಸ್ಥಾಪನೆ, ವಿವಿಧ ಚರ್ಮೋದ್ಯೋಗಿಗಳಿಗೆ ಹಣಕಾಸು

ಸಹಾಯ, ಚರ್ಮ ಹದ ಮಾಡುವವರು, ಸಿದ್ಧಪಡಿಸುವವರು ಮತ್ತು ಚರ್ಮದ ಸಿದ್ಧವಸ್ತುಗಳ ತಯಾರಿಸುವವರಿಗಾಗಿ ಸಂಯುಕ್ತ ಕ್ಷೇತ್ರದ ಉದ್ಯಮಗಳನ್ನು ಸ್ಥಾಪಿಸುವುದು ಇದರ ಸ್ಥಾಪನೆಯ ಪ್ರಾಥಮಿಕ ಉದ್ದೇಶವಾಗಿರುವುದು. ೨೦೦೯-೧೦ರಲ್ಲಿ ಈ ನಿಗಮದ ಹೆಸರನ್ನು ಡಾ.ಬಾಬು ಜಗಜೀವನ ರಾಂ ಚರ್ಮ ಕೈಗಾರಿಕಾ ಅಭಿವೃದ್ಧಿ ನಿಗಮ ನಿಯಮಿತ ಎಂದು ಮರು ನಾಮಕರಣ ಮಾಡಲಾಗಿದೆ. ಈ ನಿಗಮವು ೨೫,೦೦೦ಕ್ಕೂ ಮಿಗಿಲಾಗಿ ಚರ್ಮ ಕುಶಲ ಕರ್ಮಿಗಳಿಗೆ ವಸತಿ ಕಾರ್ಯಾಗಾರಗಳು ಹಾಗೂ ಸಾಮಾನ್ಯ ಸೌಲಭ್ಯ ಕೇಂದ್ರಗಳನ್ನು ನಿರ್ಮಿಸುವುದರೊಂದಿಗೆ ತರಬೇತಿ ಕಾರ್ಯಕ್ರಮ ಹಾಗು ವೇ ಸೈಡ್ ಕ್ಯಾಬಿನ್‌ಗಳ ವಿತರಣೆ ಮೂಲಕ ಸಹಾಯ ಕಲ್ಪಿಸಿದೆ. ರಾಜ್ಯದ ೨೧ ಕೇಂದ್ರಗಳಲ್ಲಿ ೬೦೦ ಚರ್ಮ ಕುಶಲಕರ್ಮಿ ಕುಟುಂಬಗಳನ್ನು ಗುರುತಿಸಿದ್ದು, ಅವರಲ್ಲಿ ೪೦೦ ಕುಟುಂಬಗಳಿಗೆ ರೂ. ೧೩೦ ಲಕ್ಷಗಳಷ್ಟು ಚರ್ಮದ ಉತ್ಪನ್ನಗಳನ್ನು ಖರೀದಿಸಲು ಆದೇಶ ನೀಡಲಾಗಿದೆ. ಇವರಲ್ಲಿ ೨೦೯ ಕುಶಲ ಕರ್ಮಿಗಳು ನಿಗಮದ ಜೊತೆ ಒಡಂಬಡಿಕೆ ಮಾಡಿಕೊಂಡಿದ್ದು, ರೂ.೪೦ ಲಕ್ಷಗಳ ಬೆಲೆಯ ಉತ್ಪನ್ನಗಳನ್ನು ಸಂಗ್ರಹಿಸಿ ಎಲ್ಲಾ ಮಾರಾಟ ಮಳಿಗೆಗಳಿಗೆ ವಿತರಿಸಲಾಗಿದೆ.

### ಕರ್ನಾಟಕ ಚರ್ಮ ಕೈಗಾರಿಕಾ ಅಭಿವೃದ್ಧಿ ನಿಗಮ ನಿಯಮಿತ

ಕರ್ನಾಟಕದಲ್ಲಿನ ಚರ್ಮೋದ್ಯಮದ ಬೆಳವಣಿಗೆ ಹಾಗೂ ಪರಿಶಿಷ್ಟ ಜಾತಿಗೆ ಸೇರಿದ ಚರ್ಮ ಕುಶಲ ಕರ್ಮಿಗಳ ಶ್ರೇಯೋಭಿವೃದ್ಧಿಯ ಉದ್ದೇಶಗಳೊಂದಿಗೆ ಈ ನಿಗಮವು ೧೯೭೬ರಲ್ಲಿ ಕರ್ನಾಟಕ ಸರ್ಕಾರದ ಒಂದು ಉದ್ಯಮವಾಗಿ ಸ್ಥಾಪಿಸಲ್ಪಟ್ಟಿತು. ೨೦೦೯-೧೦ನೇ ಸಾಲಿನಲ್ಲಿ ನಿಗಮದ ಹೆಸರನ್ನು ಡಾ॥ಬಾಬು ಜಗಜೀವನ ರಾಂ ಚರ್ಮ ಕೈಗಾರಿಕಾ ಅಭಿವೃದ್ಧಿ ನಿಗಮ ನಿಯಮಿತ ಎಂದು ಮರುನಾಮಕರಣ ಮಾಡಲಾಯಿತು.

ಈ ನಿಗಮವು ಸುಮಾರು ೪೦,೦೦೦ ಜನ ಕುಶಲಕರ್ಮಿಗಳಿಗೆ ಹಲವು ಯೋಜನೆಗಳ ಮೂಲಕ ಅನುಕೂಲತೆ ಒದಗಿಸಿದೆ. ವಾಣಿಜ್ಯ ಚಟುವಟಿಕೆಗಳಡಿ ಸುಮಾರು ೧,೨೦೦ ಕುಶಲಕರ್ಮಿಗಳು ಮತ್ತು ೧೦೦ಕ್ಕಿಂತ ಅಧಿಕ ಸಣ್ಣ ಪ್ರಮಾಣದ ಘಟಕಗಳು ತಯಾರಿಸಿದೆ.

೧. ಚರ್ಮೋತ್ಪನ್ನಗಳಿಗೆ ರಾಜ್ಯಾದ್ಯಂತ ಇರುವ ೨೪ ಮಾರಾಟ ಮಳಿಗೆಗಳ ಮೂಲಕ ಮಾರುಕಟ್ಟೆ ಸೌಲಭ್ಯ ಒದಗಿಸಿದೆ.

೨. ರಾಜ್ಯದ ಒಳಗೆ ಮತ್ತು ಹೊರಗಿನ ಪ್ರಮುಖ ಸ್ಥಳಗಳಲ್ಲಿ ವಸ್ತು ಪ್ರದರ್ಶನ ಹಾಗೂ ಮಾರಾಟ ವ್ಯವಸ್ಥೆಯನ್ನು ಒದಗಿಸುತ್ತದೆ.

೩. ಸರ್ಕಾರಿ ಇಲಾಖೆಗಳು / ಸಂಸ್ಥೆಗಳು ಹಾಗೂ ಖಾಸಗಿ ಸಂಸ್ಥೆಗಳಿಗೆ ಅಗತ್ಯವಿರುವ ಚರ್ಮೋತ್ಪನ್ನಗಳನ್ನು ಪೂರೈಸುವುದು ಹಾಗೂ

೪. ರಾಷ್ಟ್ರೀಯ, ಅಂತರರಾಷ್ಟ್ರೀಯ ಮೇಳಗಳಲ್ಲೂ ಪಾಲ್ಗೊಂಡು ಮಾರಾಟ ಮಾಡುವುದು, ಮೊದಲಾದ ಸೌಲಭ್ಯಗಳನ್ನು ಒದಗಿಸುತ್ತದೆ.

ರಾಜ್ಯದ ೩೦ ಜಿಲ್ಲೆಗಳಲ್ಲಿ ೨೦೦೮-೨೦೦೯ರ ಮಾರ್ಚಿ ಅಂತ್ಯಕ್ಕೆ ಸುಮಾರು ೪೫,೮೬೧ ಚರ್ಮ ಕುಶಲ ಕರ್ಮಿಗಳಿದ್ದು, ೧೨,೯೨೯ ಘಟಕಗಳಲ್ಲಿ ದುಡಿಯುತ್ತಿದ್ದಾರೆ.

ಇದಲ್ಲದೆ ಕರ್ನಾಟಕ ರಾಜ್ಯದ ಎಲ್ಲಾ ತಾಲ್ಲೂಕು ಕೇಂದ್ರಗಳಲ್ಲಿ ಕನಿಷ್ಠ ಪಕ್ಷ ೬೦ ಫಲಾನುಭವಿಗಳಿಗೆ ಶೂ/ಪಾದರಕ್ಷೆ/ಲೆದರ್ ಗೂಡ್ಸ್‌ನ ತಯಾರಿಕೆಯಲ್ಲಿ ಅಂದಾಜು ೨೫,೦೦೦ ಫಲಾನುಭವಿಗಳಿಗೆ ತರಬೇತಿ ನೀಡಲು ಉದ್ದೇಶಿಸಿದೆ. ರಾಜ್ಯದಲ್ಲಿ ೫,೦೦೦ ರಸ್ತೆ ಬದಿ ನವೀನ ಮಾದರಿಯ ಮಳಿಗೆಗಳನ್ನು ತೆರೆಯಲಾಗಿದ್ದು, ಇದರಿಂದ ಸುಮಾರು ೧೦,೦೦೦ ಕುಶಲಕರ್ಮಿಗಳಿಗೆ ಮುಂದಿನ ಜೀವನ ನಡೆಸಲು ಅನುಕೂಲ ಮಾಡಿ ಕೊಡಲಾಗುತ್ತಿದೆ. ತರಬೇತಿ ನೀಡಿದ ನಂತರ ಫಲಾನುಭವಿಗಳು ಸ್ವಾವಲಂಬಿಗಳಾಗಿ ಬದುಕಲು ಉದ್ಯೋಗ ಒದಗಿಸಿ ಕೊಡುವ ಯೋಜನೆಯನ್ನು ರೂಪಿಸಿದೆ. ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಲಿಡ್‌ಕರ್ ನಿಗಮದ ಮಾರಾಟ ಮಳಿಗೆಗಳನ್ನು ಹಾಗೂ ನವದೆಹಲಿಯಲ್ಲಿ ಒಂದು ಮಳಿಗೆಯನ್ನು ತೆರೆಯಲು ಉದ್ದೇಶಿಸಿದೆ. ನಾಲ್ಕು ವಿಭಾಗಗಳಲ್ಲಿ ಚರ್ಮ ಹದ ಮಾಡುವ ಕೇಂದ್ರಗಳನ್ನು ತೆರೆಯಲು ಉದ್ದೇಶಿಸಿದೆ. ಮಾರುಕಟ್ಟೆಯಲ್ಲಿ ಪೈಪೋಟಿ ಮಾಡಲು ಮಾಡ್ರನ್ ಟೆಕ್ನಾಲಾಜಿಯುಳ್ಳ ಯಂತ್ರೋಪಕರಣಗಳನ್ನು ಅಳವಡಿಸಿ ಹೊಸಹೊಸ ವಿನ್ಯಾಸವುಳ್ಳ ಪಾದರಕ್ಷೆ/ಶೂ ಮತ್ತು ಲೆದರ್ ಗೂಡ್ಸ್‌ಗಳನ್ನು ತಯಾರಿಸಿ ನಿಗಮದ ಮಾರಾಟ ಮಳಿಗೆಗಳಲ್ಲಿ ಮಾರಾಟ ಮಾಡಲು ಕ್ರಮ ತೆಗೆದುಕೊಳ್ಳಲಾಗುವುದು. ನಿಗಮದಲ್ಲಿ ಲಭ್ಯವಿರುವ ಖಾಲಿ ಜಮೀನುಗಳಲ್ಲಿ ಅರ್ಹ/ಅನುವಂಶೀಯ ಕುಟುಂಬಗಳಿಗೆ ನಿವೇಶನ/ವಸತಿ ಕಾರ್ಯಾಗಾರಗಳನ್ನು ಹಂಚಿಕೆ ಮಾಡಲಾಗುವುದು.

### ಕರ್ನಾಟಕ ವಿದ್ಯುತ್ ಕಾರ್ಖಾನೆ ನಿಯಮಿತ

ಇದು ೧೯೭೬ರಲ್ಲಿ ರೂ.೨೦೦ ಲಕ್ಷಗಳ ಅಧಿಕೃತ ಷೇರು ಬಂಡವಾಳದೊಂದಿಗೆ ಬೆಂಗಳೂರಿನಲ್ಲಿ ನೋಂದಣಿ ಗೊಂಡಿತು. ವಿದ್ಯುತ್ ಕಾಮಗಾರಿಗೆ ಬೇಕಾಗುವ ಎಲ್ಲಾ ರೀತಿಯ ಉಪಕರಣಗಳು, ವಿದ್ಯುತ್ ಯಂತ್ರಗಳು ಮತ್ತು ವಿದ್ಯುತ್ ಉತ್ಪಾದನೆ, ಸಾಗಣೆ ಮತ್ತು ವಿತರಣೆಗೆ ಬೇಕಾಗುವ ಸಾಧನಗಳು, ವಿದ್ಯುತ್ ಬಳಕೆಗೆ ಬೇಕಾಗುವ ಉಪಕರಣಗಳು, ಎಲ್ಲಾ ವಿದಧ ಟ್ರಾನ್ಸ್‌ಫಾರ್ಮರ್‌ಗಳು, ರೆಕ್ಟಿಫೈಯರ್ಸ್, ಜನರೇಟರ್ಸ್ ಮೊದಲಾದವುಗಳನ್ನು ತಯಾರಿಸುವ ಉದ್ದೇಶದಿಂದ ಈ ಕಾರ್ಖಾನೆಯನ್ನು ಸ್ಥಾಪಿಸಲಾಗಿದೆ.

### ತುಂಗಭದ್ರಾ ಉಕ್ಕು ಉತ್ಪಾದನೆ ನಿಯಮಿತ

ಆರಂಭದಲ್ಲಿ ತುಂಗಭದ್ರಾ ಅಣೆಕಟ್ಟಿನ ಯಂತ್ರ ವಿನ್ಯಾಸ ವಿಭಾಗವಾಗಿ ಕಾರ್ಯ ನಿರ್ವಹಿಸುತ್ತಿದ್ದ ಇದನ್ನು ೧೯೫೨ರಲ್ಲಿ ಹೊಸಪೇಟೆ ಸಮೀಪ ಸ್ಥಾಪಿಸಲಾಯಿತು. ಇದು ಗೇಟುಗಳು, ಹಾಯಿಸ್ಟ್‌ಗಳು ಮತ್ತು ಪೆನ್‌ಸ್ಟಾಕ್‌ಗಳನ್ನು ತಯಾರಿಸುವ ಷಟರ್ ತಯಾರಿಕಾ ಕಾರ್ಖಾನೆಯಾಗಿ ಪರಿವರ್ತನೆಗೊಂಡಿತು. ಇದು ಆಂಧ್ರಪ್ರದೇಶ ಸರ್ಕಾರದ ಸಹಭಾಗಿತ್ವದೊಂದಿಗೆ ಪ್ರಾರಂಭಿಸಲ್ಪಟ್ಟಿರುವ ಏಕೈಕ ಕೈಗಾರಿಕಾ ಘಟಕವಾಗಿರುವುದು.

### ಹೊಸ ಸರ್ಕಾರಿ ವಿದ್ಯುತ್ ಕಾರ್ಖಾನೆ (ಎನ್‌ಜಿಇಎಫ್)

ಇದನ್ನು ೧೯೬೧ರಲ್ಲಿ ಪಶ್ಚಿಮ ಜರ್ಮನಿಯ ಎ.ಇ.ಜಿ. ಟೆಲಿಫಂಕ್ಷನ್ ಸಹಭಾಗಿತ್ವದೊಂದಿಗೆ ಬೆಂಗಳೂರಿನಲ್ಲಿ ಸ್ಥಾಪಿಸಲಾಗಿತ್ತು. ಇದು ೧೯೬೫ರಲ್ಲಿ ಕೂಡು ಬಂಡವಾಳ

ಸಂಸ್ಥೆಯಾಗಿ ಪರಿವರ್ತಿಸಲ್ಪಟ್ಟಿತು. ಇದರಲ್ಲಿ ಟ್ರಾನ್ಸ್‌ಫಾರ್ಮರ್‌ಗಳು, ಸ್ವಿಚ್‌ಗೇರ್‌ಗಳು, ಮೋಟಾರ್‌ಗಳು, ಸಿಲಿಕಾನ್ ಪವರ್ ಡಯೋಡ್‌ಗಳು ಮತ್ತು ಪವರ್ ರೆಕ್ಟಿಫೈಯರ್‌ಗಳನ್ನು ತಯಾರಿಸಲು ಪ್ರತಿಯೊಂದಕ್ಕೂ ಪ್ರತ್ಯೇಕವಾದ ಅತ್ಯಾಧುನಿಕ ಕಾರ್ಖಾನೆಯ ಸೌಲಭ್ಯವನ್ನು ಒದಗಿಸಲಾಗಿತ್ತು. ಎನ್.ಜಿ.ಇ.ಎಫ್‌ನ ಉತ್ಪಾದನಾ ಸರಣಿಗೆ ಸಿಲಿಕಾನ್ ಪವರ್ ಡಿಯೋಡ್ಸ್ ಮತ್ತು ಪವರ್ ರೆಕ್ಟಿಫೈಯರ್ಸ್‌ಗಳನ್ನು ಹೊಸದಾಗಿ ಸೇರಿಸಲಾಗಿತ್ತು. ಇದು ದೇಶದ ಕೈಗಾರಿಕಾಭಿವೃದ್ಧಿಗೆ ಗಮನಾರ್ಹ ಕಾಣಿಕೆಯನ್ನು ಸಲ್ಲಿಸುತ್ತಿದ್ದ ಈ ಕಾರ್ಖಾನೆಯ ಉತ್ಪಾದನೆಯನ್ನು ಸದ್ಯಕ್ಕೆ ಸ್ಥಗಿತಗೊಳಿಸಲಾಗಿದೆ.

### ಕರ್ನಾಟಕ ಕೈಗಾರಿಕಾಭಿವೃದ್ಧಿ ಮಂಡಳಿ

ಈ ಮಂಡಳಿಯನ್ನು ಆರಂಭಿಸಲ್ಪಟ್ಟಂದಿನಿಂದ (೧೯೬೬) ಇಲ್ಲಿಯವರೆಗೆ ೫೮,೮೬೫ ಎಕರೆಯಷ್ಟು ಭೂಮಿಯನ್ನು ತನ್ನ ಸ್ವಾಧೀನಕ್ಕೆ ತೆಗೆದುಕೊಂಡು ರಾಜ್ಯದ ಎಲ್ಲಾ ಜಿಲ್ಲೆಗಳೂ ಸೇರಿದಂತೆ ೨೧,೨೨೦ ಎಕರೆ ಭೂಮಿಯಲ್ಲಿ ೮೧ ಕೈಗಾರಿಕಾ ಕ್ಷೇತ್ರಗಳನ್ನು ಅಭಿವೃದ್ಧಿಪಡಿಸಿರುತ್ತದೆ. ಬೆಂಗಳೂರು ಸಮೀಪವಿರುವ ವೈಟ್ ಫೀಲ್ಡ್‌ನಲ್ಲಿ ನಿರ್ಯಾತ ಪ್ರವರ್ಧಕ ಕೈಗಾರಿಕಾ ಪಾರ್ಕ್, ಐದು ಸ್ಥಳಗಳಲ್ಲಿ ಮಿನಿ ಅಭಿವೃದ್ಧಿ ಕೇಂದ್ರಗಳು, ಏಳು ಕೈಗಾರಿಕಾ ಕ್ಷೇತ್ರಗಳಿಗೆ ನೀರನ್ನೊದಗಿಸುವ ಬೃಹತ್ ಯೋಜನೆ ಮತ್ತು ೧೯೯೮-೯೯ನೇ ಸಾಲಿನಲ್ಲಿ ವಿಮಾನ ನಿಲ್ದಾಣಕ್ಕಾಗಿ ಭೂಮಿಯನ್ನು ವಶಕ್ಕೆ ತೆಗೆದುಕೊಳ್ಳುವುದು ಮೊದಲಾದವುಗಳನ್ನು ಕೈಗೆತ್ತಿಕೊಂಡು ಕಾರ್ಯಗತಗೊಳಿಸುವ ಯೋಜನೆಯನ್ನು ಹಮ್ಮಿಕೊಂಡಿತ್ತು. ಅದರಂತೆ ಭೂಸ್ವಾಧೀನ ಕ್ರಮಗಳೆಲ್ಲಾ ಪೂರ್ಣಗೊಂಡು ಬೆಂಗಳೂರು ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ ದೇವನಹಳ್ಳಿಯ ಸಮೀಪದಲ್ಲಿ ಸ್ಥಾಪಿಸಲಾಗಿದೆ.

### ಆಯ್ದ ಕೈಗಾರಿಕಾ ವಲಯಗಳು

#### ಆಹಾರ ಪಾರ್ಕುಗಳ ಪ್ರಸ್ತುತ ಪ್ರಗತಿ

ಅ) ೧೦ ನೇ ಪಂಚವಾರ್ಷಿಕ ಯೋಜನೆಯಡಿಯಲ್ಲಿ ಕೇಂದ್ರ ಸರ್ಕಾರದ ಆಹಾರ ಸಂಸ್ಕರಣಾ ಮಂತ್ರಾಲಯವು ಮಾಲೂರು (ಕೋಲಾರ ಜಿಲ್ಲೆ), ಹಿರಿಯೂರು (ಚಿತ್ರದುರ್ಗ ಜಿಲ್ಲೆ), ಬಾಗಲಕೋಟೆ (ಬಾಗಲಕೋಟೆ ಜಿಲ್ಲೆ) ಹಾಗೂ ಜೇವರ್ಗಿ (ಕಲಬುರಗಿ ಜಿಲ್ಲೆ) ಗಳಲ್ಲಿ ಆಹಾರ ಪಾರ್ಕುಗಳ ಸ್ಥಾಪನೆಗೆ ಅನುಮೋದನೆಯನ್ನು ನೀಡಿರುತ್ತದೆ. ಸದರಿ ಪಾರ್ಕುಗಳ ಸ್ಥಾಪನಾ ಕಾರ್ಯದ ಉಸ್ತುವಾರಿ ಸಂಸ್ಥೆಯಾಗಿ ಆಹಾರ ಕರ್ನಾಟಕ ನಿಯಮಿತವನ್ನು ನೋಡಲ್ ಏಜನ್ಸಿಯಾಗಿ ನೇಮಿಸಲಾಗಿದೆ. ಸದರಿ ಪಾರ್ಕುಗಳ ಪ್ರಸ್ತುತ ಪ್ರಗತಿಯ ಸ್ಥೂಲ ವಿವರ ಕೆಳಕಂಡಂತಿದೆ.

#### ೧. ಇನ್ನೋವಾ ಅಗ್ರಿ ಬಯೋ-ಪಾರ್ಕು ನಿಯಮಿತ ಮಾಲೂರು

೮೭ ಎಕರೆ ಭೂ ಪ್ರದೇಶದಲ್ಲಿ ಆಹಾರ ಪಾರ್ಕನ್ನು ಕೋಲಾರ ಜಿಲ್ಲೆಯ ಮಾಲೂರು ಕೈಗಾರಿಕಾ ಪ್ರದೇಶದಲ್ಲಿ ಅಭಿವೃದ್ಧಿಪಡಿಸಲಾಗುತ್ತಿದೆ. ಈಗಾಗಲೇ ಭೂಮಿ ಅಭಿವೃದ್ಧಿ, ರಸ್ತೆ ಮತ್ತು ಚರಂಡಿ ಕಾರ್ಯ ಪೂರ್ಣಗೊಂಡಿದೆ. ಶೀತಲ ಗೃಹ ಹಾಗೂ ಉಗ್ರಾಣಗಳ ನಿರ್ಮಾಣವೂ ಸಹ ಮುಕ್ತಾಯಗೊಂಡಿದೆ. ಕಂಪನಿಯು ಶ್ರೇಣಿಗೊಳಿಸುವ, ಧಾನ್ಯ ಸಂಸ್ಕರಿಸುವ, ಪ್ಯಾಕೇಜಿಂಗ್ ಯಂತ್ರೋಪಕರಣಗಳನ್ನು ಅಳವಡಿಸಿದೆ. ಇದರ ಜೊತೆಗೆ ಪ್ರಹಾರಾ ವಿಕಿರಣ ಘಟಕವನ್ನು ಪೂರ್ಣಗೊಳಿಸಿದ್ದು ಎಲ್ಲಾ ಘಟಕಗಳು ಕಾರ್ಯ ಪ್ರಾರಂಭಿಸಿರುತ್ತವೆ. ಇದುವರೆವಿಗೂ ೧೩ ಅಹಾರ ಸಂಸ್ಕರಣಾ ಘಟಕಗಳಿಗೆ ೪೪.೭೩ ಎಕರೆ ಭೂಮಿ ಹಂಚಿಕೆ/ಕೊಡಲು ತೀರ್ಮಾನ ಮಾಡಿದ್ದು, ಉಳಿದ ೪.೨೬ ಎಕರೆ ಭೂಮಿ ಹಂಚಿಕೆಗೆ ಲಭ್ಯವಿರುತ್ತದೆ. ಪ್ರವರ್ತಕರು ದಿನಾಂಕ: ೩೦.೧೧.೨೦೧೨ ತಿಳಿಸಿರುವಂತೆ ಒಟ್ಟು ಯೋಜನಾ ವೆಚ್ಚ ರೂ.೧೯೪೯.೩೦ ಲಕ್ಷಗಳು. ಸದರಿ ಪಾರ್ಕ್‌ಗೆ ಕೇಂದ್ರ ಸರ್ಕಾರ ಹಾಗೂ ರಾಜ್ಯಸರ್ಕಾರದಿಂದ ತಲಾ ರೂ.೪೦೦ ಲಕ್ಷಗಳ ಅನುದಾನ (ಒಟ್ಟು ರೂ.೮೦೦ ಲಕ್ಷಗಳು) ನೀಡಲಾಗಿದೆ.

#### ೨. ಮೆ. ಗ್ರೀನ್ ಫುಡ್ ಪಾರ್ಕ್, ಬಾಗಲಕೋಟೆ

ಒಟ್ಟು ೧೦೦ ಎಕರೆ ಭೂ ಪ್ರದೇಶದಲ್ಲಿ ಈ ಪಾರ್ಕನ್ನು ಅಭಿವೃದ್ಧಿಪಡಿಸಲಾಗುತ್ತಿದೆ. ಭೂಮಿ ಅಭಿವೃದ್ಧಿ, ರಸ್ತೆ ಮತ್ತು ಚರಂಡಿ ಕಾರ್ಯ ಪೂರ್ಣಗೊಂಡಿದೆ. ಶೀತಲ ಗೃಹ ಹಾಗೂ ಉಗ್ರಾಣ ನಿರ್ಮಾಣ ಕಾರ್ಯವು ಸಹ ಮುಗಿದಿರುತ್ತದೆ. ಧಾನ್ಯ/ತರಕಾರಿ/ಹಣ್ಣುಗಳನ್ನು ಶ್ರೇಣಿಕರಿಸುವ ಮತ್ತು ಪ್ಯಾಕೇಜಿಂಗ್ ಯಂತ್ರೋಪಕರಣಗಳನ್ನು ಅಳವಡಿಸಲಾಗಿದೆ. ತೂಕ ಸೇತುವೆ ಕಾರ್ಯವು ಮುಗಿದಿರುತ್ತದೆ. ಇದುವರೆಗೂ ೧೫ ಆಹಾರ ಸಂಸ್ಕರಣಾ ಘಟಕಗಳಿಗೆ ಒಟ್ಟು ೫೩ ಎಕರೆ ಭೂಮಿ ಹಂಚಿಕೆ ಮಾಡಿದ್ದು, ಉಳಿದ ೨.೭೫ ಎಕರೆ ಭೂಮಿ ಹಂಚಿಕೆಗೆ ಲಭ್ಯವಿರುತ್ತದೆ. ಪ್ರವರ್ತಕರು ದಿನಾಂಕ: ೦೮.೦೯.೨೦೧೪ ತಿಳಿಸಿರುವಂತೆ ಈ ಯೋಜನೆಗೆ ತಗುಲಿರುವ ಒಟ್ಟು ಯೋಜನಾ ವೆಚ್ಚ ರೂ. ೨೨೪೧.೦೫ ಲಕ್ಷಗಳು. ಸದರಿ ಪಾರ್ಕ್‌ಗೆ ರಾಜ್ಯ ಸರ್ಕಾರ ಮತ್ತು ಕೇಂದ್ರ ಸರ್ಕಾರಗಳು ತಲಾ ರೂ.೪೦೦ ಲಕ್ಷಗಳ (ಒಟ್ಟು ರೂ.೮೦೦ ಲಕ್ಷಗಳು) ಅನುದಾನ ನೀಡಲಾಗಿದೆ.

#### ೩. ಅಕ್ಷಯ ಆಹಾರ ಪಾರ್ಕ್ ನಿಯಮಿತ, ಹಿರಿಯೂರು

ಸದರಿ ಆಹಾರ ಪಾರ್ಕ್‌ನ್ನು ಚಿತ್ರದುರ್ಗ ಜಿಲ್ಲೆಯ, ಹಿರಿಯೂರು ತಾಲ್ಲೂಕಿನ ಹುಚ್ಚವನಹಳ್ಳಿಯಲ್ಲಿ ೧೦೬ ಎಕರೆ ಮತ್ತು ೩೭ ಗುಂಟೆ ಪ್ರದೇಶದಲ್ಲಿ ಅಭಿವೃದ್ಧಿಪಡಿಸಲಾಗುತ್ತಿದೆ. ಭೂಮಿ ಸಮತಟ್ಟು ಮಾಡಿ ರಸ್ತೆಗಳನ್ನು ಮತ್ತು ಚರಂಡಿ ನಿರ್ಮಿಸುವ ಕಾರ್ಯ ಮುಗಿಸಲಾಗಿದೆ. ಶೀತಲೀಕರಣ, ಯಂತ್ರೋಪಕರಣಗಳು, ಹಣ್ಣು, ತರಕಾರಿ ಆಹಾರಧಾನ್ಯ, ಎಣ್ಣೆ ಕಾಳುಗಳು ಹಾಗೂ ಮಸಾಲಾ ಪದಾರ್ಥಗಳ ಸಂಸ್ಕರಣೆಗಾಗಿ ೪ ತರಹ ವಿಂಗಡಣೆ ಮಾಡುವ ಆಹಾರ ಪದಾರ್ಥಗಳ ಪ್ಯಾಕಿಂಗ್ ಮಾಡುವ ಯಂತ್ರೋಪಕರಣಗಳನ್ನು ಅಳವಡಿಸಲಾಗಿದೆ. ಪ್ರವರ್ತಕರು ದಿನಾಂಕ ೨೩.೦೨.೨೦೧೧ ತಿಳಿಸಿರುವಂತೆ ಒಟ್ಟು ಯೋಜನಾ ವೆಚ್ಚ ರೂ. ೧೮೮೬.೮೯ ಲಕ್ಷಗಳು. ಸದರಿ ಪಾರ್ಕ್‌ಗೆ ಕೇಂದ್ರ ಸರ್ಕಾರದಿಂದ ರೂ.೪೦೦ ಲಕ್ಷಗಳ ಅನುದಾನ ಹಾಗೂ ರಾಜ್ಯ ಸರ್ಕಾರದಿಂದ ರೂ. ೪೦೦ ಲಕ್ಷಗಳ ಬಡ್ಡಿರಹಿತ/ಭದ್ರತೆರಹಿತ ಸಾಲ (ಒಟ್ಟು ರೂ.೮೦೦ ಲಕ್ಷಗಳು) ನೀಡಲಾಗಿದೆ.

#### ೪.ಜೇವರ್ಗಿ ಫುಡ್ ಪಾರ್ಕ್ ನಿಯಮಿತ, ಜೇವರ್ಗಿ

ಸದರಿ ಪಾರ್ಕ್‌ನ್ನು ಕಲಬುರಗಿ ಜಿಲ್ಲೆಯ, ಜೇವರ್ಗಿಯಲ್ಲಿ ೧೦೫ ಎಕರೆ ಪ್ರದೇಶದಲ್ಲಿ ಸ್ಥಾಪಿಸಲಾಗುತ್ತಿದೆ. ಭೂಮಿ ಸಮತಟ್ಟು

ಮಾಡಿ, ರಸ್ತೆ ಮತ್ತು ಚರಂಡಿಗಳನ್ನು ನಿರ್ಮಿಸಲಾಗುತ್ತಿದೆ. ಉಗ್ರಾಣದ ಕಾಮಗಾರಿಯು ಪ್ರಗತಿಯಲ್ಲಿದೆ. ಪ್ರವರ್ತಕರು ದಿನಾಂಕ ೨೧.೧೧.೨೦೧೮ ತಿಳಿಸಿರುವಂತೆ ಒಟ್ಟು ಯೋಜನಾ ವೆಚ್ಚ ರೂ. ೧೫೮೬.೭೩ ಲಕ್ಷಗಳು. ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ತಲಾ ರೂ.೪೦೦ ಲಕ್ಷಗಳ ಅನುದಾನದಲ್ಲಿ (ಒಟ್ಟುರೂ. ೮೦೦ ಲಕ್ಷಗಳು) ಕ್ರಮವಾಗಿ ರೂ.೨೦೦ ಲಕ್ಷ ಹಾಗೂ ರೂ.೩೦೦ ಲಕ್ಷಗಳನ್ನು ಬಿಡುಗಡೆಗೊಳಿಸಲಾಗಿದೆ.

**ಆ) ರಾಜ್ಯ ಸರ್ಕಾರದ ಯೋಜನೆಯಡಿಯಲ್ಲಿರುವ ಆಹಾರ ಪಾರ್ಕುಗಳು**

ರಾಜ್ಯ ಸರ್ಕಾರವು ೨೦೦೮-೦೯ರ ಆಯವ್ಯಯದಲ್ಲಿ ಒಟ್ಟು ಆರು ಜಿಲ್ಲೆಗಳಲ್ಲಿ ಅಂದರೆ, ಬೆಂಗಳೂರು (ಗ್ರಾಮಾಂತರ) ತುಮಕೂರು, ಶಿವಮೊಗ್ಗ, ದಾವಣಗೆರೆ, ವಿಜಯಪುರ ಹಾಗೂ ಬೆಳಗಾಂ ಜಿಲ್ಲೆಗಳಲ್ಲಿ ಆಹಾರ ಪಾರ್ಕುಗಳ ಸ್ಥಾಪನೆಗೆ ಯೋಜಿಸಲಾಗಿತ್ತು. ಸದರಿ ಆಹಾರ ಪಾರ್ಕುಗಳ ಅಭಿವೃದ್ಧಿಯನ್ನು ಕೈಗೊಳ್ಳುವುದಕ್ಕೂ ಮುನ್ನ ಮೇಲಿನ ಆಹಾರ ಪಾರ್ಕುಗಳ ಅಭಿವೃದ್ಧಿಯನ್ನು ತುಲನೆ ಮಾಡಿ ನಿರ್ಣಯ ಕೈಗೊಳ್ಳಲಾಗುತ್ತಿದೆ.

**೧.ಶಿವಮೊಗ್ಗ ಆಹಾರ ಪಾರ್ಕ್:** ಮೆ. ಎಲ್.ಎಂ.ಜೆ ಇಂಟರ್ ನ್ಯಾಷನಲ್ ಲಿ. ೧೦೦ ಎಕರೆ ಪ್ರದೇಶದಲ್ಲಿ ಸೋಗಾನೆ ಹಳ್ಳಿಯ, ನಿಧಿಗೆ ಹೋಬಳಿಯ ಕೈಗಾರಿಕಾ ಪ್ರದೇಶದಲ್ಲಿ ಆಹಾರ ಪಾರ್ಕ್ ಸ್ಥಾಪಿಸಲು ಡೆವಲಪರ್ ಆಗಿ ಆಯ್ಕೆಯಾಗಿದ್ದಾರೆ. ಅದಾಗ್ಯೂ ರಾಜ್ಯದಲ್ಲಿ ಸ್ಥಾಪಿಸುತ್ತಿರುವ ಇತರೇ ಆಹಾರ ಪಾರ್ಕ್‌ಗಳ ಅಭಿವೃದ್ಧಿಯ ಮಂದಗತಿಯ ಪ್ರಗತಿಯನ್ನು ಮನಗಂಡು ಶಿವಮೊಗ್ಗ ಆಹಾರ ಪಾರ್ಕ್‌ನ ಪ್ರವರ್ತಕರಿಗೆ ಭೂಮಿ ಹಸ್ತಾಂತರಿಸುವ ಪ್ರಕ್ರಿಯೆಯನ್ನು ಪರಿಶೀಲಿಸಲಾಗುತ್ತಿದೆ.

**೨. ಬಿಜಾಪುರ (ವಿಜಯಪುರ) ಆಹಾರ ಪಾರ್ಕ್:** ಆಹಾರ ಕರ್ನಾಟಕ ನಿಯಮಿತಕ್ಕೆ ವಿಜಯಪುರಜಿಲ್ಲೆಯ ಇಟಂಗಿಹಾಳದಲ್ಲಿ ಜಿಲ್ಲಾಧಿಕಾರಿಯವರು ೭೫ ಎಕರೆ ಭೂಸ್ವಾಧೀನ ಮಾಡಿ ಆಹಾರ ಕರ್ನಾಟಕ ನಿಯಮಿತಗೆ ಹಸ್ತಾಂತರಿಸಿದ್ದಾರೆ. ಪ್ರವರ್ತಕರನ್ನು ಆಯ್ಕೆ ಮಾಡಬೇಕಾಗಿದೆ.

**೩.ಸ್ಪೈಸ್ ಪಾರ್ಕ್, ಬ್ಯಾಡಗಿ, ಹಾವೇರಿ ಜಿಲ್ಲೆ:** ಆಹಾರ ಕರ್ನಾಟಕ ನಿಯಮಿತ ಸಂಸ್ಥೆಯು ಬ್ಯಾಡಗಿಯಲ್ಲಿ ಸ್ಪೈಸ್ ಪಾರ್ಕ್‌ನ್ನು ಅಭಿವೃದ್ಧಿಗೊಳಿಸಲು ಖಾಸಗಿ ಸಂಸ್ಥೆಯವರಿಂದ ಪ್ರಸ್ತಾವನೆಯನ್ನು ಕೋರಿ ಪ್ರಮುಖ ಪತ್ರಿಕೆಗಳಲ್ಲಿ ಎರಡು ಬಾರಿ ಅಧಿಸೂಚನೆ ಪ್ರಕಟಿಸಿತ್ತು. ಆದರೆ ಪ್ರಕಟಿತ ಅಧಿಸೂಚನೆಗಳಿಗೆ ಖಾಸಗಿ ಸಂಸ್ಥೆಯವರಿಂದ ಯಾವುದೇ ಪ್ರಸ್ತಾವನೆ ಬಾರದ ಕಾರಣ, ಪ್ರಸ್ತುತ ಸ್ಪೈಸ್ ಪಾರ್ಕ್‌ನ ಅಭಿವೃದ್ಧಿಯನ್ನು ಭಾರತ ಸರ್ಕಾರದ ಸಾಂಬಾರು ಮಂಡಳಿ ವತಿಯಿಂದ ಸ್ಥಾಪಿಸಲು ಕ್ರಮ ವಹಿಸಲಾಗುತ್ತಿದೆ ಹಾಗೂ ಈ ಪಾರ್ಕ್‌ಗೆ ಸರ್ಕಾರದಿಂದ ಸುಮಾರು ೫೦ ಎಕರೆ ಜಮೀನನ್ನು ನೀಡುವ ಪ್ರಕ್ರಿಯೆ ಜಾರಿಯಲ್ಲಿದೆ ಎಂದು ತಿಳಿದುಬಂದಿದೆ.

**ಜವಳಿ ಕೈಗಾರಿಕೆ : ಕರ್ನಾಟಕ ನೂತನ ಜವಳಿ ನೀತಿ ೨೦೧೩-೧೮**

- ಕರ್ನಾಟಕ ರಾಜ್ಯವು ದೇಶದಲ್ಲಿಯೇ ಪ್ರಪ್ರಥಮ ಬಾರಿಗೆ ರಾಜ್ಯ ಜವಳಿ ನೀತಿಯನ್ನು ಪ್ರಕಟಿಸಿ ಜಾರಿಗೆ ತಂದ ರಾಜ್ಯವಾಗಿದೆ.
- ಸುವರ್ಣ ವಸ್ತ್ರ ನೀತಿ (೨೦೦೮-೧೩)ಯು ೨೦೧೩ನೇ ಸಾಲಿನ ಮಾರ್ಚ್ ತಿಂಗಳನಲ್ಲಿ ಕೊನೆಗೊಂಡಿರುವುದರಿಂದ ಮುಂದಿನ ೫ ವರ್ಷಗಳಿಗೆ ಅನ್ವಯವಾಗುವಂತೆ "ನೂತನ ಜವಳಿ ನೀತಿ ೨೦೧೩-೧೮"ನ್ನು ದಿ: ೩೧-೧೦-೨೦೧೩ರಂದು ಘೋಷಿಸಲಾಗಿದೆ.

**ಗುರಿಗಳು**

- ರೂ.೮,೦೦೦ ಕೋಟಿ ಬಂಡವಾಳ ಆಕರ್ಷಣೆ
- ೪,೦೦,೦೦೦ ಜನರಿಗೆ ಉದ್ಯೋಗ ಅವಕಾಶಗಳು.
- ನೂತನ ಜವಳಿ ನೀತಿ ೨೦೧೩-೧೮ ಕ್ಕೆ ಐದು ವರ್ಷಗಳ ನೀತಿಯ ಅವಧಿಗೆ ರೂ.೧,೦೦೦ ಕೋಟಿ ಆಯವ್ಯಯ ಅನುದಾನ ಪ್ರಸ್ತಾಪಿಸಲಾಗಿದೆ.
- ನೂತನ ಜವಳಿ ನೀತಿ ೨೦೧೩-೧೮ ಬೇರೆ ರಾಜ್ಯಗಳ ಹೋಲಿಕೆಯಲ್ಲಿ ವಿಭಿನ್ನವಾಗಿದೆ.

**ವೈಶಿಷ್ಟ್ಯಗಳು**

- ಎಂ.ಎಸ್.ಎಂ.ಇ ವಲಯಕ್ಕೆ ಅತೀ ಹೆಚ್ಚಿನ ಸಹಾಯಧನ, ಶೇ.೧೫ರಿಂದ ೨೦ ರವರೆಗೆ ಗರಿಷ್ಟ ರೂ ೨.೦೦ ಕೋಟಿ ವರೆಗೆ ಒದಗಿಸಲಾಗುತ್ತದೆ.
- ಜವಳಿ ವಲಯದ ಎಲ್ಲಾ ಚಟುವಟಿಕೆಗಳಿಗೆ ಪ್ರತಿ ಯೂನಿಟ್‌ಗೆ ರೂ.೧ರ ದರದಲ್ಲಿ ವಿದ್ಯುತ್ ಸಹಾಯಧನ ಒದಗಿಸುತ್ತದೆ.
- ಹಾಲಿ ಇರುವ ಕೈಗಾರಿಕೆಗಳಿಗೂ ಸಹ ಶೇ.೧೫ ರಿಂದ ೨೦ ರವರೆಗೆ ಗರಿಷ್ಟ ರೂ. ೧.೦೦ ಕೋಟಿ ವರೆಗೆ ಸಹಾಯಧನ ಒದಗಿಸಲಾಗುತ್ತದೆ.
- ರೋಗಗ್ರಸ್ಥ ಸಹಕಾರಿ ನೂಲಿನ ಗಿರಣಿಗಳಿಗೆ ಶೇ.೨೦ ರವರೆಗೆ ಗರಿಷ್ಟ ರೂ.೨.೦೦ ಕೋಟಿ ವರೆಗೆ ಸಹಾಯಧನ ಒದಗಿಸಲಾಗುತ್ತದೆ.
- ಬಂಡವಾಳ ಸಹಾಯಧನ ಹಾಗೂ ಬಡ್ಡಿ ಸಹಾಯಧನವನ್ನು ಜವಳಿ ಕೈಗಾರಿಕೆಗಳಿಗೆ ಒದಗಿಸುತ್ತದೆ.
- ಜವಳಿ ಘಟಕಗಳಿಗೆ ಸ್ವಂತ ಮೂಲಭೂತ ಸೌಲಭ್ಯಗಳನ್ನು ಹೊಂದಲು ಸುಸಜ್ಜಿತ ಜವಳಿ ಪಾರ್ಕ್‌ಗಳನ್ನು ಗ್ರೀನ್ ಫೀಲ್ಡ್ ಮತ್ತು ಬ್ರೌನ್ ಫೀಲ್ಡ್ ವಲಯಗಳಲ್ಲಿ ಸ್ಥಾಪಿಸಲು ಶೇ.೪೦ ರಷ್ಟು ಗರಿಷ್ಟ ರೂ.೨೦ ಕೋಟಿ ಸಹಾಯಧನ ಒದಗಿಸುತ್ತದೆ.
- ಸರ್ಕಾರದಿಂದ ಸ್ಥಾಪಿಸಲಾದ SDC ಗಳಲ್ಲಿ ನೀತಿಯ ಅವಧಿಯಲ್ಲಿ ೩,೦೦,೦೦೦ ನಿರುದ್ಯೋಗಿಗಳಿಗೆ ತರಬೇತಿ ನೀಡಲಾಗುತ್ತದೆ.
- ತಾಂತ್ರಿಕ ಜವಳಿ ವಲಯಕ್ಕೆ ಹೆಚ್ಚಿನ ಆದ್ಯತೆ ನೀಡಲಾಗುತ್ತದೆ.
- ಜವಳಿ ವಲಯದ ಸರ್ವಾಂಗೀಣ ಅಭಿವೃದ್ಧಿಗಾಗಿ ಸೆಂಟರ್ ಆಫ್ ಎಕ್ಸಲೆನ್ಸ್ ಸ್ಥಾಪಿಸಲು ರೂ.೧೦.೦೦ ಕೋಟಿ ನೆರವು ಒದಗಿಸಲಾಗುವುದು.

ಈ ವೈಶಿಷ್ಟ್ಯಗಳು ಜವಳಿ ವಲಯದ ಅಭಿವೃದ್ಧಿಗೆ ಬೇರೆ ಯಾವುದೇ ರಾಜ್ಯಗಳಲ್ಲಿ ಲಭ್ಯವಿರುವುದಿಲ್ಲ.ಈ ಅಂಶಗಳ ಹಿನ್ನಲೆಯಲ್ಲಿ ಕರ್ನಾಟಕದ ನೂತನ ಜವಳಿ ನೀತಿ ೨೦೧೩-೧೮ ಒಂದು ವಿಶಿಷ್ಟ ನೀತಿಯಾಗಿದ್ದು, ಜವಳಿ ವಲಯದ ಅಭಿವೃದ್ಧಿಯಲ್ಲಿ ಇತಿಹಾಸ ಸೃಷ್ಟಿಸುವ ನೀತಿಯಾಗಲಿದೆ.

ರಾಜ್ಯದಲ್ಲಿರುವ ನೇಕಾರರ ಹಾಗೂ ಮಗ್ಗಗಳ ವಿವರಗಳನ್ನು ಕೋಷ್ಟಕ ೫.೧೭ರಲ್ಲಿ ಹಾಗೂ ವಿದ್ಯುತ್ ಮಗ್ಗ ನೇಕಾರರ ಹಾಗೂ ಮಗ್ಗಗಳ ವಿವರಗಳನ್ನು ಕೋಷ್ಟಕ ೫.೧೮ರಲ್ಲಿ ನೀಡಲಾಗಿದೆ. ಸಹಕಾರ ವಲಯದಲ್ಲಿರುವ ಕೈಮಗ್ಗ ಮತ್ತು ವಿದ್ಯುತ್ ಮಗ್ಗ ಕ್ಷೇತ್ರಗಳಲ್ಲಿನ ಉತ್ಪಾದನೆ ಹಾಗೂ ಉದ್ಯೋಗಗಳ ವಿವರ ಕೋಷ್ಟಕ ೫.೧೯ರಲ್ಲಿ ನೀಡಲಾಗಿದೆ.

**ಕೋಷ್ಟಕ ೫.೧೭: ರಾಜ್ಯದಲ್ಲಿರುವ ಕೈಮಗ್ಗ ನೇಕಾರರ ಹಾಗೂ ಮಗ್ಗಗಳ ವಿವರ**

| ಕ್ರ. ಸಂ. | ವಿವರಗಳು | ಗ್ರಾಮೀಣ | ನಗರ | ಒಟ್ಟು |
|---|---|---|---|---|
| ೧ | ಒಟ್ಟು ನೇಕಾರರ ಕುಟುಂಬಗಳು | ೩೩೮೫೪ | ೩೮೨೬ | ೩೭೬೮೦ |
| ೨ | **ನೇಕಾರರ ಜನಸಂಖ್ಯೆ** | | | |
| ಅ. | ಪುರುಷರು | ೬೧೬೩೨ | ೬೪೪೭ | ೬೮೦೭೯ |
| ಆ. | ಮಹಿಳೆಯರು | ೬೦೦೫೬ | ೬೨೦೩ | ೬೬೨೫೯ |
| | **ಒಟ್ಟು** | ೧೨೧೬೮೮ | ೧೨೬೫೦ | ೧೩೪೩೩೮ |
| ೩ | **ನೇಕಾರಿಕೆಯಲ್ಲಿ ತೊಡಗಿರುವವರು** | | | |
| ಅ. | ನೇಯ್ಗೆ ಕೆಲಸ ಮಾಡುವವರು | ೩೫೮೯೪ | ೪೦೩೮ | ೩೯೯೩೨ |
| ಆ. | ಪೂರಕ ಕೆಲಸ ಮಾಡುವವರು | ೩೩೭೬೨ | ೩೧೨೫ | ೩೬೯೧೭ |
| | **ಒಟ್ಟು ನೇಕಾರರು** | ೬೮೬೮೬ | ೭೧೬೩ | ೭೬೮೪೯ |
| ೪. | **ಮಗ್ಗಗಳು** | | | |
| ಅ. | ಕಾರ್ಯನಿರತ | ೩೦೩೯೪ | ೪೨೧೨ | ೩೪೬೦೬ |
| ಆ. | ನಿಷ್ಕ್ರಿಯ | ೫೨೬೮ | ೬೧೪ | ೫೮೮೨ |
| | **ಒಟ್ಟು** | ೩೫೬೬೨ | ೪೮೨೬ | ೪೦೪೮೬ |
| ೫. | ನೇಕಾರಿಕೆಯಲ್ಲಿ ನಿರತರಾದ ಕುಟುಂಬಗಳ ವಾರ್ಷಿಕ ತಲಾದಾಯ (ರೂ.) | ೨೪೮೪೦ | ೨೫೪೦೫ | ೨೪೮೯೭ |

**ಮೂಲ: ಭಾರತ ಸರ್ಕಾರದ ಕೈಮಗ್ಗಗಳ ಗಣತಿ – ೨೦೦೯-೧೦**

**ಕೋಷ್ಟಕ ೫.೧೮: ವಿದ್ಯುತ್ ಮಗ್ಗ ನೇಕಾರರ ವಿವರಗಳು**

| ಕ್ರ. ಸಂ. | ವಿವರಗಳು | ಸಂಖ್ಯೆ |
|---|---|---|
| ೧ | ಒಟ್ಟು ನೇಕಾರರ ಕುಟುಂಬಗಳು | ೩೦,೯೮೮ |
| ೨ | ನೇಕಾರರ ಜನಸಂಖ್ಯೆ | ೧,೨೭,೫೩೫ |
| ೩ | ಮಗ್ಗಗಳು | ೬೮,೫೬೬ |

**ಮೂಲ: ಭಾರತ ಸರ್ಕಾರದ ವಿದ್ಯುತ್ ಮಗ್ಗಗಳ ಗಣತಿ – ೧೯೯೫-೯೬**

**ಕೋಷ್ಟಕ ೫.೧೯: ಕೈಮಗ್ಗ ಮತ್ತು ವಿದ್ಯುತ್ ಮಗ್ಗ ಕ್ಷೇತ್ರಗಳಲ್ಲಿ ಉತ್ಪಾದನೆ ಮತ್ತು ಉದ್ಯೋಗ (ಸಹಕಾರ ವಲಯದಲ್ಲಿ ಮಾತ್ರ)**

| ಕ್ರ. ಸಂ. | ವಿವರಗಳು | ಘಟಕ | ವಾರ್ಷಿಕ ಯೋಜನೆ ೨೦೧೩-೧೪ | | ವಾರ್ಷಿಕ ಯೋಜನೆ ೨೦೧೪-೧೫ | | ವಾರ್ಷಿಕ ಯೋಜನೆ ೨೦೧೫-೧೬ | |
|---|---|---|---|---|---|---|---|---|
| | | | ಗುರಿ | ಸಾಧನೆ | ಗುರಿ | ಸಾಧನೆ | ಗುರಿ | ಸಾಧನೆ (ಡಿಸೆಂಬರ್ ಅಂತ್ಯದವರೆಗೆ) |
| ೧ | **ಕೈಮಗ್ಗ**<br>ಅ) ಉತ್ಪಾದನೆ | ಮಿಲಿಯನ್ ಮೀ.ಗಳಲ್ಲಿ | ೫೦.೦೦ | ೪೭.೬೩ | ೫೫.೦೦ | ೪೩.೫೮ | ೬೦.೦೦ | ೩೮.೬೮ |
| | ಆ) ಉದ್ಯೋಗ | ಲಕ್ಷಗಳಲ್ಲಿ | ೦.೯೫ | ೧.೧೨ | ೦.೯೫ | ೦.೮೫ | ೦.೯೫ | ೧.೦೬ |
| | **ವಿದ್ಯುತ ಮಗ್ಗ**<br>ಅ) ಉತ್ಪಾದನೆ | ಮಿಲಿಯನ್ ಮೀ.ಗಳಲ್ಲಿ | ೩೩೦.೦೦ | ೩೫೩.೫೯ | ೩೩೫.೦೦ | ೩೦೪.೦೨ | ೩೫೦.೦೦ | ೨೯೦.೩೫ |
| | ಆ) ಉದ್ಯೋಗ | ಲಕ್ಷಗಳಲ್ಲಿ | ೨.೬೦ | ೨.೬೦ | ೨.೯೦ | ೨.೯೬ | ೨.೯೦ | ೪.೪೨ |

**ಮೂಲ: ಜವಳಿ ಇಲಾಖೆ**

೧೧ನೇ ಪಂಚವಾರ್ಷಿಕ ಯೋಜನೆಯಡಿಯಲ್ಲಿ ೩೦೦೦ ಕೈಮಗ್ಗ ನೇಕಾರರಿಗೆ ವಸತಿ ಸೌಲಭ್ಯವನ್ನು ಒದಗಿಸಲಾಗಿದೆ. ೧೨೫೦೦ ಕೈಮಗ್ಗ ನೇಕಾರರಿಗೆ ಶೇ.೪ ಹಾಗೂ ಶೇ.೩ ರ ರಿಯಾಯಿತಿ ದರದಲ್ಲಿ ರೂ.೩೫೦.೪೨ ಲಕ್ಷಗಳ ಸಾಲ ಒದಗಿಸಲಾಗಿದೆ. ಈ ಯೋಜನೆಯ ಅವಧಿಯಲ್ಲಿ ರೂ.೪೨೯೦ ಲಕ್ಷಗಳನ್ನು ನೇಕಾರರ ಸಾಲ ಹಾಗೂ ಬಡ್ಡಿ ಮನ್ನಾ ಮಾಡಲು ಉಪಯೋಗಿಸಲಾಗಿದೆ. ೧೨೦ ಕೈಮಗ್ಗ ನೇಕಾರರ ಸಹಕಾರ ಸಂಘಗಳಿಗೆ ಶೇ.೨೦ರ ರಿಯಾಯಿತಿಯನ್ನು ಕೈಮಗ್ಗ ವಸ್ತುಗಳ ಮಾರಾಟವನ್ನು ಪ್ರೋತ್ಸಾಹಿಸಲು ನೀಡಲಾಗಿದೆ. ೨೦ ಹೆ.ಪಿ ವರೆಗೆ ವಿದ್ಯುತ್ ಉಪಯೋಗಿಸುವ ಸುಮಾರು ೨೫,೦೦೦ ವಿದ್ಯುತ್ ಕೈಮಗ್ಗ ಘಟಕಗಳಿಗೆ ವಿದ್ಯುತ್ ಯೂನಿಟ್‌ಗೆ ರೂ. ೧.೨೫ ರಂತೆ ರಿಯಾಯಿತಿ ದರದಲ್ಲಿ ನೀಡಲಾಗಿದೆ. ಇದರಿಂದ ಸುಮಾರು ೯೦,೦೦೦ ನೇಕಾರರಿಗೆ ಸಹಾಯವಾಗಿದೆ. ಪ್ರತಿ ಫಲಾನುಭವಿಗಳ ಗರಿಷ್ಠ ಮಿತಿಯನ್ನು ರೂ.೧ ಲಕ್ಷ ಮಿತಿಯೊಂದಿಗೆ ೨ ವಿದ್ಯುತ್ ಮಗ್ಗಗಳನ್ನು ಪ್ರತಿ ಮಗ್ಗಕ್ಕೆ ಶೇ.೫೦ರ ರಿಯಾಯಿತಿ ದರದಲ್ಲಿ ೧೫೦೦ ನೇಕಾರರಿಗೆ ಒದಗಿಸಲಾಗಿದೆ. ಜವಳಿ ಕ್ಷೇತ್ರದ ವಿವಿಧ ಭಾಗಗಳಲ್ಲಿ ಕೌಶಲ್ಯ ಅಭಿವೃದ್ಧಿ ತರಬೇತಿಯನ್ನು ನೀಡುವ ಮೂಲಕ ೮೫,೦೦೦ ಉದ್ಯೋಗಗಳನ್ನು ಸೃಜಿಸಲಾಗಿದೆ ಹಾಗೂ ರೂ. ೭೦೦೦ ಲಕ್ಷಗಳ ವೆಚ್ಚದಲ್ಲಿ ತರಬೇತಿ ಕೇಂದ್ರಗಳನ್ನು ಸ್ಥಾಪನೆ ಮಾಡಲಾಗಿದೆ.

೧೨ನೇ ಪಂಚವಾರ್ಷಿಕ ಯೋಜನೆ ಅವಧಿಯಲ್ಲಿ ೧೦,೦೦೦ ನೇಕಾರರಿಗೆ ವಸತಿ ಸೌಲಭ್ಯವನ್ನು ಒದಗಿಸಲು ಯೋಜಿಸಲಾಗಿದೆ. ೩೦,೦೦೦ ನೇಕಾರರಿಗೆ ಸಾಲ ಒದಗಿಸಲಾಗುವುದು ಹಾಗೂ ೧೦,೦೦೦ ಉದ್ಯೋಗಾವಕಾಶವನ್ನು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಫಲಾನುಭವಿಗಳಿಗೆ ತರಬೇತಿ, ಮಗ್ಗ ಹಾಗೂ ಬಿಡಿ ಭಾಗಗಳನ್ನು ನೀಡುವ ಮೂಲಕ ವಸತಿ ಹಾಗೂ ದುಡಿಮೆ ಬಂಡವಾಳದೊಂದಿಗೆ ಕಲ್ಪಿಸಲಾಗುವುದು. ೫೦೦೦ ರೇಷ್ಮೆ ನೇಕಾರರು ರಾಜ್ಯದಲ್ಲಿ ರೇಷ್ಮೆ ಕ್ಷೇತ್ರದ ಅಭಿವೃದ್ಧಿಗೆ ಭಾರತ ಸರ್ಕಾರದ ವೇಗವರ್ಧಕ ಅಭಿವೃದ್ಧಿ ಯೋಜನೆಯ ವ್ಯಾಪ್ತಿಗೆ ಒಳಪಡುತ್ತಾರೆ. ೫೦ ಸಮೂಹಗಳ ಮತ್ತು ನೇಕಾರರ ಗುಂಪುಗಳನ್ನು ಗುರುತಿಸಿ ಸಮಗ್ರ ಕೈಮಗ್ಗ ಅಭಿವೃದ್ಧಿ ಯೋಜನೆಯಡಿಯಲ್ಲಿ ಸುಮಾರು ೧೦,೦೦೦ ನೇಕಾರರನ್ನು ಅಭಿವೃದ್ಧಿಗೊಳಿಸಲಾಗುವುದು. ಮಾರುಕಟ್ಟೆಯ ಏರಿಳಿತಗಳನ್ನು ಗಮನಿಸಿ ರಾಷ್ಟ್ರೀಯ ಕೈಮಗ್ಗ ಅಭಿವೃದ್ಧಿ ನಿಗಮ ಮೂಲಕ ಖರೀದಿಸಲಾದ ನೂಲಿಗೆ ಪ್ರತಿ ಕೆಜಿಗೆ ರೂ.೧೫ರ ರಿಯಾಯಿತಿ ದರದಲ್ಲಿ ಎಲ್ಲಾ ಕೈಮಗ್ಗ ನೇಕಾರರಿಗೆ ನೂಲನ್ನು ನೀಡಲಾಗುವುದು. ಪ್ರತಿ ಫಲಾನುಭವಿಗಳ ಗರಿಷ್ಠ ಮಿತಿಯನ್ನು ರೂ.೨.೦೦ ಲಕ್ಷದ ಮಿತಿಯೊಂದಿಗೆ ೨ ವಿದ್ಯುತ್ ಮಗ್ಗಗಳನ್ನು, ಪ್ರತಿ ಮಗ್ಗಕ್ಕೆ ಶೇ.೫೦ರ ರಿಯಾಯಿತಿ ದರದಲ್ಲಿ ೨೦,೦೦೦ ನೇಕಾರರಿಗೆ ಒದಗಿಸುವ ಗುರಿ ಹೊಂದಿದ್ದು, ಇದರಲ್ಲಿ ೫೦೦೦ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ಫಲಾನುಭವಿಗಳಿಗೆ ಶೇ.೯೦ರ ರಿಯಾಯಿತಿಯಲ್ಲಿ ವಿದ್ಯುತ್ ಮಗ್ಗಗಳನ್ನು ಒದಗಿಸಲಾಗುವುದು. ಹಳೆಯ ನೂಲಿನ ಗಿರಣಿಗಳ ಮತ್ತಷ್ಟು ಮುಚ್ಚುವಿಕೆಯನ್ನು ತಡೆಗಟ್ಟಲು ಪ್ರತಿ ಘಟಕಕ್ಕೆ ರೂ.೧ರ ವಿದ್ಯುತ್ ಸಹಾಯ ಧನದ ಲಾಭವನ್ನು ವಿಸ್ತರಿಸಲಾಗುವುದು. ಜಿನ್ನಿಂಗ್ ಹಾಗೂ ಪ್ರೆಸ್ಸಿಂಗ್ ಮತ್ತು ನೂಲಿನ ಗಿರಣಿಗಳನ್ನು ಆಧುನೀಕರಿಸಲು ಹಣಕಾಸಿನ ನೆರವನ್ನು ನೀಡಲಾಗುವುದು. ತಾಂತ್ರಿಕ ಜವಳಿ ಕ್ಷೇತ್ರಕ್ಕೆ ವಿಶೇಷ ಒತ್ತನ್ನು ನೀಡಲಾಗುವುದು. ೫ ಲಕ್ಷ ಉದ್ಯೋಗಗಳನ್ನು ಸೃಜಿಸಲು ಹಾಗೂ ರೂ.೧೦,೦೦೦ ಕೋಟಿಗಳ ಬಂಡವಾಳ ಹೂಡಿಕೆಯನ್ನು ಆಕರ್ಷಿಸಲು ವಿಶೇಷ ಗಮನವನ್ನು ಹರಿಸಲಾಗುವುದು.

೨೦೧೪-೧೫ನೇ ಸಾಲಿನಲ್ಲಿ ವಿವಿಧ ಯೋಜನೆಗಳ ಅನುಷ್ಠಾನಕ್ಕಾಗಿ ಒಟ್ಟು ರೂ.೨೪೧೫೪.೯೪ ಲಕ್ಷಗಳ ಆಯವ್ಯಯ ಬಿಡುಗಡೆ ಮಾಡಲಾಗಿರುತ್ತದೆ. ಸದರಿ ಮೊತ್ತದಲ್ಲಿ ೭೬೮ ನೇಕಾರರಿಗೆ ವಸತಿ ಸೌಲಭ್ಯವನ್ನು ಒದಗಿಸಲು ರೂ.೭೩೮.೧೦ ಲಕ್ಷಗಳು, ೧೨೧೮ ಕೈಮಗ್ಗ ನೇಕಾರರಿಗೆ ಶೇ.೩ರ ದರದಲ್ಲಿ ಸಾಲದ ಬಡ್ಡಿ ರಿಯಾಯಿತಿ ಬಾಬ್ತು ರೂ.೩೨.೭೮ ಲಕ್ಷಗಳು, ೨೮ ನೇಕಾರರ ಮಿತವ್ಯಯ ನಿಧಿ ಬಡ್ಡಿ ಬಾಬ್ತು ರೂ.೩೭.೫೦ ಲಕ್ಷಗಳು, ೧೧೧ ನೇಕಾರರ ಸಹಕಾರ ಸಂಘಗಳಿಗೆ ಶೇ.೨೦ರ ರಿಯಾಯಿತಿಯನ್ನು ಕೈಮಗ್ಗ ವಸ್ತುಗಳ ಮಾರಾಟವನ್ನು ಪ್ರೋತ್ಸಾಹಿಸಲು ರೂ.೪೫೦.೦೦ ಲಕ್ಷಗಳು, ೨೩೬೦೧ ವಿದ್ಯುತ್ ಮಗ್ಗ ಘಟಕಗಳ ವಿದ್ಯುತ್ ಸಬ್ಸಿಡಿ ಬಾಬ್ತು ರೂ.೩೯೬.೦೦ ಲಕ್ಷಗಳು, ೨ ವಿದ್ಯುತ್ ಮಗ್ಗಗಳನ್ನು ಒದಗಿಸುವ ಯೋಜನೆಯಡಿ ೩೭೫ ನೇಕಾರರಿಗೆ ರೂ. ೩೭೫.೦೦ ಲಕ್ಷಗಳು, ವಿಶೇಷ ಘಟಕ ಯೋಜನೆ ಮತ್ತು ಗಿರಿಜನ ಉಪಯೋಜನೆ ಅನುಷ್ಠಾನಕ್ಕಾಗಿ ರೂ.೧೪೪೫.೧೦ ಲಕ್ಷಗಳು, ೨೫೬೦೩ ಸಾಮಾನ್ಯ, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಫಲಾನುಭವಿಗಳಿಗೆ ಸಿದ್ಧ ಉಡುಪು ತರಬೇತಿಗಾಗಿ ರೂ.೧೭೩೦.೬೦೫ ಲಕ್ಷಗಳು, ೩ ಮೆಗಾ ಪ್ರಾಜೆಕ್ಟ್ ಗಳಿಗೆ ಬಂಡವಾಳ ಸಹಾಯಧನ, ವಿದ್ಯುತ್ ಸಹಾಯಧನ, ಪ್ರವೇಶ ತೆರಿಗೆ ಮರುಪಾವತಿ ಮತ್ತು ಕಾರ್ಮಿಕರ ಇ.ಎಸ್.ಐ ಮತ್ತು ಇ.ಪಿ.ಎಫ್ ವಂತಿಕೆ ಬಾಬ್ತು ಒಟ್ಟು ರೂ.೨೨.೦೭ ಕೋಟಿ ಪ್ರೋತ್ಸಾಹಧನ ಮತ್ತು ಉತ್ತೇಜನಗಳನ್ನು ಬಿಡುಗಡೆ ಮಾಡಿದೆ. ರೂ.೭೫೯.೦೦ ಲಕ್ಷಗಳನ್ನು ಸಾಮಾನ್ಯ ಕಾರ್ಯಕ್ರಮಗಳಿಗೆ, ರೂ.೧೬೬.೫೦ ಲಕ್ಷಗಳನ್ನು ವಿಶೇಷ ಘಟಕ ಯೋಜನೆ ಕಾರ್ಯಕ್ರಮಗಳಿಗೆ ಮತ್ತು ರೂ.೬೯.೫೦ ಲಕ್ಷಗಳನ್ನು ಗಿರಿಜನ ಉಪಯೋಜನೆ ಕಾರ್ಯಕ್ರಮಗಳ ಅನುಷ್ಠಾನಕ್ಕಾಗಿ ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮಕ್ಕೆ ಬಿಡುಗಡೆ ಮಾಡಲಾಗಿದೆ.

೨೦೧೫-೧೬ನೇ ಸಾಲಿನಲ್ಲಿ ರೂ.೨೨೫.೭೬ ಲಕ್ಷಗಳ ಆಯವ್ಯಯ ಒದಗಿಸಲಾಗಿದ್ದು, ವಿವಿಧ ಯೋಜನೆಗಳ ಅನುಷ್ಠಾನಕ್ಕಾಗಿ ಡಿಸೆಂಬರ್ ಅಂತ್ಯದವರೆಗೆ ಒಟ್ಟು ರೂ.೧೩೦೩೬.೭೧ ಲಕ್ಷಗಳನ್ನು ಬಿಡುಗಡೆ ಮಾಡಲಾಗಿರುತ್ತದೆ. ಕೈಮಗ್ಗ ಉತ್ಪನ್ನಗಳ ಮಾರಾಟವನ್ನು ಪ್ರೋತ್ಸಾಹಿಸಲು ೧೦೭ ಕೈಮಗ್ಗ ನೇಕಾರರ ಸಹಕಾರ ಸಂಘಗಳು ಹಾಗೂ ಕಾವೇರಿ ಹ್ಯಾಂಡ್‌ಲೂಮ್ಸ್ ಸಂಸ್ಥೆಗೆ ಶೇ.೨೦ರ ರಿಯಾಯಿತಿಯ ಬಾಬ್ತು ರೂ.೩೦೦.೦೦ ಲಕ್ಷಗಳು. ನೂತನ ಜವಳಿ ನೀತಿ ಯೋಜನೆಯಡಿ ೮೮೪೦ ಫಲಾನುಭವಿಗಳ ತರಬೇತಿಗಾಗಿ ರೂ.೫೯೦.೩೨೫ ಲಕ್ಷಗಳನ್ನು, ೦೨ ಮೆಗಾ ಪ್ರಾಜೆಕ್ಟ್ ಗಳಿಗೆ ಬಂಡವಾಳ ಸಹಾಯಧನ, ವಿದ್ಯುತ್ ಸಹಾಯಧನ, ಪ್ರವೇಶ ತೆರಿಗೆ ಮರುಪಾವತಿ ಮತ್ತು ಕಾರ್ಮಿಕರ ಇ.ಎಸ್.ಐ ಮತ್ತು ಇ.ಪಿ.ಎಫ್ ವಂತಿಕೆ ಬಾಬ್ತು ಒಟ್ಟು ರೂ. ೪೧೯೯.೦೦ ಲಕ್ಷಗಳನ್ನು ಪ್ರೋತ್ಸಾಹಧನ ಮತ್ತು ಉತ್ತೇಜನಗಳಿಗಾಗಿ ಬಿಡುಗಡೆ ಮಾಡಿದೆ. ೨೪,೩೪೯ ವಿದ್ಯುತ್ ಮಗ್ಗ ಘಟಕಗಳ ವಿದ್ಯುತ್ ಸಬ್ಸಿಡಿ ಬಾಬ್ತು ೪೬೫೧.೮೭ ಲಕ್ಷಗಳನ್ನು ವಿದ್ಯುತ್ ಸರಬರಾಜು ಕಂಪನಿಗಳಿಗೆ ಬಿಡುಗಡೆ ಮಾಡಲಾಗಿದೆ. ಅಲ್ಲದೆ ವಿಶೇಷ ಘಟಕ ಯೋಜನೆ ಮತ್ತು ಗಿರಿಜನ ಉಪಯೋಜನೆ ಅನುಷ್ಠಾನಕ್ಕಾಗಿ ರೂ.೧೬೦೭.೩೫ ಲಕ್ಷಗಳನ್ನು ಬಿಡುಗಡೆ ಮಾಡಲಾಗಿದೆ.

## ರೇಷ್ಮೆ ಉದ್ಯಮ

ರೇಷ್ಮೆಯು ರಾಜ್ಯದ ಗೃಹ ಕೈಗಾರಿಕೆಗಳಲ್ಲಿ ಒಂದಾಗಿರುವುದಲ್ಲದೆ, ವ್ಯವಸಾಯಕ್ಕೆ ಪೂರಕವಾದ ಉದ್ಯಮವಾಗಿ ಮಾರ್ಪಟ್ಟಿದೆ. ಟಿಪ್ಪು ಸುಲ್ತಾನ್ ತನ್ನ ರಾಜ್ಯದ ದಕ್ಷಿಣ ಭಾಗದಲ್ಲಿ ರೇಷ್ಮೆ ಹುಳುಗಳ ಸಾಕಾಣಿಕೆ ಘಟಕವನ್ನು ಸ್ಥಾಪಿಸಿ, ಚೀನಾದಿಂದ ಮೊಟ್ಟೆಗಳನ್ನು ತರಿಸಿ, ಮೈಸೂರು ಸಂಸ್ಥಾನದಲ್ಲಿ ಈ ಕೈಗಾರಿಕೆಯನ್ನು ಬೆಳೆಸಿದ್ದು, ಒಂದು ಐತಿಹಾಸಿಕ ಸಂಗತಿಯಾಗಿದೆ. ಮೈಸೂರು ರಾಜ್ಯವನ್ನು ಪ್ರಪಂಚದ ರೇಷ್ಮೆ ಉತ್ಪಾದಿಸುವ ರಾಜ್ಯಗಳಲ್ಲಿ ಒಂದನ್ನಾಗಿ ಮಾಡುವುದು ಟಿಪ್ಪುವಿನ ಮಹದಾಕಾಂಕ್ಷೆಯಾಗಿತ್ತು. ೧೯೧೪ರಲ್ಲಿ ಹನ್ನೆರಡು ಜಾತಿಯ ರೇಷ್ಮೆ ಹುಳುಗಳ ತಳಿಗಳನ್ನು ಇಟಲಿಯಿಂದ ತರಿಸಿ ಅಭಿವೃದ್ಧಿ ಪಡಿಸಲಾಯಿತು. ೧೯೧೫ ರಲ್ಲಿ ಮೈಸೂರು ತಳಿ ಹಾಗೂ ಇಟಲಿ ತಳಿಗಳನ್ನು ಸೇರಿಸಿ ಅಧಿಕ ಇಳುವರಿಯ ಮಿಶ್ರತಳಿಯನ್ನು ಪಡೆಯಲಾಯಿತು. ಈ ಉದ್ಯಮವು ಹಿಪ್ಪು ನೇರಳೆ ಬೆಳವಣಿಗೆ, ರೇಷ್ಮೆ ಗೂಡುಗಳ ಉತ್ಪಾದನೆ ಹಾಗೂ ಕಚ್ಚಾ ರೇಷ್ಮೆ ಉತ್ಪಾದನೆ ಮೊದಲಾದ ಕಾರ್ಯಗಳಲ್ಲಿ ನಿರತವಾಗಿದೆ. ಅಲ್ಲದೆ ಗ್ರಾಮೀಣ ಪ್ರದೇಶಗಳಲ್ಲಿ ಉದ್ಯೋಗಾವಕಾಶವನ್ನು ಸೃಷ್ಟಿಸುವುದರಲ್ಲಿ ಪ್ರಧಾನ ಪಾತ್ರ ವಹಿಸುತ್ತಿದೆ.

ಪ್ರಮುಖ ಉದ್ಯೋಗ ಜನಕ ಕ್ಷೇತ್ರಗಳಲ್ಲಿ ರೇಷ್ಮೆ ತಯಾರಿಕೆ ಒಂದಾಗಿದೆ ಮತ್ತು ಗ್ರಾಮಾಂತರ ಪ್ರದೇಶಗಳಲ್ಲಿ ಉದ್ಯೋಗಾವಕಾಶವನ್ನು ಕಲ್ಪಿಸುವುದರಲ್ಲಿ ಇದರ ಬೆಳವಣಿಗೆ ವಿಶೇಷ ಪಾತ್ರವನ್ನು ವಹಿಸುತ್ತದೆ. ಡಿಸೆಂಬರ್-೨೦೧೫ರ ಅಂತ್ಯಕ್ಕೆ ಹಿಪ್ಪು ನೇರಳೆ ಬೆಳೆದ ಪ್ರದೇಶವು ರಾಜ್ಯದಲ್ಲಿ ಸುಮಾರು ೮೭೯೨.೦೫ ಹೆಕ್ಟೇರ್‌ಗಳಾಗಿದೆ. ವಿವರಗಳನ್ನು ಕೋಷ್ಟಕ ೫.೨೦ರಲ್ಲಿ ನೀಡಲಾಗಿದೆ. ಇದೇ ಅವಧಿಯಲ್ಲಿ ರೇಷ್ಮೆಗೂಡಿನ ಉತ್ಪಾದನೆ, ರೇಷ್ಮೆ ಗೂಡುಗಳ ಮಾರಾಟ, ಉತ್ಪಾದಿಸಲ್ಪಟ್ಟ ಕಚ್ಚಾ ರೇಷ್ಮೆ ೨೦೧೪-೧೫ ಕ್ಕೆ ಹೋಲಿಸಿದಾಗ ೨೦೧೫-೧೬ರಲ್ಲಿ ಅಧಿಕವಾಗಿದೆ ಹಾಗೂ ಕೈಗಾರಿಕಾ ಉದ್ಯೋಗಾವಕಾಶ ೨೦೧೪-೧೫ಕ್ಕೆ ಹೋಲಿಸಿದಾಗ ೨೦೧೫-೧೬ರಲ್ಲಿ ಹೆಚ್ಚಾಗಿದೆ. ರಾಜ್ಯದಲ್ಲಿ ರೇಷ್ಮೆ ಉತ್ಪಾದನೆ ಹಾಗೂ ರೇಷ್ಮೆ ನೂಲಿನ ಆಮದುಗಳ ವಿವರಗಳನ್ನು ಕೋಷ್ಟಕ ೫.೨೧ರಲ್ಲಿ ನೀಡಲಾಗಿದೆ. ಕೋಷ್ಟಕ ೫.೨೨ರಲ್ಲಿ ವಿವಿಧ ಫಲಾನುಭವಿ ಆಧಾರಿತ ಕಾರ್ಯಕ್ರಮದಡಿಯಲ್ಲಿ ವೆಚ್ಚವಾಗಿರುವ ಖರ್ಚುಗಳ ವಿವರಗಳನ್ನು ಹಾಗೂ ಕೋಷ್ಟಕ ೫.೨೩ರಲ್ಲಿ ರೇಷ್ಮೆ ಬೆಳೆಗಾರರಿಗೆ ಮತ್ತು ರೇಷ್ಮೆ ನೂಲು ಬಿಚ್ಚಾಣಿಕೆದಾರರಿಗೆ ನೀಡಲಾದ ಹಣಕಾಸಿನ ನೆರವಿನ ವಿವರಗಳನ್ನು ನೀಡಲಾಗಿದೆ. ೨೦೧೪-೧೫ರ ಅವಧಿಯಲ್ಲಿ ಕರ್ನಾಟಕದ ರೇಷ್ಮೆ ಉತ್ಪಾದನೆಯು ೯೬೪೫ ಮೆಟ್ರಿಕ್ ಟನ್‌ಗಳಾಗಿತ್ತು.

### ಕೋಷ್ಟಕ ೫.೨೦: ಕರ್ನಾಟಕದಲ್ಲಿ ರೇಷ್ಮೆ ಕೈಗಾರಿಕೆ (೨೦೧೧-೧೨ ರಿಂದ ೨೦೧೫-೧೬) (ಡಿಸೆಂಬರ್ ೨೦೧೫ರ ವರೆಗೆ)

| ವಿವರ | ಘಟಕ | ೨೦೧೧-೧೨ | ೨೦೧೨-೧೩ | ೨೦೧೩-೧೪ | ೨೦೧೪-೧೫ | ಏಪ್ರಿಲ್‌ನಿಂದ ಡಿಸೆಂಬರ್ ವರೆಗೆ | | ವರ್ಷವಾರು ವ್ಯತ್ಯಾಸ ೨೦೧೫/೨೦೧೪ |
|---|---|---|---|---|---|---|---|---|
| | | | | | | ೨೦೧೪ | ೨೦೧೫ | |
| ಹಿಪ್ಪು ನೇರಳೆ ಪ್ರದೇಶ | '೦೦೦ ಹೆಕ್ಟೇರ್‌ಗಳಲ್ಲಿ | ೭೦.೯೬ | ೭೪.೧೩ | ೮೦.೮೭ | ೮೮.೪೮೯ | ೮೮.೮೮ | ೮೭.೯೩ | -೦.೯೫ |
| ರೇಷ್ಮೆ ಗೂಡುಗಳ ಉತ್ಪಾದನೆ | '೦೦೦ ಮೆ. ಟನ್ನುಗಳಲ್ಲಿ | ೫೫.೯೬ | ೪೯.೪೪ | ೬೦.೬೧ | ೬೮.೭೫೯ | ೪೪.೧೬ | ೫೩.೦೦ | ೮.೮೪ |
| ರೇಷ್ಮೆ ಗೂಡುಗಳ ಮಾರಾಟ | '೦೦೦ ಮೆ. ಟನ್ನುಗಳಲ್ಲಿ | ೫೫.೦೩ | ೪೮.೯೫ | ೪೫.೯೯ | ೪೮.೪೯೨ | ೩೯.೭೧ | ೪೧.೪೩ | ೧.೭೨ |
| ಉತ್ಪಾದಿಸಲ್ಪಟ್ಟ ಕಚ್ಚಾ ರೇಷ್ಮೆ | '೦೦೦ ಮೆ. ಟನ್ನುಗಳಲ್ಲಿ | ೭.೭೯ | ೭.೦೬ | ೮.೫೭ | ೯.೬೪೫ | ೭.೧೧೪ | ೭.೩೮೧ | ೦.೨೬೭ |
| ರೇಷ್ಮೆ ಉದ್ಯಮದಲ್ಲಿನ ಉದ್ಯೋಗಾವಕಾಶ | ಲಕ್ಷಗಳಲ್ಲಿ | ೯.೨೨ | ೯.೬೩ | ೧೦.೫೧ | ೧೧.೫೦ | ೧೧.೫೫ | ೧೧.೪೩ | -೦.೧೨ |

ಮೆ. ಟನ್ನು: ಮೆಟ್ರಿಕ್ ಟನ್ ಮೂಲ: ರೇಷ್ಮೆ ಇಲಾಖೆ

### ಕೋಷ್ಟಕ ೫.೨೧: ಕರ್ನಾಟಕದಲ್ಲಿ ರೇಷ್ಮೆ ನೂಲಿನ ಉತ್ಪಾದನೆ ಮತ್ತು ರೇಷ್ಮೆ ನೂಲಿನ ಆಮದು ವಿವರ

| ವರ್ಷ | ರೇಷ್ಮೆ ನೂಲಿನ ಉತ್ಪಾದನೆ (ಮೆ. ಟನ್ನುಗಳಲ್ಲಿ) | ರೇಷ್ಮೆ ನೂಲಿನ ಆಮದು (ಮೆ. ಟನ್ನುಗಳಲ್ಲಿ) |
|---|---|---|
| ೨೦೧೧-೧೨ | ೭೭೯೬ | ೫೬೭೩ |
| ೨೦೧೨-೧೩ | ೭೦೬೩ | ೪೯೫೧ |
| ೨೦೧೩-೧೪ | ೮೫೭೪ | ೩೨೬೦ |
| ೨೦೧೪-೧೫ | ೯೬೪೫ | ೩೪೮೯ |
| ೨೦೧೫-೧೬ (ಡಿಸೆಂಬರ್ ೨೦೧೫ರ ವರೆಗೆ) | ೭೩೮೨ | ೨೨೭೪* |

* ಏಪ್ರಿಲ್ ೧೫ ರಿಂದ ನಿಂದ ಡಿಸೆಂಬರ್ ೧೫ರ ವರೆಗೆ ಮೂಲ: ರೇಷ್ಮೆ ಇಲಾಖೆ

## ಕೋಷ್ಟಕ ೫.೨೨: ರೇಷ್ಮೆ ಕೃಷಿ ಹಾಗೂ ಉದ್ಯಮದಲ್ಲಿ ಫಲಾನುಭವಿ ಆಧಾರಿತ ಯೋಜನೆಗಳು (೨೦೧೫-೧೬)

| ಕ್ರ. ಸಂ. | ಕಾರ್ಯಕ್ರಮದ ವಿವರ | ೨೦೧೫-೧೬ ವಾರ್ಷಿಕ ಆಯವ್ಯಯ | ಡಿಸೆಂಬರ್ ೨೦೧೫ರ ಮಾಹೆಯ ವೆಚ್ಚವಾದ ಅನುದಾನ |
|---|---|---|---|
| ೧ | **ಕೆಟಲಟಿಕ್ ರೇಷ್ಮೆ ಅಭಿವೃದ್ಧಿ ಯೋಜನೆ** | | |
| A | ಸಾಮಾನ್ಯ | ೩೬೪೫.೦೦ | ೯೦೫.೫೨೫ |
| B | ವಿಶೇಷ ಘಟಕ ಯೋಜನೆ | ೨೨೩.೦ | ೫೨.೩೭೫ |
| C | ಗಿರಿಜನ ಉಪಯೋಜನೆ | ೧೩೪.೦೦ | ೩೩.೩೯೦ |
| ೨ | **ಪ್ರಧಾನ ಮಂತ್ರಿ ಕೃಷಿ ಸಿಂಚಾಯಿ ಯೋಜನೆ** | **೨೫೦೦.೦೦** | **೦** |
| ೩ | **ರೇಷ್ಮೆ ಕೃಷಿ ಅಭಿವೃದ್ಧಿಗೆ ನೂತನ ಕರ್ತೃತ್ವ ಶಕ್ತಿ ಮತ್ತು ಭಾಗೀದಾರರಿಗೆ ಸವಲತ್ತು** | | |
| A | ಸಾಮಾನ್ಯ | ೫೩೪೬.೦೦ | ೩೨೧೬.೬೩೨ |
| B | ವಿಶೇಷ ಘಟಕ ಯೋಜನೆ | ೧೪೮೪.೦೦ | ೬೧೯.೭೬೧ |
| C | ಗಿರಿಜನ ಉಪಯೋಜನೆ | ೬೭೧.೦೦ | ೨೫೩.೭೯೨ |

**ಮೂಲ: ರೇಷ್ಮೆ ಇಲಾಖೆ**

## ಕೋಷ್ಟಕ ೫.೨೩: ರೇಷ್ಮೆ ಬೆಳೆಗಾರರಿಗೆ ಮತ್ತು ರೀಲರ್‌ಗಳಿಗೆ ಒದಗಿಸಲಾದ ಸೌಲಭ್ಯಗಳು (೨೦೧೫-೧೬)

| ವಿವರಗಳು | ೨೦೧೨-೧೩ | | ೨೦೧೩-೧೪ | | ೨೦೧೪-೧೫ | | ಏಪ್ರಿಲ್ ನಿಂದ ಡಿಸೆಂಬರ್ ೨೦೧೫-೧೬ | |
|---|---|---|---|---|---|---|---|---|
| | ಫಲಾನುಭವಿಗಳು | ಮೊತ್ತ (ರೂ.ಲಕ್ಷಗಳಲ್ಲಿ) | ಫಲಾನುಭವಿಗಳು | ಮೊತ್ತ (ರೂ.ಲಕ್ಷಗಳಲ್ಲಿ) | ಫಲಾನುಭವಿಗಳು | ಮೊತ್ತ (ರೂ.ಲಕ್ಷಗಳಲ್ಲಿ) | ಫಲಾನುಭವಿಗಳು | ಮೊತ್ತ (ರೂ.ಲಕ್ಷಗಳಲ್ಲಿ) |
| **ರೇಷ್ಮೆ ಬೆಳೆಗಾರರಿಗೆ ಒದಗಿಸಲಾದ ಸೌಲಭ್ಯಗಳು** | | | | | | | | |
| ಹಿಪ್ಪು ನೇರಳೆ ನಾಟಿಗೆ | ೭೯೭೪ | ೩೬೮.೨೦ | ೯೪೩೯ | ೬೬೦.೫೭೩ | ೫೪೮೬ | ೬೨೮.೧೨ | ೫೭೫೭ | ೨೫೬೪.೪೩೧ |
| ಸಲಕರಣೆ ಖರೀದಿಗೆ | ೭೧೬೯ | ೨೧೯೯.೭೭ | ೮೨೮೨ | ೧೫೭೮.೨೨ | ೪೬೪೮ | ೮೬೭.೩೦೬ | ೧೫೫ | ೧೭.೦೩೫ |
| ರೇಷ್ಮೆ ಹುಳು ಸಾಕಣೆ ಮನೆ ನಿರ್ಮಾಣಕ್ಕೆ | ೨೭೦೯ | ೧೬೦೩.೮೦ | ೨೨೮೫ | ೧೪೬೩.೪೫ | ೨೩೪೫ | ೧೬೪೪.೫೦೬ | ೮೮೩ | ೩೯೫.೬೩೫ |
| ಹನಿ ನೀರಾವರಿ ಅಳವಡಿಕೆಗೆ | ೨೧೮೮ | ೮೩೫.೧೯ | ೧೪೨೧ | ೧೨೧೨.೨೨ | ೩೮೩೩ | ೩೩೬೬.೪೨೬ | ೦೦ | ೦೦ |
| ಒಟ್ಟು | ೨೦೦೪೦ | ೫೦೦೬.೯೬ | ೨೧೪೨೭ | ೪೯೧೪.೪೬೩ | ೧೬೩೧೨ | ೬೫೦೬.೩೫೮ | ೬೭೯೫ | ೨೯೭೭.೧೦೧ |
| **ರೀಲರ್‌ಗಳಿಗೆ ಒದಗಿಸಲಾದ ಸೌಲಭ್ಯಗಳು** | | | | | | | | |
| ಕಾಟೇಜ್ ಬೇಸಿನ್ | ೨೨೧ | ೧೧೩.೨೯೪ | ೧೮೭ | ೧೩೪.೩೪೭ | ೧೨೩ | ೧೭೨.೩೩ | ೨೩ | ೩೭.೦೦೨ |
| ಮಲ್ಟಿ ಎಂಡ್ ಬೇಸಿನ್ | ೧೩ | ೯೫.೫೭ | ೧೩ | ೯೯.೦೫ | ೨೧ | ೨೧೮.೦೧ | ೦೬ | ೨೮.೬೭೯ |
| ಸ್ವಯಂ ಚಾಲಿತ ರೀಲಿಂಗ್ ಯಂತ್ರ | ೦೫ | ೩೦೦.೦೦ | ೦೧ | ೭೫.೦೦ | ೦೪ | ೨೮೮.೧೩ | ೦೦ | ೦೦ |
| ರೀಲಿಂಗ್ ಶೆಡ್ / ಯಂತ್ರೋಪಕರಣಗಳು | ೩೪೪ | ೧೦೮.೯೬ | ೫೧೬ | ೧೪೫.೪೩೪ | ೧೨೭೦ | ೪೭೧.೫೯೫ | ೧೧೨ | ೧೩೫.೫೮೯ |
| ಒಟ್ಟು | ೫೮೩ | ೬೧೭.೮೨೪ | ೭೧೭ | ೪೫೩.೮೩೧ | ೧೪೧೮ | ೧೧೫೦.೦೬೫ | ೧೪೧ | ೨೦೧.೨೭ |

**ಮೂಲ: ರೇಷ್ಮೆ ಇಲಾಖೆ**

ರಾಜ್ಯದಲ್ಲಿ ಹಿಪ್ಪುನೇರಳೆ ನಾಟಿಯು ನಿರೀಕ್ಷಿತ ಮಟ್ಟದಲ್ಲಿರುವುದಿಲ್ಲ. ಕೇಂದ್ರ ಸರ್ಕಾರವು ೨೦೧೧ರ ಮಾರ್ಚ್ ನಲ್ಲಿ ರೇಷ್ಮೆ ನೂಲಿನ ಶುಲ್ಕವನ್ನು ಶೇ.೩೦ ರಿಂದ ಶೇ.೫ಕ್ಕೆ ಕಡಿಮೆಗೊಳಿಸಿದ ಹಿನ್ನೆಲೆಯಲ್ಲಿ ಕರ್ನಾಟಕದ ರೇಷ್ಮೆ ಉದ್ಯಮದ ಮೇಲೆ ಗಂಭೀರ ಪರಿಣಾಮವನ್ನುಂಟು ಮಾಡಿದೆ. ರೇಷ್ಮೆ ನೂಲಿನ ಧಾರಣೆ ನೇರವಾಗಿ ಚೈನಾ ದೇಶದಿಂದ ಆಮದು ಮಾಡಿಕೊಳ್ಳುವ ನೂಲಿನ ಧಾರಣೆಯ ಮೇಲೆ ಅವಲಂಬಿತಗೊಂಡಿರುವುದರಿಂದ ಆಮದು ಸುಂಕವನ್ನು ಇಳಿಸಿದಲ್ಲಿ ಭಾರತ ದೇಶದ ಕಚ್ಚಾ ರೇಷ್ಮೆ ಧಾರಣೆ ಕುಸಿತಗೊಂಡು, ಗೂಡಿನ ದರದಲ್ಲಿಯೂ ಸಹ ಇಳಿಮುಖವಾಗಿ, ರಾಜ್ಯದ ರೇಷ್ಮೆ ಬೆಳೆಗಾರರು ಉತ್ಪಾದಿಸಿದ ಗೂಡುಗಳಿಗೆ ಸಮರ್ಪಕ ದರ ದೊರೆಯದೇ, ಸಂಕಷ್ಟಕ್ಕೆ ಸಿಲುಕಿಕೊಳ್ಳುವುದರ ಜೊತೆಗೆ, ರೇಷ್ಮೆ ಭಾಗೀದಾರರು ಬವಣೆ ಪಡುವ ಪರಿಸ್ಥಿತಿ ನಿರ್ಮಾಣಗೊಳ್ಳುತ್ತದೆ.

ಮೇಲಿನ ಉಲ್ಲೇಖಿತ ಬವಣೆಗಳನ್ನು ಸರಿಪಡಿಸುವ ಸಲುವಾಗಿ ಕರ್ನಾಟಕ ಸರ್ಕಾರವು ೨೦೧೧-೧೨ರಲ್ಲಿ ರೇಷ್ಮೆ ಬೆಳೆಗಾರರು ಉತ್ಪಾದಿಸಿದ ಗೂಡುಗಳಿಗೆ ಸಂಕಷ್ಟ ಉಪಶಮನಕ್ಕಾಗಿ ಪ್ರೋತ್ಸಾಹಧನ ನೀಡುವ ಕಾರ್ಯಕ್ರಮವನ್ನು ರೂಪಿಸಿ, ರೇಷ್ಮೆ ಗೂಡಿನ ದರ ಪ್ರತಿ ಕೆ.ಜಿ.ಗೆ ರೂ.೧೬೦/- ಗಳಗಿಂತ ಕಡಿಮೆ ಬಂದಲ್ಲಿ ದರವನ್ನು ಸರಿದೂಗಿಸಲು ಪ್ರತಿ ಕೆ.ಜಿ. ಗೂಡಿಗೆ ರೂ.೩೦/- ಗಳ ಪ್ಯಾಕೇಜ್ ನೀಡುವ ಕಾರ್ಯಕ್ರಮವನ್ನು ರೂಪಿಸಿದೆ. ರಾಜ್ಯದಲ್ಲಿ ರೇಷ್ಮೆ ಬೆಳೆಗಾರರನ್ನು ಪ್ರೋತ್ಸಾಹಿಸುವ ನಿಟ್ಟಿನಲ್ಲಿ ಹಾಗೂ ರೇಷ್ಮೆ ಕೃಷಿಯಲ್ಲಿ ನಿರಂತರವಾಗಿ ತೊಡಗಿಸಿಕೊಳ್ಳಲು ಕರ್ನಾಟಕ ಸರ್ಕಾರವು ಉತ್ಪಾದಕತೆ ಮತ್ತು ಗುಣಮಟ್ಟದ ಆಧಾರದ ಮೇಲೆ ಪ್ರೋತ್ಸಾಹಧನ ನೀಡುವ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸುತ್ತಿದೆ.

ಈ ಕಾರ್ಯಕ್ರಮದಡಿಯಲ್ಲಿ ರೂ.೩೦/- ಪ್ರೋತ್ಸಾಹ ಧನವನ್ನು ಪ್ರತಿ ಕೆ.ಜಿ ಮಿಶ್ರತಳಿ ಗೂಡಿಗೆ ಹಾಗೂ ರೂ.೫೦/- ಪ್ರೋತ್ಸಾಹಧನವನ್ನು ಪ್ರತಿ ಕೆ.ಜಿ ಬೈವೋಲ್ಟೈನ್ ಗೂಡಿಗೆ ನೀಡಲಾಗುತ್ತಿದೆ. ಇದಲ್ಲದೆ, ಬಿತ್ತನೆ ಗೂಡಿಗೆ, ದ್ವಿತಳಿ ಚಾಕಿಗೆ, ಕಚ್ಚಾ ರೇಷ್ಮೆಗೆ ಪ್ರೋತ್ಸಾಹಧನ ನೀಡಲಾಗುತ್ತಿದೆ. ಮೂಲಭೂತ ಸೌಕರ್ಯಗಳಾದ ರೇಷ್ಮೆ ಹುಳು ಸಾಕಾಣಿಕೆ ಮನೆ ನಿರ್ಮಾಣ, ಚಾಕಿ ಸಾಕಾಣಿಕೆ ಕೇಂದ್ರ ಸ್ಥಾಪನೆ, ಹನಿ ನೀರಾವರಿ ಅಳವಡಿಕೆ ಮುಂತಾದ ಕಾರ್ಯಕ್ರಮಗಳಿಗೆ ರೇಷ್ಮೆ ಬೆಳೆಗಾರರಿಗೆ ಹಾಗೂ ಸ್ವಯಂಚಾಲಿತ ಯಂತ್ರ, ಮಲ್ಟಿ ಎಂಡ್ ರೀಲಿಂಗ್ ಯಂತ್ರ, ಕಾಟೇಜ್/ಫಿಲೇಚರ್ ಬೇಸಿನ್ ರೀಲಿಂಗ್ ಯಂತ್ರೋಪಕರಣಗಳ ಅಳವಡಿಕೆ ಕಾರ್ಯಕ್ರಮಗಳಿಗೆ ರೀಲರುಗಳಿಗೆ ಸೌಲಭ್ಯ ಒದಗಿಸಲಾಗುತ್ತಿದೆ.

ಕರ್ನಾಟಕ ಸರ್ಕಾರವು ರೇಷ್ಮೆ ಭಾಗೀದಾರರ ಹಿತಾಸಕ್ತಿಯನ್ನು ಕಾಪಾಡುವ ದೃಷ್ಟಿಯಿಂದ ಆಮದು ಸುಂಕವನ್ನು ಶೇಕಡಾ ೩೦ಕ್ಕೆ ಹೆಚ್ಚಿಸಲು ಕೇಂದ್ರ ಸರ್ಕಾರವನ್ನು ಕೋರಲಾಗಿತ್ತು. ಕೇಂದ್ರ ಸರ್ಕಾರವು ೨೦೧೫-೧೬ನೇ ಸಾಲಿನ ಕೇಂದ್ರ ಆಯವ್ಯಯದಲ್ಲಿ ಆಮದು ಸುಂಕವನ್ನು ಶೇಕಡಾ ೧೫ ರಿಂದ ೧೦ಕ್ಕೆ ಕಡಿಮೆಗೊಳಿಸಿದೆ. ಇದರ ಪರಿಣಾಮವಾಗಿ ಪ್ರತಿ ಕೆ.ಜಿ. ರೇಷ್ಮೆ ಗೂಡಿನ ಸರಾಸರಿ ಧಾರಣೆ ಕಡಿಮೆಯಾಗಿದೆ.

೨೦೧೪-೧೫ನೇ ಸಾಲಿನಲ್ಲಿ ಹೊಸ ಕಾರ್ಯಕ್ರಮಗಳನ್ನು ರೂಪಿಸಲಾಗಿದ್ದು, ಅವುಗಳಲ್ಲಿ ಮುಖ್ಯವಾದದ್ದು

(೧) ೧೯೮೨-೧೯೯೫ನೇ ಸಾಲುಗಳಲ್ಲಿ ಇಂಡೋ ಡಚ್ ಯೋಜನೆಯಡಿ ೧೦೨೭ ರೇಷ್ಮೆ ಬೆಳೆಗಾರರು ಹಾಗೂ ನೂಲು ಬಿಚ್ಚಾಣಿಕೆದಾರರು ಪಡೆದಿರುವ ಸಾಲವನ್ನು ಮನ್ನಾ ಮಾಡುವುದು

(೨) ಗ್ರಾಹಕರ ಸೇವಾ ಕೇಂದ್ರ ಸ್ಥಾಪನೆ ಹಾಗೂ

(೩) ರೇಷ್ಮೆ ಗೂಡು ಮಾರುಕಟ್ಟೆಗಳಲ್ಲಿ ಮಾರಾಟ ವ್ಯವಸ್ಥೆಯಲ್ಲಿ ಪಾರದರ್ಶಕವಾದ ಸಮಗ್ರ ಹರಾಜು ವ್ಯವಸ್ಥೆಗಾಗಿ ಇ-ಹರಾಜು ಪದ್ಧತಿಯನ್ನು ಅಳವಡಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

೨೦೧೫-೧೬ನೇ ಸಾಲಿನಲ್ಲಿ ಹೊಸ ಕಾರ್ಯಕ್ರಮಗಳನ್ನು ರೂಪಿಸಲಾಗಿದ್ದು, ಅವುಗಳಲ್ಲಿ ಮುಖ್ಯವಾದದ್ದು

(೧) ವಿಶಾಲ, ಜಿ೨ ಸುವರ್ಣ ಮುಂತಾದ ಅಧಿಕ ಇಳುವರಿ ನೀಡುವ ಹಿಪ್ಪುನೇರಳೆ ತಳಿಗಳನ್ನು ಜನಪ್ರಿಯಗೊಳಿಸುವುದು.

(೨) ಪ್ರಾಯೋಗಿಕ ಆಧಾರದ ಮೇಲೆ ಉತ್ತರ ಕರ್ನಾಟಕದಲ್ಲಿ ಎರಡು ಮತ್ತು ದಕ್ಷಿಣ ಕರ್ನಾಟಕದಲ್ಲಿ ಮೂರು ಒಟ್ಟು ಐದು ರೈತ ಉತ್ಪಾದಕ ಸಂಘಗಳನ್ನು ಸಂಘಟಿಸುವುದು.

(೩) ಖಾಸಗಿ ವಲಯದಲ್ಲಿ ೧೦ ಖಾಸಗಿ ಮೊಟ್ಟೆ ತಯಾರಕರನ್ನು ಗುರುತಿಸಿ ೫೦.೦೦ ಲಕ್ಷ ಬೈವೋಲ್ಟೈನ್ ಮೊಟ್ಟೆ ಉತ್ಪಾದನೆಗೆ ಪ್ರೋತ್ಸಾಹಿಸಿ ರೂ.೪.೮೬ ಕೋಟಿಗಳ ಸಹಾಯಧನವನ್ನು ಒದಗಿಸಲಾಗುವುದು.

(೪) ಸಾಂಪ್ರದಾಯಿಕ ಪ್ರದೇಶಗಳಾದ ರಾಮನಗರ, ಶಿಡ್ಲಘಟ್ಟ ಮತ್ತು ಕೊಳ್ಳೇಗಾಲಗಳಲ್ಲಿ ಸಾಮಾನ್ಯ ರೀಲಿಂಗ್ ಸೌಲಭ್ಯಗಳನ್ನು ಒದಗಿಸುವುದರೊಂದಿಗೆ ರೀಲಿಂಗ್ ಪಾರ್ಕ್‌ಗಳನ್ನು ೧೦ ಕೋಟಿ ರೂ.ಗಳ ವೆಚ್ಚದಲ್ಲಿ ಸ್ಥಾಪಿಸಲಾಗುವುದು.

(೫) ಉತ್ತರ ಕರ್ನಾಟಕದಲ್ಲಿ ಶೇ.೯೦ ರಷ್ಟು ಸಹಾಯಧನದೊಂದಿಗೆ ಮೂರು ಸ್ವಯಂಚಾಲಿತ ರೀಲಿಂಗ್ ಯಂತ್ರದ ಅಳವಡಿಕೆಗೆ ಪ್ರೋತ್ಸಾಹ ನೀಡಲಾಗುವುದು.

(೬) ಕೇಂದ್ರ ರೇಷ್ಮೆ ಮಂಡಳಿಯು ಅಭಿವೃದ್ಧಿಪಡಿಸಿರುವ ಪ್ಯೂಪಾ ಒಣಗಿಸಬಲ್ಲ ಯಂತ್ರವನ್ನು ಶೇ.೭೫ ರಷ್ಟು ಸಹಾಯ ಧನದೊಂದಿಗೆ ಅಳವಡಿಸಲು ಐದು ಉದ್ಯಮಿಗಳಿಗೆ ಬೆಂಬಲ ನೀಡಲು ಉದ್ದೇಶಿಸಲಾಗಿದೆ.

### ಕರ್ನಾಟಕ ರೇಷ್ಮೆ ಮಾರಾಟ ಮಂಡಳಿ ನಿಯಮಿತ

ಕರ್ನಾಟಕ ರೇಷ್ಮೆ ಮಾರಾಟ ಮಂಡಳಿ ನಿಯಮಿತವು ಕರ್ನಾಟಕ ಸರ್ಕಾರದ ಒಂದು ಉದ್ಯಮವಾಗಿದ್ದು, ರೇಷ್ಮೆ ಬೆಲೆಗಳಲ್ಲಿ ಸ್ಥಿರತೆ ಕಾಯ್ದುಕೊಳ್ಳಲು ಹಾಗೂ ಮಾರುಕಟ್ಟೆ ಮಧ್ಯೆ ಪ್ರವೇಶಮಾಡಿ ರೈತರ ಮತ್ತು ರೀಲರುಗಳ ಹಿತ ಕಾಪಾಡುವ ಉದ್ದೇಶದಿಂದ ೧೯೭೯ರಲ್ಲಿ ಸ್ಥಾಪನೆಗೊಂಡಿರುತ್ತದೆ. ೨೦೧೪-೧೫ರಲ್ಲಿ ಮಂಡಳಿಯು ರೂ.೨೩೧೦.೦೦ ಲಕ್ಷಗಳ ವಹಿವಾಟು ನಡೆಸಿದ್ದು, ಹಿಂದಿನ ವರ್ಷದಲ್ಲಿ ವಹಿವಾಟು ರೂ.೩೪೬೦.೦೦ ಲಕ್ಷಗಳು ಇದ್ದಿತು. ಡಿಸೆಂಬರ್-೨೦೧೫ರವರೆಗೆ ವಹಿವಾಟು ರೂ.೮೦೩.೯೪ ಲಕ್ಷಗಳಾಗಿರುತ್ತದೆ. ವರ್ಷವಾರು ವಹಿವಾಟಿನ ವಿವರಗಳನ್ನು ಕೋಷ್ಟಕ ೫.೨೪ರಲ್ಲಿ ನೀಡಲಾಗಿದೆ.

**ಕೋಷ್ಟಕ ೫.೨೪: ವರ್ಷವಾರು ವಹಿವಾಟಿನ ವಿವರಗಳು (ರೂ. ಲಕ್ಷಗಳಲ್ಲಿ)**

| ವಿವರ | ೨೦೧೨-೧೩ | ೨೦೧೩-೧೪ | ೨೦೧೪-೧೫ | ೨೦೧೫-೧೬ (ಡಿಸೆಂಬರ್ ೨೦೧೫ರ ವರೆಗೆ) |
|---|---|---|---|---|
| ವಹಿವಾಟು | ೪೬೪೭.೪೦ | ೩೮೬೦.೦೦ | ೨೩೧೦.೦೦ | ೮೦೪.೦೦ |
| ಲಾಭ ತೆರಿಗೆ ನಂತರ | (-)೧೫೪.೪೭ | (-)೫೪೧.೮೨ | (-)೪೩೯.೦೦ | (-)೨೬೫.೦೦ |

**ಮೂಲ: ಕರ್ನಾಟಕ ರೇಷ್ಮೆ ಮಾರಾಟ ಮಂಡಳಿ ನಿ.**

೨೦೧೫-೧೬ ಡಿಸಂಬರ್ ವರೆಗೆ ರೇಷ್ಮೆ ವಿನಿಮಯ ಕೇಂದ್ರದ ರೇಷ್ಮೆ ನೂಲಿನ ವಹಿವಾಟು ಕಳೆದ ಸಾಲಿನ ಇದೇ ಅವಧಿಗೆ (೨೦೧೪-೧೫ ಕ್ಕೆ) ಹೋಲಿಸಿದರೆ ೭೪೨ ಟನ್ ಹೆಚ್ಚಾಗಿ ಆಗಿರುತ್ತದೆ. (ಶೇ.೫೬). ರೇಷ್ಮೆ ನೂಲಿನ ಸರಾಸರಿ ದರಗಳು ೨೦೧೪-೧೫ ನೇ ಸಾಲಿಗೆ ಹೋಲಿಸಿದಲ್ಲಿ ಫಿಲೇಚರ್ ರೇಷ್ಮೆ ಶೇ. ೨೧ ಕಡಿಮೆಯಾಗಿದ್ದು, ಚರಕಾ ರೇಷ್ಮೆ ಶೇ.೨೬ ರಷ್ಟು ಕಡಿಮೆಯಾಗಿರುತ್ತದೆ.

ಮಂಡಳಿಯು ೨೦೧೪-೧೫ ರ ವರ್ಷದಲ್ಲಿ ೬೬ ಟನ್ ಗಳ ಮೌಲ್ಯ ರೂ.೧೮.೦೧ ಕೋಟಿ ಮೊತ್ತದ ರೇಷ್ಮೆಯನ್ನು ಖರೀದಿಸಿದ್ದು, ೮೦ ಟನ್‌ಗಳ ಮೌಲ್ಯ ರೂ.೨೩.೧೦ ಕೋಟಿ ಮೊತ್ತದ ರೇಷ್ಮೆ ಮಾರಾಟ ಸಾಧಿಸಿದೆ. ೨೦೧೪-೧೫ ರಲ್ಲಿ ರೂ.೪೩೯.೦೦ ಲಕ್ಷ ನಷ್ಟ ಅನುಭವಿಸಿದೆ. ಕೋಷ್ಟಕ ೫.೨೪ರಲ್ಲಿ ರೇಷ್ಮೆ ವಿನಿಮಯ ಕೇಂದ್ರದಲ್ಲಿ ೨೦೧೦-೧೧ ರಿಂದ ೨೦೧೫-೧೬ (ಡಿಸೆಂಬರ್-೨೦೧೫ ರ ವರೆಗೆ) ರ ವರೆಗೆ ವಹಿವಾಟಾದ ರೇಷ್ಮೆ ನೂಲಿನ ಪರಿಮಾಣ ಮತ್ತು ಸರಾಸರಿ ದರಗಳ ವಿವರಗಳನ್ನು ಕೋಷ್ಟಕ ೫.೨೫ರಲ್ಲಿ ನೀಡಲಾಗಿದೆ.

**ಕೋಷ್ಟಕ ೫.೨೫: ರೇಷ್ಮೆ ವಿನಿಮಯ ಕೇಂದ್ರದಲ್ಲಿ ವಹಿವಾಟಾದ ರೇಷ್ಮೆ ನೂಲಿನ ಪರಿಮಾಣ ಮತ್ತು ಸರಾಸರಿ ದರಗಳು**

| ವರ್ಷ | ಪರಿಮಾಣ (ಟನ್ನುಗಳಲ್ಲಿ) | ಸರಾಸರಿ ದರ ರೂ.ಪ್ರತಿ ಕೆ.ಜಿ.ಗೆ | |
|---|---|---|---|
| | | ಫಿಲೇಚರ್ | ಚರಕ |
| ೨೦೧೦-೧೧ | ೧೦೩೭ | ೨೧೬೩ | ೧೯೬೨ |
| ೨೦೧೧-೧೨ | ೧೩೧೦ | ೧೯೧೩ | ೧೬೫೫ |
| ೨೦೧೨-೧೩ | ೧೨೩೮ | ೨೨೩೬ | ೨೧೮೨ |
| ೨೦೧೩-೧೪ | ೧೩೫೮ | ೨೮೬೦ | ೨೬೨೪ |
| ೨೦೧೪-೧೫ | ೨೦೫೭ | ೨೫೩೯ | ೨೨೪೯ |
| ೨೦೧೫-೧೬ (ಡಿಸೆಂಬರ್-೨೦೧೫ ರ ಅಂತ್ಯದವರೆಗೆ) | ೧೨೬೦ | ೨೧೩೧ | ೧೭೧೪ |

**ಮೂಲ: ಕರ್ನಾಟಕ ರೇಷ್ಮೆ ಮಾರಾಟ ಮಂಡಳಿ ನಿ.**

೨೦೧೪-೧೫ ನೇ ಸಾಲಿನಲ್ಲಿ ಆಮದು ರೇಷ್ಮೆಯ ಬೆಲೆಗಳು ಸ್ಥಳೀಯ ರೇಷ್ಮೆ ಬೆಲೆಗಳಿಗಿಂತ ಹೆಚ್ಚಾಗಿಯೇ ಇದ್ದಿತ್ತು. ರೇಷ್ಮೆ ಬೆಲೆಗಳಲ್ಲಿ ಸತತ ಇಳಿಕೆ ಇದ್ದು, ಏಪ್ರಿಲ್-೨೦೧೪ ರಲ್ಲಿ ಪ್ರತಿ ಕೆ.ಜಿ.ಗೆ ರೂ.೨೯೯೬ ಇದ್ದ ಫಿಲೇಚರ್ ರೇಷ್ಮೆಯು ಡಿಸೆಂಬರ್ -೨೦೧೪ ಕ್ಕೆ ಪ್ರತಿ ಕೆ.ಜಿ.ಗೆ ಸುಮಾರು ರೂ.೨೪೩೯ ಆಗಿರುತ್ತದೆ. ತದನಂತರ ಏಪ್ರಿಲ್-೨೦೧೫ ರ ನಂತರ ರೇಷ್ಮೆ ಬೆಲೆ ಕಡಿಮೆಯಾಗಿ ಡಿಸೆಂಬರ್-೨೦೧೫ ರಲ್ಲಿ ರೂ.೨೦೮೨ ಆಗಿರುತ್ತದೆ. ನವೆಂಬರ್-೨೦೧೫ ರ ವರೆಗೆ ರೇಷ್ಮೆ ಬೆಲೆಗಳಲ್ಲಿ ಪ್ರತಿ ಕೆ.ಜಿ.ಗೆ ರೂ.೫೦ ರಿಂದ ರೂ.೧೦೦ ರ ಅಂತರದಲ್ಲಿ ಬೆಲೆಗಳಲ್ಲಿ ಸ್ಥಿರತೆ ಕಂಡು ಬಂದಿದ್ದು, ಡಿಸೆಂಬರ್-೨೦೧೫ ನೇ ತಿಂಗಳಿನ ದರಗಳಲ್ಲಿ ಸುಮಾರು ರೂ.೨೦೦ ರಿಂದ ರೂ.೩೦೦ ವರೆಗೆ ಪ್ರತಿ ಕೆ.ಜಿ.ಗೆ ಏರಿಕೆ ಕಂಡು ಬಂದಿರುತ್ತದೆ. ಕೋಷ್ಟಕ ೫.೨೬ರಲ್ಲಿ ರೇಷ್ಮೆ ನೂಲಿನ ದೇಶೀಯ ಉತ್ಪಾದನೆ ಹಾಗೂ ಆಮದು ರೇಷ್ಮೆಯ ೨೦೦೭-೦೮ ರಿಂದ ೨೦೧೪-೧೫ ರ ವರೆಗಿನ ಅಂಕಿ ಅಂಶಗಳ ವಿವರಗಳನ್ನು ನೀಡಲಾಗಿದೆ.

**ಕೋಷ್ಟಕ ೫.೨೬: ರೇಷ್ಮೆ ನೂಲಿನ ದೇಶೀಯ ಉತ್ಪಾದನೆ ಹಾಗೂ ಆಮದು ರೇಷ್ಮೆಯ ಅಂಕಿ ಅಂಶಗಳ ವಿವರ**

**(೨೦೦೭-೦೮ ರಿಂದ ೨೦೧೪-೧೫ ರ ವರೆಗಿನ)**

| ವರ್ಷ | ಕರ್ನಾಟಕದ ರೇಷ್ಮೆ ಉತ್ಪಾದನೆ (ಟನ್ನುಗಳಲ್ಲಿ) | ದೇಶದೊಳಗೆ ಆಮದಾದ ರೇಷ್ಮೆ ನೂಲು (ಟನ್ನುಗಳಲ್ಲಿ) |
|---|---|---|
| ೨೦೦೭-೦೮ | ೮೨೪೦ | ೭೯೨೧ |
| ೨೦೦೮-೦೯ | ೭೨೩೮ | ೮೩೯೨ |
| ೨೦೦೯-೧೦ | ೭೩೬೦ | ೭೩೪೧ |
| ೨೦೧೦-೧೧ | ೭೩೩೮ | ೫೮೭೦ |
| ೨೦೧೧-೧೨ | ೭೭೯೬ | ೫೬೭೩ |
| ೨೦೧೨-೧೩ | ೭೦೯೩ | ೪೯೫೧ |
| ೨೦೧೩-೧೪ | ೮೫೭೪ | ೩೨೫೯ |
| ೨೦೧೪-೧೫ | ೯೬೪೫ | ೩೪೮೯ |

**ಮೂಲ: ೧. ಕೇಂದ್ರ ರೇಷ್ಮೆ ಮಂಡಳಿ ೨. ರೇಷ್ಮೆ ಇಲಾಖೆ**

ಮಂಡಳಿಯು ಆಯಾ ದಿನಗಳಂದು ಚಾಲ್ತಿಯಲ್ಲಿದ್ದ ಬೆಲೆಗಳನ್ನು ನೀಡಿ ವರ್ಷಪೂರ್ತಿ ಖರೀದಿ ಮಾಡಿರುತ್ತದೆ. ೨೦೧೪-೧೫ ನೇ ಸಾಲಿನಲ್ಲಿ ೬೬ ಟನ್ ಗಳ ಖರೀದಿ ಮತ್ತು ೮೦ ಟನ್ ರೇಷ್ಮೆ ಮಾರಾಟವಾಗಿರುತ್ತದೆ. ೩೧ ನೇ ಮಾರ್ಚ್-೨೦೧೫ ರ ಅಂತ್ಯಕ್ಕೆ ೧೦.೪೦ ಟನ್ ದಾಸ್ತಾನು ಇರುತ್ತದೆ. ಡಿಸೆಂಬರ್-೨೦೧೫ ರ ವರೆಗೆ ೪೧.೮೮ ಟನ್ ರೇಷ್ಮೆ ನೂಲು ಖರೀದಿಸಿ, ೩೫.೧೬ ಟನ್ ಮಾರಾಟ ಮಾಡಿ ಡಿಸೆಂಬರ್-೨೦೧೫ ರ ಅಂತ್ಯಕ್ಕೆ ಆಖೈರು ದಾಸ್ತಾನು ೧೭ ಟನ್ ಆಗಿರುತ್ತದೆ.

ಕಂಪನಿಯು ಪ್ರಧಾನವಾಗಿ ರೇಷ್ಮೆ ನೂಲಿನ ಬೆಲೆ ಸ್ಥಿರೀಕರಣ ಮಾಡುವ ಚಟುವಟಿಕೆ ಹೊಂದಿದ್ದು ಇದು ಸಾಮಾನ್ಯವಾಗಿ ಲಾಭರಹಿತ ಚಟುವಟಿಕೆ ಆಗಿರುತ್ತದೆ. ನಿರೀಕ್ಷೆಯಂತೆ ಕರ್ನಾಟಕದಲ್ಲಿನ ಎಲ್ಲಾ ರೇಷ್ಮೆ ವಿನಿಮಯ ಕೇಂದ್ರಗಳಲ್ಲಿ ರೇಷ್ಮೆ ನೂಲನ್ನು ಖರೀದಿಸುವ ಮೂಲಕ ರೇಷ್ಮೆ ನೂಲು ಬಿಚ್ಚಾಣಿಕೆದಾರರು ಮತ್ತು ರೈತರ ಹಿತವನ್ನು ರಕ್ಷಿಸಬೇಕಿರುತ್ತದೆ.

ಕಂಪನಿಯು ಸರ್ಕಾರದ ಅತಿ ದೊಡ್ಡ ಪರಿಮಾಣದಲ್ಲಿ ರೇಷ್ಮೆ ಖರೀದಿ ಮಾಡುವ ಸರ್ಕಾರದ ಸಂಸ್ಥೆಯಾಗಿದ್ದು ಬೆಲೆ ಸ್ಥಿರೀಕರಣವನ್ನು ಮಾಡುವಲ್ಲಿ ಹಾಗೂ ವ್ಯಾಪಾರಿಗಳ ಗುಂಪುಗಾರಿಕೆಯನ್ನು ತಡೆಯಲು ಮತ್ತು ಗೂಡು ಉತ್ಪಾದಿಸುವವರ, ನೂಲು ಬಿಚ್ಚಾಣಿಕೆದಾರರ ಹಾಗೂ ನೇಕಾರರ ಹಿತರಕ್ಷಣೆಗಾಗಿ ಶ್ರಮಿಸುತ್ತದೆ. ಕಂಪನಿಯು ಕರ್ನಾಟಕ, ತಮಿಳುನಾಡು, ತೆಲಂಗಾಣ ಮತ್ತು ಆಂಧ್ರ ಪ್ರದೇಶ ರಾಜ್ಯಗಳಾದ್ಯಂತ ಹರಡಿರುವ ಬಳಕೆದಾರರ ರೇಷ್ಮೆ ಅಗತ್ಯವನ್ನು ತನ್ನ ಮಾರಾಟ ಶಾಖೆಗಳ ಮೂಲಕ ಪೂರೈಸಲು ಬೇಕಾಗುವಷ್ಟು ದಾಸ್ತಾನನ್ನು ನಿರ್ವಹಿಸ ಬೇಕಾಗಿರುತ್ತದೆ.

## ಕರ್ನಾಟಕ ಮಾಹಿತಿ ತಂತ್ರಜ್ಞಾನ ಹಾಗೂ ಜೈವಿಕ ತಂತ್ರಜ್ಞಾನ ಸೇವೆಗಳು

ಕರ್ನಾಟಕದಲ್ಲಿ ಮಾಹಿತಿ ತಂತ್ರಜ್ಞಾನದ ಕ್ರಾಂತಿಯು ಪ್ರಪ್ರಥಮವಾಗಿ ಬೆಂಗಳೂರಿನಲ್ಲಿ ಪ್ರಾರಂಭವಾಯಿತು. ಬೆಂಗಳೂರಿನಲ್ಲಿ ಮಾಹಿತಿ ತಂತ್ರಜ್ಞಾನದ ಕ್ರಾಂತಿಯ ವಿವರಗಳು:

- ಬೆಂಗಳೂರಲ್ಲದ ಇತರ ವಲಯಗಳಿಗೆ ಐ.ಟಿ.ಬಿ.ಟಿ. ನುಗ್ಗುವಿಕೆಯೊಂದಿಗೆ ಕರ್ನಾಟಕ ಐಟಿ ನೀತಿ (ಐಟಿ, ಐಟಿಇಎಸ್, ನಾವೀನ್ಯತೆ, ಪ್ರೋತ್ಸಾಹಗಳ ನೀತಿ) ಮುಖ್ಯಾಂಶಗಳು.
- ಕರ್ನಾಟಕ ಸರ್ಕಾರ ಹಾಗೂ ನ್ಯಾಸ್ಕಾಂ ಸಹಯೋಗ ದೊಂದಿಗೆ ೨ನೇ ಸ್ಟಾರ್ಟ್‌ಅಪ್ ವೇರ್‌ಹೌಸ್ ಸ್ಥಾಪಿಸು ವುದು.
- ಅರೆ-ನಿರ್ವಾಹಕ ಸಾಹಸೋದ್ಯಮ (ವೆಂಚರ್) ಬಂಡವಾಳ ನಿಧಿ ಕರ್ನಾಟಕ ಅನಿಮೇಷನ್, ವಿಷ್ಯುಯಲ್ ಎಫೆಕ್ಟ್ಸ್, ಗೇಮಿಂಗ್ ಮತ್ತು ಕಾಮಿಕ್ಸ್ (ಕೆ.ಎ.ವಿ.ಜಿ.ಸಿ) ನೀತಿ
- ಕರ್ನಾಟಕದ ವಿದ್ಯುನ್ಮಾನ ವ್ಯವಸ್ಥೆಗಳ ವಿನ್ಯಾಸ ಹಾಗೂ ಉತ್ಪಾದನೆ ನೀತಿ ೨೦೧೩
- ಐಸಿಟಿ ಕೌಶಲ್ಯಗಳ ಅಭಿವೃದ್ಧಿ ಸೊಸೈಟಿ
- ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನದಲ್ಲಿ ಹಣಕಾಸು ಹೂಡಿಕೆ

ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನದ ವಲಯದ ಸಾಧನೆಗಳ ವಿವರಗಳನ್ನು ಕೋಷ್ಟಕ ೫.೨೭ ರಲ್ಲಿ ನೀಡಲಾಗಿದೆ.

**ಕೋಷ್ಟಕ ೫.೨೭: ಮಾಹಿತಿ ತಂತ್ರಜ್ಞಾನ ಹಾಗೂ ಜೈವಿಕ ತಂತ್ರಜ್ಞಾನದ ವಲಯದ ಸಾಧನೆಗಳು**

| ಕ್ರ. ಸಂ. | ವಿವರಗಳು | ಘಟಕ | ೨೦೧೧-೧೨ | ೨೦೧೨-೧೩ | ೨೦೧೩-೧೪ | ೨೦೧೪-೧೫ | ೨೦೧೫-೧೬ (ಏಪ್ರಿಲ್-ಡಿಸೆಂಬರ್ ವರೆಗೆ) |
|---|---|---|---|---|---|---|---|
| ೧ | ತಂತ್ರಾಂಶಗಳ ರಫ್ತು | ಕೋಟಿ ರೂ. | ೮೨೧೧೦ | ೯೫೦೪೮ | ೧೦೨೨೭೩ | ೧೦೭೧೨೫.೭೭ | ೮೧೫೬.೫ |
| ೨ | ಮಂಜೂರಾದ ಎಸ್.ಟಿ.ಪಿ. ಘಟಕಗಳು | ಸಂಖ್ಯೆ | ೨೬ | ೧೬ | ೨೪ | ೧೫ | ೧೫ |
| ೩ | ಮಂಜೂರಾದ ಎಸ್.ಟಿ.ಪಿ. ಘಟಕಗಳ ಬಂಡವಾಳ ಹೂಡಿಕೆ | ಕೋಟಿ ರೂ. | ೬೨.೭೧ | ೧೭.೦೯ | ೭೮.೧೪ | ೨೪.೦೬ | ೧೩೮.೯೯ |
| ೪ | ವಿದೇಶಿ ಬಂಡವಾಳ ಹೂಡಿಕೆ ಸಂಸ್ಥೆಗಳ ಸಂಖ್ಯೆ | ಸಂಖ್ಯೆ | ೧೯ | ೧೪ | ೧೪ | ೧೦ | ೦೯ |
| ೫ | ವಿದೇಶಿ ಸಂಸ್ಥೆಗಳು ಹೂಡಿರುವ ಬಂಡವಾಳ ಮೊತ್ತ | ಕೋಟಿ ರೂ. | ೨೧.೩೫ | ೧.೩ | ೨೯.೩೯ | ೨೩.೬೩ | ೧೫.೧೪ |
| ೬ | ಹಾರ್ಡ್‌ವೇರ್ ರಫ್ತು | ಕೋಟಿ ರೂ. | ೩೦೨೧ | ೩೨೫೦ | ೪೨೯೧.೧೦ | ೪೬೧೭.೬೧ | ೨೪೪೬ |
| ೭ | ವಿದ್ಯುನ್ಮಾನ ಉಪಕರಣ ಸಂಸ್ಥೆಗಳ ಸಂಖ್ಯೆ | ಸಂಖ್ಯೆ | ೦೧ | ೦೨ | ೦೪ | ೦೧ | ೦೦ |
| ೮ | ಹಾರ್ಡ್‌ವೇರ್ ಘಟಕಗಳು ಹೂಡಿರುವ ಬಂಡವಾಳ | ಕೋಟಿ ರೂ. | ೦.೧ | ೦.೧೧ | ೧೮೨.೦೨ | ೧೫.೪೧ | ೦೦ |
| ೯ | ಪ್ರಧಾನ ಭಾರತೀಯ ಸಂಸ್ಥೆಗಳ ಸಂಖ್ಯೆ | ಸಂಖ್ಯೆ | ೦೦ | ೦೧ | ೦೫ | ೦೦ | ೦೨ |
| ೧೦ | ಪ್ರಧಾನ ಭಾರತೀಯ ಸಂಸ್ಥೆಗಳು ತೊಡಗಿಸಿರುವ ಬಂಡವಾಳ | ಕೋಟಿ ರೂ. | ೦೦ | ೧೫.೨ | ೨೨೩.೦೫ | ೦೦ | ೧೧೩.೬೫ |
| ೧೧ | ಎಸ್.ಇ.ಎಮ್. ಸಂಸ್ಥೆಗಳ ಸಂಖ್ಯೆ | ಸಂಖ್ಯೆ | ೦೮ | ೦೩ | ೦೯ | ೦೫ | ೦೪ |
| ೧೨ | ಎಸ್.ಇ.ಎಮ್. ಸಂಸ್ಥೆಗಳು ಹೂಡಿರುವ ಬಂಡವಾಳ ಮೊತ್ತ | ಕೋಟಿ ರೂ. | ೪೧.೪೬ | ೦.೭೦ | ೭.೭೨ | ೦.೪೩ | ೧೦.೨೦ |
| ೧೩ | ಬಿ.ಪಿ.ಓ. ಕಂಪನಿಗಳ ಸಂಖ್ಯೆ | ಕೋಟಿ ರೂ. | ೦೩ | ೦೦ | ೦೦ | ೦೦ | ೦೦ |
| ೧೪ | ಬಿ.ಪಿ.ಓ. ರಫ್ತು ವ್ಯವಹಾರ ಮೊತ್ತ | ಕೋಟಿ ರೂ. | ೧೭೭೭೫ | ೨೦೩೯೨ | ೧೬೬೯೨.೭೩ | ೧೬೯೮೪.೩೭ | N/A |
| ೧೫ | ಮಂಜೂರಿಸಲಾದ ಬಿ.ಪಿ.ಓ. ಘಟಕಗಳ ಒಟ್ಟು ಬಂಡವಾಳ | ಕೋಟಿ ರೂ. | ೧.೦೨ | ೦.೬ | ೦೦ | ೦೦ | ೦೦ |

**ಮೂಲ: ಭಾರತದ ಸಾಫ್ಟ್‌ವೇರ್ ಟೆಕ್ನಾಲಜಿ ಪಾರ್ಕ್ಸ್, ಬೆಂಗಳೂರು**

## ಜೈವಿಕ ತಂತ್ರಜ್ಞಾನ

- ಜೈವಿಕ ತಂತ್ರಜ್ಞಾನ ಉತ್ಪಾದನೆಯಲ್ಲಿ ೨೦೧೩–೧೪ನೇ ಸಾಲಿನಲ್ಲಿ ರೂ.೧.೧೮ ಬಿಲಿಯನ್ ಆದಾಯ ಗಳಿಸಿ ಬೆಂಗಳೂರು ದೇಶದ ಜೈವಿಕ ತಂತ್ರಜ್ಞಾನದ ಕೇಂದ್ರವಾಗಿದೆ.
- ಜೈವಿಕ ತಂತ್ರಜ್ಞಾನ ಉದ್ಯಮದಲ್ಲಿ ಜೈವಿಕ ಔಷಧಿಯ ವಲಯವು ಪ್ರಧಾನ (ಶೇ.೬೦) ಭಾಗವಾಗಿದೆ.
- ದೇಶದ ಒಟ್ಟಾರೆ ಜೈವಿಕ ತಂತ್ರಜ್ಞಾನ ರಫ್ತಿನಲ್ಲಿ ಕರ್ನಾಟಕವು ಮೂರನೇ ಒಂದರಷ್ಟು ಪಾಲು ಹೊಂದಿದೆ.
- ದೇಶದ ಪ್ರತಿಶತ ೫೦ರಷ್ಟು ಜೈವಿಕ ತಂತ್ರಜ್ಞಾನ ಸಂಸ್ಥೆಗಳಿಗೆ ರಾಜ್ಯವು ತವರಾಗಿದೆ.
- ಬಯೋ–ವೆಂಚರ್ ನಿಧಿ ಹಾಗೂ ಜೈವಿಕ ವಿನೂತನ ಕೇಂದ್ರಗಳನ್ನು ಅತ್ಯಾಧುನಿಕ ಪ್ರಯೋಗಾಲಯ ಸೌಕರ್ಯಗಳೊಂದಿಗೆ ಸ್ಥಾಪಿಸಲಾಗುತ್ತಿದೆ.
- ವಿ.ಸಿ. ಸಂಸ್ಥೆಯ ಸಹಭಾಗಿತ್ವದಲ್ಲಿ ರೂ.೫೦ ಕೋಟಿ ಮೊತ್ತದ ನಿಧಿ ಸ್ಥಾಪನೆ.
- ಬೆಂಗಳೂರು ಜೈವಿಕ ತಂತ್ರಜ್ಞಾನ ಕೇಂದ್ರದಲ್ಲಿ ವಿನೂತನ ಸ್ಟಾರ್ಟ್–ಅಪ್ ಯೋಜನೆಗಳ ಸಂಶೋಧನೆ ಹಾಗೂ ಅಭಿವೃದ್ಧಿಗೆ ಅತ್ಯಾಧುನಿಕವಾಗಿ ರೂಪಿಸಲ್ಪಟ್ಟಿರುವ ೨೫ ಪ್ರಯೋಗಾಲಯಗಳ ಸ್ಥಾಪನೆ.
- ರಾಜ್ಯದಲ್ಲಿ ಜೈವಿಕ ತಂತ್ರಜ್ಞಾನ ಸ್ಟಾರ್ಟ್–ಅಪ್ ವಲಯವು ವಾರ್ಷಿಕ ಪ್ರತಿಶತ ೩೦ರಷ್ಟು ಬೆಳವಣಿಗೆ ಸಾಧಿಸಿದೆ.
- ಕರ್ನಾಟಕವು ದೇಶದಲ್ಲಿ ಜೈವಿಕ ತಂತ್ರಜ್ಞಾನ ನೀತಿಯನ್ನು ರೂಪಿಸಿದ ಮೊದಲ ರಾಜ್ಯವಾಗಿದೆ.
- ೮ ಜೈವಿಕ ತಂತ್ರಜ್ಞಾನ ಸಂಸ್ಥೆಗಳಲ್ಲಿ ಸ್ನಾತಕೋತ್ತರ ಡಿಪ್ಲೋಮಾ ವಿಷಯವನ್ನು ಕಲಿಸಲಾಗುತ್ತಿದ್ದು, ಮಾನವ ವರ್ಣತಂತು ಕೇಂದ್ರವು ವಿಜ್ಞಾನಿಗಳಿಗೆ ಮತ್ತು ಔಷಧಾಲಯ ಮೇಲ್ವಿಚಾರಕರಿಗೆ ತರಬೇತಿ ಮತ್ತು ಕಾರ್ಯಾಗಾರಗಳನ್ನು ಆಯೋಜಿಸುತ್ತಿದೆ. ಜೈವಿಕ ಮಾಹಿತಿ ವಿಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಂಸ್ಥೆಯು ಸ್ನಾತಕೋತ್ತರ, ಸ್ನಾತಕೋತ್ತರ ಜೈವಿಕ ವಿಜ್ಞಾನ ಮತ್ತು ಪಿ.ಹೆಚ್.ಡಿ. ಪದವಿಗಳ ಶಿಕ್ಷಣ ನೀಡುತ್ತಿದೆ.
- ಕರ್ನಾಟಕವು ಸಂಶೋಧನೆ ಮತ್ತು ಅಭಿವೃದ್ಧಿಗೆ ಸಂಬಂಧಿಸಿದಂತೆ ದಕ್ಷಿಣ ಭಾರತದಲ್ಲಿಯೇ ಅತಿ ಹೆಚ್ಚು ವೆಚ್ಚ ಮಾಡುವ (ದೇಶದಲ್ಲಿ ೩ನೇ) ರಾಜ್ಯವಾಗಿದೆ.
- ಜೈವಿಕ ತಂತ್ರಜ್ಞಾನ ಪಾರ್ಕುಗಳ ಸ್ಥಾಪನೆ.
- ಹಸಿರು ವಲಯದಲ್ಲಿ ಸಂಶೋಧನಾ ಪ್ರಯೋಗಾಲಯ ಸ್ಥಾಪನೆ.
- ಪ್ರಥಮ ಎರಡು ಉತ್ಪಾದನಾ ಉದ್ಯಮಗಳಿಗೆ ಮುಂಚೂಣಿ ಘಟಕ ಸಹಾಯಧನ ಮಂಜೂರಾತಿ.

## ಹೈನು ಉದ್ಯಮ

### ಕರ್ನಾಟಕ ಸಹಕಾರಿ ಹಾಲು ಉತ್ಪಾದಕರ ಮಹಾಮಂಡಳ

ಕರ್ನಾಟಕ ಸಹಕಾರಿ ಹಾಲು ಮಹಾಮಂಡಳಿಯು ಕರ್ನಾಟಕ ರಾಜ್ಯದ ಹೈನು ಸಹಕಾರಿ ಸಂಸ್ಥೆಗಳ ಶೃಂಗ ಸಂಸ್ಥೆಯಾಗಿದ್ದು ಸದಸ್ಯರಾಗಿರುವ ೧೩ ಜಿಲ್ಲಾ ಹಾಲು ಒಕ್ಕೂಟಗಳ ಮೂಲಕ, ರಾಜ್ಯದ ಹೈನು ಅಭಿವೃದ್ಧಿಯ ಹರಿಕಾರನಾಗಿದೆ. ಮಹಾಮಂಡಳಿಯ ಪ್ರಮುಖ ಕಾರ್ಯಗಳು ಈ ಕೆಳಗಿನಂತಿವೆ.

- ಹಾಲು ಒಕ್ಕೂಟಗಳಿಗೆ ನಿರ್ವಹಣಾ ಕೌಶಲ್ಯದ ನೆರವು ಹಾಗೂ ತಜ್ಞ ಸಲಹೆಗಳನ್ನು ನೀಡುವುದು
- ಹೈನು ಅಭಿವೃದ್ಧಿಗೆ ಅವಶ್ಯಕವಾದ ಪಶುಆಹಾರ, ವೀರ್ಯ ನಳಿಕೆಗಳು, ಪ್ಯಾಕೇಜಿಂಗ್ ಸಾಮಗ್ರಿಗಳನ್ನು, ಯು.ಎಂ.ಬಿ., ದ್ರವಸಾರಜನಕ, ಇತ್ಯಾದಿ ತಾಂತ್ರಿಕ ಸೌಲಭ್ಯಗಳನ್ನು ಒದಗಿಸುವುದು.
- ಸದಸ್ಯ ಹಾಲು ಒಕ್ಕೂಟಗಳು ಉತ್ಪಾದಿಸುವ ನಂದಿನಿ ಹಾಲು ಮತ್ತು ಹಾಲಿನ ಉತ್ಪನ್ನಗಳಿಗೆ ಮಾರುಕಟ್ಟೆ ಸೌಲಭ್ಯಗಳನ್ನು ಒದಗಿಸಿಕೊಡುವುದು; ಹೆಚ್ಚುವರಿ ಹಾಲನ್ನು ಹೊರ ರಾಜ್ಯಗಳಲ್ಲಿ ಮಾರಾಟ ಮಾಡುವುದು ಹಾಗೂ ಹಾಲಿನ ಉತ್ಪನ್ನಗಳನ್ನು ರಾಜ್ಯದ ಒಳಗೆ ಹಾಗೂ ಹೊರ ರಾಜ್ಯಗಳಲ್ಲಿ ಮಾರಾಟ ಮಾಡುವುದರೊಂದಿಗೆ, ರಫ್ತು ಮಾಡುವುದು.
- ಹಾಲು ಮತ್ತು ಹಾಲಿನ ಉತ್ಪನ್ನಗಳ ಮಾರಾಟಕ್ಕಾಗಿ ರಾಜ್ಯದಲ್ಲಿ ಹಾಗೂ ಹೊರ ರಾಜ್ಯಗಳಲ್ಲಿ ವಿತರಣಾ ಜಾಲ ನಿರ್ಮಿಸುವುದು.
- ರಾಜ್ಯದಲ್ಲಿ ಹೆಚ್ಚುವರಿ ಹಾಲಿರುವ ಒಕ್ಕೂಟಗಳಿಂದ ಹಾಲಿನ ಕೊರತೆಯಿರುವ ಒಕ್ಕೂಟಗಳಿಗೆ ಹಾಲು ಸರಬರಾಜು ಮಾಡುವ ಕಾರ್ಯಗಳ ಸಂಯೋಜನೆ ನಂದಿನಿಬ್ರಾಂಡ್ ಅಭಿವೃದ್ಧಿಗಾಗಿ ನಿರಂತರ ಪ್ರಚಾರ ಕಾರ್ಯಗಳು.
- ಹಾಲು ಒಕ್ಕೂಟಗಳ ಹೆಚ್ಚುವರಿ ಹಾಲಿನ ಸಂಸ್ಕರಣೆ ಹಾಗೂ ಮೌಲ್ಯವರ್ಧಿತ ಉತ್ಪನ್ನಗಳ ತಯಾರಿಕೆಗಾಗಿ ಮದರ್ ಡೈರಿ, ಉತ್ಪನ್ನಗಳ ಡೈರಿ, ಹಾಗೂ ಫೀಡರ್ ಬ್ಯಾಲೆನ್ಸಿಂಗ್ ಡೈರಿಗಳ ಸ್ಥಾಪನೆ.
- ಕೇಂದ್ರ ಖರೀದಿ ವ್ಯವಸ್ಥೆಯ ಮೂಲಕ ಹಾಲು ಮತ್ತು ಹಾಲು ಉತ್ಪನ್ನಗಳ ತಯಾರಿಕೆಗೆ ಅವಶ್ಯಕವಾದ ಕಚ್ಚಾಪದಾರ್ಥಗಳ ಖರೀದಿ.
- ನಂದಿನಿ ಹಾಲು ಮತ್ತು ಹಾಲು ಉತ್ಪನ್ನಗಳ ಮಾರಾಟ ದರಗಳನ್ನು ನಿಗದಿಪಡಿಸುವುದು.
- ವಿವಿಧ ಒಕ್ಕೂಟಗಳಲ್ಲಿ ನಿರ್ದಿಷ್ಟ ಪ್ರಮಾಣದಲ್ಲಿ ತಯಾರಿಸಬೇಕಾದ ನಂದಿನಿ ಹಾಲಿನ ಉತ್ಪನ್ನಗಳನ್ನು ನಿಗದಿಗೊಳಿಸುವುದು ಹಾಗೂ ವಿವಿಧ ತಯಾರಿಕಾ ಸಾಮರ್ಥ್ಯಗಳನ್ನು ಯೋಜಿಸುವುದು.
- ಹಾಲಿನ ಉತ್ಪಾದನೆ, ಹಾಲು ಶೇಖರಣೆ ಹಾಗೂ ಸಂಸ್ಕರಣೆಗೆ, ಮತ್ತು ಮಾರಾಟಕ್ಕಾಗಿ ದೂರಗಾಮಿ ಯೋಜನೆಗಳನ್ನು ಯೋಜಿಸಿ ಅನುಷ್ಠಾನಗೊಳಿಸುವುದು.

- ಜಿಲ್ಲಾ ಹಾಲು ಒಕ್ಕೂಟಗಳಲ್ಲಿ ವಿವಿಧ ಅಭಿಯಂತರ ವ್ಯವಸ್ಥೆಗಳು ಹಾಗೂ ಮೂಲಭೂತ ಸೌಕರ್ಯಗಳನ್ನು ಕಾರ್ಯೋದ್ಯುಕ್ತ ಆಧಾರದ ಮೇಲೆ ಯೋಜಿಸಿ, ನಿರ್ಮಿಸಿ, ಚಾಲನೆಗೊಳಿಸಿ ಹಸ್ತಾಂತರಿಸುವುದು.
- ಜಿಲ್ಲಾ ಹಾಲು ಒಕ್ಕೂಟಗಳಿಗೆ ಅವಶ್ಯವಿದ್ದಾಗ ಧನ ಸಹಾಯ ಹಾಗೂ ತಾಂತ್ರಿಕ ಪರಿಜ್ಞಾನ ನೀಡುವುದು.
- ಸಹಾಕಾರ ಅಭಿವೃದ್ಧಿ ಹೈನು ಅಭಿವೃದ್ಧಿ ಹಾಗೂ ತಾಂತ್ರಿಕ ಕುಶಲತೆಗಳ ಅಭಿವೃದ್ಧಿಗಾಗಿ ಅವಶ್ಯಕತೆ ಆಧಾರಿತ ವಿವಿಧ ತರಬೇತಿ ಕಾರ್ಯಕ್ರಮಗಳನ್ನು ರೂಪಿಸಿ ನೀಡುವುದು.
- ನಂದಿನಿ ಬ್ರಾಂಡ್ ಅಡಿಯಲ್ಲಿ ತಯಾರಿಸಿ ಮಾರಾಟವಾಗುವ ಹಾಲು ಮತ್ತು ಹಾಲಿನ ಉತ್ಪನ್ನಗಳ ಗುಣಮಟ್ಟ ನಿರ್ವಹಣೆ ಹಾಗೂ ಪರಿಶೀಲನೆ.
- ಹೈನು ಸಹಕಾರಿ ವ್ಯವಸ್ಥೆಯನ್ನು ಬಲಪಡಿಸುವುದು ಹಾಗೂ ಸಂಘರ್ಷಗಳನ್ನು ನ್ಯಾಯೋಚಿತವಾಗಿ ಪರಿಹರಿಸುವ ಕಾರ್ಯಗಳು.
- ಹೈನು ಅಭಿವೃದ್ಧಿಗಾಗಿ ರಾಜ್ಯ ಸರ್ಕಾರ, ಕೇಂದ್ರ ಸರ್ಕಾರ, ಹಾಗೂ ರಾಷ್ಟ್ರೀಯ ಹೈನು ಅಭಿವೃದ್ಧಿ ಮಂಡಳಿ, ರಾಷ್ಟ್ರೀಯ ಹೈನು ಸಂಶೋಧನಾ ಸಂಸ್ಥೆ, ಭಾರತದ ರಾಷ್ಟ್ರೀಯ ಸಹಕಾರ ಹೈನು ಮಹಾಮಂಡಳಗಳ ಒಕ್ಕೂಟ, ಮುಂತಾದ ಸಂಘ/ಸಂಸ್ಥೆಗಳೊಂದಿಗೆ ಸಮನ್ವಯ ಕಾರ್ಯಗಳು.
- ಹೈನು ಅಭಿವೃದ್ಧಿಗಾಗಿ ರಾಜ್ಯ ಸರ್ಕಾರ, ಕೇಂದ್ರ ಸರ್ಕಾರ, ಹಾಗೂ ರಾಷ್ಟ್ರೀಯ ಹೈನು ಅಭಿವೃದ್ಧಿ ಮಂಡಳಿ, ಮುಂತಾದ ಸಂಘ/ಸಂಸ್ಥೆಗಳಿಂದ ಒಕ್ಕೂಟಗಳಿಗೆ ಧನ ಸಹಾಯ ಪಡೆಯಲು ಕೇಂದ್ರ ಬಿಂದುವಾಗಿ ಸಮನ್ವಯ ಕಾರ್ಯಗಳು.
- ಭಾರತ ಸರ್ಕಾರದ ಕಾರ್ಯಕ್ರಮಗಳಾದ ಸ್ಟೆಪ್, ಶುದ್ಧ ಹಾಲು ಉತ್ಪಾದನೆ, ಮುಂತಾದ ಕಾರ್ಯಕ್ರಮಗಳು; ರಾಜ್ಯ ಸರ್ಕಾರದ ಕಾರ್ಯಕ್ರಮಗಳಾದ ಯಶಸ್ವಿನಿ, ಅಮೃತ ಯೋಜನೆ, ಮುಂತಾದ ಕಾರ್ಯಕ್ರಮಗಳು; ರಾಷ್ಟ್ರೀಯ ಹೈನು ಅಭಿವೃದ್ಧಿ ಮಂಡಳಿಯ ದೂರಗಾಮಿ ಯೋಜನೆ, ರಾಷ್ಟ್ರೀಯ ಹೈನು ಯೋಜನೆ, ಮುಂತಾದ ಕಾರ್ಯಕ್ರಮಗಳನ್ನು ರಾಜ್ಯದಲ್ಲಿ ಅನುಷ್ಠಾನಗೊಳಿಸಲು ಸಮನ್ವಯ ಕಾರ್ಯಗಳು.

### 'ನಂದಿನಿ' ನಿತ್ಯ ನಿರಂತರದ ನಿಷ್ಕಾಮ ಕರ್ಮ

- ಹಾಲು ಉತ್ಪಾದಕರ ಬೆನ್ನೆಲುಬಾಗಿ ಗ್ರಾಹಕರಿಗೆ ಆಕರ್ಷಣೀಯವಾಗಿ ಬೆಳೆದು ಬಂದ ಹೆಸರು 'ನಂದಿನಿ'.
- ನಂದಿನಿಯು ಇಂದು ಭಾರತದಲ್ಲಿ ಸಹಕಾರಿ ಹೈನು ಉದ್ಯಮದಲ್ಲಿ ೨ನೇ ಮಟ್ಟಕ್ಕೆ ಬೆಳೆದಿದ್ದು ದಕ್ಷಿಣಭಾರತದಲ್ಲಿ ಮಂಚೂಣಿಯಲ್ಲಿದೆ.
- ಹಾಲು ಉತ್ಪಾದಕರ, ಸಂಘಗಳಿಗೆ ಹಾಲು ಒಕ್ಕೂಟಗಳಿಗೆ ಹಾಗೂ ಹಾಲು ಮಹಾಮಂಡಳಿಗೆ 'ನಂದಿನಿ' ಜೀವಾಳವಾಗಿ ಪರಿಣಮಿಸಿದೆ.
- ೬೦ ಬಗೆ ಬಗೆಯ ಹಾಲು ಉತ್ಪನ್ನಗಳನ್ನು ೨೦೦ ವಿವಿಧ ಪ್ಯಾಕ್‌ಗಳಲ್ಲಿ ಹೊಂದಿ ಗ್ರಾಹಕರಿಗೆ ನೀಡುವ ವಿಭಿನ್ನ ವಿವಿಧ ರೀತಿಯ ಸ್ವಾದಿಷ್ಟ ಹಾಲಿಗೆ ಹೆಸರುವಾಸಿಯಾದ 'ನಂದಿನಿ' ಇಂದು ಕರ್ನಾಟಕದಲ್ಲಿ ಮನೆಮಾತಾಗಿದೆ.

ಕರ್ನಾಟಕ ಹಾಲು ಮಹಾಮಂಡಳಿಯು ರಾಜ್ಯದ ಉದ್ದಗಲಕ್ಕೂ ವಿಸ್ತರಿಸಿದ್ದು ಹೆಚ್ಚುವರಿ ಹಾಲನ್ನು ನೆರೆಹೊರೆಯ ಮಹಾಮಂಡಳಿಗಳಿಗೆ ನೀಡುವ ಜವಬ್ದಾರಿ ಹೊತ್ತಿರುವುದಲ್ಲದೇ ಅದಕ್ಕೆ ಸಹಕಾರಿಯಾಗಿ ಹಾಲಿನ ಟ್ಯಾಂಕರ್‌ಗಳನ್ನು ಸಹ ವ್ಯವಸ್ಥೆ ಮಾಡುತ್ತಿದೆ. ಇದರ ಜೊತೆಗೆ ಕಹಾಮದ ಹಾಲಿನ ಪುಡಿ ಘಟಕಗಳ ಸಾಮರ್ಥ್ಯಕ್ಕೆ ಅನುಗುಣವಾಗಿ ರಾಜ್ಯದಲ್ಲಿ ಮತ್ತು ನೆರೆ ರಾಜ್ಯಗಳಲ್ಲಿ ಹೆಚ್ಚುವರಿ ಹಾಲನ್ನು ಪರಿವರ್ತನೆ ಮಾಡಿ ಮತ್ತು ಹಾಲಿನ ಉತ್ಪನ್ನಗಳನ್ನು ಸಗಟಾಗಿ ಬೇರೆ ರಾಜ್ಯದ ಮಹಾಮಂಡಳಿಗಳಿಗೆ ಮಾರಾಟ ಮಾಡುವ ವ್ಯವಸ್ಥೆಯನ್ನು ಸುಲಲಿತವಾಗಿ ಮಾರುಕಟ್ಟೆ ವಿಭಾಗವು ನಿರಂತರ ಮಾಡುತ್ತಿದೆ.

ಹಾಲಿನ ಬಾಟಲ್‌ಗಳಲ್ಲಿ ಹಾಲನ್ನು ಮಾರಾಟ ಮಾಡಿದ್ದು ಇಂದು ಕನಸಾಗಿ ಕಂಡರೂ ಈಗ ನನಸಾಗಿ ಉಳಿಯುವ ಹಾಲಿನ ಪೊಟ್ಟಣಗಳನ್ನು ೧೯೮೦ ರಿಂದ ವ್ಯವಸ್ಥಿತ ರೂಪದಲ್ಲಿ ಮಾರಾಟ ಮಾಡುತ್ತಿದೆ. ಮುಂದುವರಿದು "ವೈಜ್ಞಾನಿಕವಾಗಿ" ಟೆಟ್ರಾ ಫಿನೋಪ್ಯಾಕ್‌ಗಳಲ್ಲಿ ೬೦ ದಿನಗಳ ಕಾಲ ಹಾಲನ್ನು ಟೆಟ್ರಾ ಬ್ರಿಕ್ ಪ್ಯಾಕ್‌ಗಳಲ್ಲಿ ೧೮೦ ದಿವಸಗಳ ಕಾಲ ರೆಫ್ರಿಜರೇಟರ್ ಇಲ್ಲದೆ ಕೆಡದಂತೆ ಇಡಬಹುದಾದ ಸುರಕ್ಷಿತ ಬ್ಯಾಕ್ಟೀರಿಯ ರಹಿತ ಪರಿಶುದ್ಧ UHT ಹಾಲು ಟೆಟ್ರಾಪ್ಯಾಕ್‌ಗಳಲ್ಲಿ ಉತ್ಪಾದನೆ ಆಗುತ್ತಿದೆ. ನಂದಿನಿ ಶಾಪಿ, ಡೇ ಕೌಂಟರ್, ಮತ್ತು ಹಾಲಿನ ಮಾರಾಟಗಾರರ ಪಾರ್ಲರ್‌ಗಳು ರಾಜ್ಯಾದಂತ ದಿನೇ ದಿನೇ ಗ್ರಾಹಕರನ್ನು ಆಕರ್ಷಿಸುತ್ತಿದ್ದು ನಿರಂತರವಾಗಿ ನಂದಿನಿ ಹಾಲು ಮತ್ತು ಹಾಲಿನ ಉತ್ಪನ್ನಗಳನ್ನು ಲಭ್ಯವಿರುವಂತೆ ಮಾಡಿರುವುದು ಗ್ರಾಹಕರ ಪ್ರಶಂಸೆಗೆ ಪಾತ್ರವಾಗಿದೆ. 'ಚಕ್ರಗಳ ಮೇಲೆ ನಂದಿನಿ' ಎಂಬ ಸಂಚಾರಿ ವಾಹನ ಜನಪ್ರಿಯತೆ ಪಡೆಯುತ್ತಿದೆ.

ರಾಷ್ಟ್ರಾದ್ಯಂತ ಗ್ರಾಹಕರನ್ನು ವ್ಯಾಪಕವಾಗಿ ತಲುಪಲು ಗುಜರಾತ್ ಸಹಕಾರಿ ಮಾರುಕಟ್ಟೆ ಫೆಡರೇಷನಂತೆ ಕಹಾಮದಲ್ಲೂ ಕೂಡ ಡಿಸೆಂಬರ್ ೧೯೯೪ ರಿಂದ ಕೇಂದ್ರೀಯ ಮಾರುಕಟ್ಟೆಗಳ ಸಂಕೇತವಾದ ಡಿಪೋಗಳ ಅವಿಷ್ಕಾರ ಒಂದು ಸಾಧನೆಯಾಗಿದೆ. ಬೆಂಗಳೂರು, ಹುಬ್ಬಳ್ಳಿ, ಮಂಗಳೂರು, ಮೈಸೂರು, ಕಲಬುರಗಿ, ಕಣ್ಣೂರು, ಬಳ್ಳಾರಿ ಹೈದರಾಬಾದ್ ಮತ್ತು ತಿರುಪತಿಯಲ್ಲಿ ೨೧೫ ಸಗಟು ಮಾರಾಟಗಾರರ ಮೂಲಕ ಎಲ್ಲಾ ಉತ್ಪನ್ನಗಳನ್ನು ಕರ್ನಾಟಕ, ಆಂಧ್ರಪ್ರದೇಶ, ಗೋವಾ, ಕೇರಳ ಮತ್ತು ತಮಿಳುನಾಡಿನ ಸುಮಾರು ೨೦,೦೦೦ಕ್ಕೂ ಹೆಚ್ಚು ಚಿಲ್ಲರೆ ಮಾರಾಟಗಾರರಿಂದ ಹೆಚ್ಚಿನ ಮಾರಾಟ ಮಾಡುತ್ತಿದ್ದು ಇತ್ತೀಚೆಗೆ ಇದೇ ರೀತಿ ಮಾರುಕಟ್ಟೆಯನ್ನು ಇತರೇ ರಾಜ್ಯಗಳಲ್ಲೂ ಎಂದರೆ ದೆಹಲಿ, ಗೌಹಾತಿ ಮತ್ತು ಕಲ್ಕತ್ತದಲ್ಲಿಯೂ ವ್ಯವಸ್ಥೆ ಮಾಡಲಾಗುತ್ತಿದೆ. ನಂದಿನಿ ಹಾಲು ಮತ್ತು ಹಾಲಿನ ಉತ್ಪನ್ನಗಳನ್ನು ಮಾಡ್ರನ್ ರೀಟೈಲ್ ಫಾರ್ಮಾಟ್ಸ್ (MRF), ಸ್ಟೋರ್ಸ್ ಮಾಲ್‌ಗಳು, ಹೈಪರ್ ಮಾರುಕಟ್ಟೆಗಳು, ಸೂಪರ್ ಮಾರುಕಟ್ಟೆಗಳು ಹಾಗೂ ಇತರೆ ಹೊಸ ಮಾರುಕಟ್ಟೆಯ ಅವಿಷ್ಕಾರ ಮಳಿಗೆಗಳಲ್ಲಿಯೂ ಸಹ ಗ್ರಾಹಕರಿಗೆ ಲಭ್ಯವಿರುವಂತೆ ಮಾಡಿ ಎಲ್ಲಾ ವರ್ಗದ ಜನರಿಗೆ ತಲುಪಿಸಲಾಗುತ್ತಿದೆ.

ನಂದಿನಿ ಹಾಲಿನ ಉತ್ಪನ್ನಗಳನ್ನು ಚಿಲ್ಲರೆ ಮಾರಾಟವಲ್ಲದೆ, ನೆರೆರಾಜ್ಯದ ಹಾಲು ಮಂಡಳಿಗಳು, ಬಹು ರಾಷ್ಟ್ರೀಯ ಸಂಸ್ಥೆಗಳು, ಖಾಸಗಿ ವ್ಯಾಪಾರಿಗಳು ಮತ್ತು 'ತಿರುಮಲ ತಿರುಪತಿ ದೇವಸ್ಥಾನದಂತಹ' ಸಂಸ್ಥೆಗಳಿಗೆ ಸಗಟು ಮಾರಾಟವನ್ನು ಹಾಗೂ ದಕ್ಷಿಣ ಏಷ್ಯ, ಮಧ್ಯಪ್ರಾಚೀನ, ಆಫ್ರಿಕ ಹಾಗೂ ಯೂರೋಪ್ ದೇಶಗಳಿಗೆ ರಫ್ತು ಮಾಡುತ್ತಿರುವುದು ಮಾರುಕಟ್ಟೆ ವಿಭಾಗದ ಚಟುವಟಿಕೆಯಾಗಿದೆ.

### ನೂತನ ಅವಿಷ್ಕಾರಗಳು

೧. ಹೊಸ ಹಾಲು ಉತ್ಪನ್ನಗಳನ್ನು ಆಕರ್ಷಣಿಯ ಪ್ಯಾಕ್‌ಗಳಲ್ಲಿ ಬಿಡುಗಡೆ.

೨. ಸ್ಪರ್ಧಾತ್ಮಕ ದರ ಮತ್ತು ಪ್ಯಾಕೇಜ್‌ಗಳ ನಿಗದಿ.

೩. ಹೊಸ ಪ್ಯಾಕೇಜ್‌ಗಳ ವಿನ್ಯಾಸ.

೪. ಗ್ರಾಹಕರಿಗೆ ಪರಿಚಯಿಸಲು ಹಾಗೂ ಮನದಟ್ಟು ಮಾಡಲು ಜಾಹಿರಾತು/ಪ್ರಚಾರದ ಯೋಜನೆ.

ಮಾರುಕಟ್ಟೆ ವಿಭಾಗವು ಪ್ರಚಾರಾಂದೋಲನ ಕಾರ್ಯದಲ್ಲಿ ತತ್ಪರ ಆಗಿರುವುದಲ್ಲದೆ ಮಾರುಕಟ್ಟೆಗೆ ಜಾಹೀರಾತು ಸಾಮಗ್ರಿಗಳನ್ನು ಒದಗಿಸಿ, ಉತ್ಪನ್ನಗಳ ಗುಣಮಟ್ಟವನ್ನು ಸುಧಾರಿಸಲು ಕಾರ್ಯಗಾರಗಳು, ಡೀಲರ್ ಸಭೆಗಳು ಹಾಗೂ ವಿಚಾರ ಸಂಕೀರ್ಣಗಳನ್ನು ಏರ್ಪಡಿಸುತ್ತದೆ. ಮಾರುಕಟ್ಟೆ ವಿಭಾಗವು ಕಹಾಮದ ಸಾರ್ವಜನಿಕ ಸಂಪರ್ಕ ಕೆಲಸಗಳನ್ನು ಸಹ ಸಮರ್ಪಕವಾಗಿ ನಿರ್ವಹಿಸುತ್ತಿದೆ.

ನಿಮಾನಿಕ್ ಚಿನ್ಹೆಯಡಿ ಹೆಚ್ಚಿನ ಹಾಲು ಒಕ್ಕೂಟಗಳು ಪ್ಯಾಕೆಟ್ ಹಾಲನ್ನು ನಂದಿನಿ ಬ್ರ್ಯಾಂಡ್‌ನಲ್ಲಿ ಮಾರಾಟ ಮಾಡಲಾಗುತ್ತಿದ್ದು ಎನ್.ಡಿ.ಡಿ.ಬಿ.ಯವರು ಸದರಿ ಪ್ರಚಾರಕ್ಕೆ ಪ್ರಾರಂಭದಲ್ಲಿ ನೀಡಿದ ಸಹಕಾರ ಅವಿಸ್ಮರಣೀಯವಾಗಿದೆ.

### ಮಾತೃಡೇರಿ

ಕರ್ನಾಟಕ ಹಾಲು ಮಹಾಮಂಡಳಿಯ ಹೆಮ್ಮೆಯ ಘಟಕವಾದ ISO ೨೨೦೦೦-೨೦೦೫ ದೃಢೀಕರಣ ಪಡೆದಿರುವ ಮಾತೃ ಡೇರಿ ದಿನವೊಂದಕ್ಕೆ ೨ ಲಕ್ಷ ಲೀಟರ್ ಹಾಲು ಸಂಸ್ಕರಿಸಿ ಬಲ್ಕ್ ವೆಂಡಿಂಗ್ ಬೂತ್‌ಗಳ ಮೂಲಕ ಮಾರುಕಟ್ಟೆ ಮಾಡುವ ಸಾಮರ್ಥ್ಯದೊಂದಿಗೆ ೧೯೮೪ರಲ್ಲಿ ಅಂದಾಜು ಏಳು ಕೋಟಿ ರೂಪಾಯಿ ವೆಚ್ಚದಲ್ಲಿ ಪ್ರಾರಂಭಗೊಂಡಿತು. ತದನಂತರ ೧೯೯೩-೯೪ ರಲ್ಲಿ ಸ್ಯಾಚೆಟ್ ರೂಪದಲ್ಲಿ ಹಾಲಿನ ಮಾರಾಟಕ್ಕೆ ಹೆಚ್ಚು ಒತ್ತು ನೀಡುವುದರೊಂದಿಗೆ ಡೇರಿಯ ಸಂಸ್ಕರಣಾ ಸಾಮರ್ಥ್ಯವನ್ನು ೪ ಲಕ್ಷ ಲೀಟರಿಗೆ ವಿಸ್ತರಿಸಲಾಯಿತು. ಡೇರಿಯ ಸಂಸ್ಕರಣಾ ಸಾಮರ್ಥ್ಯವನ್ನು ವೃದ್ಧಿಸಲು ಹಾಗೂ ಪ್ಯಾಕ್ ಮಾಡುವ ಸಾಮರ್ಥ್ಯವನ್ನು ಹೆಚ್ಚಿಸಲು ಘಟಕದ ಸಾಮರ್ಥ್ಯವನ್ನು ದಿನವೊಂದಕ್ಕೆ ೭.೦೦ ಲಕ್ಷ ಲೀಟರ್ ಹಾಲನ್ನು ಸಂಸ್ಕರಣೆ ಮಾಡಲು ಹಾಗೂ ದಿನವೊಂದಕ್ಕೆ ೩.೦೦ ಲಕ್ಷ ಲೀಟರ್ ಹಾಲನ್ನು ಪ್ಯಾಕ್ ಮಾಡಲು ೨೦೦೮ರಲ್ಲಿ ವಿಸ್ತರಿಸಲಾಯಿತು.

ವಿವಿಧ ರೀತಿಯ **(ಸ್ಯಾಚೆಟ್ ಬಿವಿಬಿ ಮತ್ತು ಎಫ್ ಆರ್ ಪಿ)** ರೀಟೇಲುದಾರರ ಸುವ್ಯಸ್ಥಿತ ಜಾಲದ ಮೂಲಕ ಬೆಂಗಳೂರು ನಗರದ ಗ್ರಾಹಕರಿಗೆ ಸರಾಸರಿ ದಿನವೊಂದಕ್ಕೆ ಸುಮಾರು ೩.೫ ಲಕ್ಷ ಲೀಟರ್‌ಗೂ ಹೆಚ್ಚಿನ ಉತ್ತಮ ಗುಣಮಟ್ಟದ ನಂದಿನಿ ಹಾಲು ಮತ್ತು ಹಾಲಿನ ಉತ್ಪನ್ನಗಳನ್ನು ನೀಡುವಲ್ಲಿ ಮದರ್ ಡೇರಿಯು ಜವಾಬ್ದಾರಿಯುತವಾದ ಪಾತ್ರವನ್ನು ನಿರ್ವಹಿಸುತ್ತಾ ಬಂದಿದೆ.

### ಐಸ್‌ಕ್ರೀಂ ಉತ್ಪಾದನಾ ಘಟಕ

ಹಾಲು ಉತ್ಪನ್ನಗಳ ಉತ್ಪಾದನೆಯಲ್ಲಿ ವೈವಿಧ್ಯತೆಯನ್ನು ತರುವ ಸಲುವಾಗಿ ೧೯೯೭ರ ಸಾಲಿನಲ್ಲಿ ಮದರ್ ಡೇರಿಯು ದಿನವೊಂದಕ್ಕೆ ೩೦೦೦ ಲೀಟರ್ ಐಸ್ ಕ್ರೀಂ ಉತ್ಪಾದಿಸುವ ಐಸ್ ಕ್ರೀಂ ಉತ್ಪಾದನಾ ಘಟಕವನ್ನು ಸ್ಥಾಪಿಸಲಾಯಿತು. ಭಾರತದ ದಕ್ಷಿಣ ರಾಜ್ಯಗಳಿಗೆ ಅಮುಲ್ ಹೆಸರಿನಲ್ಲಿ ಗುಜರಾತ್ ಮಿಲ್ಕ್ ಮಾರ್ಕೆಟಿಂಗ್ ಫೆಡರೇಷನ್ ಮೂಲಕ ಮಾರಾಟ ಪ್ರಾರಂಭಿಸಲಾಯಿತು. ಏಪ್ರಿಲ್ -೨೦೦೦ದಿಂದ 'ನಂದಿನಿ' ಹೆಸರಿನಲ್ಲಿಯೂ ಐಸ್ ಕ್ರೀಂ ಅನ್ನು ಬೆಂಗಳೂರಿನ ಮಾರುಕಟ್ಟೆಯಲ್ಲಿ ಬಿಡುಗಡೆ ಮಾಡಲಾಯಿತು. ಹೆಚ್ಚುತ್ತಿರುವ ಬೇಡಿಕೆಯನ್ನು ಪೂರೈಸಲು ಈ ಘಟಕದ ಸಾಮರ್ಥ್ಯವನ್ನು ದಿನವೊಂದಕ್ಕೆ ೧೦೦೦೦ ಲೀಟರ್ ಐಸ್ ಕ್ರೀಂ ಉತ್ಪಾದಿಸಲು ೩.೬೯ ಕೋಟಿ ರೂಪಾಯಿ ವೆಚ್ಚದಲ್ಲಿ ಜನವರಿ ೨೦೦೬ರಲ್ಲಿ ವಿಸ್ತರಿಸಲಾಯಿತು.

### ಹಾಲಿನ ಪುಡಿ ಘಟಕ

ಸುಗ್ಗಿಯ ಕಾಲದಲ್ಲಿ ಹೆಚ್ಚುವರಿಯಾಗುವ ಹಾಲನ್ನು ಹಾಲಿನ ಪುಡಿಯಾಗಿ ಪರಿವರ್ತಿಸಲು ಕರ್ನಾಟಕ ಹಾಲು ಮಹಾಮಂಡಳಿಯು ೨೦೦೨ರಲ್ಲಿ ದಿನವೊಂದಕ್ಕೆ ೩.೪ ಲಕ್ಷ ಲೀಟರ್ ಹಾಲನ್ನು ೩೦ ಟನ್ ಹಾಲಿನಪುಡಿಯಾಗಿ ಪರಿವರ್ತಿಸುವ ಸಾಮರ್ಥ್ಯ ಹೊಂದಿರುವ ಘಟಕವನ್ನು ಮದರ್ ಡೇರಿಯಲ್ಲಿ ಪ್ರಾರಂಭಿಸಿತು. ಘಟಕದಲ್ಲಿ ಆಗ್ಲೋಮೆರೇಟೆಡ್ ಕೆನೆರಹಿತ ಹಾಲಿನಪುಡಿ ಡೇರಿ ವೈಟ್ನರ್ ಮತ್ತು ಕೆನೆಭರಿತ ಹಾಲಿನ ಪುಡಿ ಉತ್ಪಾದನೆ (Lecithination ನೊಂದಿಗೆ) ಮಾಡಲಾಗುತ್ತಿದೆ. ಇದಲ್ಲದೆ ಹಾಲಿನ ಪುಡಿಯನ್ನು ಸಗಟು ಮತ್ತು ರಿಟೇಲ್ ಪ್ಯಾಕ್‌ಗಳಲ್ಲಿಯೂ ಸಹ ಉತ್ಪಾದನೆ ಮಾಡಲಾಗುತ್ತಿದೆ.

- ಮದರ್ ಡೇರಿಯು ಉತ್ಪನ್ನಗಳ ಉತ್ತಮ ಗುಣಮಟ್ಟ ಹಾಗೂ ಸ್ವಚ್ಛತೆಗೆ ಹೆಚ್ಚು ಪ್ರಾಧಾನ್ಯತೆ ನೀಡುತ್ತಿರುವ ಕಾರಣ ೨೦೦೦ನೇ ಇಸವಿಯಲ್ಲಿ ISO ೯೦೦೧-೨೦೦೦ ದೃಢೀಕರಣವನ್ನು ಪಡೆದಿದ್ದು ೨೦೦೮ ಸಾಲಿನಲ್ಲಿ ISO ೨೨೦೦೦-೨೦೦೫ ದೃಢೀಕರಣವನ್ನು ಪಡೆದಿದೆ.

- ಹಾಲಿನ ಪುಡಿ, ತುಪ್ಪ, ಬೆಣ್ಣೆ, ಕೆನೆಭರಿತ ಹಾಲಿನ ಪುಡಿ ಮತ್ತು ಡೈರಿ ವೈಟ್ನರ್‌ಗಳ ಉತ್ಪಾದನೆ ಹಾಗೂ ಮಾರಾಟಕ್ಕೆ ಸಂಬಂಧಿಸಿದಂತೆ ಮದರ್ ಡೇರಿಗೆ ರಫ್ತು ಪರವಾನಗಿ ದೊರೆತಿದೆ.

- ಡೇರಿಯು ಇಂಧನ ಉಳಿತಾಯ ಕಾರ್ಯಕ್ರಮವನ್ನು ಯಶಸ್ವಿಯಾಗಿ ಕೈಗೊಂಡಿದ್ದು ಭಾರತ ಸರ್ಕಾರದ ಬ್ಯೂರೋ ಆಫ್ ಎನರ್ಜಿ ಎಫಿಷಿಯನ್ಸಿಯಿಂದ ಅರ್ಹತಾ ಪತ್ರದಿಂದ ಪುರಸ್ಕೃತಗೊಂಡಿದೆ. ಅಲ್ಲದೆ ಕೆಆರ್‌ಇಡಿಎಲ್ ಸಂಸ್ಥೆಯಿಂದ ಡೇರಿ ವಿಭಾಗದಲ್ಲಿ ಪ್ರಥಮ ಸ್ಥಾನದ ಗೌರವಕ್ಕೆ ಪಾತ್ರವಾಗಿದೆ.

- ಡೇರಿಯ ಎಲ್ಲಾ ವಿಭಾಗಗಳ ಚಟುವಟಿಕೆಗಳ ಬೆಂಬಲವಾಗಿ ಮಾಹಿತಿ ತಂತ್ರಜ್ಞಾನವನ್ನು ೨೦೦೫ರಿಂದ ಅಳವಡಿಸಿಕೊಂಡಿದ್ದು ಇದರಿಂದ ತಾರ್ಕಿಕ ಸುಧಾರಣೆಯು ಸಾಧ್ಯವಾಗಿರುವುದರಿಂದ ಕಾರ್ಯ ಸಮರ್ಥತೆಯ ರಚನೆಗೆ ಕಾರಣವಾಗಿದೆ. ಪ್ರಸ್ತುತ ಡೇರಿಯ ಎಲ್ಲಾ ಕಾರ್ಯಚಟುವಟಿಕೆಗಳ ಗಣಕೀಕೃತಗೊಂಡಿದ್ದು ERP ಸಂಪೂರ್ಣವಾಗಿ ಜಾರಿಯಲ್ಲಿರುತ್ತದೆ.

### ನಂದಿನಿ ಹೈ-ಟೆಕ್ ಪ್ರಾಡಕ್ಟ್ ಪ್ಲಾಂಟ್ , ಚನ್ನರಾಯಪಟ್ಟಣ

ಹಾಸನ ಜಿಲ್ಲೆಯ ಚನ್ನರಾಯಪಟ್ಟಣ ತಾಲ್ಲೂಕಿನ ಬಳ ಕಹಾಮವು ಹಾಸನ, ಮೈಸೂರು ತುಮಕೂರು, ಶಿವಮೊಗ್ಗ ಹಾಗೂ ಮಂಡ್ಯ ಹಾಲು ಒಕ್ಕೂಟಗಳ ಹೆಚ್ಚುವರಿ ಹಾಲಿನ ಸಕಾಲಿಕ ನಿರ್ವಹಣೆ ಹಾಗೂ ಸಾಗಾಣಿಕೆ ವೆಚ್ಚ ತಗ್ಗಿಸುವ ದೃಷ್ಟಿಯಿಂದ ೩೦ ಮೆ. ಟನ್ ಸಾಮರ್ಥ್ಯದ ಹಾಲಿನ ಪುಡಿ ಘಟಕದೊಂದಿಗೆ ೪.೦೦ LLPD ಸಂಸ್ಕರಣಾ ಸಾಮರ್ಥ್ಯದ ಆಧುನಿಕ ತಂತ್ರಜ್ಞಾನದ ನೂತನ ನಂದಿನಿ ಹೈಟೆಕ್ ಪ್ರಾಡಕ್ಟ್ ಪ್ಲಾಂಟ್ ಘಟಕವನ್ನು ಉತ್ಕೃಷ್ಟ ಯಂತ್ರೋಪಕರಣಗಳನ್ನು ಅಳವಡಿಸಿ ಸ್ಥಾಪಿಸಲಾಗಿದೆ.

ಹಾಲಿನ ಸಂಸ್ಕರಣೆಗೆ ಹಾಗೂ ಹಾಲಿನಪುಡಿ ತಯಾರಿಕೆಗೆ DCS/SCADA ಆಧಾರಿತ ಅತ್ಯಾಧುನಿಕ ಸ್ವಯಂಚಾಲಿತ ಗಣಕೀಕೃತ ತಂತ್ರಜ್ಞಾನ ಮತ್ತು ಇಂಧನ ಉಳಿತಾಯದ ಹಾಗೂ HACCP ಅವಶ್ಯಕತೆಗಳಿಗೆ ಅನುಸಾರವಾಗಿರುವ ಯಂತ್ರೋಪಕರಣಗಳಿಂದ ಸುಸಜ್ಜಿತವಾಗಿರುವ ಡೈರಿ, ಪರಿಸರ ಸ್ನೇಹಿ ಅತ್ಯಾಧುನಿಕ ತಂತ್ರಜ್ಞಾನದ ಸ್ವಯಂಚಾಲಿತ ರೆಫ್ರಿಜರೇಷನ್ ಯಂತ್ರಗಾರ ಹಾಗೂ ಅತ್ಯಾಧುನಿಕ ತ್ಯಾಜ್ಯ ನೀರು ಸಂಸ್ಕರಣಾ ಘಟಕ ಹೊಂದಿದೆ. ನಂದಿನಿ ಯು.ಹೆಚ್.ಟಿ ಹಾಲಿಗೆ ಸತತವಾಗಿ ಹೆಚ್ಚುತ್ತಿರುವ ಮಾರುಕಟ್ಟೆ ಬೇಡಿಕೆಯನ್ನು ಪೂರೈಸಲು ೧.೦೦ ಐಐಈ ಸಾಮರ್ಥ್ಯದ UHT ಹಾಲಿನ ಸಂಸ್ಕರಣಾ ಮತ್ತು ಪ್ಯಾಕಿಂಗ್ ಸೌಲಭ್ಯದ ಘಟಕವನ್ನು ಪ್ರಾರಂಭಿಸಲಾಗಿದೆ. ಸದರಿ ಘಟಕದಲ್ಲಿ GL-500ML, GL-200ML GL-100MLಗಳ ವಿವಿಧ ಮಾದರಿಯ ಫಿನೊ ಹಾಲಿನ ಪ್ಯಾಕೆಟ್‌ಗಳ ಉತ್ಪಾದನೆ ಕೈಗೊಳ್ಳಲಾಗುತ್ತಿದೆ. GL-100ML ನಲ್ಲಿ ಫಿನೊ ಪ್ಯಾಕಿಂಗ್ ಮಾಡುವುದು ಈ ಘಟಕದ ವೈಶಿಷ್ಟತೆ ಆಗಿದೆ.

### ಡೆಂಪೋಡೇರಿ ಇಂಡಸ್ಟ್ರೀಸ್ ಲಿಮಿಟೆಡ್

BIFR ನಡಿಯಲ್ಲಿ ನಷ್ಟದಲ್ಲಿದ್ದ "ದಿ ಡೆಂಪೋ ಡೇರಿ ಇಂಡಸ್ಟ್ರೀಸ್ ಲಿಮಿಟೆಡ್" ನ್ನು ಕಹಾಮವು ೧೯೯೩ರಲ್ಲಿ ಎನ್‌ಡಿಡಿಬಿ ಮತ್ತು ಕರ್ನಾಟಕ ಸರ್ಕಾರದ ಆರ್ಥಿಕ ನೆರವಿನೊಂದಿಗೆ ವಶಪಡಿಸಿಕೊಂಡಿದೆ. ಡೇರಿಯು ದಿನಕ್ಕೆ ೧.೨ಲಕ್ಷ ಲೀಟರ್ ಹಾಲನ್ನು ಪರಿವರ್ತಿಸುವ ಸಾಮರ್ಥ್ಯವುಳ್ಳ ಹಾಲಿನಪುಡಿ ಘಟಕವನ್ನು ಹೊಂದಿದ್ದು ಹೆಚ್ಚುವರಿ ಹಾಲಿನಿಂದ ಬೆಣ್ಣೆ ಕೆನೆರಹಿತ ಹಾಲಿನಪುಡಿ ಮತ್ತು ತುಪ್ಪವನ್ನು ಉತ್ಪಾದಿಸುತ್ತಿದೆ.

- ೨೦೦ಎಂಎಲ್ ಶೀಶೆಗಳಲ್ಲಿ ಸ್ಟೆರಿಲೈಸ್ಡ್ ಸುವಾಸಿತ ಹಾಲು.
- ೨೦೦ಗ್ರಾಂ ಸ್ಟ್ಯಾಂಡಿ ಪೌಚ್‌ಗಳಲ್ಲಿ ಬಾದಾಮಿ ಹಾಲಿನಪುಡಿ
- ೨೦೦ಗ್ರಾಂ ಸ್ಟ್ಯಾಂಡಿ ಪೌಚ್‌ಗಳಲ್ಲಿ ಜಾಮೂನು ಮಿಕ್ಸ್
- ೨೫೦ ಗ್ರಾಂ ಪಿಪಿಬಾಕ್ಸ್‌ಗಳಲ್ಲಿ ಮೈಸೂರು ಪಾಕ್
- ೧ ಕೆ.ಜಿ ಪಾಲಿಥಿನ್ ಲೈನರ್‌ನಲ್ಲಿ ಕೆನೆರಹಿತ ಹಾಲಿನಪುಡಿ
- ೨೦೦,೫೦೦ ಎಂ.ಎಲ್ ಮತ್ತು ೧ ಲೀಟರ್ ಸ್ಯಾಚೆಟ್‌ಗಳಲ್ಲಿ ಹಾಗೂ ೫೦೦ ಎಂ.ಎಲ್ ಜಾರ್‌ಗಳಲ್ಲಿ ತುಪ್ಪ ಈ ಮುಂತಾದ ಉತ್ಪನ್ನಗಳನ್ನು ನಂದಿನಿ ಬ್ರಾಂಡ್‌ನಲ್ಲಿ ತಯಾರಿಸಿ ಕಹಾಮ ಮೂಲಕ ಮಾರಾಟ ಮಾಡಲಾಗುತ್ತಿದೆ.

### ನಂದಿನಿ ಹಾಲು ಉತ್ಪನ್ನ ಘಟಕ ಬೆಂಗಳೂರು

ನಂದಿನಿ ಮಿಲ್ಕ್ ಪ್ರಾಡಕ್ಟ್ಸ್ ಘಟಕದಲ್ಲಿ ಮೈಸೂರು ಪಾಕ್, ಪೇಡ .ಕೋವಾ, ಪ್ರೀಮಿಯಮ್ ಬಾದಾಮಿ ಬರ್ಫಿ, ಪ್ರೀಮಿಯಮ್ ಕ್ಯಾಶಿವ್ ಬರ್ಫಿ, ಡ್ರೈಫ್ರೂಟ್ ಬರ್ಫಿ, ಕೋಕೊನಟ್ ಬರ್ಫಿ ವಿವಿಧ ಪೇಡಗಳಾದ ಕೇಸರ್ ಪೇಡ, ಎಲಾಚಿ ಪೇಡ, ರೆಡಿ ಟು ಈಟ್ ಜಾಮೂನ್ ಮತ್ತು ರಸಗುಲ್ಲ, ನಂದಿನಿ ಬೈಟ್. ಜಾಮೂನ್ ಮಿಕ್ಸ್ ಮತ್ತು ಬಾದಾಮಿ ಹಾಲಿನ ಪುಡಿ ಮುಂತಾದ ವಿಶೇಷ ಸಿಹಿ ಉತ್ಪನ್ನಗಳನ್ನು ತಯಾರಿಸಲಾಗುತ್ತಿದೆ. ನಂದಿನಿ ಉತ್ಪನ್ನಗಳ ಬೇಡಿಕೆಯನ್ನು ಪೂರೈಸಲು ನೂತನ ಕಟ್ಟಡವನ್ನು ಸ್ಥಾಪಿಸಲಾಗುತ್ತಿದೆ. ಉತ್ಪನ್ನಗಳ ಗುಣಮಟ್ಟವನ್ನು ಹೆಚ್ಚಿಸಲು ಉತ್ಪಾದನೆ ಮತ್ತು ಪ್ಯಾಕಿಂಗ್ ಕಾರ್ಯವನ್ನು ಯಾಂತ್ರೀಕರಣಗೊಳಿಸಲಾಗುತ್ತಿದೆ.

### ರಾಜಾನುಕುಂಟೆ, ಗುಬ್ಬಿ, ಧಾರವಾಡ, ಶಿಕಾರಿಪುರ, ಹಾಸನದಲ್ಲಿ ಪಶು ಆಹಾರ ಮಿಶ್ರಣ ಘಟಕಗಳು

ಕರ್ನಾಟಕ ಹಾಲು ಮಹಾಮಂಡಳಿಯು ರಾಜಾನುಕುಂಟೆ (೨೦೦ ಮೆ.ಟನ್‌ಪ್ರತಿದಿನ) ಗುಬ್ಬಿ (೧೫೦ ಮೆ.ಟನ್.ಪ್ರತಿನಿಧಿ) ಧಾರವಾಡ (೨೦೦ಮೆ.ಟನ್‌ಪ್ರತಿದಿನ) ಮತ್ತು ಹಾಸನ (೫೦೦ಮೆ. ಟನ್.ಪ್ರತಿದಿನ) ಪಶುಆಹಾರ ಘಟಕಗಳನ್ನು ಹೊಂದಿದ್ದು ಈ ೫ ಘಟಕಗಳಲ್ಲಿ ಹಾಲು ಉತ್ಪಾದನೆಗೆ ಅಗತ್ಯವಿರುವ ಪ್ರಮುಖ ಸಮತೋಲನ ಆಹಾರವನ್ನು ತಯಾರಿಸಿ ನೆರೆಹೊರೆಯ ಹಾಲು ಒಕ್ಕೂಟಗಳ ಸಂಘದ ಸದಸ್ಯರಿಗೆ ಸರಬರಾಜು ಮಾಡಲಾಗುತ್ತಿದೆ. ಈ ಘಟಕಗಳು ISO ೯೦೦೧:೨೦೦೦ ಪ್ರಮಾಣ ಪತ್ರ ಪಡೆದಿದೆ.

ಈ ಘಟಕಗಳು ಪ್ರತಿ ನಿತ್ಯ ೩ ಪಾಳಿಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದು ಒಟ್ಟಾರೆ ಸಾಮರ್ಥ್ಯ ಬಳಕೆಯಲ್ಲಿ ಶೇ.೧೦೦ ಕ್ಕೂ ಮೀರಿ ಸಾಧನೆಗೈದಿವೆ. ರಾಜಾನುಕುಂಟೆ ಘಟಕದಲ್ಲಿ ಯೂರಿಯ, ಕಾಕಂಬಿ ನೆಕ್ಕುಬಿಲ್ಲೆಗಳನ್ನು ತಯಾರಿಸುವ ಸೌಲಭ್ಯವಿದ್ದು (ಯು.ಎಂ.ಬಿ) ಸುಮಾರು ೧೮.೦೦೦ ನೆಕ್ಕು ಬಿಲ್ಲೆಗಳನ್ನು (ಪ್ರತಿ ಬಿಲ್ಲೆ ೩ಕೆ.ಜಿ) ಮಾಹೆಯಾನ ತಯಾರಿಸಿ ರೈತ ಸದಸ್ಯರಿಗೆ ಸರಬರಾಜು ಮಾಡಲಾಗುತ್ತಿದ್ದು ಈ ಖನಿಜಯುಕ್ತ ನೆಕ್ಕುಬಿಲ್ಲೆಗಳು ಹಸುಗಳ ಜೀರ್ಣಕ್ರಿಯೆಯನ್ನು ಉತ್ತಮಗೊಳಿಸುತ್ತದೆ. ಗುಬ್ಬಿ ಮತ್ತು ಹಾಸನ ಪಶು ಆಹಾರ ಘಟಕಗಳು ಗುಣಮಟ್ಟದ ಖನಿಜ ಮಿಶ್ರಣ ತಯಾರು ಮಾಡಿ ೧ ಕಿ.ಲೋ ಪ್ಯಾಕೆಟ್‌ಗಳಲ್ಲಿ ರಿಯಾಯಿತಿ ದರದಲ್ಲಿ ವಿತರಿಸುತ್ತಿದ್ದು. ರಾಜಾನುಕುಂಟೆ ಮತ್ತು ಧಾರವಾಡ ಪಶು ಆಹಾರ ಘಟಕದಲ್ಲಿಯೂ ಸಹ ಈ ಖನಿಜ ಮಿಶ್ರಣವನ್ನು ಸದ್ಯದಲ್ಲೇ ಪ್ರಾರಂಭಿಸಲಾಗುತ್ತಿದೆ.

### ನಂದಿನಿ ವೀರ್ಯಾಣು ಕೇಂದ್ರ, ಹೆಸರಘಟ್ಟ

ಭಾರತ ಸರ್ಕಾರದಿಂದ ಉತ್ತಮ ಸಾಧನೆಗಾಗಿ "ಎ" ಶ್ರೇಣಿಯ ಉತ್ಪಾದನಾ ಕೇಂದ್ರವೆಂದು ಗುರುತಿಸಿಕೊಂಡಿರುವ ನಂದಿನಿ ವೀರ್ಯಾಣು ಕೇಂದ್ರವು ರಾಜ್ಯದಲ್ಲಿನ ಜಾನುವಾರು ಸಂತತಿಗಳಾದ ಹಸುಗಳು ಮತ್ತು ಎಮ್ಮೆಗಳಲ್ಲಿ ಹಾಲಿನ ಇಳುವರಿ ಹೆಚ್ಚಿಸಲು ಅವಶ್ಯಕವಿರುವ ಗುಣಮಟ್ಟದ ವೀರ್ಯಾನಳಿಕೆಗಳನ್ನು ಉತ್ಪಾದಿಸಿ, ಉತ್ತಮ ವಂಶಾವಳಿ ಹೊಂದಿರುವ ಉತ್ಕೃಷ್ಟ ಹಾಗೂ ರೋಗಮುಕ್ತ ಹೋರಿಗಳಿಂದ ವೀರ್ಯವನ್ನು ಶೇಖರಿಸಿ ಸಂಸ್ಕರಿಸಲಾದ ಗುಣ ಮಟ್ಟದ ಘನೀಕೃತ ವೀರ್ಯನಳಿಕೆಗಳನ್ನು ಕರ್ನಾಟಕ ಹಾಲು ಮಹಾಮಂಡಳಿಯ ವ್ಯಾಪ್ತಿಯ ಹಾಲು ಒಕ್ಕೂಟಗಳ ಮೂಲಕ ಹಾಲು ಉತ್ಪಾದಕರ ಕೃತಕ ಗರ್ಭಧಾರಣಾ ಕೇಂದ್ರಗಳಿಗೆ ತಲುಪಿಸುತ್ತಿದೆ. ಘಟಕದ ಈಗಿನ ವಾರ್ಷಿಕ ೩.೦ ದಶಲಕ್ಷ ವೀರ್ಯ ನಳಿಕೆಗಳ ಉತ್ಪಾದನೆಯನ್ನು ೨೦೧೭-೧೮ನೇ ವರ್ಷದ ಅಂತ್ಯಕ್ಕೆ ೪.೫ ದಶಲಕ್ಷ ಹೆಚ್ಚಿಸಲು ನೆರವಾಗುವಂತೆ ನ್ಯಾಷನಲ್ ಡೈರಿ ಪ್ಲಾನ್ ಫೇಸ್ ೧ ರ ಅಡಿಯಲ್ಲಿ ನಂದಿನಿ ವೀರ್ಯಾಣು ಕೇಂದ್ರವನ್ನು ಬಲಪಡಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.ಇದಲ್ಲದೆ ನ್ಯಾಷನಲ್ ಡೈರಿ ಪ್ಲಾನ್ ಫೇಸ್-೧ ಮೂಲಕ ಹೋಲ್‌ಸ್ಟಿನ್ ಫ್ರೀಜಿಯನ್ ತಳಿಯ ಉತ್ಕೃಷ್ಟ ಹಾಗೂ ಉತ್ತಮ ವಂಶಾವಳಿಯ ಹೋರಿ ಕರುಗಳನ್ನು ಉತ್ಪಾದಿಸಲು ಪೀಳಿಗೆ ಪರೀಕ್ಷಾ ಯೋಜನೆಯನ್ನು ಸಹ ಹಮ್ಮಿಕೊಳ್ಳಲಾಗಿದೆ.

### ನಂದಿನಿ ಪ್ಯಾಕೆಜಿಂಗ್ ಫಿಲಂ ಪ್ಲಾಂಟ್, ಮುನ್ನೇಕೊಳಾಲ, ಮಾರತ್ತಹಳ್ಳಿ ಬೆಂಗಳೂರು

ಖಾಸಗಿ ಸಂಸ್ಥೆಗಳು ಹಾಲಿನ ಪ್ಯಾಕಿಂಗ್‌ಗೆ ಬೇಕಾದ ಫಿಲಂ ಅನ್ನು ಸರಿಯಾದ ದರದಲ್ಲಿ ಸರಬರಾಜು ಮಾಡದಿದ್ದ ಹಿನ್ನಲೆಯಲ್ಲಿ ಕಹಾಮ ತನ್ನದೇ ಆದ ವಾರ್ಷಿಕ ೨೭೦೦ ಎಂ.ಟಿ. ಉತ್ಪಾದಿಸುವ ಸಾಮರ್ಥ್ಯ ಹೊಂದಿದ ಪೌಚ್ ಫಿಲಂ ಕಾರ್ಖಾನೆಯನ್ನು ಸ್ಥಾಪಿಸಿ ರಾಜ್ಯದ ಎಲ್ಲ ಒಕ್ಕೂಟಗಳಿಗೂ ಪೌಚ್ ಫಿಲಂ ಅನ್ನು ಸರಬರಾಜು ಮಾಡುತ್ತಿದೆ. ಈ ಘಟಕವು ಗರಿಷ್ಠ ಸಾಮರ್ಥ್ಯ ಬಳಕೆಯನ್ನು ಹೊಂದಿದ್ದು ಕಹಾಮದ ಸ್ವ ಸಾಮರ್ಥ್ಯವನ್ನು ಪ್ರತಿಪಾದಿಸುತ್ತಿದೆ.

### ಗಣಿಗಾರಿಕೆ ಮತ್ತು ಗಣಿ ಉದ್ಯಮ

ರಾಜ್ಯದಲ್ಲಿ ೨೦೧೫-೧೬ನೇ ಸಾಲಿನಲ್ಲಿ (ಡಿಸೆಂಬರ್ ೨೦೧೫ ಅಂತ್ಯದವರೆಗೆ), ಗಣಿ ಮತ್ತು ಭೂ ವಿಜ್ಞಾನ ಇಲಾಖೆಯು ೫೧೯ ಹೆಕ್ಟೇರ್ ಒಂದು ಸುಣ್ಣದ ಕಲ್ಲು ಗುತ್ತಿಗೆಯನ್ನು ಮಂಜೂರು ಮಾಡಿದೆ. ಆದರೆ ಹಿಂದಿನ ವರ್ಷದಲ್ಲಿ ಇಲಾಖೆಯು ೧೦೦೦.೭೩ ಹೆಕ್ಟೇರ್‌ನ ೬ ಗಣಿ ಗುತ್ತಿಗೆಯನ್ನು (೦೩ ಸುಣ್ಣದ ಕಲ್ಲು ಗಣಿಗುತ್ತಿಗೆಯನ್ನು ೯೮೩.೦೩ ಹೆಕ್ಟೇರ್, ೦೧ ಸುಣ್ಣದ ಕಲ್ಲು ಮತ್ತು ಡೋಲೋಮೈಟ್ ಗಣಿಗುತ್ತಿಗೆಯನ್ನು ೪.೮೫ ಹೆಕ್ಟೇರ್, ೦೧ ಲೈಮ್ ಶೆಲ್ ಗಣಿಗುತ್ತಿಗೆಯನ್ನು ೮.೩೧ ಹೆಕ್ಟೇರ್ ಮತ್ತು ೦೧ ಲೆಟೆರೈಟ್ ಗಣಿಗುತ್ತಿಗೆಯನ್ನು ೪.೫೪ ಹೆಕ್ಟೇರ್) ಮಂಜೂರು ಮಾಡಿತು ಮತ್ತು ೦೩ ಕಬ್ಬಿಣದ ಅದಿರು ಗಣಿಗುತ್ತಿಗೆಯನ್ನು ೨೧೫೯.೮೯ ಹೆಕ್ಟೇರ್ ವ್ಯಾಪ್ತಿಯಲ್ಲಿ ನವೀಕರಿಸಲಾಗಿದೆ.

ಪ್ರಸ್ತುತ ೨೦೧೫-೧೬ನೇ ಸಾಲಿನ ಡಿಸೆಂಬರ್ ೨೦೧೫ ಅಂತ್ಯದವರೆಗೆ, ೧೬ ಅಲಂಕಾರಿಕ ಶಿಲಾ ಗಣಿ ಗುತ್ತಿಗೆಗಳನ್ನು ಮತ್ತು ೧೬೬ ಕಟ್ಟಡದ ಕಲ್ಲಿನ ಗಣಿ ಗುತ್ತಿಗೆಗಳನ್ನು ಮಂಜೂರು ಮಾಡಿದ್ದು ೨೦೧೪-೧೫ ನೇ ಸಾಲಿನಲ್ಲಿ ೩೦ ಅಲಂಕಾರಿಕ ಶಿಲಾ ಗಣಿಗುತ್ತಿಗೆಗಳನ್ನು ೨೦೧೩-೧೪ ನೇ ಸಾಲಿನಲ್ಲಿ ೧೩ ಅಲಂಕಾರಿಕ ಶಿಲಾ ಗಣಿ ಗುತ್ತಿಗೆಗಳನ್ನು ಮಂಜೂರು ಮಾಡಲಾಗಿರುತ್ತದೆ. ಇಲಾಖೆಯು ಪ್ರಸ್ತುತ ೨೦೧೫-೧೬ನೇ ಸಾಲಿನ ಡಿಸೆಂಬರ್ ೨೦೧೫ ಅಂತ್ಯದವರೆಗಿನ ರೂ.೧೪೭೪.೭೪ ಕೋಟಿ ಗುರಿಗೆ ಮತ್ತು ವಾರ್ಷಿಕ ರೂ. ೨೦೪೮.೨೬ ಕೋಟಿಗಳ ಗುರಿಗೆ ಎದುರಾಗಿ ರೂ.೧೩೧೮.೯೩ ಕೋಟಿ ಆದಾಯವನ್ನು ಸಂಗ್ರಹಿಸಿದೆ. ೨೦೧೩-೧೪ ರಿಂದ ೨೦೧೪-೧೫ನೇ ಸಾಲಿನ ಅವಧಿಗಳಲ್ಲಿ ಉತ್ಪತ್ತಿಯಾದ ಪ್ರಮುಖ ಖನಿಜಗಳು ಹಾಗೂ ಸಂಗ್ರಹವಾದ ರಾಜಧನ ವಿವರಗಳನ್ನು ಕೋಷ್ಟಕ ೫.೨೮ ರಲ್ಲಿ ನೀಡಲಾಗಿದೆ.

**ಕೋಷ್ಟಕ ೫.೨೮: ಮುಖ್ಯ ಖನಿಜಗಳ ಉತ್ಪಾದನೆ (೨೦೧೩-೧೪ ರಿಂದ ೨೦೧೪-೧೫ರವರೆಗಿನ)**

| ಕ್ರ. ಸಂ. | ಖನಿಜ | ಉತ್ಪಾದನೆ (ಮೆ.ಟನ್) ೨೦೧೩-೧೪ | ರಾಜಧನ (ರೂ.ಗಳಲ್ಲಿ) | ಉತ್ಪಾದನೆ (ಮೆ.ಟನ್) ೨೦೧೪-೧೫ | ರಾಜಧನ (ರೂ.ಗಳಲ್ಲಿ) |
|---|---|---|---|---|---|
| ಎ. ಲೋಹದ ಖನಿಜ | | | | | |
| ೧ | ಬಾಕ್ಸೈಟ್ | ೭೪೫೦೦ | ೭೬೨೫೦೦೦ | ೧೧೫೪೦೦.೦೦ | ೧೦೬೦೫೦೦೦ |
| ೨ | ಕ್ರೋಮೈಟ್ | ೪೫೫೧೧ | ೨೯೨೪೬೧೩ | - | - |
| ೩ | ತಾಮ್ರ | - | - | ೨೦೫೦.೦೦ | ೬೧೫೦೦ |
| ೪ | ಚಿನ್ನ (ಗ್ರಾಂ) | ೧೬೩೪೫೭೫.೩೫ | ೮೧೨೯೩೦೦೬ | ೧೬೨೩೨೭೫.೨೪ | ೧೨೦೧೮೨೫೧೭ |
| ೫ | ಬೆಳ್ಳಿ (ಗ್ರಾಂ) | ೧೫೩೮೭೧.೯೦ | ೪೫೩೪೯೧ | ೨೬೮೮೦೮.೬೧ | ೨೬೬೯೧೨ |
| ೬ | ಕಬ್ಬಿಣದ ಅದಿರು | ೧೨೮೭೬೧೨ | ೧೫೦೯೯೩೨೨ | ೯೦೪೪೪೪.೪೦ | ೧೭೪೦೭೬೦೯೫.೦೦ |
| ೭ | ಕಬ್ಬಿಣದ ಅದಿರು (ಫೈನ್) | - | - | - | - |
| ೮ | ಮ್ಯಾಂಗನೀಸ್ ಅದಿರು | ೪೪೦೪೪.೬೬ | ೭೫೭೩೯೪೧ | ೩೦೩೭೮.೦೦ | ೪೦೯೬೩೨೪.೧೩ |
| | ಒಟ್ಟು-ಎ | **೩೨೪೦೧೧೪.೯೧** | **೧೧೪೯೬೯೩೭೩** | **೨೯೪೪೩೫೬.೨೫** | **೩೦೯೨೮೮೩೪೮.೧೩** |

| | | | | | |
|---|---|---|---|---|---|
| **ಬಿ. ಲೋಹಯೇತರ ಖನಿಜಗಳು** | | | | | |
| ೧ | ಕಲ್ಲುನಾರು | – | – | – | – |
| ೨ | ಕಪ್ಪು ಜೇಡಿಮಣ್ಣು | – | – | – | – |
| ೩ | ಚೀನ ಕ್ಲೈ | ೮೩೦೦ | ೬೭೬೩೯೧ | ೫೪೮೦ | ೧೩೩೩೯೯ |
| ೪ | ಕೊರಂಡಂ | – | – | – | – |
| ೫ | ಡೊಲಮೈಟ್ | ೫೨೬೪೪೫.೦೬೫ | ೩೪೩೮೧೯೮೫ | ೭೦೨೨೨೧ | ೧೧೮೫೯೩೫೦ |
| ೬ | ಡುನೈಟ್ | ೨೦೪೧ | ೧೮೬೫೩ | – | – |
| ೭ | ಫೇಲ್ಡ್ಸ್‌ಪೇರ್ | – | ೪೭೩೫೦ | ೨೧೮೫ | ೯೮೩೭೦ |
| ೮ | ಫೇಲಸೈಟ್ | ೫೪೩ | ೪೦೪೫೫ | ೭೧೭ | ೬೪೭೧೬ |
| ೯ | ಫೈರ್ ಕ್ಲೈ | – | – | – | – |
| ೧೦ | ಸೋಪ್ ಸ್ಟೋನ್ | – | – | – | – |
| ೧೧ | ಬೆಣಚುಕಲ್ಲು (ಬಿಳಿ) | ೩೫೯೪೨.೫೪ | ೧೨೫೩೮೪೮ | ೮೨೩೪೪ | ೩೬೬೬೨೮.೦೫ |
| ೧೨ | ಕಯೋಲಿನ್ | ೧೩೪೩೬ | ೧೧೨೧೩೭೫ | ೧೦೫೦ | ೪೨೪೨೦ |
| ೧೩ | ಕಯನೈಟ್ | ೮೪ | ೨೯೦೦೧೦ | ೧೭೦ | ೫೭೮೦೦ |
| ೧೪ | ಲೈಮ್‌ಶೆಲ್ | ೧೩೨೦೦ | ೧೦೯೫೮೧೪ | ೬೮೦೦ | ೪೪೨೫೦೦ |
| ೧೫ | ಸುಣ್ಣದ ಕಲ್ಲು | ೨೧೪೭೮೭೬೫.೨ | ೧೩೦೬೫೪೮೯೫೯ | ೨೪೨೯೧೭೯೫ | ೧೯೬೭೬೯೯೨೩೯ |
| ೧೬ | ಮ್ಯಾಗ್ನಸೈಟ್ | ೫೧೮೮ | ೧೫೩೦೬೩೬ | ೪೭೯೮ | ೫೦೦೬೪೯ |
| ೧೭ | ಮೊಲ್ಡಿಂಗ್ ಸ್ಯಾಂಡ್ | – | – | – | – |
| ೧೮ | ಬೆಣಚು ಕಲ್ಲು | – | – | – | – |
| ೧೯ | ಬೆಣಚುಶಿಲೆ | ೧೩೨೪೨ | ೬೯೯೫೧೯ | – | – |
| ೨೦ | ರೆಡ್‌ಓಕರ್ | – | – | – | – |
| ೨೧ | ರೆಡ್‌ಆಕ್ಸೈಡ್ | – | – | – | – |
| ೨೨ | ಸಿಲಿಕಾಸ್ಯಾಂಡ್ | ೧೬೭೧೧೫ | ೬೨೭೦೦೩೨ | ೧೧೨೬೦೮ | ೪೭೧೭೬೫೦ |
| ೨೩ | ಜೇಡಿ ಪದರಗಲ್ಲು | ೬೭೦೧೩೬ | ೩೩೫೦೫೨೦ | ೯೩೪೨೦೦ | ೩೩೨೨೦೨೪೦ |
| ೨೪ | ಬಳಪದ ಕಲ್ಲು | – | – | – | – |
| ೨೫ | ವರ್ಮಿಕ್ಯೂಲೈಟ್ | – | – | – | – |
| ೨೬ | ಬಿಳಿ ಜೇಡಿಮಣ್ಣ | – | – | – | – |
| ೨೭ | ಹಳದಿ ಹೋಕರ್ | – | – | – | – |
| ೨೮ | ಹಳದಿ ಹೋಕರ್ | – | – | – | – |
| ೨೯ | ಜೇಡಿಮಣ್ಣು | – | – | – | – |
| ೩೦ | ಅಲ್ಯೂಮಿನಿಯಂ ಲ್ಯಾಟರೈಟ್ | ೧೧೮೫೦೦ | ೫೮೮೧೧೨೪ | ೧೭೧೦೫೦ | ೬೦೫೦೦೦೦ |
| ೩೧ | ಗ್ರಾಫೈಟ್ | – | – | – | – |
| | ಒಟ್ಟು – ಬಿ | **೨೩೦೫೨೯೩೭.೮೧** | **೧೩೬೩೨೮೭೬೦೧** | **೨೬೩೧೫೪೧೮.೦೦** | **೧೮೨೯೭೫೩೫೬೧.೦೫** |
| | ಒಟ್ಟು ಎ+ಬಿ | **೨೩೩೭೬೯೫೨.೭೨** | **೧೪೭೮೨೫೬೯೭೪** | **೨೯೨೫೯೭೭೪.೨೫** | **೨೧೩೯೦೪೧೯೦೯.೧೮** |

**ಆಧಾರ: ಆಡಳಿತ ವರದಿ – ೨೦೧೪–೧೫, ಗಣಿ ಮತ್ತು ಭೂ ವಿಜ್ಞಾನ ಇಲಾಖೆ ಬೆಂಗಳೂರು, ಪುಟ ಸಂಖ್ಯೆ ೨೭ ಮತ್ತು ೨೮**

### ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃಧಿ ಸಂಸ್ಥೆ (ಕರಾಸಕೈಅನಿ)

ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮವು ಸಣ್ಣ ಕೈಗಾರಿಕೆಗಳ ವಲಯದ ಅಭಿವೃದ್ಧಿಯನ್ನು ಉತ್ತೇಜಿಸಲು ಔದ್ಯಮಿಕ ಕಟ್ಟಡಗಳನ್ನು ಒದಗಿಸುವುದು. ಸಂಗ್ರಹಣಾ ವ್ಯವಸ್ಥೆ ಮತ್ತು ಕಚ್ಚಾ ವಸ್ತುಗಳ ವಿತರಣೆ, ಸಣ್ಣ ಕೈಗಾರಿಕೆಗಳ ಉದ್ದಿಮೆದಾರರಿಗೆ ನಿರ್ವಹಣಾ ಮಾರ್ಗದರ್ಶನವನ್ನು ಒದಗಿಸುತ್ತಿದೆ. ಸಣ್ಣ ಪ್ರಮಾಣದ ಕೈಗಾರಿಕೆ ಘಟಕಗಳಿಗೆ ಅಗತ್ಯವಿರುವ ಕಚ್ಚಾ ಸಾಮಗ್ರಿಗಳ ವಿತರಣೆ ಸಲುವಾಗಿ, ನಿಗಮವು ರಾಜ್ಯದಾದ್ಯಂತ ೧೬ ಕಚ್ಚಾ ವಸ್ತುಗಳ ವಿತರಣಾ ಘಟಕಗಳ ಜಾಲವನ್ನು ಹೊಂದಿದೆ. ಸಂಸ್ಥೆಯು ಬೆಂಗಳೂರಿನಲ್ಲಿ ಮತ್ತು ಬೆಂಗಳೂರಿನ ಸುತ್ತಮುತ್ತಲನಲ್ಲಿ ಹಾಗೂ ಉಳಿದ ಜಿಲ್ಲೆಗಳಲ್ಲಿ ಸಣ್ಣ ಕೈಗಾರಿಕಾ ಘಟಕಗಳ ಕೈಗಾರಿಕಾ ನಿವೇಶನಗಳನ್ನು ಮತ್ತು ಕಟ್ಟಡಗಳನ್ನು ನಿರ್ಮಿಸಲು ಸಣ್ಣ ಕೈಗಾರಿಕಾ ಘಟಕಗಳ ಬೇಡಿಕೆಗೆ ಅನುಗುಣವಾಗಿ ಭೂಮಿಯನ್ನು ಸ್ವಾಧೀನಪಡಿಸಿಕೊಂಡಿದೆ. ನಿಗಮದಿಂದ ಕಚ್ಚಾ ವಸ್ತುಗಳ ಮಾರಾಟ, ಕೈಗಾರಿಕಾ ಕಟ್ಟಡಗಳ ನಿರ್ಮಾಣ ಮತ್ತು ಕೈಗಾರಿಕಾ ನಿವೇಶನಗಳ ಅಭಿವೃದ್ಧಿಯ ವಿವರಗಳನ್ನು ಕೋಷ್ಟಕ ೫.೨೯ರಲ್ಲಿ ನೀಡಲಾಗಿದೆ. ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮದ ಆರ್ಥಿಕ ನಿರ್ವಹಣೆಯ ವಿವರಗಳನ್ನು ಕೋಷ್ಟಕ ೫.೩೦ ರಲ್ಲಿ ನೀಡಲಾಗಿದೆ.

**ಕೋಷ್ಟಕ ೫.೨೯: ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮದ ಸಾಧನೆಗಳು**

| ವಿವರಗಳು | ಘಟಕ | ೨೦೧೧-೧೨ | ೨೦೧೨-೧೩ | ೨೦೧೩-೧೪ | ೨೦೧೪-೧೫ | ೨೦೧೫-೧೬ (ಡಿಸೆಂಬರ್ ೨೦೧೫ರ ವರೆಗೆ) |
|---|---|---|---|---|---|---|
| ಕಚ್ಚಾ ವಸ್ತುಗಳ ವಿತರಣಾ ಘಟಕಗಳು | ಸಂಖ್ಯೆ | ೨೩ | ೨೩ | ೧೭ | ೧೭ | ೧೬ |
| ಮಾರಾಟ ಮಾಡಲಾದ ಕಚ್ಚಾ ವಸ್ತುವಿನ ಮೌಲ್ಯ | ರೂ. ಕೋಟಿಗಳಲ್ಲಿ | ೮೬.೭೧ | ೬೪.೫೧ | ೫೩.೯೬ | ೪೯.೩೮ | ೧೭.೬೬ |
| ನಿರ್ಮಿಸಲಾದ ಒಟ್ಟಾರೆ ಕೈಗಾರಿಕಾ ಕಟ್ಟಡಗಳು | ಸಂಖ್ಯೆ | ೬೧೬೩ | ೬೧೬೩ | ೬೧೭೭ | ೬೧೮೦ | ೬೨೧೦ |
| ಅಭಿವೃದ್ಧಿಪಡಿಸಲಾದ ಒಟ್ಟಾರೆ ಕೈಗಾರಿಕಾ ನಿವೇಶನಗಳು | ಸಂಖ್ಯೆ | ೭೦೧೦ | ೭೧೬೪ | ೭೬೧೭ | ೮೨೫೮ | ೮೪೨೫ |

ಮೂಲ: ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ ನಿಯಮಿತ

**ಕೋಷ್ಟಕ ೫.೩೦: ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮದ ಆರ್ಥಿಕ ನಿರ್ವಹಣೆಯ ವಿವರಗಳು**

| ವರ್ಷ | ಒಟ್ಟು ಆದಾಯ | ಒಟ್ಟು ಖರ್ಚು | ನಿವ್ವಳ ಲಾಭ ತೆರಿಗೆ ನಂತರ |
|---|---|---|---|
| ೨೦೧೧-೧೨ | ೧೫೬೬೦.೯೧ | ೧೩೩೭೦.೦೬ | ೧೬೯೯.೫೦ |
| ೨೦೧೨-೧೩ | ೧೩೦೫೮.೪೧ | ೧೧೨೯೦.೮೮ | ೧೨೫೪.೧೦ |
| ೨೦೧೩-೧೪ | ೧೧೧೪೭.೦೦ | ೯೫೭೯.೦೦ | ೧೧೨೬.೦೦ |
| ೨೦೧೪-೧೫ | ೧೧೨೭೬.೦೦ | ೯೨೭೦.೦೦ | ೧೪೮೨.೦೦ |
| ೨೦೧೫-೧೬ ಮುಂಗಡ ಪತ್ರದ ಆಧಾರದ ಮೇಲೆ (ಡಿಸೆಂಬರ್ ೨೦೧೫ರ ವರೆಗೆ) | ೩೬೪೦೮.೦೦ | ೩೫೭೪೬.೦೦ | ೩೮೪.೦೦ |

ಮೂಲ: ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ ನಿಯಮಿತ

- ಕರ್ನಾಟಕ ಕೈಗಾರಿಕಾ ನೀತಿ ೨೦೧೪-೧೯ ರಲ್ಲಿ, ಕೆಐಎಡಿಬಿಯು ಭೂಸ್ವಾಧೀನಪಡಿಸಿಕೊಳ್ಳುವ ಜಮೀನಿನ ಪೈಕಿ ಕನಿಷ್ಠ ಶೇ.೨೦ ರಷ್ಟು ಜಮೀನನ್ನು ಎಂ.ಎಸ್.ಎಂ.ಇ. ಘಟಕಗಳ ಸ್ಥಾಪನೆಗಾಗಿ ಗುರುತಿಸಲು/ಮೀಸಲಿಡಲು ಮತ್ತು ಕೆಎಸ್ಎಸ್ಐಡಿಸಿಯ ಕೋರಿಕೆಯಂತೆ ಅದನ್ನು ಹಂಚಿಕೆ ಮಾಡಲು ನೀತಿ ನಿರೂಪಿಸಿರುತ್ತದೆ. ಅಂತೆಯೇ ಕೆಐಎಡಿಬಿಯು ಸ್ಥಾಪಿಸುವ ಕೈಗಾರಿಕಾ ಪ್ರದೇಶಗಳಲ್ಲಿ ನಿಗಮಕ್ಕೆ ಅಗತ್ಯವಿರುವ ಸೂಕ್ತ ಜಮೀನುಗಳ ಹಂಚಿಕೆ ಪಡೆದು ಎಂ.ಎಸ್.ಎಂ.ಇ. ಘಟಕಗಳ ಸ್ಥಾಪನೆಗೆ ಅನುಕೂಲ ಮಾಡಿಕೊಡಲಾಗುವುದು.

- ಕರ್ನಾಟಕ ಕೈಗಾರಿಕಾ ನೀತಿ ೨೦೧೪-೧೯ರಲ್ಲಿ, ಕೆಎಸ್ಎಸ್ಐಡಿಸಿಯ ಉದ್ದೇಶಿತ ಕೈಗಾರಿಕಾ ವಸಾಹತು ಸ್ಥಾಪಿಸುವ ಯೋಜನೆಗಳಿಗಾಗಿ ಒಂದು ಸ್ಥಳದಲ್ಲಿ ೫೦ ಎಕರೆ ವಿಸ್ತೀರ್ಣಕ್ಕೂ ಹೆಚ್ಚಿಗೆ ಜಮೀನನ್ನು ನೇರವಾಗಿ ಖರೀದಿಸಲು ನೀತಿ ನಿರೂಪಿಸಿರುತ್ತದೆ. ಈ ನೀತಿಯಂತೆ ಸಣ್ಣ ಮತ್ತು ಅತಿ ಸಣ್ಣ ಕೈಗಾರಿಕೆಗಳ ಸ್ಥಾಪನೆಗಾಗಿ ಕೈಗಾರಿಕಾ ವಸಾಹತು ಸ್ಥಾಪಿಸಲು ಅಗತ್ಯವಿರುವ ಜಮೀನುಗಳನ್ನು ಆಯ್ಕೆ ಮಾಡಿ ಭೂಮಾಲೀಕರ ಒಪ್ಪಿಗೆಯ ಮೇರೆಗೆ ಕರ್ನಾಟಕ ಭೂಸುಧಾರಣಾ ಕಾಯ್ದೆಯ ಕಲಂ ೧೦೯ ರನ್ವಯ ಕಂದಾಯ ಇಲಾಖೆಯ ಅನುಮೋದನೆ ಪಡೆದು ನೇರವಾಗಿ ಖರೀದಿಸಿ ಹೊಸ ಕೈಗಾರಿಕಾ ವಸಾಹತುಗಳನ್ನು ಸ್ಥಾಪಿಸಲಾಗುವುದು.
- ಮುಂದುವರೆದು, ರಾಜ್ಯದಾದ್ಯಂತ ಗ್ರಾಮೀಣ ಪ್ರದೇಶಗಳಲ್ಲಿ ಹೊಸದಾಗಿ ಸಣ್ಣ ಪ್ರಮಾಣದಲ್ಲಿ ಕೈಗಾರಿಕಾ ವಸಾಹತುಗಳನ್ನು ಸ್ಥಾಪಿಸಲು ಅನುಕೂಲವಾಗುವಂತೆ ಸೂಕ್ತ ಸರ್ಕಾರಿ ಜಮೀನುಗಳನ್ನು ಆಯ್ಕೆ ಮಾಡಿ ಕಂದಾಯ ಇಲಾಖೆಯ ಮೂಲಕ ಮಂಜೂರಾತಿ ಪಡೆಯಲಾಗುವುದು.

ರಾಜ್ಯದಲ್ಲಿ ಸಣ್ಣ ಪ್ರಮಾಣದ ಕೈಗಾರಿಕೆಗಳನ್ನು ಉನ್ನತೀಕರಿಸುವುದು ಹಾಗೂ ಅಭಿವೃದ್ಧಿಪಡಿಸುವುದು ನಿಗಮದ ಪ್ರಮುಖ ಧ್ಯೇಯವಾಗಿರುತ್ತದೆ. ಪ್ರಮುಖವಾಗಿ ಹಿಂದುಳಿದ ಪ್ರದೇಶಗಳಲ್ಲಿ ನಿರ್ಮಾಣ ಮತ್ತು ಮೂಲಭೂತ ಸೌಕರ್ಯಗಳ ಉಪಯುಕ್ತತೆ, ಕೈಗಾರಿಕಾ ಕಚ್ಚಾ ಸಾಮಗ್ರಿಗಳ ಖರೀದಿ ಮತ್ತು ಮಾರುಕಟ್ಟೆ ಮತ್ತು ತಾಂತ್ರಿಕ ಬೆಂಬಲ ಹಾಗೂ ಸಹಾಯ ವಿಸ್ತರಿಸುವುದು ಇವುಗಳು ಈ ಮೇಲಿನ ಗುರಿಗಳನ್ನು ತಲುಪಲು ಕಂಡುಕೊಂಡಿರುವ ಮಾರ್ಗಗಳಾಗಿವೆ.

ಹೊಸ ಕೈಗಾರಿಕಾ ವಸಾಹತುಗಳನ್ನು ಸ್ಥಾಪಿಸುವ ಮುಖೇನ ಎಂ.ಎಸ್.ಎಂ.ಇ ಘಟಕಗಳನ್ನು ಅಭಿವೃದ್ಧಿಪಡಿಸುವುದು, ಹಾಲಿ ಇರುವ ಕೈಗಾರಿಕಾ ವಸಾಹತುಗಳಲ್ಲಿ ಮೂಲಭೂತ ಸೌಕರ್ಯಗಳನ್ನು ಉನ್ನತೀಕರಿಸುವುದು. ಕೈಗಾರಿಕಾ ವಸಾಹತು ಮತ್ತು ವಾಣಿಜ್ಯ ಕಾರ್ಯಚಟುವಟಿಕೆಗಳಲ್ಲಿ ವಿವಿಧ ಉದ್ಯಮಿಗಳ ಸ್ನೇಹಪರ ಕಾರ್ಯಕ್ರಮಗಳನ್ನು ಪರಿಚಯಿಸುವುದರಲ್ಲಿ ನಿಗಮವು ಅತ್ಯಂತ ಪ್ರಮುಖ ಪಾತ್ರವನ್ನು ಕಳೆದ ಕೆಲವು ವರ್ಷಗಳಿಂದ ನಿರ್ವಹಿಸುತ್ತಿದೆ. ಕೆಎಸ್ಎಸ್ಐಡಿಸಿಯ ನೀತಿ ನಿರ್ಣಯ ಮತ್ತು ಧ್ಯೇಯಗಳು ಈ ಕೆಳಕಂಡವುಗಳನ್ನು ಒಳಗೊಂಡಿರುತ್ತವೆ.

ಹಂಚಿಕೆಯಾದ ನಿವೇಶನಗಳ ಸದುಪಯೋಗಕ್ಕಾಗಿ ಕಡ್ಡಾಯ ಸಮಯ ಮಿತಿಯನ್ನು ವಿಧಿಸುವುದರೊಂದಿಗೆ ಹಂಚಿಕೆ ಆಗಿರುವ ಜಮೀನುಗಳು ಉಪಯೋಗಕ್ಕೆ ಒಳಪಡುವಂತೆ ನೋಡಿಕೊಳ್ಳುವುದು

- ಅಭಿವೃದ್ಧಿಪಡಿಸ ಬೇಕಿರುವ ಕೈಗಾರಿಕಾ ವಸಾಹತುಗಳ ಸೌಲಭ್ಯದಲ್ಲಿ ಜಮೀನು ಮಾಲೀಕರುಗಳನ್ನು ಪಾಲುದಾರರನ್ನಾಗಿ ಮಾಡಲು ಸ್ಪರ್ಧಾತ್ಮಕ ನೀತಿ ನಿರ್ಣಯವನ್ನು ಜರುಗಿಸುವುದು/ಪ್ರಾರಂಭಿಸುವುದು.
- ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಕೈಗಾರಿಕೆಗಳ ವತಿಯಿಂದ ಬೇಡಿಕೆ ಮತ್ತು ಲಭ್ಯವಿರುವ ಸ್ಥಳೀಯ ಕೌಶಲ್ಯತೆಯ ಆಧಾರದ ಮೇರೆಗೆ ಸುಮಾರು ೧೮ ಸ್ಥಳಗಳಲ್ಲಿ ೨೨ ಹೊಸ ಕೈಗಾರಿಕಾ ಕ್ಲಸ್ಟರ್‌ಗಳನ್ನು ಸ್ಥಾಪಿಸುವುದು.
- ಭೂಸ್ವಾಧೀನ ಪ್ರಕ್ರಿಯೆ ತಡೆಯಲು ಮತ್ತು ನಿಧಿಯ ಮುಗ್ಗಟ್ಟನ್ನು (Blockage) ತಡೆಯಲು ಖಾಸಗಿ ಜಮೀನಿನ ಮೇಲೆ ಪಿ.ಪಿ.ಪಿ ಮಾದರಿಯಲ್ಲಿ ಪಾರ್ಕ್‌ಗಳನ್ನು ಹಾಗೂ ಕಾರ್ಯಾಪ್ರವೃತ್ತ ಕೈಗಾರಿಕಾ ವಸಾಹತುಗಳನ್ನು (Functional Industrial Estate) ಅಭಿವೃದ್ಧಿಪಡಿಸಲು ಪ್ರಸ್ತಾವಿಸುವುದು.
- ರಾಜ್ಯದಲ್ಲಿ ಆಯವ್ಯಯದಲ್ಲಿ ಪ್ರತ್ಯೇಕ ನಿಧಿಯನ್ನು ಕೋರುವುದರೊಂದಿಗೆ ಹಾಲಿ ಮೂಲಭೂತ ಸೌಕರ್ಯಗಳನ್ನು ಮೇಲ್ದರ್ಜೆಗೇರಿಸುವುದು ಮತ್ತು ಕೈಗಾರಿಕಾ ವಸಾಹತುಗಳಲ್ಲಿ ಕ್ಲಿಷ್ಟಕರ ಮೂಲಭೂತ ಸೌಕರ್ಯಗಳ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳುವುದು ಹಾಗೂ ಅವುಗಳನ್ನು ಕೈಗಾರಿಕಾ ಟೌನ್‌ಷಿಪ್ ಕಾಯ್ದೆ ಅಡಿಯಲ್ಲಿ ತರುವುದು ಮತ್ತು ಇದರಿಂದಾಗಿ ಸಂಬಂಧಪಟ್ಟ ವಸಾಹತುಗಳ ಮತ್ತು ಇತರೇ ಬಾಬ್ತುಗಳನ್ನು ವಸೂಲು ಮಾಡುವಂತಾಗುವುದು.
- ಸಣ್ಣ ಪ್ರಮಾಣದ ಕೈಗಾರಿಕಾ ಘಟಕಗಳು ತಮ್ಮ ಉತ್ಪನ್ನಗಳನ್ನು ಮಾರಾಟ ಮಾಡಲು ಸಹಕರಿಸುವ ದೃಷ್ಟಿಯಿಂದ ಹಾಗೂ ಅದರಿಂದಾಗಿ ಸಾರ್ವಜನಿಕ ಉದ್ದಿಮೆಗಳು/ಮಂಡಳಿಗಳು ಮತ್ತು ನಿಗಮಗಳು ಹಾಗೂ ಇತರೇ ಏಜೆನ್ಸಿಗಳ ಅಗತ್ಯತೆಗಳನ್ನು ಪೂರೈಸುವ ನಿಟ್ಟಿನಲ್ಲಿ ನಿಗಮದಲ್ಲಿ ಮಾರುಕಟ್ಟೆ ಸಹಾಯ ಯೋಜನೆಯನ್ನು ಅನುಷ್ಠಾನಗೊಳಿಸಲು ಯೋಜಿಸಲಾಗಿತ್ತು.

ನಿಗಮವು ಹೊಸ ಕೈಗಾರಿಕಾ ವಸಾಹತುಗಳನ್ನು /ಮಳಿಗೆ/ ಸಂಕೀರ್ಣಗಳನ್ನು ನಿರ್ಮಿಸುವ ಸ್ಥಳಗಳ ವಿವರಗಳನ್ನು ಕೋಷ್ಟಕ ೫.೩೧ರಲ್ಲಿ ನೀಡಲಾಗಿದೆ.

**ಕೋಷ್ಟಕ ೫.೩೧: ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆ ಅಭಿವೃದ್ಧಿ ನಿಗಮವು ಸ್ಥಾಪಿಸುವ ಹೊಸ ಕೈಗಾರಿಕಾ ವಸಾಹತು/ಮಳಿಗೆ/ಸಂಕೀರ್ಣಗಳ ವಿವರ**

| ಕ್ರ. ಸಂ. | ಕೈಗಾರಿಕಾ ವಸಾಹತು | ಜಮೀನಿನ ವಿಸ್ತೀರ್ಣ ಎಕರೆಗಳಲ್ಲಿ | ನಿರ್ಮಾಣ ಮಾಡಲು ಉದ್ದೇಶಿಸಿರುವ ಮಳಿಗೆಗಳು | ಅಭಿವೃದ್ಧಿಪಡಿಸಲು ಉದ್ದೇಶಿಸಿರುವ ನಿವೇಶನಗಳು | ಯೋಜನಾ ವೆಚ್ಚ ರೂ. ಲಕ್ಷಗಳಲ್ಲಿ |
|---|---|---|---|---|---|
| ೧ | ಕುಡುಮಲಕುಂಟೆ, ಗೌರಿಬಿದನೂರು ತಾ. | - | ೬೦ | - | ೫೩೭.೦೦ |
| ೨ | ಪಾವಗಡ ೨ನೇ ಹಂತ | ೩೪.೦೦ | - | - | ೭೦೦.೦೦ |
| ೩ | ಮಾಂಗೂರು, ಚಿಕ್ಕೋಡಿ | ೧೪.೧೦ | - | ೨೧೨ | ೭೨೦.೦೦ |

| | | | | | |
|---|---|---|---|---|---|
| ೪ | ಚಿಕ್ಕಹೊಸಹಳ್ಳಿ, ಆನೇಕಲ್ | ೧೯.೦೦ | – | ೧೪೬ | ೭೧೦.೦೦ |
| ೫ | ಮುತ್ತಗದಹಳ್ಳಿ, ಬೆಂಗಳೂರು ಉತ್ತರ | ೧೨.೧೫ | – | ೬೨ | ೪೬೦.೦೦ |
| ೬ | ಹಿರೇಶೆಕೂನ, ಸೊರಬ | ೨೦.೦೦ | – | ೧೦೨ | ೭೫೦.೦೦ |
| ೭ | ಉಳ್ಳಾರ್ತಿಕಾವಲ್, ಚಳ್ಳಕೆರೆ | ೧೨೫.೦೦ | – | ೩೫೦ | ೫೧೫೦.೦೦ |
| ೮ | ಖುದಾಪುರ, ಚಳ್ಳಕೆರೆ | ೫೦.೦೦ | – | ೧೨೫ | ೧೮೭೫.೦೦ |
| | **ಒಟ್ಟು** | **೨೭೪.೨೫** | **೪೦** | **೯೯೭** | **೧೦೮೦೧.೦೦** |
| | **ಉದ್ದೇಶಿತ ಸಂಕೀರ್ಣಗಳು** | | | | |
| ೧ | ಸುವರ್ಣ ಮಹೋತ್ಸವ ಸಂಕೀರ್ಣ, ರಾಜಾಜಿನಗರ (ಆಡಳಿತ ಕಚೇರಿ ಕಟ್ಟಡ ಜಾಗದಲ್ಲಿ) | | | | ೫೧೫೦.೦೦ |
| ೨ | ಎಮ್.ಎಸ್. ಕಾಂಪ್ಲೆಕ್ಸ್, ರಾಜಾಜಿನಗರ (ಕ್ಯಾಂಟೀನ್ ಕಟ್ಟಡ ಜಾಗದಲ್ಲಿ) | | | | ೬೦೦.೦೦ |
| | **ಒಟ್ಟು** | | | | **೫೭೫೦.೦೦** |

**ಮೂಲ: ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ**

**ಕರ್ನಾಟಕ ರಾಜ್ಯ ಕೈಗಾರಿಕಾ ಪ್ರದೇಶ ಅಭಿವೃದ್ಧಿ ಮಂಡಳಿ (ಕೆ.ಐ.ಎ.ಡಿ.ಬಿ.):** ರಾಜ್ಯದಲ್ಲಿ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯು ಸ್ಥಾಯಿ ಸಂಸ್ಥೆಯಾಗಿ ಕೈಗಾರಿಕೆಗಳ ಅಭಿವೃದ್ಧಿಯಲ್ಲಿ ಒಂದು ಪ್ರಮುಖ ಪಾತ್ರ ವಹಿಸಿದೆ. ಕರ್ನಾಟಕ ರಾಜ್ಯ ಕೈಗಾರಿಕಾ ಪ್ರದೇಶ ಅಭಿವೃದ್ಧಿ ಮಂಡಳಿಯು ಆರಂಭವಾದಾಗಿನಿಂದಲೂ ರಾಜ್ಯದ ಸುಮಾರು ೫೧೦೪೮.೬೯ ಎಕರೆ ಪ್ರದೇಶದಲ್ಲಿ ೨೯ ಜಿಲ್ಲೆಗಳಲ್ಲಿ ೧೫೩ ಕೈಗಾರಿಕಾ ಪ್ರದೇಶಗಳನ್ನು ಅಭಿವೃದ್ಧಿಪಡಿಸಿದೆ. ಕೆ.ಐ.ಎ.ಡಿ.ಬಿ. ಅಭಿವೃದ್ಧಿಪಡಿಸಿರುವ ಎಲ್ಲಾ ಕೈಗಾರಿಕಾ ಪ್ರದೇಶಗಳಲ್ಲಿ, ಆಂತರಿಕ ರಸ್ತೆಗಳು, ನೀರಿನ ಪೂರೈಕೆ, ವಿದ್ಯುತ್ ಪೂರೈಕೆ, ಬೀದಿ ದೀಪಗಳು, ಸಾಮಾನ್ಯ ಸೌಲಭ್ಯಗಳನ್ನೊಳಗೊಂಡ ಕೇಂದ್ರಗಳು, ಕಟ್ಟಡಗಳು, ವಸತಿ ಮತ್ತು ರಸ್ತೆ ಅಗಲೀಕರಣ ಮತ್ತು ಮಾರ್ಗರಸ್ತೆಗಳ ಸುಧಾರಣೆ, ಹುಲ್ಲುಗಾವಲಿನ ಒಳಗೆ ಹಾಗೂ ಹೊರಗೆ ಮೂಲಭೂತ ಸೌಕರ್ಯ ಮತ್ತು ಸೌಲಭ್ಯ ಇತ್ಯಾದಿಗಳನ್ನು ಒದಗಿಸಿದೆ.

ಕೈಗಾರಿಕಾ ಅಭಿವೃದ್ಧಿಗೋಸ್ಕರ ಭೂಮಿ ಸ್ವಾಧೀನಪಡಿಸಿಕೊಳ್ಳುವ ಚಟುವಟಿಕೆಗಳನ್ನು ಸುಲಭಗೊಳಿಸಲು ಒಂದು ಎಕರೆ ಭೂಮಿ ಕಳೆದುಕೊಳ್ಳುವ ವ್ಯಕ್ತಿಗೆ ಒಂದು ಎಕರೆ ಸಾಮಾನ್ಯ ಭೂಮಿ ಪರಿಹಾರದ ಹಣದ ಬದಲಾಗಿ ೯೫೮೩.೦೦ ಚ.ಅಡಿ ಅಭಿವೃದ್ಧಿಪಡಿಸಿದ ಭೂಮಿ ನೀಡುವ ಯೋಜನೆಯನ್ನು ಸರ್ಕಾರವು ದಿನಾಂಕ: ೧೩-೦೮-೨೦೦೭ ಮತ್ತು ೧೩-೦೫-೨೦೧೦ರ ಆದೇಶದನ್ವಯ ಹಮ್ಮಿಕೊಂಡಿದ್ದು, ಈ ಯೋಜನೆಯನ್ವಯ ಪರಿಹಾರ ಪಡೆಯಲಿಚ್ಛಿಸುವ ಭೂಮಾಲೀಕರಿಗೆ ಭೂ ಪರಿಹಾರದ ಬದಲು ೯೫೮೩.೦೦ ಚ.ಅಡಿ ಅಭಿವೃದ್ಧಿಪಡಿಸಿದ ಭೂಮಿ ನೀಡಲಾಗುತ್ತಿದೆ. ೨೦೦೯-೧೦ ರಿಂದ ೨೦೧೫-೧೬ರ ಅವಧಿಯಲ್ಲಿ ಸಾಧಿಸಿದ ಸಾಧನೆಗಳ ವಿವರಗಳನ್ನು ಕೋಷ್ಟಕ ೫.೩.೨ರಲ್ಲಿ ನೀಡಲಾಗಿದೆ.

**ಕೋಷ್ಟಕ ೫.೩.೨: ೨೦೦೯-೧೦ ರಿಂದ ೨೦೧೫ರ ಅವಧಿಯಲ್ಲಿ ಸಾಧಿಸಿದ ಸಾಧನೆಗಳ ವಿವರ**

| ವಿವರಗಳು | ೨೦೦೯-೧೦ | ೨೦೧೦-೧೧ | ೨೦೧೧-೧೨ | ೨೦೧೨-೧೩ | ೨೦೧೩-೧೪ | ೨೦೧೪-೧೫ | ೨೦೧೫-೧೬ |
|---|---|---|---|---|---|---|---|
| | ಸಾಧನೆಗಳು | ಸಾಧನೆಗಳು | ಸಾಧನೆಗಳು | ಸಾಧನೆಗಳು | ಸಾಧನೆಗಳು | ಸಾಧನೆಗಳು | ಸಾಧನೆಗಳು |
| ಸ್ವಾಧೀನಪಡಿಸಿಕೊಂಡಿರುವ ಭೂಮಿ (ಎಕರೆಗಳಲ್ಲಿ) | ೩೭೭೮.೦೮ | ೨೫೦೫೮.೫೦ | ೭೭೨೩.೨೫ | ೧೦೦೧೨.೨೦ | ೫೪೯೭.೪೭ | ೫೯೩೨.೫೦ | ೮೯೪.೯೦ |
| ಭೂಸ್ವಾಧೀನಕ್ಕೆ ತಗಲಿದ ವೆಚ್ಚ (ರೂ.ಕೋಟಿಗಳಲ್ಲಿ) | ೧೩೭೫.೦೦ | ೧೭೪೯.೦೦ | ೯೮೨.೧೦ | ೧೭೩೧.೦೦ | ೧೧೮೦.೨೧ | ೧೪೦೯.೧೯ | ೧೨೭೩.೬೧ |
| ಅಭಿವೃದ್ಧಿಗೊಳಿಸಲು ತಗಲಿದ ವೆಚ್ಚ (ರೂ.ಕೋಟಿಗಳಲ್ಲಿ) | ೧೫೬.೭೦ | ೨೮೬.೨೫ | ೧೫೫.೭೫ | ೩೧೨.೬೦ | ೫೨೮.೯೪ | ೩೬೭.೫೮ | ೩೯೧.೭೮ |
| ಒಟ್ಟು ವೆಚ್ಚ (ರೂ. ಕೋಟಿಗಳಲ್ಲಿ) | ೧೫೩೧.೭೦ | ೨೦೩೫.೨೫ | ೧೧೩೭.೮೫ | ೨೦೪೩.೬೦ | ೧೭೦೯.೧೫ | ೧೭೭೬.೭೮ | ೧೬೬೫.೩೯ |
| ಒಟ್ಟು ಉದ್ಯಮಿಗಳು (ಸಂಖ್ಯೆಗಳಲ್ಲಿ) | ೧೦೮೦ | ೧೦೦೯ | ೪೫೮ | ೪೮೧ | ೩೬೯ | ೨೪೧ | ೨೩೧ |

**ಮೂಲ: ಕರ್ನಾಟಕ ರಾಜ್ಯ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ, ಬೆಂಗಳೂರು**

**ಕರ್ನಾಟಕ ರಾಜ್ಯ ವಿದ್ಯುನ್ಮಾನ ಅಭಿವೃದ್ಧಿ ಸಂಸ್ಥೆ (ಕಿಯೋನಿಕ್ಸ್)**

ಕರ್ನಾಟಕದ ಕೈಗಾರಿಕಾ ನಕ್ಷೆಯಲ್ಲಿ ಎಲೆಕ್ಟ್ರಾನಿಕ್ಸ್ ಪ್ರಮುಖ ಸ್ಥಾನಗಳಿಸಿದೆ. ೧೯೯೮ರಲ್ಲಿ ಇದು ಉತ್ಪಾದಿಸಿದ ಉಪಕರಣಗಳ ಮೌಲ್ಯ ಸುಮಾರು ರೂ. ೧೦,೦೦೦ ಕೋಟಿಗಳಷ್ಟಿದ್ದು, ಅದು ರಾಷ್ಟ್ರದ ಒಟ್ಟು ಉತ್ಪಾದನೆಯ ಪ್ರತಿಶತ ೨೦ರಷ್ಟಾಗಿತ್ತು. ಎಲೆಕ್ಟ್ರಾನಿಕ್ಸ್ ಉತ್ಪಾದನೆಯನ್ನು ವಿಸ್ತಾರಗೊಳಿಸುವ ಉದ್ದೇಶದಿಂದ ವಿದೇಶಿ ಕಂಪೆನಿಗಳು ಮತ್ತು ಇಂಡಿಯಾದ ಕೈಗಾರಿಕಾ ಸಂಸ್ಥೆಗಳ ಸಮಭಾಗಿತ್ವದೊಂದಿಗೆ ಜಂಟಿ ಉದ್ದಿಮೆದಾರರಾಗಲು ತನ್ನ ೧೦ ಉದ್ದಿಮೆದಾರರನ್ನು ಮುಂದೆ ಬರುವಂತೆ ಮಾಡಿದೆ. ಕರ್ನಾಟಕ ರಾಜ್ಯ ಅಭಿವೃದ್ಧಿ ನಿಗಮವು (೧೯೭೬) ರಾಜ್ಯದಲ್ಲಿ ಎಲೆಕ್ಟ್ರಾನಿಕ್ಸ್ ಕೈಗಾರಿಕೆಗಳ ಬೆಳವಣಿಗೆಗೆ ಚಾಲನೆಯನ್ನು ಕೊಡುವ ಕಾರ್ಯದಲ್ಲಿ ನಿರತವಾಗಿದೆ. ತನ್ನದೇ ಆದ ತಯಾರಿಕಾ ಘಟಕಗಳನ್ನು ಸ್ಥಾಪಿಸುವುದು, ಜಂಟಿ ಎಲೆಕ್ಟ್ರಾನಿಕ್ಸ್ ಘಟಕಗಳ ಸ್ಥಾಪನೆಗೆ ಉತ್ತೇಜನ ಕೊಡುವುದು, ಉದ್ದಿಮೆದಾರರಿಗೆ ನಿಗದಿಪಡಿಸಿರುವ ಸೌಲಭ್ಯವನ್ನೊದಗಿಸುವುದು, ಕಚ್ಚಾ ಸರಕುಗಳನ್ನು ಉತ್ಪಾದಿಸುವ ಮತ್ತು ಸಿದ್ಧವಸ್ತುಗಳಿಗೆ ಮಾರುಕಟ್ಟೆ ಸೌಲಭ್ಯವನ್ನೊದಗಿಸುವ ಕೈಗಾರಿಕೆಗಳಿಗೆ ನೆರವನ್ನೊದಗಿಸುವುದು ಕಿಯೋನಿಕ್ಸ್‌ನ ಕಾರ್ಯ ಕ್ಷೇತ್ರವಾಗಿರುವುದು. ಬೆಂಗಳೂರು–ಹೊಸೂರು ರಸ್ತೆಯಲ್ಲಿ ಬೆಂಗಳೂರಿನಿಂದ ಸುಮಾರು ೧೮ ಕಿ.ಮೀ. ದೂರದಲ್ಲಿ ೩೦೦ ಎಕರೆ ಪ್ರದೇಶದಲ್ಲಿ 'ಎಲೆಕ್ಟ್ರಾನಿಕ್ಸ್ ಸಿಟಿ'ಯನ್ನು ನಿರ್ಮಿಸಲಾಗಿದೆ. ಎಲೆಕ್ಟ್ರಾನಿಕ್ಸ್ ಕೈಗಾರಿಕೆಗಳ ಕೇಂದ್ರವಾಗಿರುವ ಬೆಂಗಳೂರು ಎಲೆಕ್ಟ್ರಾನಿಕ್ಸ್ ಸರಕುಗಳಿಗೆ ಮಾರುಕಟ್ಟೆ ಸೌಲಭ್ಯವನ್ನೊದಗಿಸುವ ಭಾರತ್‌ಎಲೆಕ್ಟ್ರಾನಿಕ್ಸ್, ಭಾರತ್ ಹೆವಿ ಎಲೆಕ್ಟ್ರಿಕಲ್ಸ್‌ಲಿ., ಹಿಂದೂಸ್ತಾನ್ ಏರೋನಾಟಿಕ್ಸ್‌ಲಿ., ಹಿಂದೂಸ್ಥಾನ್ ಮೆಷಿನ್ ಟೂಲ್ಸ್‌ಲಿ., ಮೊದಲಾದ ಬೃಹತ್ ಪ್ರಮಾಣದ ಸಾರ್ವಜನಿಕ ಕ್ಷೇತ್ರದ ಎಲೆಕ್ಟ್ರಾನಿಕ್ಸ್ ಕೈಗಾರಿಕೆಗಳನ್ನು ಹೊಂದಿರುವುದು ಗಮನಾರ್ಹವಾಗಿದೆ.

ಕರ್ನಾಟಕವು ವಿಶೇಷವಾಗಿ ಬೆಂಗಳೂರು, ಸ್ವಸ್ಥಳ ಹಾಗೂ ಕಡಲಾಚೆಗೆ ತಮ್ಮ ಮಾಹಿತಿ ತಂತ್ರಜ್ಞಾನವನ್ನು ಬೆಳೆಸುವ ಕಂಪನಿಗಳಿಗೆ ಇಷ್ಟವಾದ ತಾಣವಾಗಿದೆ. ಕರ್ನಾಟಕ ಸರ್ಕಾರವು ಮಾಹಿತಿ ತಂತ್ರಜ್ಞಾನ ಉದ್ಯಮಿಗಳಿಗೆ ರಿಯಾಯಿತಿ ದರದಲ್ಲಿ ಭೂಮಿ ಹಂಚಿಕೆಯ ರೂಪದಲ್ಲಿ ತಂತ್ರಜ್ಞಾನ ಕೈಗಾರಿಕೆಯನ್ನು ಬೆಂಬಲಿಸುತ್ತಿರುವುದರ ಜೊತೆಗೆ, ಮಹಾನಗರದ ನೈಸರ್ಗಿಕ ಮತ್ತು ಕಾರ್ಯ ನೀತಿಯ ಮಹತ್ವಗಳೊಂದಿಗೆ ಇದು ಸಾಧ್ಯವಾಗಿದೆ. ಅಲ್ಲದೆ, ಆಂತರಿಕ ಸೌಲಭ್ಯಗಳು ಹಾಗೂ ಇತರ ತೆರಿಗೆ ವಿನಾಯಿತಿಗಳು, ಉದ್ಯಮಿಗಳನ್ನು ಆಕರ್ಷಿಸುತ್ತಿದೆ. ರಾಜ್ಯದಲ್ಲಿ ವ್ಯವಹಾರದ ಅವಕಾಶಗಳು ಮತ್ತು ನುರಿತ ಜನರ ಲಭ್ಯತೆ ಇರುವುದರಿಂದ ಕಡಿಮೆ ವೆಚ್ಚದಲ್ಲಿ ತಂತ್ರಜ್ಞಾನ ಕೈಗಾರಿಕೆಯನ್ನು ಸ್ಥಾಪಿಸಲು ಆಕರ್ಷಣೆಯ ಸ್ಥಳವಾಗಿದೆ. ಇದಲ್ಲದೇ ಭಾರತದ ಅಗ್ರ ತಂತ್ರಜ್ಞಾನ ಸಂಸ್ಥೆಗಳು ಭಾರತದ ಸಿಲಿಕಾನ್ ಕಣಿವೆಯೆಂದೇ ಪ್ರಸಿದ್ಧಿಯಾಗಿರುವ ಬೆಂಗಳೂರಿನ ಕಿಯೋನಿಕ್ಸ್ ಎಲೆಕ್ಟ್ರಾನಿಕ್ ಸಿಟಿಯಲ್ಲಿ ತಮ್ಮ ಪ್ರಬಲ ನೆಲೆಯನ್ನು ಹೊಂದಿವೆ. ಈ ಐಟಿ ಕಂಪೆನಿಗಳು ಐಟಿ ರಫ್ತು ಮಾಡುವಲ್ಲಿ ನಿರ್ಣಾಯಕ ಪಾತ್ರ ಹೊಂದಿರುತ್ತವೆ. ರಾಜ್ಯದ ಎಲ್ಲಾ ಪ್ರದೇಶಗಳಲ್ಲಿ ಮಾಹಿತಿ ತಂತ್ರಜ್ಞಾನದ ಕ್ರಾಂತಿಯನ್ನು ಹರಡಲು ಮತ್ತು ಎರಡನೇ ಶ್ರೇಣಿಯ ನಗರಗಳಲ್ಲಿ ಸ್ಥಳೀಯ ಉದ್ಯಮಿಗಳು ತಮ್ಮ ವ್ಯವಹಾರ ಘಟಕಗಳ ಸ್ಥಾಪನೆಯನ್ನು ಕೈಗೊಳ್ಳುವಂತೆ ರಾಜ್ಯ ಸರ್ಕಾರವು ಆಂತರಿಕ ಸೌಲಭ್ಯಗಳುಳ್ಳ ಐಟಿ ಪಾರ್ಕುಗಳ ಸ್ಥಾಪನೆಗೆ ಕ್ರಮ ಕೈಗೊಂಡಿದೆ. ಈ ದಿಕ್ಕಿನಲ್ಲಿ ಕ್ರಮ ಕೈಗೊಳ್ಳಲು ರಾಜ್ಯ ಸರ್ಕಾರವು ಕಿಯೋನಿಕ್ಸ್ ಸಂಸ್ಥೆಗೆ ಜವಾಬ್ದಾರಿ ನೀಡಿದೆ ಹಾಗೂ ಈ ವಿಚಾರವಾಗಿ ಕಿಯೋನಿಕ್ಸ್ ಸಂಸ್ಥೆಯನ್ನು ಸಂಪರ್ಕ ಸೇತುವೆಯನ್ನಾಗಿ ಮಾಡಿದೆ.

ಪ್ರಸ್ತುತ ಕಿಯೋನಿಕ್ಸ್ ಕೈಗೊಂಡಿರುವ ಚಟುವಟಿಕೆಗಳನ್ನು ಸ್ಥೂಲವಾಗಿ ಈ ರೀತಿ ವರ್ಗೀಕರಿಸಲಾಗಿದೆ. ೧. ಐಟಿ ಆಂತರಿಕ ಸೌಲಭ್ಯಗಳ ಸೇವೆಗಳು ೨. ವಾಣಿಜ್ಯ ಮತ್ತು ವಹಿವಾಟು ಸೇವೆಗಳು ೩. ತರಬೇತಿ ಸೇವೆಗಳು ೪. ಮಾಹಿತಿ ತಂತ್ರಜ್ಞಾನ ಸಕ್ರಿಯಗೊಳಿಸುವ ಮತ್ತು ಸಂಬಂಧಿಸಿದ ಸೇವೆಗಳು ೫. ಸಮಾಲೋಚನೆ ಸೇವೆಗಳು ೬. ಮಾನವ ಸಂಪನ್ಮೂಲ ಹಾಗೂ ಜನಬಲದ ಸಮಾಲೋಚನೆ ಸೇವೆಗಳು.

ಕಿಯೋನಿಕ್ಸ್ ಸಂಸ್ಥೆಯು ರಾಜ್ಯದ ಎರಡನೇ ಶ್ರೇಣಿಯ ನಗರಗಳಾದ ಹುಬ್ಬಳ್ಳಿ, ಕಲಬುರ್ಗಿ ಮತ್ತು ಶಿವಮೊಗ್ಗ ನಗರಗಳಲ್ಲಿ ಐಟಿ ಪಾರ್ಕ್ ಅನ್ನು ಸ್ಥಾಪಿಸುವಲ್ಲಿ ಸಕ್ರಿಯವಾಗಿದೆ. ಈ ನಿಟ್ಟಿನಲ್ಲಿ ಸಾಧಿಸಿರುವ ಪ್ರಗತಿಯು ಈ ಕೆಳಕಂಡಂತಿದೆ.

**ಐಟಿ ಪಾರ್ಕ್ ಹುಬ್ಬಳ್ಳಿ:** ಕರ್ನಾಟಕ ಸರ್ಕಾರವು ಮಾಹಿತಿ ತಂತ್ರಜ್ಞಾನದ ಸಂಪನ್ಮೂಲಗಳನ್ನು ಅಭಿವೃದ್ಧಿಪಡಿಸಲು ಹುಬ್ಬಳ್ಳಿಯಲ್ಲಿ ಎಲ್ಲಾ ಸೌಲಭ್ಯಗಳೊಂದಿಗೆ ಐಟಿ ಪಾರ್ಕ್ ಅನ್ನು ಸ್ಥಾಪಿಸಲಾಗಿದೆ. ಈ ನಿಟ್ಟಿನಲ್ಲಿ ಮೊದಲ ಹೆಜ್ಜೆಯಾಗಿ ೧೯೯೯–೨೦೦೦ದಲ್ಲಿ ೨,೭೫,೦೦೦ ಚದರ ಅಡಿ ಪ್ರದೇಶದಲ್ಲಿ ರೂ.೪೨.೩೬ ಕೋಟಿ ಬಂಡವಾಳ ಹೂಡಿಕೆಯೊಂದಿಗೆ ಐಟಿ ಸಂಕೀರ್ಣ (ಕಾಂಪ್ಲೆಕ್ಸ್) ವನ್ನು ಹುಬ್ಬಳ್ಳಿಯಲ್ಲಿ ವ್ಯವಸ್ಥಿತವಾಗಿ ನಿರ್ಮಿಸಲಾಗಿದೆ. ಸರ್ಕಾರವು ಐಟಿ ಕಾಂಪ್ಲೆಕ್ಸಿನಲ್ಲಿ ಲಭ್ಯವಿರುವ ಜಾಗವನ್ನು ಉದ್ಯಮಿಗಳಿಗೆ ರಿಯಾಯಿತಿ ದರದಲ್ಲಿ ಗುತ್ತಿಗೆ ಬಾಡಿಗೆಗೆ ಒದಗಿಸುವ ಮೂಲಕ ಐಟಿ ಉದ್ಯಮಿಗಳಿಗೆ ಹಾಗೂ ಐಟಿ ವ್ಯವಹಾರಸ್ಥರಿಗೆ ಹೆಚ್ಚಿನ ಪ್ರೋತ್ಸಾಹವನ್ನು ನೀಡಿದೆ. ಹುಬ್ಬಳ್ಳಿಯಲ್ಲಿಯ ಐಟಿ ಪಾರ್ಕ್ ಕಾಂಪ್ಲೆಕ್ಸ್‌ನ ನಿರ್ವಹಣೆಯ ಜವಾಬ್ದಾರಿಯನ್ನು ಕಿಯೋನಿಕ್ಸ್ ಸಂಸ್ಥೆಗೆ ವಹಿಸಲಾಗಿದೆ.

**ಐಟಿ ಪಾರ್ಕ್, ಎಸ್‌ಇಜೆಡ್, ಶಿವಮೊಗ್ಗ:** ಕರ್ನಾಟಕ ಸರ್ಕಾರವು ಶಿವಮೊಗ್ಗದಲ್ಲಿ ಐಟಿ–ಎಸ್‌ಇಜೆಡ್ ಪಾರ್ಕ್‌ಅನ್ನು ಎಸ್‌ಇಜೆಡ್‌ಗೆ ಹೊರತುಪಡಿಸಿದ ಪ್ರದೇಶದಲ್ಲಿ ಸ್ಥಾಪಿಸಿದೆ. ಕಿಯೋನಿಕ್ಸ್ ಸಂಸ್ಥೆಯು ಐಟಿ–ಎಸ್‌ಇಜೆಡ್ ಮತ್ತು ಐಟಿ ಪಾರ್ಕ್‌ನ್ನು ಕೆಐಡಿಬಿಯ ಕೈಗಾರಿಕಾ ಪ್ರದೇಶದಲ್ಲಿ ಮತ್ತು ಶಿವಮೊಗ್ಗ–ಭದ್ರಾವತಿ ಹೆದ್ದಾರಿಯ ಹೊರಗೆ ನಿರ್ಮಿಸಿದೆ. ಐಟಿ–ಎಸ್‌ಇಜೆಡ್‌ನ್ನು ಸಾರ್ವಜನಿಕ ಖಾಸಗಿ ಸಹಭಾಗಿತ್ವ (PPP) ಮಾದರಿಯಲ್ಲಿ ರೂ.೨೫೦ ಕೋಟಿ ಅಂದಾಜು ಬಂಡವಾಳದೊಂದಿಗೆ ಅಭಿವೃದ್ಧಿಗೊಳಿಸಲು ೨೫ ಎಕರೆ ಭೂ ಪ್ರದೇಶದ ೧ ಮಿಲಿಯನ್ ಚ.ಅಡಿಯಲ್ಲಿ ನಿರ್ಮಿಸುವ ಕಾರ್ಯವನ್ನು ಕೈಗೆತ್ತಿಕೊಳ್ಳಲಾಗಿದೆ. ಸಹ ಅಭಿವರ್ಧಕರಿಂದ ಗುರುತಿಸಲ್ಪಟ್ಟ ೬ ಎಕರೆಗಳಷ್ಟು ಭೂ ಪ್ರದೇಶದಲ್ಲಿ ಮೊದಲ ಹಂತದ ಕಾರ್ಯವು ಪ್ರಗತಿಯಲ್ಲಿದೆ. ಭಾರತ ಸರ್ಕಾರದಿಂದ ಮತ್ತು ಇತರೆ ಸಂಸ್ಥೆಗಳಿಂದ ಎಲ್ಲಾ ಅಗತ್ಯ ಅಂಗೀಕಾರಗಳನ್ನು ಪಡೆಯಲಾಗಿದೆ.

**ಎಸ್.ಇ.ಜೆಡ್‌ಯೇತರ ಐಟಿ ಪಾರ್ಕ್, ಶಿವಮೊಗ್ಗ:** ಶಿವಮೊಗ್ಗದಲ್ಲಿ ಒಟ್ಟು ೧,೦೦,೦೦೦ ಚದರ ಅಡಿ ಪ್ರದೇಶದಲ್ಲಿ ೬೭.೫೯ ಚ.ಅಡಿಯಲ್ಲಿ ಒಂದು ಎಸ್‌ಇಜೆಡ್‌ಯೇತರ ಪಾರ್ಕ್ ಅನ್ನು ನಿರ್ಮಿಸಿರುವ ಕಾರ್ಯ ಪೂರ್ಣಗೊಂಡಿದೆ.

**ಐ ಟಿ ಪಾರ್ಕ್, ಕಲಬುರಗಿ:** ಕಿಯೋನಿಕ್ಸ್ ಸಂಸ್ಥೆಯು ಅಂದಾಜು ವೆಚ್ಚ ರೂ.೨೩.೯೦ ಕೋಟಿಯಲ್ಲಿ ಕಲಬುರಗಿ ಐಟಿ ಪಾರ್ಕ್ ಅನ್ನು ಸ್ಥಾಪಿಸಲಾಗಿದೆ. ಇದಕ್ಕಾಗಿ ಎರಡು ಎಕರೆ ಭೂ ಪ್ರದೇಶದಲ್ಲಿ ಸುಮಾರು ೧,೫೦,೦೦೦ ಚ.ಅಡಿ ಪ್ರದೇಶದಲ್ಲಿ ಮೂರು ಹಂತಗಳಲ್ಲಿ ನಿರ್ಮಿಸುವ ಗುರಿಯಿದೆ. ಐಟಿ ಪಾರ್ಕ್ ಕಟ್ಟಡದ ಮೊದಲ ಹಂತ ನಿರ್ಮಾಣವು ಮುಗಿದಿದೆ. ಸ್ಥಳೀಯ ಉದ್ಯಮಿಗಳನ್ನು ಉತ್ತೇಜಿಸಲು ಕಾರ್ಯ ಕ್ಷೇತ್ರವು ಸೇರಿದಂತೆ ಹಲವಾರು ಉತ್ತೇಜಕಗಳನ್ನು ಅತ್ಯಲ್ಪ ದರದಲ್ಲಿ ನೀಡಲು ಪ್ರಸ್ತಾವನೆ ಮಂಡಿಸಿದೆ. ಐಟಿ ಪಾರ್ಕ್ ಸ್ಥಾಪನೆಗೆ ಸಂಬಂಧಿಸಿದ ಚಟುವಟಿಕೆಗಳಲ್ಲದೆ ಕಿಯೋನಿಕ್ಸ್ ಇತರೆ ಚಟುವಟಿಕೆಗಳಲ್ಲಿಯೂ ತೊಡಗಿಸಿಕೊಂಡಿದೆ.

ಕಿಯೋನಿಕ್ಸ್ ಸಂಸ್ಥೆಯು ಮಾಹಿತಿ ತಂತ್ರಜ್ಞಾನ ಹೂಡಿಕೆ ವಲಯದ (ITIR) ಯೋಜನೆ ಕಾರ್ಯಗತಗೊಳಿಸುವಲ್ಲಿ ಪ್ರಮುಖ ಪಾತ್ರವನ್ನು ನಿರ್ವಹಿಸುತ್ತಿದೆ ಮತ್ತು ಕರ್ನಾಟಕ ಹಾಗೂ ಭಾರತ ಸರ್ಕಾರದ ವತಿಯಿಂದ ಬೆಂಗಳೂರಿನ ಸಮೀಪದಲ್ಲಿರುವ ಅಂತರಾಷ್ಟ್ರೀಯ ವಿಮಾನ ನಿಲ್ದಾಣದ ಹತ್ತಿರ ಅಭಿವೃದ್ಧಿಗೊಳಿಸಲಾಗುತ್ತಿದೆ. ಮೊದಲ ಹಂತದಲ್ಲಿ ಕಾರ್ಯವನ್ನು ರೂ.೧೬೦೦ ಕೋಟಿ ಹೂಡಿಕೆಯೊಂದಿಗೆ ಸುಮಾರು ೨೧೦೦ ಎಕರೆ ವ್ಯಾಪ್ತಿ ಪ್ರದೇಶದಲ್ಲಿ ಕೈಗೊಳ್ಳಲಾಗುತ್ತಿದೆ. ಒಂದು ಸಮಗ್ರ ನಗರದಲ್ಲಿ ಇತರೆ ಕೈಗಾರಿಕೆಗಳೊಂದಿಗೆ ಐಟಿ ಎಸ್‌ಇಜೆಡ್, ಎಲೆಕ್ಟ್ರಾನಿಕ್ ಹಾರ್ಡ್‌ವೇರ್ ಪಾರ್ಕ್‌ಗಳಿಗೆ ವಸತಿ ಯೋಜನೆ ನೀಡುವ ಉದ್ದೇಶ ಹೊಂದಿದೆ.

ಕಿಯೋನಿಕ್ಸ್ ಸಂಸ್ಥೆಯು ಮಂಗಳೂರಿನಲ್ಲಿ ಮಾಹಿತಿ ತಂತ್ರಜ್ಞಾನ ಇಲಾಖೆ ಬೆಂಬಲದೊಂದಿಗೆ ಒಂದು ಅಂತರ್ಜಾಲ ಪ್ರಯೋಗಾಲಯ (Cyberlab) ನಿರ್ಮಿಸಿದೆ. ಇದರ ಉದ್ದೇಶ ವೇಗವಾಗಿ ಬೆಳೆಯುತ್ತಿರುವ ಅಂತರ್ಜಾಲ ಭದ್ರತಾ ಅಪಾಯಗಳಿಗೆ ಕಾನೂನನ್ನು, ಕಾನೂನು ಭ್ರಾತೃತ್ವ, ಸರ್ಕಾರಿ ಇಲಾಖೆಗಳು, ಬ್ಯಾಂಕಿಂಗ್, ಕಾರ್ಪೊರೇಟ್, ವಿದ್ಯಾರ್ಥಿಗಳು ಮತ್ತು ಸಿಟಿಜನ್ ಸಾಮರ್ಥ್ಯ ಅಭಿವೃದ್ಧಿಪಡಿಸುವುದಾಗಿದೆ. ಅಂತರ್ಜಾಲ ಅಪರಾಧ ಕೌಶಲ್ಯಗಳ ತನಿಖೆ, ಭಾರತ ಅಂತರ್ಜಾಲ ನಿಯಮಗಳು ಮತ್ತು ಇತರ ದೇಶಗಳಲ್ಲಿ ಅಂತರ್ಜಾಲ ಅಪರಾಧ ಉಪಶಮನ ಕ್ರಮಗಳನ್ನು, ಅಂತರ್ಜಾಲ ಸುರಕ್ಷತೆ ನೀತಿಯನ್ನು ಇದರ ಚೌಕಟ್ಟಿನಲ್ಲಿ ತರಲಾಗಿದೆ.

ಕಿಯೋನಿಕ್ಸ್ ಅಂತರ್ಜಾಲ ಪ್ರಯೋಗಾಲಯದ ಕಾರ್ಯಾಚರಣೆಯು ಆರ್ಥಿಕ ಮತ್ತು ಹೈಟೆಕ್ ಅಪರಾಧ ತಡೆಗಟ್ಟಲು ತನಿಖೆ ಹಾಗೂ ಕಾನೂನಿಗೆ ಒಳಪಡುವ ಸಂಸ್ಥೆಗಳಿಗೆ ತರಬೇತಿ ಹಾಗೂ ತನಿಖೆಗೆ ಬೆಂಬಲ ಒದಗಿಸುವುದಾಗಿದೆ. ಕಿಯೋನಿಕ್ಸ್ ಅಂತರ್ಜಾಲ ಪ್ರಯೋಗಾಲಯದ ದೃಷ್ಟಿಕೋನ ಈ ಕೆಳಗಿನಂತಿದೆ.

೧. ಅಂತರ್ಜಾಲ ಅಪರಾಧ ತನಿಖೆಗೆ ಸಂಬಂಧಿಸಿದಂತೆ (ಪರಿಕರಗಳು ಮತ್ತು ತಂತ್ರಗಳು) ನ್ಯಾಯಾಂಗ, ವಿಚಾರಣೆ, ಕಾನೂನು ಜಾರಿ ಕುರಿತಂತೆ ತರಬೇತಿ

೨. ಬ್ಯಾಂಕಿಂಗ್ ಹಣಕಾಸು ಸಂಸ್ಥೆಗಳು ಮತ್ತು ಶಿಕ್ಷಣ ವಿಭಾಗಗಳಿಗೆ ಅಂತರ್ಜಾಲ ಅಪರಾಧ ತಡೆಗಟ್ಟಲು ತರಬೇತಿ ನೀಡುವುದು.

೩. ಎಲ್ಲಾ ಸರ್ಕಾರಿ ಇಲಾಖೆಗಳಿಗೆ ಅಂತರ್ಜಾಲ ಸುರಕ್ಷತೆ ಕುರಿತಂತೆ ಕಾರ್ಯಕ್ರಮಗಳನ್ನು ನಡೆಸುವುದು

೪. ಅಂತರ್ಜಾಲ ಅಪರಾಧ ಪ್ರಕರಣಗಳ ತನಿಖೆಗೆ ಸಂಬಂಧಿಸಿದಂತೆ ಕಾನೂನು ಜಾರಿ ಮಾಡುವ ಅಧಿಕಾರಿಗಳಿಗೆ ಒಂದು ಸಂಪನ್ಮೂಲ ಮಾರ್ಗದರ್ಶಿಯಾಗಿ ಕಾರ್ಯ ನಿರ್ವಹಿಸುವುದು.

೫. ಅಂತರ್ಜಾಲ ಅಪರಾಧ ಸಂಸ್ಥೆಗಳನ್ನು ನಿಭಾಯಿಸಲು ಪ್ರಮುಖ ಇಲಾಖೆಗಳಿಗೆ ಜ್ಞಾನವರ್ಧಕವಾಗಿ ಕಾರ್ಯ ನಿರ್ವಹಿಸುವುದು.

## ಕಾರ್ಖಾನೆಗಳು, ಬಾಯ್ಲರ್‌ಗಳು, ಕೈಗಾರಿಕಾ ಸುರಕ್ಷತೆ ಮತ್ತು ಸ್ವಾಸ್ಥ್ಯ ಇಲಾಖೆ

ಈ ಇಲಾಖೆಯು ಕೆಲಸದ ಸ್ಥಳ ಸುರಕ್ಷತೆ, ಕಾರ್ಮಿಕರ ಆರೋಗ್ಯ ಮತ್ತು ಕಲ್ಯಾಣಕ್ಕೆ ಸಂಬಂಧಿಸಿದ ಕಾರ್ಖಾನೆಗಳ ಅಧಿನಿಯಮ, ಕಾರ್ಮಿಕರ ವೇತನ ಪಾವತಿ ಅಧಿನಿಯಮ, ಹೆರಿಗೆ ಸವಲತ್ತು ಅಧಿನಿಯಮ ಮುಂತಾದ ಕಾರ್ಮಿಕ ಕಾನೂನುಗಳನ್ನು ಸಮರ್ಪಕವಾಗಿ ಜಾರಿಗೊಳಿಸಲು ಕ್ರಮ ಜರುಗಿಸುತ್ತಿದೆ. ಕಾರ್ಖಾನೆಗಳ ಅಧಿನಿಯಮ ಅನುಸಾರ ರಾಜ್ಯದಲ್ಲಿ ೧೫,೬೧೮ ನೋಂದಾಯಿತ ಕಾರ್ಖಾನೆಗಳಿದ್ದು, ಸುಮಾರು ೧೬.೭೪ ಲಕ್ಷ ಕಾರ್ಮಿಕರು ಇವುಗಳಲ್ಲಿ ಕೆಲಸ ಮಾಡುತ್ತಿದ್ದಾರೆ. ರಾಜ್ಯದಲ್ಲಿ ೪೪೫೦ ನೋಂದಾಯಿತ ಬಾಯ್ಲರ್‌ಗಳು ಚಾಲ್ತಿಯಲ್ಲಿವೆ. ಕೆಲಸದ ಸ್ಥಳದಲ್ಲಿ ನಿರ್ವಹಿಸುತ್ತಿರುವ ಸಾಕಷ್ಟು ಪ್ರಮಾಣದ ಅಪಾಯಕಾರಿ ರಾಸಾಯನಿಕಗಳನ್ನು ಪರಿಗಣಿಸಿ, ೧೬ ಜಿಲ್ಲೆಗಳಲ್ಲಿರುವ ೭೩ ಕಾರ್ಖಾನೆಗಳನ್ನು ಅತಿ ಅಪಾಯಕಾರಿ ಘಟಕಗಳೆಂದು ಗುರುತಿಸಲಾಗಿದೆ. ಈ ಕಾರ್ಖಾನೆಗಳಿಗೆ ವಿಶೇಷ ಗಮನ ನೀಡಲಾಗಿದೆ. ಸುಮಾರು ೧೧೮೧ ಕಾರ್ಖಾನೆಗಳನ್ನು ಅಪಾಯಕಾರಿ ಚಟುವಟಿಕೆಗಳಿರುವ ಕಾರ್ಖಾನೆಗಳೆಂದು ಗುರುತಿಸಲಾಗಿದೆ. ಈ ಕಾರ್ಖಾನೆಗಳಿಗೆ ವಿಶೇಷ ಗಮನ ನೀಡಲಾಗಿದೆ.

ಕೆಲಸದ ಸ್ಥಳದಲ್ಲಿ ಅಪಾಯ ತಡೆಯಲು, ಇಲಾಖೆಯು ಚಾಲ್ತಿಯಲ್ಲಿರುವ ನಿಯಮಗಳನ್ನು ಅಳವಡಿಸುತ್ತಿದೆ. ಕೆಲಸಗಾರರಿಗೆ ಸುರಕ್ಷತೆ ಹಾಗೂ ಸ್ವಾಸ್ಥ್ಯ ಒದಗಿಸುವುದು ಇಲಾಖೆಯ ದೃಷ್ಟಿ. ಹಲವಾರು ವರ್ಷಗಳಿಂದ ಇಲಾಖೆ ಕೈಗಾರಿಕಾ ಸಂಸ್ಥೆಗಳಿಗೆ ಅಗತ್ಯವಾದ ಸೇವೆಗಳನ್ನು ಒದಗಿಸುತ್ತಿದೆ. ಈ ನಿಟ್ಟಿನಲ್ಲಿ ಇಲಾಖೆಯು ಯಾವುದೇ ನಿಯಮಗಳನ್ನು ಉಲ್ಲಂಘಿಸಿಲ್ಲ. ಕರ್ನಾಟಕದಲ್ಲಿ ನೋಂದಣಿಯಾದ ಹೊಸ ಕೈಗಾರಿಕಾ ಘಟಕಗಳ ವಿವರಗಳನ್ನು ಕೋಷ್ಟಕ ೫.೩೩ ರಲ್ಲಿ ನೀಡಲಾಗಿದೆ.

**ಕೋಷ್ಟಕ ೫.೩೩: ಕರ್ನಾಟಕದಲ್ಲಿ ನೋಂದಣಿಯಾದ ಹೊಸ ಕೈಗಾರಿಕಾ ಘಟಕಗಳ ವಿವರ**

| ಕ್ರ. ಸಂ. | ಕೈಗಾರಿಕಾ ಘಟಕಗಳು | ೨೦೧೧ | ೨೦೧೨ | ೨೦೧೩ | ೨೦೧೪ | ೨೦೧೫ (ಡಿಸೆಂಬರ್ ೨೦೧೫ರ ವರೆಗೆ) |
|---|---|---|---|---|---|---|
| ೧ | ಆಹಾರ ಉತ್ಪಾದನೆ | ೩೦ | ೯೦ | ೧೦೭ | ೭೫ | ೭೯ |
| ೨ | ಕಾಗದ ಮತ್ತು ಕಾಗದ ಉತ್ಪನ್ನಗಳು | ೧೨ | ೩೦ | ೫೪ | ೨೩ | ೧೫ |
| ೩ | ಮೆಟಲ್ ಮತ್ತು ಅಲಾಯ್ಡ್ | ೪೩ | ೮೨ | ೧೧೮ | ೪೪ | ೪೭ |
| ೪ | ರಾಸಾಯನಿಕ | ೧೧ | ೩೦ | ೪೪ | ೨೬ | ೨೯ |
| ೫ | ಸಾರಿಗೆ ಮತ್ತು ಉಪಕರಣಗಳು | ೧೦ | ೫೪ | ೭೯ | ೨೨ | ೩೩ |
| ೬ | ಬಟ್ಟೆ | ೨೮ | ೬೯ | ೧೦೪ | ೩೯ | ೭೮ |
| ೭ | ಮರ ಮತ್ತು ಮರದ ಉತ್ಪನ್ನಗಳು | ೧೩ | ೨೦ | ೩೬ | ೧೬ | ೨೯ |
| ೮ | ಇತರೆ | ೬೪೭ | ೪೯೬ | ೩೦೭ | ೩೮೧ | ೪೪೮ |
| | ಒಟ್ಟು | ೭೯೪ | ೮೭೧ | ೮೪೯ | ೬೨೬ | ೭೫೮ |

**ಮೂಲ: ಕಾರ್ಖಾನೆಗಳು, ಬಾಯ್ಲರ್‌ಗಳು, ಕೈಗಾರಿಕಾ ಸುರಕ್ಷತೆ ಮತ್ತು ಸ್ವಾಸ್ಥ್ಯ ಇಲಾಖೆ**

## ವಿದೇಶಿ ನೇರ ಬಂಡವಾಳ

ಕರ್ನಾಟಕಕ್ಕೆ ವಿದೇಶಿ ನೇರ ಬಂಡವಾಳದ ಒಳಹರಿವು ೨೦೧೨-೧೩ ರಿಂದ ೨೦೧೫-೧೬ (ಸೆಪ್ಟೆಂಬರ್ ೨೦೧೫ ರವರೆಗೆ) ಹಾಗೂ ಇದರ ಸಂಚಿತ ಸಂಖ್ಯೆಯನ್ನು ಏಪ್ರಿಲ್ ೨೦೦೦ ದಿಂದ ಸೆಪ್ಟೆಂಬರ್ ೨೦೧೫ ರವರೆಗೆ ಕೋಷ್ಟಕ ೫.೩೪ರಲ್ಲಿ ನೀಡಲಾಗಿದೆ. ಕಳೆದ ಮೂರು ವರ್ಷಗಳಲ್ಲಿ ವಿದೇಶಿ ಬಂಡವಾಳ ಹೂಡಿಕೆಯ ಒಳ ಹರಿವಿನಲ್ಲಿ ವಿಪರೀತ ವ್ಯತ್ಯಾಸವಿದ್ದರೂ ಕಳೆದ ದಶಕದಲ್ಲಿ ಭಾರತದ ಶೇ.೭ರಷ್ಟು ಭಾಗ ಕರ್ನಾಟಕದ್ದಾಗಿದೆ. ಭಾರತದಲ್ಲಿ ವಿದೇಶಿ ಬಂಡವಾಳ ಹೂಡಿಕೆಯ ಒಳ ಹರಿವಿನ ಒಟ್ಟು ಮೊತ್ತವನ್ನು ನೋಡಿದಾಗ ಕರ್ನಾಟಕವು ೫ನೇ ಸ್ಥಾನದಲ್ಲಿದೆ.

**೫.೩೪: ಆಯ್ದ ರಾಜ್ಯಗಳ ಎಫ್.ಡಿ.ಐ. ಈಕ್ವಿಟಿ ಒಳಹರಿವು ವಿವರಗಳು (ಕೋಟಿ ರೂ.ಗಳಲ್ಲಿ)**

| ಕ್ರ. ಸಂ. | ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾದ ಪ್ರಾದೇಶಿಕ ಕಚೇರಿ | ವ್ಯಾಪ್ತಿಯಲ್ಲಿ ಬರುವ ರಾಜ್ಯಗಳು | ೨೦೧೨-೧೩ (ಏಪ್ರಿಲ್-ಮಾರ್ಚ್) | ೨೦೧೩-೧೪ (ಏಪ್ರಿಲ್-ಮಾರ್ಚ್) | ೨೦೧೪-೧೫ (ಏಪ್ರಿಲ್-ಮಾರ್ಚ್) | ೨೦೧೫-೧೬ (ಏಪ್ರಿಲ್-ಮಾರ್ಚ್) | ಸಂಚಿತ ಮೊತ್ತ (ಏಪ್ರಿಲ್ ೨೦೦೦-ಸೆಪ್ಟೆಂಬರ್ ೨೦೧೫) | ಒಟ್ಟು ಮೊತ್ತದ ಶೇಕಡಾವಾರು* |
|---|---|---|---|---|---|---|---|---|
| ೧ | ಮುಂಬೈ | ಮಹಾರಾಷ್ಟ್ರ, ದಾದ್ರ ಮತ್ತು ನಾಗರಹಾವೇಲಿ, ಡಾಮನ್ ಮತ್ತು ಡಿಯು | ೪೭,೩೫೯ | ೨೦,೫೯೫ | ೩೮,೯೩೩ | ೨೧,೪೪೯ | ೩,೭೪,೪೭೧ | ೨೯ |
| ೨ | ನವದೆಹಲಿ | ದೆಹಲಿ, ಯುಪಿ ಮತ್ತು ಹರಿಯಾಣದ ಕೆಲವು ಭಾಗಗಳು | ೧೭,೪೯೦ | ೩೮,೧೯೦ | ೪೨,೨೫೨ | ೩೮,೯೬೮ | ೨,೮೭,೯೯೧ | ೨೧ |
| ೩ | ಬೆಂಗಳೂರು | ಕರ್ನಾಟಕ | ೫,೫೫೩ | ೧೧,೪೨೨ | ೨೧,೨೫೫ | ೧೪,೦೨೯ | ೯೬,೧೫೧ | ೦೭ |
| ೪ | ಚೆನ್ನೈ | ತಮಿಳುನಾಡು, ಪಾಂಡಿಚೆರಿ | ೧೫,೨೫೨ | ೧೨,೫೯೫ | ೨೩,೩೬೧ | ೬,೭೮೦ | ೯೫,೫೪೬ | ೦೭ |
| ೫ | ಅಹಮದಾಬಾದ್ | ಗುಜರಾತ್ | ೨,೬೭೬ | ೫,೨೮೨ | ೯,೪೧೬ | ೬,೯೦೩ | ೬೦,೭೦೦ | ೦೫ |
| ೬ | ಹೈದರಾಬಾದ್ | ಆಂಧ್ರ ಪ್ರದೇಶ | ೬,೨೯೦ | ೪,೦೨೪ | ೮,೩೨೬ | ೩,೪೮೭ | ೫೨,೭೨೭ | ೦೪ |
| ೭ | ಕೊಲ್ಕತ್ತ | ಪ. ಬಂಗಾಳ, ಸಿಕ್ಕಿಂ | ೨,೩೧೯ | ೨,೬೫೯ | ೧,೪೬೪ | ೪,೬೪೫ | ೧೯,೭೨೨ | ೦೨ |

***ಒಟ್ಟು ಮೊತ್ತ ಎಲ್ಲಾ ರಾಜ್ಯಗಳ ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾದ ಪ್ರಾದೇಶಿಕ ಕಚೇರಿಗಳಲ್ಲಿ ಸಂಗ್ರಹವಾದ ಸಂಚಿತ ಮೊತ್ತ**

**ಮೂಲ: ಭಾರತ ಸರ್ಕಾರದ ಇಂಡಸ್ಟ್ರಿಯಲ್ ಪಾಲಿಸಿ ಮತ್ತು ಪ್ರೊಮೂಶನ್ ಇಲಾಖೆ**

### ಇನ್ವೆಸ್ಟ್ ಕರ್ನಾಟಕ ೨೦೧೬

ಕರ್ನಾಟಕದ ಮಹತ್ವಾಕಾಂಕ್ಷೆಯ ಇನ್ವೆಸ್ಟ್ ಕರ್ನಾಟಕ ಕಾರ್ಯಕ್ರಮವು ೨೦೧೬ರ ಫೆಬ್ರುವರಿ ೩ ರಿಂದ ೫ ರವರೆಗೆ ಯಶಸ್ವಿಯಾಗಿ ನೆರವೇರಿತು. ಸರ್ಕಾರವು ೩ ಲಕ್ಷ ಕೋಟಿ ಬಂಡವಾಳ ಹೂಡಿಕೆಯನ್ನು ಆಕರ್ಷಿಸಿದ್ದು ಅದರಲ್ಲಿ ೧೧೮೦ ಯೋಜನೆಗಳಿಂದ ೧.೭೧ ಲಕ್ಷ ಕೋಟಿ ಹೂಡಿಕೆಯನ್ನು ಅನುಮೋದಿಸಲಾಗಿದೆ. ಮುಂದುವರಿದು, ೧೨೨ MOUS/EOIS ಒಪ್ಪಂದಗಳಿಗೆ ಸಹಿ ಮಾಡಲಾಗಿ ಇದರಿಂದ ರೂ. ೧.೨೨ ಲಕ್ಷ ಕೋಟಿ ಬಂಡವಾಳ ಹೂಡಿಕೆಗೆ ಒಪ್ಪಲಾಗಿದೆ ಮತ್ತು ಇದರಿಂದ ೧.೭ ಲಕ್ಷ ಜನರಿಗೆ ಉದ್ಯೋಗಾವಕಾಶ ಸೃಷ್ಟಿಯನ್ನು ನಿರೀಕ್ಷಿಸಲಾಗಿದೆ.

### ಬಿ೨ಜಿ ಸಭೆ

ಈ ಕಾರ್ಯಕ್ರಮದಲ್ಲಿ ಯೋಜಿಸಲಾಗಿರುವಂತೆ ಉದ್ದಿಮೆದಾರರು ಮತ್ತು ಸರ್ಕಾರದ ಮಟ್ಟದಲ್ಲಿ ೬೦ ಸಭೆಗಳನ್ನು ಜರುಗಿಸಲಾಯಿತು. ಸ್ವೀಡನ್, ಜಪಾನ್, ಸೌದಿ ಅರೇಬಿಯಾ, ಇಂಗ್ಲೆಂಡ್, ಇಟಲಿ, ಅಮೆರಿಕಾ ಸಂಯುಕ್ತ ಸಂಸ್ಥಾನ, ಜರ್ಮನಿ, ದಕ್ಷಿಣ ಕೊರಿಯಾ ಮುಂತಾದ ದೇಶಗಳಿಂದ ನಿಯೋಗಗಳು ಭಾಗವಹಿಸಿದ್ದವು. ಸೋಲಾರ್ ಕ್ಯಾಪಿಟಲ್, ಫಾಕ್ಸ್ ಪೆಟ್ರೋಲಿಯಂ, ಉಬರ್ ಮುಂತಾದ ಸಂಸ್ಥೆಗಳನ್ನೊಳಗೊಂಡಂತೆ ಸಮರ್ಥ ಹೂಡಿಕೆದಾರರೂ ಸೇರಿದಂತೆ ರತನ್ ಟಾಟಾ, ಅನಿಲ್ ಅಂಬಾನಿ, ಸಜ್ಜನ್ ಜಿಂದಾಲ್ ಮುಂತಾದವರೂ ಸಭೆಗಳಲ್ಲಿ ಸಕ್ರಿಯವಾಗಿ ಭಾಗವಹಿಸಿದ್ದರು. ಬಹುತರವಾಗಿ ಎಲ್ಲಾ ಸಭೆಗಳೂ ದ್ವಿಪಕ್ಷೀಯ ಸಹಮತಿ ಒಪ್ಪಂದಗಳೊಂದಿಗೆ ಫಲಪ್ರದವಾಗಿ ಮುಕ್ತಾಯಗೊಂಡಿರುತ್ತವೆ.

### ಬಿ೨ಬಿ ಸಭೆ

ಇನ್ವೆಸ್ಟ್ ಕರ್ನಾಟಕ ೨೦೧೬ರ ಎರಡೂ ದಿನದ ಕಾರ್ಯಕ್ರಮಗಳಲ್ಲಿ ೬೩೪ ಜನರು ಅತ್ಯಂತ ಕ್ರಿಯಾಶೀಲವಾಗಿ ಬಿ೨ಬಿ ಸಭೆಗಳಲ್ಲಿ ಭಾಗವಹಿಸಿದ್ದರು. ಸಭೆಗಳಲ್ಲಿ ಕೃಷಿ ಉದ್ಯಮ ಮತ್ತು ಆಹಾರ ಸಂಸ್ಕರಣೆ, ಆಟೊಮೋಟೀವ್ ಉದ್ಯಮ, ಆಟೊಮೊಬೈಲ್ ಬಿಡಿಭಾಗಗಳು, ಜೈವಿಕ ತಂತ್ರಜ್ಞಾನ, ಬಾಹ್ಯಾಂತರಿಕ್ಷ, ಹಣಕಾಸು, ವ್ಯವಹಾರ ಅಭಿವೃದ್ಧಿ, ಕಾನೂನು, ಮಾನವ ಸಂಪನ್ಮೂಲ, ಶಿಕ್ಷಣ ಮುಂತಾದ ವಲಯಗಳಿಂದ ಪ್ರತಿನಿಧಿಗಳು ಬಿ೨ಬಿ ಸಭೆಗಳಲ್ಲಿ ಭಾಗವಹಿಸಿದ್ದರು.

## ಕೈಗಾರಿಕಾ ನೀತಿ ೨೦೧೪-೨೦೧೯

### ದೃಷ್ಟಿಕೋನ

ಸರ್ವರನ್ನೂ ಒಳಗೊಂಡ, ಸುಸ್ಥಿರ ಮತ್ತು ಸಮತೋಲನದ ಕೈಗಾರಿಕಾ ಅಭಿವೃದ್ಧಿಯ ಮೂಲಕ ಸಮೃದ್ಧ ಕರ್ನಾಟಕವನ್ನು ನಿರ್ಮಿಸಿ ತನ್ಮೂಲಕ ವಿಫುಲ ಉದ್ಯೋಗಾವಕಾಶಗಳನ್ನು ಸೃಷ್ಟಿಸುವುದು.

### ಧ್ಯೇಯ

ಉತ್ಪಾದನಾ ವಲಯಕ್ಕೆ ವಿಶೇಷ ಆದ್ಯತೆ ನೀಡಿ, ಕೈಗಾರಿಕಾ ಬಂಡವಾಳ ಹೂಡಿಕೆಗಾಗಿ ಕರ್ನಾಟಕವನ್ನು ಪ್ರಾಶಸ್ತ್ಯದ ತಾಣವನ್ನಾಗಿ ಮಾಡುವುದು. ಕೈಗಾರಿಕಾ ಅಭಿವೃದ್ಧಿಗಾಗಿ ರಾಜ್ಯದ ಎಲ್ಲೆಡೆ ಅವಕಾಶಗಳನ್ನು ಕಲ್ಪಿಸಿ, ಖಾಸಗಿ ವಲಯದ ಮೂಲಕ ಸ್ಥಳೀಯರಿಗೆ ಬೃಹತ್ ಪ್ರಮಾಣದಲ್ಲಿ ಉದ್ಯೋಗಾವಕಾಶಗಳನ್ನು ಸೃಷ್ಟಿಸುವುದು. ಕೈಗಾರಿಕೆಗಳ ಅಗತ್ಯಗಳನ್ನು ಪೂರೈಸಲು ಮಾನವ ಸಂಪನ್ಮೂಲವನ್ನು ಅಭಿವೃದ್ಧಿಪಡಿಸುವುದು.

ಸುಸ್ಥಿರವಾದ ಕೈಗಾರಿಕಾ ಅಭಿವೃದ್ಧಿಗಾಗಿ ನೈಸರ್ಗಿಕ ಸಂಪನ್ಮೂಲಗಳ ಗರಿಷ್ಠ ಬಳಕೆಯನ್ನು ಸಾಧಿಸುವ ಪೂರಕ ಪರಿಸರವನ್ನು ಸೃಷ್ಟಿಸುವುದು.

### ಉದ್ದೇಶಗಳು

ಕೈಗಾರಿಕಾ ಬೆಳವಣಿಗೆಯನ್ನು ವಾರ್ಷಿಕ ಶೇ ೧೨ರ ಗತಿಯಲ್ಲಿ ಮುಂದುವರೆಸುವುದು, ರಾಜ್ಯ ಜಿ.ಡಿ.ಪಿ ಯಲ್ಲಿ ಪ್ರಸಕ್ತ ಶೇ. ೧೬.೮೭ ಇರುವ ಉತ್ಪಾದನಾ ವಲಯದ ಪಾಲನ್ನು, ನೀತಿಯ ಅವಧಿಯ ಅಂತ್ಯದ ವೇಳೆಗೆ ಶೇ.೨೦ಗೆ ಹೆಚ್ಚಿಸುವುದು. ರೂ. ೫ ಲಕ್ಷ ಕೋಟಿಗಳ ಬಂಡವಾಳವನ್ನು ಆಕರ್ಷಿಸುವುದು, ೧೫ ಲಕ್ಷ ಜನರಿಗೆ ಉದ್ಯೋಗಾವಕಾಶವನ್ನು ಕಲ್ಪಿಸುವುದು ಹಾಗೂ ರಾಜ್ಯದಲ್ಲಿ ಸುಸೂತ್ರವಾಗಿ ಉದ್ಯಮ-ವ್ಯವಹಾರ ಕೈಗೊಳ್ಳುವಂತಹ ವಾತಾವರಣವನ್ನು ಕಲ್ಪಿಸುವುದು.

### ಕಾರ್ಯತಂತ್ರಗಳು

ಸಮಗ್ರ ಸೌಲಭ್ಯಗಳಿರುವ ಉತ್ತಮ ಗುಣಮಟ್ಟದ ಮೂಲಭೂತ ಸೌಕರ್ಯವನ್ನು ಕಲ್ಪಿಸುವುದು, ಸಾಮರ್ಥ್ಯವರ್ಧನೆ ಮತ್ತು ಕುಶಲತೆಯ ಆಧುನೀಕರಣದ ಮೂಲಕ ಮಾನವ ಸಂಪನ್ಮೂಲವನ್ನು ಅಭಿವೃದ್ಧಿಪಡಿಸುವುದು, ಅನುಕೂಲಕರ ವ್ಯವಸ್ಥೆ ಮತ್ತು ನೀತಿ ನಿಯಮಗಳ ಸುಧಾರಣೆ, ತಾಲೂಕುಗಳ ವರ್ಗೀಕರಣ ಹೈದರಾಬಾದ್ ಕರ್ನಾಟಕ ಪ್ರದೇಶದಲ್ಲಿ ಕೈಗಾರಿಕಾಭಿವೃದ್ಧಿಗೆ ಉತ್ತೇಜನ, ಎಮ್‌ಎಸ್‌ಎಮ್‌ಇಗಳಿಗೆ ಉತ್ತೇಜನ ಪರಿಶಿಷ್ಟಜಾತಿ/ ಪಂಗಡಗಳನ್ನು ಉತ್ತೇಜಿಸಲು ವಿಶೇಷ ಒತ್ತು ಮಹಿಳಾ ಉದ್ಯಮಶೀಲರಿಗೆ ಉತ್ತೇಜನ, ಅಲ್ಪಸಂಖ್ಯಾತರು, ಹಿಂದುಳಿದ ವರ್ಗಗಳು, ಅಂಗವಿಕಲರು, ಮಾಜಿ ಯೋಧ ಉದ್ಯಮಶೀಲರಿಗೆ ಉತ್ತೇಜನ, ಅನಿವಾಸಿ ಕನ್ನಡಿಗರಿಗೆ (ಎನ್ ಆರ್ ಕೆಗಳು) ಉತ್ತೇಜನ, ರಫ್ತು ವಲಯಕ್ಕೆ ಉತ್ತೇಜನ, ಇಂಧನ ಉಳಿತಾಯ ಕ್ರಮಗಳನ್ನು ಅಳವಡಿಸುವ ಘಟಕಗಳಿಗೆ ಉತ್ತೇಜನ, ಪುನರ್ ಬಳಕೆ ಇಂಧನ ಯೋಜನೆಗಳಿಗೆ ಉತ್ತೇಜನ, ಪರಿಸರಸ್ನೇಹಿ ಹಸಿರು ಮತ್ತು ಸ್ವಚ್ಛಯೋಜನೆಗಳಿಗೆ ಉತ್ತೇಜನ, ಆರ್ ಅಂಡ್ ಡಿ ಹಾಗೂ ಡಿಜಿಟಲ್ ಡೈರೆಕ್ಟ್ ತಯಾರಿಕೆಗೆ ಬೆಂಬಲ ಇಂಟಲೆಕ್ಚುವಲ್ ಪ್ರಾಪರ್ಟಿ ರೈಟ್ಸ್‌ಗಾಗಿ ಉಪಕ್ರಮ, ಬಂಡವಾಳ ಮತ್ತು ವ್ಯಾಪಾರಕ್ಕೆ ಪ್ರೋತ್ಸಾಹ, ಆ್ಯಂಕರ್ ಕೈಗಾರಿಕೆಗಳಿಗೆ ಉತ್ತೇಜನ ದೊಡ್ಡ, ಬೃಹತ್, ಅತಿ ಬೃಹತ್, ಅತ್ಯಂತ ಬೃಹತ್ ಉದ್ಯಮಗಳಿಗಾಗಿ ಪ್ರೋತ್ಸಾಹಗಳು ಮತ್ತು ವಿನಾಯಿತಿಗಳು, ಪ್ರಮುಖ ಒತ್ತಾಸೆಯ ಕೈಗಾರಿಕೆಗಳು ಹಾಗೂ ಅಯವ್ಯಯದ ಬೆಂಬಲ.

### ನೀತಿಯ ಕ್ರಮಗಳು

ಸಮಗ್ರ ಸೌಲಭ್ಯಗಳಿರುವ ಉತ್ತಮ ಗುಣಮಟ್ಟದ ಮೂಲಭೂತ ಸೌಕರ್ಯಗಳನ್ನು ಕಲ್ಪಿಸುವುದು, ಕೆಐಎಡಿಬಿ ಮೂಲಕ ಹೊಸ ಕೈಗಾರಿಕಾ ಪ್ರದೇಶಗಳ ಸ್ಥಾಪನೆ, ಕೈಗಾರಿಕಾಭಿವೃದ್ಧಿಗಾಗಿ ಸಾಕಷ್ಟು ವಿಸ್ತೀರ್ಣದ, ಬಳಸಲು ಸಿದ್ಧವಾದ ಭೂಮಿ ಪೂರ್ವಾಗತ್ಯವಾಗಿದೆ. ರಾಜ್ಯದ ಎಲ್ಲೆಡೆ ಬಂಡವಾಳ ಹೂಡಿಕೆದಾರರಿಗೆ ಸಮಗ್ರ ಮೂಲಸೌಕರ್ಯಗಳಿರುವ ಕೈಗಾರಿಕಾ ಭೂಮಿಯನ್ನು ಒದಗಿಸುವತ್ತ ರಾಜ್ಯವು ಹೆಚ್ಚಿನ ಗಮನವನ್ನು ನೀಡಲಿದೆ.

ಕೈಗಾರಿಕಾ ಉದ್ದೇಶಗಳಿಗಾಗಿ ಭೂಮಿಯನ್ನು ಸ್ವಾಧೀನ ಪಡಿಸಿಕೊಳ್ಳಲು ಭಾರತ ಸರ್ಕಾರ "The transparency in land acquisition, rehabilitation and resettlement Act 2013" ರಲ್ಲಿ ಘೋಷಿಸಿರುವ ಮಾರ್ಗದರ್ಶನಗಳನ್ನು ಅನುಸರಿಸಲಾಗುವುದು. ಕೈಗಾರಿಕಾ ಉದ್ದೇಶಗಳಿಗಾಗಿ ನಿಷ್ಕ್ರೀಯ, ಬಂಜರು, ಖರಾಬ್, ಒಣ ಮತ್ತು ಒಂದು ಬೆಳೆಯ ಭೂಮಿಯನ್ನು ಮಾತ್ರ ಸ್ವಾಧೀನಪಡಿಸಿಕೊಳ್ಳಲಾಗುವುದೆಂದು ಖಾತರಿ ಪಡಿಸಲಾಗುವುದು. ಕೆಐಎಡಿಬಿಯು ಕೈಗಾರಿಕೆಗಳಿಗೆ ಭೂಮಿಯನ್ನು ಸ್ವಾಧೀನಪಡಿಸುವ ಸಂದರ್ಭದಲ್ಲಿ ಸಾಧ್ಯವಾದಷ್ಟು ಮಟ್ಟಿಗೆ ಭೂಮಿ ಕಳೆದುಕೊಳ್ಳುವ ಪ್ರತಿ ಕುಟುಂಬದಲ್ಲಿ ಕನಿಷ್ಠ ಒಬ್ಬರಿಗಾದರೂ ಉದ್ಯೋಗವನ್ನು ದೊರಕಿಸುವ ನಿಟ್ಟಿನಲ್ಲಿ ಯತ್ನಿಸಲಿದೆ.

ಪ್ರತಿ ಕೈಗಾರಿಕಾ ಪ್ರದೇಶವನ್ನು, ಸೂಕ್ತ ಸಂಪರ್ಕ, ಸಮರ್ಪಕ ನೀರು ಪೂರೈಕೆ, ವಿದ್ಯುಚ್ಛಕ್ತಿ ಹಾಗೂ ಇತರ ಅತ್ಯವಶ್ಯಕ ಸೌಕರ್ಯಗಳೊಂದಿಗೆ ಆರ್ಥಿಕವಾಗಿ ಲಾಭದಾಯಕವಾಗುವಂತೆ ಮಾತ್ರ ನಿರ್ಮಿಸಲಾಗುವುದು. ಕೈಗಾರಿಕಾ ಪ್ರದೇಶದ ಸಂಪೂರ್ಣ ಅಭಿವೃದ್ಧಿಯ ನಂತರವೇ ನಿವೇಶನಗಳನ್ನು ಹಂಚಿಕೆ ಮಾಡಲಾಗುವುದು.

ಒಂದು ಸಾವಿರ ಎಕರೆಗಳನ್ನು ಮೀರಿದ ವಿಸ್ತೀರ್ಣದ ಎಲ್ಲಾ ಮುಂಬರುವ ಕೆಐಎಡಿಬಿ ಕೈಗಾರಿಕಾ ಪ್ರದೇಶಗಳಲ್ಲಿ ವಸತಿ, ಸರ್ವಿಸ್ ಅಪಾರ್ಟ್‌ಮೆಂಟ್ಸ್, ಆಸ್ಪತ್ರೆಗಳು, ಷಾಪಿಂಗ್ ಸಮುಚ್ಚಯಗಳು, ಉಪಾಹಾರಗೃಹಗಳು ಮುಂತಾದ ಬೆಂಬಲಾತ್ಮಕ ಸಾಮಾಜಿಕ ಸೌಲಭ್ಯಗಳಿಗಾಗಿ ಶೇ೧೦ ರಷ್ಟು ಜಾಗವನ್ನು ಮೀಸಲಾಗಿಡಲು ಉದ್ದೇಶಿಸಲಾಗಿದೆ.

ಕೆಐಎಡಿಬಿ ಕೈಗಾರಿಕಾ ಪ್ರದೇಶಗಳಲ್ಲಿ ವಿದ್ಯುತ್ ಉತ್ಪಾದನಾ ಘಟಕಗಳಿಗೆ ಭೂಮಿ ಒದಗಿಸುವತ್ತ ಆದ್ಯತೆ ನೀಡಲಾಗುವುದು. ಲಭ್ಯವಿರುವ ಭೂಮಿಯನ್ನು ಗರಿಷ್ಠವಾಗಿ ಉಪಯೋಗಿಸಿಕೊಳ್ಳಲಾಗುತ್ತದೆ ಎನ್ನುವುದನ್ನು ಖಚಿತಪಡಿಸಿಕೊಳ್ಳಲು ಸರ್ಕಾರವು ಅನುಮೋದನೆಗೆ ಮುಂಚಿತವಾಗಿ ಯೋಜನೆಯ ಭೂ ಅಗತ್ಯತೆಗಳನ್ನು ಪರಿಶೀಲಿಸಲಾಗುವುದು. ಇನ್ನು ಮುಂದೆ ಕೆಐಎಡಿಬಿ, ಯೋಜನಾ ಪ್ರತಿಪಾದಕರಿಗೆ ೯೯ ವರ್ಷಗಳ ಗುತ್ತಿಗೆಯ ಆಧಾರದ ಮೇಲೆ ಮಾತ್ರ ಕೈಗಾರಿಕಾ ಭೂಮಿಯನ್ನು ನೀಡುತ್ತದೆ. ಕೈಗಾರಿಕಾ ಬಳಕೆಗಾಗಿ ಕೈಗಾರಿಕಾ ಪ್ರದೇಶಗಳಿಗೆ ಕೆಐಎಡಿಬಿಯು ಸಂಸ್ಕರಿತ ನೀರನ್ನು ಪೂರೈಸುತ್ತದೆ. ಕೆಐಎಡಿಬಿ, ಕುಡಿಯುವ ನೀರಿನ ಪೂರೈಕೆಗಾಗಿಯೂ ಸೂಕ್ತ ಏರ್ಪಾಡುಗಳನ್ನು ಮಾಡುತ್ತದೆ.

ಕೆಪಿಟಿಸಿಎಲ್, ಈಗಿನ ಮತ್ತು ಮುಂಬರುವ ಕೆಐಎಡಿಬಿ ಕೈಗಾರಿಕಾ ಪ್ರದೇಶಗಳಿಗಾಗಿ ಸೂಕ್ತ ಸಾಮರ್ಥ್ಯಗಳ ವಿದ್ಯುತ್ ಉಪ ಕೇಂದ್ರಗಳನ್ನು ನಿರ್ಮಿಸುತ್ತದೆ ಮತ್ತು ಇದರ ವೆಚ್ಚವನ್ನು ಸರ್ಕಾರದವತಿಯಿಂದ ಅಥವಾ ಟ್ಯಾರಿಫ್ ಮೂಲಕ ಭರಿಸಲಾಗುವುದು. ೩೩ಕೆವಿ/೬೬ಕೆವಿ/೧೧೦ಕೆವಿ/೨೨೦ಕೆವಿಗಳ ಎಲ್ಲಾ ಕೈಗಾರಿಕಾ ಫೀಡರ್‌ಗಳನ್ನು ೨೪/೭ ವಿದ್ಯುತ್ ಪೂರೈಕೆ ಇರುವ ಎಕ್ಸ್‌ಪ್ರೆಸ್ ಫೀಡರ್‌ಗಳೆಂದು ಪರಿಗಣಿಸಲಾಗುವುದು.

ಕೆಐಎಡಿಬಿ, ತನ್ನ ವೆಬ್‌ಸೈಟ್ ಮೂಲಕ ಸಾರ್ವಜನಿಕರಿಗೆ ಭೂಮಿ/ ನಿವೇಶನದ ಲಭ್ಯತೆಯ ಬಗ್ಗೆ ತಾಜಾ ಮಾಹಿತಿಯನ್ನು ಒದಗಿಸುತ್ತದೆ. ಕೆಐಎಡಿಬಿ, ನೀತಿಯ ಅವಧಿಯಲ್ಲಿ ಕೈಗಾರಿಕಾ ಅಗತ್ಯಗಳಿಗಾಗಿ ರಾಜ್ಯದ ಎಲ್ಲೆಡೆ ಸುಮಾರು ೪೦,೦೦೦ ಎಕರೆಗಳಷ್ಟು ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳಲು ಉದ್ದೇಶಿಸಿದೆ. ಕೈಗಾರಿಕಾ ಪ್ರದೇಶಗಳನ್ನು ರೂಪಿಸಲು ಪ್ರತಿ ವರ್ಷ ೮,೦೦೦ ಎಕರೆಗಳಷ್ಟು ಭೂಮಿಯನ್ನು (ಎಸ್‌ಯುಸಿಗಳು ಒಳಪಟ್ಟಂತೆ) ಹಂತಾನುಹಂತವಾಗಿ ಸ್ವಾಧೀನಪಡಿಸಿಕೊಳ್ಳಲು ಉದ್ದೇಶಿಸಲಾಗಿದೆ. ಹಣದ ಅಗತ್ಯತೆಗಳನ್ನು ಪೂರೈಸಲು ಕೆಐಎಡಿಬಿ, ಒಂದು ಕಾರ್ಪಸ್ ಫಂಡ್‌ನ್ನು ರಚಿಸಲಿದ್ದು, ಇದನ್ನು ಸ್ವಂತ ಹಣಕಾಸು ಸಾಮರ್ಥ್ಯವನ್ನು ಮೈಗೂಡಿಸಿಕೊಳ್ಳುವಂತೆ ರಿವಾಲ್ವಿಂಗ್ ಆಧಾರದ ರೀತ್ಯ ರೂಪಿಸಲಾಗುವುದು.

### ಕೈಗಾರಿಕಾ ಕಾರಿಡರ್‌ಗಳ ಸ್ಥಾಪನೆ

ಚೆನ್ನೈ- ಬೆಂಗಳೂರು- ಚಿತ್ರದುರ್ಗ ಕೈಗಾರಿಕಾ ಕಾರಿಡಾರ್ (ಸಿಬಿಸಿಐಸಿ) ಮತ್ತು ಬೆಂಗಳೂರು-ಮುಂಬೈ ಆರ್ಥಿಕ ಕಾರಿಡಾರ್ (ಬಿಎಮ್‌ಇಸಿ)-ಇವುಗಳ ಮೇಲಿನ ಕಾರ್ಯವನ್ನು ದೆಹಲಿ-ಮುಂಬೈ ಕೈಗಾರಿಕಾ ಕಾರಿಡಾರ್ ರೀತಿಯಲ್ಲಿ, ಭಾರತ ಸರ್ಕಾರದ ಬೆಂಬಲದೊಂದಿಗೆ ತ್ವರಿತಗೊಳಿಸಲಾಗುವುದು. ಈ ಕಾರಿಡಾರ್‌ಗಳ ಉದ್ದಕ್ಕೆ ಕೈಗಾರಿಕಾ ಬೆಳವಣಿಗೆಯನ್ನು ಸಾಧಿಸಲು, ಜಪಾನ್ ಇಂಟರ್‌ನ್ಯಾಷನಲ್ ಕೋ-ಆಪರೇಷನ್ ಏಜೆನ್ಸಿ (ಜೆಐಸಿಎ) ಮೂಲಕ ಲಭ್ಯವಿರುವ ತಾಂತ್ರಿಕ ಮತ್ತು ಹಣಕಾಸು ನೆರವನ್ನು ಬಳಸಿಕೊಳ್ಳಲು ಉದ್ದೇಶಿಸಲಾಗಿದೆ.

ಇದಲ್ಲದೇ, ರಾಜ್ಯವು ಹಿಂದುಳಿದ ಪ್ರದೇಶಗಳಿಗೆ ಪ್ರಯೋಜನ ತಂದು ರಾಜ್ಯದ ಉದ್ದಗಲಕ್ಕೆ ಸತತ ಕೈಗಾರಿಕಾ ಬೆಳವಣಿಗೆಯನ್ನು ಕಲ್ಪಿಸಲು, ಕೆಳಗಿನ ರಾಜ್ಯ ಕೈಗಾರಿಕಾ ಕಾರಿಡಾರ್ (ಎಸ್‌ಐಸಿ) ಗಳನ್ನು ಸ್ಥಾಪಿಸುವ ಅವಕಾಶಗಳನ್ನು ಸಹ ಪರಿಶೀಲಿಸುತ್ತದೆ.

(i) ಬೆಂಗಳೂರು-ಮಂಡ್ಯ-ಮೈಸೂರು-ಚಾಮರಾಜನಗರ
(ii) ಚಿತ್ರದುರ್ಗ-ಬಳ್ಳಾರಿ-ಕಲಬುರಗಿ-ಬೀದರ್
(iii) ಧಾರವಾಡ-ಕೊಪ್ಪಳ-ರಾಯಚೂರು
(iv) ಬೆಂಗಳೂರು-ಹಾಸನ-ಮಂಗಳೂರು
(V) ಚಿತ್ರದುರ್ಗ-ಹಾವೇರಿ-ಕಾರವಾರ
(vi) ತುಮಕೂರು-ಶಿವಮೊಗ್ಗ-ಹೊನ್ನಾವರ
(vii) ರಾಯಚೂರು-ಬಾಗಲಕೋಟೆ-ಬೆಳಗಾವಿ

ಭಾರತ ಸರ್ಕಾರವು ತುಮಕೂರು, ಕೋಲಾರ, ಕಲಬುರಗಿ, ಬೀದರ ಜಿಲ್ಲೆಗಳಲ್ಲಿ ನಾಲ್ಕು ರಾಷ್ಟ್ರೀಯ ಬಂಡವಾಳ ಮತ್ತು ಉತ್ಪಾದನಾ ವಲಯಗಳ (ಎನ್‌ಐಎಮ್‌ಜೆಡ್) ಸ್ಥಾಪನೆಗೆ ತ್ವತಶಃ ಅನುಮತಿ ನೀಡಿದೆ. ಸಿಬಿಸಿಐಸಿ/ಎಸ್‌ಐಸಿಯ ಉದ್ದಕ್ಕೆ ಈ

ಸ್ಥಳಗಳಲ್ಲಿನ ಎನ್‌ಐಎಮ್‌ಜೆಡ್‌ಗಳು ಅಥವಾ ಕೈಗಾರಿಕಾ ಕೇಂದ್ರ ತಾಣಗಳು, ಎಲ್ಲೆಡೆ ಉತ್ಪಾದನಾ ವಲಯದ ಬೆಳವಣಿಗೆಗೆ ಚಾಲನೆ ನೀಡುತ್ತವೆ.

### ತಾಲೂಕುಗಳನ್ನು ವಲಯಗಳಾಗಿ ವರ್ಗೀಕರಿಸುವಿಕೆ

ಈ ನೀತಿಯ ಧ್ಯೇಯವೆಂದರೆ ಸರ್ವರನ್ನೂ ಒಳಗೊಂಡ, ಸುಸ್ಥಿರ ಮತ್ತು ಸಮತೋಲನವುಳ್ಳ ಕೈಗಾರಿಕಾ ಬೆಳವಣಿಗೆಯ ಮೂಲಕ ಸಮೃದ್ಧ ಕರ್ನಾಟಕವನ್ನು ನಿರ್ಮಿಸುವುದು. ರಾಜ್ಯದ ಅನೇಕ ತಾಲೂಕುಗಳು ಕೈಗಾರಿಕಾ ದೃಷ್ಟಿಯಿಂದ ಹಿಂದುಳಿದಿವೆ ಎನ್ನುವ ಅಂಶವು ಕೈಗಾರಿಕೆಗಳು ಮಾಡಿದ ಬಂಡವಾಳ ಹೂಡಿಕೆಗಳ ಬಗ್ಗೆ ಮಾಡಲಾದ ಒಂದು ವಿಶ್ಲೇಷಣೆಯಿಂದ ತಿಳಿದುಬಂದಿದೆ. ಈ ಧ್ಯೇಯವನ್ನು ಸಾಕಾರಗೊಳಿಸಲು ಕೈಗಾರಿಕವಾಗಿ ಹಿಂದುಳಿದ ತಾಲೂಕುಗಳಲ್ಲಿ ಕೈಗಾರಿಕೆಗಳ ಪ್ರಸರಣೆಗಾಗಿ ತೀವ್ರ ಗಮನದ ಅಗತ್ಯವಿದೆ. ತಾಲೂಕುಗಳಲ್ಲಿ ಸರಾಸರಿ ತಲಾವಾರು ಕೈಗಾರಿಕಾ ಬಂಡವಾಳ ಮತ್ತು ತಲಾವಾರು ಉದ್ಯೋಗವನ್ನು ಗಮನಿಸಿ, ತಾಲೂಕುಗಳನ್ನು ವಿವಿಧ ವಲಯಗಳಾಗಿ ವರ್ಗೀಕರಿಸಲಾಗಿದೆ. ಸಂವಿಧಾನದ ಅನುಚ್ಛೇದ ೩೭೧(ಜೆ)ನ ಕಲಮುಗಳ ರೀತ್ಯ ಪ್ರತ್ಯೇಕವಾದ ಹೈದರಾಬಾದ್-ಕರ್ನಾಟಕ ವಲಯವನ್ನು ರೂಪಿಸಿರುವ ದೃಷ್ಟಿಯಿಂದ ರಾಜ್ಯವನ್ನು ಎರಡು ಪ್ರದೇಶಗಳು ಅಂದರೆ ಹೈದರಾಬಾದ್ ಕರ್ನಾಟಕ ಪ್ರದೇಶ ಮತ್ತು ಹೈದರಾಬಾದ್-ಕರ್ನಾಟಕೇತರ ಪ್ರದೇಶ ಎಂದು ವರ್ಗೀಕರಿಸಲಾಗಿದೆ. ರಾಜ್ಯದ ಸಮಗ್ರ ಅಭಿವೃದ್ಧಿಗಾಗಿ ಸರಿಸಮಾನ ಹಣ ಸಂಪನ್ಮೂಲಗಳೊಂದಿಗೆ ಒಂದು ಬಲಿಷ್ಠ ಕೈಗಾರಿಕಾ ನೆಲೆಯನ್ನು ರಚಿಸುವ ಉದ್ದೇಶದಿಂದ, ತಾಲೂಕುಗಳನ್ನು ಕೆಳಕಂಡಂತೆ ವಿಂಗಡಿಸಿದ್ದು, ವಿವಿಧ ವಲಯಗಳಲ್ಲಿ ಪ್ರತ್ಯೇಕ ಪ್ರೋತ್ಸಾಹಗಳು ಮತ್ತು ವಿನಾಯಿತಿಗಳನ್ನು ಪ್ರಸ್ತಾಪಿಸಲಾಗಿದೆ.

i) ಹೈದರಾಬಾದ್ ಕರ್ನಾಟಕ ಪ್ರದೇಶವನ್ನು ಎರಡು ವಲಯಗಳಾಗಿ ಅಂದರೆ ಹೆಚ್‌ಕೆ ವಲಯ-೧ ಮತ್ತು ಹೆಚ್‌ಕೆ ವಲಯ-೨ ಎಂದು ವರ್ಗೀಕರಿಸಲಾಗಿದೆ.

ii) ಇದೇ ರೀತಿ ಹೈದರಾಬಾದ್ ಕರ್ನಾಟಕೇತರ ಪ್ರದೇಶದಲ್ಲಿನ ತಾಲೂಕುಗಳನ್ನು ನಾಲ್ಕು ವಲಯಗಳಾಗಿ ಅಂದರೆ ವಲಯ-೧, ೨, ೩, ಮತ್ತು ೪ ಎಂದು ವರ್ಗೀಕರಿಸಲಾಗಿದೆ.

iii) ಅತ್ಯಂತ ಹಿಂದುಳಿದ ತಾಲೂಕುಗಳು ವಲಯ-೧ರಲ್ಲಿವೆ, ಸ್ವಲ್ಪ ಹಿಂದುಳಿದ ತಾಲೂಕುಗಳು ವಲಯ-೨ರಲ್ಲಿವೆ, ಹಿಂದುಳಿದ ತಾಲೂಕುಗಳು ವಲಯ-೩ ರಲ್ಲಿವೆ ಮತ್ತು ಕೈಗಾರಿಕವಾಗಿ ಹಿಂದುಳಿದ ತಾಲೂಕುಗಳು ವಲಯ-೪ ರಲ್ಲಿವೆ. ಹೈದರಾಬಾದ್ ಕರ್ನಾಟಕ ಪ್ರದೇಶದಲ್ಲಿ ಅತ್ಯಂತವಾಗಿ ಹಿಂದುಳಿದ ತಾಲೂಕುಗಳು ಹೆಚ್‌ಕೆ ವಲಯ-೧ ರಲ್ಲಿವೆ ಮತ್ತು ಸ್ವಲ್ಪ ಹಿಂದುಳಿದ ತಾಲೂಕುಗಳು ಹೆಚ್‌ಕೆ ವಲಯ-೨ ರಲ್ಲಿವೆ.

iv) ತ್ವರಿತ ನಗರೀಕರಣ, ಕೈಗಾರಿಕಾಭಿವೃದ್ಧಿಗಾಗಿ ಸಾಧ್ಯತೆಗಳು ಹಾಗೂ ಹಂತ-೨ ರಲ್ಲಿನ ನಗರಗಳಿಗೆ ವಿಸ್ತರಣೆಯನ್ನು ಗಮನದಲ್ಲಿಟ್ಟುಕೊಂಡು, ಮೈಸೂರು, ಮಂಗಳೂರು, ತುಮಕೂರು, ನಂಜನಗೂಡು, ಹುಬ್ಬಳ್ಳಿ-ಧಾರವಾಡ ಮತ್ತು ಬೆಳಗಾವಿ ಮುಂತಾದ ತಾಲೂಕುಗಳನ್ನು ವಲಯ-೩ಕ್ಕೆ ಒಳಪಡಿಸಲಾಗಿದೆ.

| ಕ್ರ. ಸಂ. | ಜಿಲ್ಲೆಗಳು | ತಾಲ್ಲೂಕುಗಳ ಕರ್ನಾಟಕ ಪ್ರದೇಶದ ತಾಲ್ಲೂಕುಗಳು | ಹೈದರಾಬಾದ್ ಕರ್ನಾಟಕ ಪ್ರದೇಶದ ತಾಲ್ಲೂಕುಗಳು | | ಹೈದರಾಬಾದ್ ಕರ್ನಾಟಕಯೇತರ ಪ್ರದೇಶಗಳಲ್ಲಿನ ತಾಲ್ಲೂಕುಗಳು | | | |
|---|---|---|---|---|---|---|---|---|
| | | | ಹೆಚ್‌ಕೆ ವ-೧ | ಹೆಚ್‌ಕೆ ವ-೧ | ವ-೧ | ವ-೨ | ವ-೩ | ವ-೪ |
| ೧ | ೨ | ೩ | ೪ | ೫ | ೬ | ೭ | ೮ | ೯ |
| ೧ | ಬೆಂಗಳೂರು ನಗರ | ೪ | – | – | – | – | – | ಆನೇಕಲ್ ಬೆಂ-ಉತ್ತರ, ಬೆಂ-ದಕ್ಷಿಣ, ಬೆಂ-ಪೂರ್ವ |
| ೨ | ಬೆಂಗಳೂರು ಗ್ರಾಮಾಂತರ | ೪ | – | – | – | – | – | ದೇವನಹಳ್ಳಿ, ದೊಡ್ಡಬಳ್ಳಾಪುರ, ಹೊಸಕೋಟೆ, ನೆಲಮಂಗಲ |
| ೩ | ರಾಮನಗರ | ೪ | – | – | – | – | ಮಾಗಡಿ, ಚನ್ನಪಟ್ಟಣ, ಕನಕಪುರ | ರಾಮನಗರ |
| ೪ | ಚಿತ್ರದುರ್ಗ | ೬ | – | – | ಹೊಳಲಕೆರೆ | ಹಿರಿಯೂರು, ಮೊಳಕಾಲ್ಮರು, ಚಿತ್ರದುರ್ಗ, ಹೊಸದುರ್ಗ | – | – |
| ೫ | ದಾವಣಗೆರೆ | ೬ | – | – | ಚೆನ್ನಗಿರಿ, ಜಗಳೂರು, ಹರಪ್ಪನಹಳ್ಳಿ | ಹೊನ್ನಾಳಿ | ದಾವಣಗೆರೆ, ಹರಿಹರ | – |
| ೬ | ಚಿಕ್ಕಬಳ್ಳಾಪುರ | ೬ | – | – | ಗುಡಿಬಂಡೆ, ಬಾಗೇಪಲ್ಲಿ | ಚಿಕ್ಕಬಳ್ಳಾಪುರ, ಚಿಂತಾಮಣಿ | ಗೌರಿಬಿದನೂರು ,ಶಿಡ್ಲಘಟ್ಟ, | – |

| | | | | | | | | |
|---|---|---|---|---|---|---|---|---|
| ೭ | ಕೋಲಾರ | ೫ | – | – | ಮುಳಬಾಗಿಲು, ಶ್ರೀನಿವಾಸಪುರ | – | ಕೋಲಾರ, ಬಂಗಾರಪೇಟೆ, ಮಾಲೂರು | – |
| ೮ | ಶಿವಮೊಗ್ಗ | ೭ | – | – | ಸೊರಬ | ಹೊಸನಗರ | ಶಿವಮೊಗ್ಗ, ಭದ್ರಾವತಿ,ಸಾಗರ ಶಿಕಾರಿಪುರ, ತೀರ್ಥಹಳ್ಳಿ | – |
| ೯ | ತುಮಕೂರು | ೧೦ | – | – | – | ಮಧುಗಿರಿ, ಕೊರಟಗೆರೆ, ಗುಬ್ಬಿ, ಸಿರ, ಪಾವಗಡ | ತುಮಕೂರು, ತುರುವೇಕೆರೆ, ತಿಪಟೂರು, ಚಿಕ್ಕನಾಯಕನಹಳ್ಳಿ, ಕುಣಿಗಲ್ಲು | – |
| ೧೦ | ಚಾಮರಾಜನಗರ | ೪ | – | – | ಯಳಂದೂರು, ಗುಂಡ್ಲುಪೇಟೆ | ಚಾಮರಾಜನಗರ, ಕೊಳ್ಳೆಗಾಲ | – | – |
| ೧೧ | ಚಿಕ್ಕಮಗಳೂರು | ೭ | – | – | – | ಕಡೂರು, ಮೂಡಿಗೆರೆ, ತರಿಕೆರೆ | ಚಿಕ್ಕಮಗಳೂರು, ಶೃಂಗೇರಿ, ಕೊಪ್ಪ, ಎನ್.ಆರ್. ಪುರ, | – |
| ೧೨ | ದಕ್ಷಿಣ ಕನ್ನಡ | ೫ | – | – | – | ಬಂಟ್ವಾಳ | ಮಂಗಳೂರು, ಪುತ್ತೂರು, ಸುಳ್ಯ, ಬೆಳ್ತಂಗಡಿ | – |
| ೧೩ | ಹಾಸನ | ೮ | – | – | ಅರಕಲಗೂಡು, ಬೇಲೂರು | ಅರಸಿಕೆರೆ, ಚೆನ್ನರಾಯಪಟ್ಟಣ. ಹೊಳೆ ನರಸೀಪುರ, ಆಲೂರು | ಹಾಸನ, ಸಕಲೇಶಪುರ | – |
| ೧೪ | ಕೊಡಗು | ೩ | – | – | ವಿರಾಜಪೇಟೆ | ಮಡಿಕೇರಿ, ಸೋಮವಾರಪೇಟೆ | – | – |
| ೧೫ | ಮಂಡ್ಯ | ೭ | – | – | ಮಳವಳ್ಳಿ | ಶ್ರೀರಂಗಪಟ್ಟಣ, ನಾಗಮಂಗಲ, ಕೆ.ಆರ್.ಪೇಟೆ, ಪಾಂಡಾಪುರ | ಮಂಡ್ಯ, ಮದ್ದೂರು | – |
| ೧೬ | ಮೈಸೂರು | ೭ | – | – | ಪೆರಿಯಾಪಟ್ಟಣ ಹೆಗ್ಗಡ ದೇವನಕೋಟೆ | ಹುಣಸೂರು, ಟಿ.ನರಸೀಪುರ, ಕೃಷ್ಣರಾಜನಗರ | ಮೈಸೂರು, ನಂಜನಗೂಡು | – |
| ೧೭ | ಉಡುಪಿ | ೩ | – | – | – | ಉಡುಪಿ, ಕುಂದಾಪುರ, ಕಾರ್ಕಳ | – | – |
| ೧೮ | ಬಾಗಲಕೋಟೆ | ೬ | – | – | – | ಬೀಳಗಿ, ಬಾದಾಮಿ | ಬಾಗಲಕೋಟೆ, ಮುಧೋಳ, ಜಮಖಂಡಿ, ಹುನಗುಂದ್ | – |
| ೧೯ | ಬೆಳಗಾವಿ | ೧೦ | – | – | – | ಬೈಲಹೊಂಗಲ, ಸವದತ್ತಿ, ಚಿಕ್ಕೋಡಿ, ರಾಯಬಾಗ್ | ಬೆಳಗಾವಿ, ಅಥಣಿ, ಹುಕ್ಕೇರಿ, ಗೋಕಾಕ, ಖಾನಾಪುರ, ರಾಮದುರ್ಗ | – |
| ೨೦ | ವಿಜಯಪುರ | ೫ | – | – | ಮುದ್ದೆಬಿಹಾಳ, ಬಸವನ ಬಾಗೇವಾಡಿ | ಸಿಂದಗಿ, ಇಂಡಿ, ವಿಜಯಪುರ | – | – |
| ೨೧ | ಧಾರವಾಡ | ೫ | – | – | – | ನವಲಗುಂದ | ಧಾರವಾಡ, ಹುಬ್ಬಳ್ಳಿ, ಕಲಘಟಗಿ, ಕುಂದಗೋಳ | – |
| ೨೨ | ಗದಗ | ೫ | – | – | ನರಗುಂದ, ರೋಣ | ಮುಂಡರಗಿ | ಗದಗ, ಶಿರಹಟ್ಟಿ | – |

| | | | | | | | | |
|---|---|---|---|---|---|---|---|---|
| ೨೩ | ಹಾವೇರಿ | ೭ | – | – | ಹಿರೇಕೆರೂರು, ಹಾನಗಲ್ | ಸವಣೂರು, ಶಿಗ್ಗಾವಿ, ಹಾವೇರಿ | ರಾಣಿಬೆನ್ನೂರು, ಬ್ಯಾಡಗಿ | – |
| ೨೪ | ಉತ್ತರಕನ್ನಡ | ೧೧ | – | – | – | ಹೊನ್ನಾವರ, ಶಿರಸಿ, ಮುಂಡಗೋಡು, ಯಲ್ಲಾಪುರ, ಸಿದ್ದಾಪುರ | ಕಾರವಾರ, ಹಳಿಯಾಳ, ಸೂಪಾ, ಭಟ್ಕಳ, ಅಂಕೋಲಾ, ಕುಮಟಾ | – |
| ೨೫ | ಬಳ್ಳಾರಿ | ೭ | ಹ.ಬೊ. ಹಳ್ಳಿ, ಹಡಗಲಿ, ಕೂಡ್ಲಿಗಿ | ಬಳ್ಳಾರಿ, ಹೊಸಪೇಟೆ, ಸಂಡೂರು ಸಿರಗುಪ್ಪ | – | – | – | – |
| ೨೬ | ಬೀದರ್ | ೫ | ಭಾಲ್ಕಿ, ಹುಮ್ನಾಬಾದ್, ಬಸವಕಲ್ಯಾಣ, ಔರಾದ್ | ಬೀದರ್ | – | – | – | – |
| ೨೭ | ಕಲಬುರಗಿ | ೭ | ಕಲಬುರಗಿ, ಅಫ್ಜಲ್‌ಪುರ್, ಆಳಂದ, ಜೀವರ್ಗಿ | ಸೇಡಂ, ಚಿತ್ತಾಪುರ್, ಚಿಂಚೋಳಿ | – | – | – | – |
| ೨೮ | ಯಾದ್ಗಿರ್ | ೩ | ಯಾದ್ಗಿರ್, ಶಾಹಪುರ, ಶೋರಾಪುರ | – | – | – | – | – |
| ೨೯ | ಕೊಪ್ಪಳ | ೪ | ಕುಷ್ಟಗಿ, ಯಲಬುರ್ಗ | ಕೊಪ್ಪಳ, ಗಂಗಾವತಿ | – | – | – | – |
| ೩೦ | ರಾಯಚೂರು | ೫ | ಸಿಂಧನೂರು, ಮಾನ್ವಿ, ಲಿಂಗ ಸುಗೂರು, ದೇವದುರ್ಗ | ರಾಯಚೂರು | – | – | – | – |
| | ಒಟ್ಟು | ೧೭೬ | ೨೦ | ೧೧ | ೨೩ | ೫೧ | ೬೨ | ೯ |

**ಸಾಮಾನ್ಯ ವರ್ಗದ ಉದ್ಯಮಶೀಲರು ಹಮ್ಮಿಕೊಳ್ಳುವ ಎಂಎಸ್‌ಎಂಇಗಳಿಗಾಗಿ ಪ್ರೋತ್ಸಾಹಕಗಳು ಮತ್ತು ವಿನಾಯಿತಿಗಳು.**

ಎಂಎಸ್‌ಎಂಇಗಳಿಗಾಗಿ ನೀಡಲಾಗುವ ಪ್ರೋತ್ಸಾಹಗಳು ಮತ್ತು ರಿಯಾಯಿತಿ ವಿವರಗಳು ಕೆಳಕಂಡಂತಿವೆ.

### ಎ) ಬಂಡವಾಳ ಉತ್ತೇಜನ ಸಬ್ಸಿಡಿ

#### ಅ) ಅತಿ ಸಣ್ಣ ಕೈಗಾರಿಕೆಗಳು

**ಹೈದರಾಬಾದ್-ಕರ್ನಾಟಕೇತರ ಪ್ರದೇಶ**

**ವಲಯ-೧** : ಸ್ಥಿರಾಸ್ತಿಗಳ ಮೌಲ್ಯದ (ವಿಎಫ್‌ಎ) ಶೇ ೨೫ರಷ್ಟು (ಗರಿಷ್ಠ ರೂ.೧೫.೦೦ ಲಕ್ಷ),

**ವಲಯ-೨** : ಸ್ಥಿರಾಸ್ತಿಗಳ ಮೌಲ್ಯದ (ವಿಎಫ್‌ಎ) ಶೇ ೨೦ರಷ್ಟು (ಗರಿಷ್ಠ ರೂ.೧೨.೦೦ ಲಕ್ಷ),

**ವಲಯ-೩** : ಸ್ಥಿರಾಸ್ತಿಗಳ ಮೌಲ್ಯದ (ವಿಎಫ್‌ಎ) ಶೇ ೧೫ರಷ್ಟು (ಗರಿಷ್ಠ ರೂ.೯.೦೦ ಲಕ್ಷ), ವಲಯ-೪ : ಇಲ್ಲ.

**ಹೈದರಾಬಾದ್-ಕರ್ನಾಟಕ ಪ್ರದೇಶ**

**ಹೆಚ್‌ಕೆ ವಲಯ-೧** : ಸ್ಥಿರಾಸ್ತಿಗಳ ಮೌಲ್ಯದ (ವಿಎಫ್‌ಎ) ಶೇ ೩೦ರಷ್ಟು (ಗರಿಷ್ಠ ರೂ.೧೮.೦೦ ಲಕ್ಷ)

**ಹೆಚ್‌ಕೆ ವಲಯ-೨** : ಸ್ಥಿರಾಸ್ತಿಗಳ ಮೌಲ್ಯದ (ವಿಎಫ್‌ಎ) ಶೇ ೨೫ರಷ್ಟು (ಗರಿಷ್ಠ ರೂ.೧೫.೦೦ ಲಕ್ಷ)

#### ಆ) ಸಣ್ಣ ಉದ್ಯಮಗಳು

**ಹೈದರಾಬಾದ್-ಕರ್ನಾಟಕೇತರ ಪ್ರದೇಶ**

**ವಲಯ-೧** : ಸ್ಥಿರಾಸ್ತಿಗಳ ಮೌಲ್ಯದ (ವಿಎಫ್‌ಎ) ಶೇ ೨೦ರಷ್ಟು (ಗರಿಷ್ಠ ರೂ.೪೦.೦೦ ಲಕ್ಷ);

**ವಲಯ-೨** : ಸ್ಥಿರಾಸ್ತಿಗಳ ಮೌಲ್ಯದ (ವಿಎಫ್‌ಎ) ಶೇ ೧೫ರಷ್ಟು (ಗರಿಷ್ಠ ರೂ.೩೦.೦೦ ಲಕ್ಷ);

**ವಲಯ-೩** : ಸ್ಥಿರಾಸ್ತಿಗಳ ಮೌಲ್ಯದ (ವಿಎಫ್‌ಎ) ಶೇ ೧೦ರಷ್ಟು (ಗರಿಷ್ಠ ರೂ.೨೦.೦೦ ಲಕ್ಷ); ವಲಯ-೪ : ಇಲ್ಲ.

**ಹೈದರಾಬಾದ್-ಕರ್ನಾಟಕ ಪ್ರದೇಶ**

**ಹೆಚ್‌ಕೆ ವಲಯ-೧** : ಸ್ಥಿರಾಸ್ತಿಗಳ ಮೌಲ್ಯದ ಶೇ ೨೫ರಷ್ಟು (ವಿಎಫ್‌ಎ) (ಗರಿಷ್ಠ ರೂ.೪೫.೦೦ ಲಕ್ಷ);

**ಹೆಚ್‌ಕೆ ವಲಯ-೨** : ಸ್ಥಿರಾಸ್ತಿಗಳ ಮೌಲ್ಯದ ಶೇ ೨೦ರಷ್ಟು (ವಿಎಫ್‌ಎ) (ಗರಿಷ್ಠ ರೂ.೪೦.೦೦ ಲಕ್ಷ)

### ಇ) ಮಧ್ಯಮ ವಲಯದ ಉತ್ಪಾದನಾ ಘಟಕಗಳು (ಎಂಎಸ್‌ಎಂಇ ಆ್ಯಕ್ಟ್‌ನಲ್ಲಿ ವಿವರಿಸುವಂತೆ ಹಾಗೂ ಕನಿಷ್ಠ ೨೫ ನೇರ ಉದ್ಯೋಗಗಳನ್ನು ಒದಗಿಸುವ ಘಟಕಗಳು)

**ಹೈದರಾಬಾದ್-ಕರ್ನಾಟಕಯೇತರ ಪ್ರದೇಶ**

**ವಲಯ-೧:** ರೂ.೫೦ ಲಕ್ಷ;

**ವಲಯ-೨:** ರೂ.೪೦ ಲಕ್ಷ;

**ವಲಯ-೩:** ರೂ.೪೦ ಲಕ್ಷ;

**ವಲಯ-೪:** ಇಲ್ಲ.

**ಹೈದರಾಬಾದ್-ಕರ್ನಾಟಕ ಪ್ರದೇಶ**

**ಹೆಚ್‌ಕೆ ವಲಯ-೧** : ರೂ.೫೫ ಲಕ್ಷ;

**ಹೆಚ್‌ಕೆ ವಲಯ-೨** : ರೂ.೫೦ ಲಕ್ಷ

### ಬಿ) ಸ್ಟ್ಯಾಂಪ್ ಡ್ಯೂಟಿಯಿಂದ ವಿನಾಯಿತಿ

**ಎಂಎಸ್‌ಎಂಇಗಳು:**

ಆರಂಭಿಕ ಐದು ವರ್ಷಗಳಿಗಾಗಿ ಇಲಾಖೆಯಿಂದ ವ್ಯಾಟ್ ಲೋನ್ ಒಳಪಟ್ಟಂತೆ ಮತ್ತು/ಅಥವಾ ರಾಜ್ಯ ಹಣಕಾಸು ನಿಗಮ, ಕೈಗಾರಿಕಾ ಬಂಡವಾಳ ಅಭಿವೃದ್ಧಿ ನಿಗಮ, ರಾಷ್ಟ್ರೀಯ ಮಟ್ಟದ ಹಣಕಾಸು ಸಂಸ್ಥೆಗಳು, ವಾಣಿಜ್ಯ ಬ್ಯಾಂಕಗಳು, ಆರ್‌ಆರ್‌ಬಿಗಳು, ಸಹಕಾರಿ ಬ್ಯಾಂಕಗಳು, ಕೆವಿಐಬಿ/ಕೆವಿಐಸಿ, ಕರ್ನಾಟಕ ರಾಜ್ಯ ಎಸ್‌ಸಿ/ಎಸ್‌ಟಿ ಅಭಿವೃದ್ಧಿ ನಿಗಮ, ಕರ್ನಾಟಕ ರಾಜ್ಯ ಅಲ್ಪಸಂಖ್ಯಾತ ಅಭಿವೃದ್ಧಿ ನಿಗಮ ಹಾಗೂ ಸರ್ಕಾರ ಕಾಲಕಾಲಕ್ಕೆ ಪ್ರಕಟಿಸುವ ಇತರ ಯಾವುದೇ ಸಂಸ್ಥೆಯಿಂದ ಸಾಲಗಳನ್ನು ಪಡೆಯಲು ಸಹಿ ಹಾಕಲಾದ ಸಾಲ ಒಪ್ಪಂದಗಳು, ಕ್ರೆಡಿಟ್ ಡೀಡ್‌ಗಳು, ಭೋಗ್ಯ ಮತ್ತು ಒತ್ತೆ ಕಾಗದ ಪತ್ರಗಳಿಗೆ ಸಂಬಂಧಪಟ್ಟಂತೆ ಹಾಗೂ (೧೧) ಕೆಐಎಡಿಬಿ, ಕೆಎಸ್‌ಎಸ್‌ಐಡಿಸಿ, ಕಿಯೋನಿಕ್ಸ್, ಕೆಎಸ್‌ಐಐಡಿಸಿ, ಕೈಗಾರಿಕಾ ಸಹಕಾರಿಗಳು ಮತ್ತು ಅನುಮೋದಿತ ಖಾಸಗಿ ಕೈಗಾರಿಕಾ ನಿವೇಶನಗಳಿಂದ ಕೈಗಾರಿಕಾ ನಿವೇಶನಗಳು, ಶೆಡ್‌ಗಳು, ಕೈಗಾರಿಕಾ ವಸಾಹತುಗಳಿಗೆ ಸಂಬಂಧಪಟ್ಟಂತೆ ಕೈಗಾರಿಕಾ ಸಂಸ್ಥೆಗಳು ಸಹಿ ಹಾಕಿರುವ ಲೀಸ್ ಡೀಡ್‌ಗಳು, ಲೀಸ್ ಮತ್ತು ಮಾರಾಟ ಹಾಗೂ ಸಂಪೂರ್ಣ ಮಾರಾಟದ ಕಾಗದ ಪತ್ರಗಳಿಗೆ ಸಂಬಂಧಪಟ್ಟಂತೆ ಸ್ಟ್ಯಾಂಪ್ ಶುಲ್ಕವನ್ನು ಕೆಳಕಂಡಂತೆ ಮನ್ನಾ ಮಾಡಲಾಗಿದೆ.

**ಹೈದರಾಬಾದ್-ಕರ್ನಾಟಕೇತರ ಪ್ರದೇಶ**

**ವಲಯ-೧** : ಶೇ. ೧೦೦ರಷ್ಟು;

**ವಲಯ-೨** : ಶೇ. ೧೦೦ರಷ್ಟು;

**ವಲಯ-೩** : ಶೇ. ೭೫ರಷ್ಟು;

**ವಲಯ-೪** : ಇಲ್ಲ

**ಹೈದರಾಬಾದ್-ಕರ್ನಾಟಕ ಪ್ರದೇಶ**

**ಹೆಚ್‌ಕೆ ವಲಯ-೧** : ಶೇ. ೧೦೦ರಷ್ಟು;

**ಹೆಚ್‌ಕೆ ವಲಯ-೨** : ಶೇ. ೧೦೦ರಷ್ಟು

### ಸಿ) ನೋಂದಣಿ ಶುಲ್ಕದಲ್ಲಿ ರಿಯಾಯಿತಿ:

**ಎಂಎಸ್‌ಎಂಇಗಳು:**

ಮೇಲೆ 'ಬಿ' ಯಲ್ಲಿನಿರ್ದಿಷ್ಟಪಡಿಸಿರುವ ಎಲ್ಲಾಸಾಲ ದಾಸ್ತವೇಜುಗಳು, ಗುತ್ತಿಗೆ ಕಾಗದಪತ್ರಗಳುಮತ್ತುಮಾರಾಟ ಕಾಗದಪತ್ರಗಳಿಗಾಗಿ ನೋಂದಣಿ ಶುಲ್ಕಪ್ರತಿ ರೂ.೧೦೦೦/-ಕ್ಕಾಗಿ ರೂ.೧/-ರ ರಿಯಾಯಿತಿ ದರದಲ್ಲಿರುತ್ತವೆ.

### ಡಿ) ಭೂಪರಿವರ್ತನೆ ಶುಲ್ಕದ ಮರುಪಾವತಿ

**ಎಂಎಸ್‌ಎಂಇಗಳು:**

ಭೂಮಿಯನ್ನು ಕೃಷಿ ಬಳಕೆಯಿಂದ ಕೈಗಾರಿಕಾ ಬಳಕೆಗೆ ಪರಿವರ್ತಿಸಲು ಸೂಚಿತವಾಗಿರುವ ಭೂಪರಿವರ್ತನಾ ಶುಲ್ಕವನ್ನು ಕೆಳಗೆ ವಿವರಿಸಿರುವಂತೆ ಮರುಪಾವತಿ ಮಾಡಲಾಗುವುದು.

**ಹೈದರಾಬಾದ್-ಕರ್ನಾಟಕೇತರ ಪ್ರದೇಶ**

**ವಲಯ-೧** : ಶೇ. ೧೦೦ರಷ್ಟು;

**ವಲಯ-೨** : ಶೇ. ೧೦೦ರಷ್ಟು;

**ವಲಯ-೩** : ಶೇ. ೭೫ರಷ್ಟು;

**ವಲಯ-೪** : ಇಲ್ಲ

**ಹೈದರಾಬಾದ್-ಕರ್ನಾಟಕ ಪ್ರದೇಶ**

**ಹೆಚ್‌ಕೆ ವಲಯ-೧** : ಶೇ. ೧೦೦ರಷ್ಟು;

**ಹೆಚ್‌ಕೆ ವಲಯ-೨** : ಶೇ. ೧೦೦ರಷ್ಟು

### ಇ) ಪ್ರವೇಶ ತೆರಿಗೆಯಿಂದ ವಿನಾಯಿತಿ

**ಎಂಎಸ್‌ಎಂಇಗಳು:**

ವಲಯ-೧, ೨, ೩ ಮತ್ತು ಹೆಚ್‌ಕೆ ವಲಯ-೧ ಮತ್ತು ೨, ಯೋಜನಾ ಅನುಷ್ಠಾನದ ಆರಂಭ ದಿನಾಂಕದಿಂದ ಮೂರು ವರ್ಷಗಳ ಪ್ರಾರಂಭಿಕ ಅವಧಿಗಾಗಿ **"ಸ್ಥಾವರಮತ್ತು ಯಂತ್ರೋಪಕರಣ ಮತ್ತು ಕ್ಯಾಪಿಟಲ್ ಗೂಡ್ಸ್"** ಮೇಲೆ ಪ್ರವೇಶ ತೆರಿಗೆಯನ್ನು ಕಟ್ಟುವಲ್ಲಿ ಶೇ. ೧೦೦ರಷ್ಟು ವಿನಾಯಿತಿಗೆ ಅರ್ಹವಾಗುತ್ತವೆ. ಈ ಉದ್ದೇಶಕ್ಕಾಗಿ ಸ್ಥಾವರಮತ್ತು ಯಂತ್ರೋಪಕರಣ ಮತ್ತು ಕ್ಯಾಪಿಟಲ್ ಗೂಡ್ಸ್ ಸಾಮಗ್ರಿಗಳನ್ನು ಕುರಿತ ಅರ್ಥ ವಿವರಣೆಯಲ್ಲಿ ಕ್ಯಾಪ್ಟಿವ್ ವಿದ್ಯುತ್ ಉತ್ಪಾದನೆಗೆ ಅಗತ್ಯವಾಗುವ ಯಂತ್ರೋಪಕರಣಗಳು ಇತ್ಯಾದಿ ಸಹ ಸೇರಿರುತ್ತುವೆ.

ಕಚ್ಚಾ ಸಾಮಗ್ರಿಗಳು, ಉಪಕರಣಗಳು, ಬಿಡಿ ಭಾಗಗಳು ಮತ್ತು ಇತರ ಸಾಮಗ್ರಿಗಳು (ಪೆಟ್ರೋಲಿಯಂ ಉತ್ಪನ್ನಗಳನ್ನು ಹೊರತುಪಡಿಸಿ) (ಅನ್ವಯಿತವಾದೆಡೆ) ವಾಣಿಜ್ಯ ಉತ್ಪಾದನೆಯ ಆರಂಭ ದಿನಾಂಕದಿಂದ ಐದು ವರ್ಷಗಳ ಅವಧಿಗಾಗಿ.

### ಎಫ್) ತಾಜ್ಯ ನೀರಿನ ಸಂಸ್ಕರಣಾ ಘಟಕವನ್ನು ಸ್ಥಾಪಿಸಲು ಸಬ್ಸಿಡಿ (ಇಟಿಪಿ)

**ಉತ್ಪಾದನಾ ಎಂಎಸ್‌ಎಂಇಗಳು:**

ಹೆಚ್‌ಕೆ ವಲಯ-೧ ಮತ್ತು ೨ರಲ್ಲಿ ಹಾಗು ಹೆಚ್‌ಕೆ ಕರ್ನಾಟಕೇತರ ವಲಯ ೧, ೨ ಮತ್ತು ೩ರಲ್ಲಿ ರೂ. ೫೦ ಲಕ್ಷಗಳ

ಪರಿಮಿತಿಗೆ ಒಳಪಟ್ಟಂತೆ ಹಾಗೂ ಹೆಚ್.ಕೆ ಕರ್ನಾಟಕೇತರ ವಲಯ ೪ ರಲ್ಲಿ ರೂ.೨೫ ಲಕ್ಷಗಳು ಪರಿಮಿತಿಗೆ ಒಳಪಟ್ಟಂತೆ ಇಟಿಪಿ ವೆಚ್ಚದ ಶೇ. ೫೦ರವರೆಗೆ ಏಕಕಾಲದ ಬಂಡವಾಳ ಸಬ್ಸಿಡಿ.

**ಜಿ) ಬಡ್ಡಿ ಸಹಾಯಧನ**

ಅತಿಸಣ್ಣ ಮತ್ತು ಸಣ್ಣ ಸಂಸ್ಥೆಗಳಿಗೆ ನೀಡಲಾಗುವ ಅವಧಿ ಸಾಲಗಳ ಮೇಲೆ ಶೇ. ೫ ರಷ್ಟು ಬಡ್ಡಿ ಸಬ್ಸಿಡಿ. ಈ ಬಡ್ಡಿ ಸಬ್ಸಿಡಿಯನ್ನು ಉದ್ಯಮವು ಅಸಲು ಅಥವಾ ಬಡ್ಡಿ ಕಂತುಗಳ ಪಾವತಿಯನ್ನು ತಪ್ಪದೇ ಕಟ್ಟಿದ್ದಲ್ಲಿ ಮಾತ್ರ, ಉದ್ಯಮದ ಪರವಾಗಿ ಹಣಕಾಸು ಸಂಸ್ಥೆಗೆ ಪಾವತಿ ಮಾಡಲಾಗುತ್ತದೆ. ಬಡ್ಡಿ ಸಹಾಯಧನವು ಪರಿಣಾಮಕಾರಿ ಬಡ್ಡಿ ದರವಾಗಿರುತ್ತದೆ. (ಬಡ್ಡಿ ಸಹಾಯಧನವನ್ನು ಕಳೆದ ನಂತರ) (ಯಾವುದೇ ಸಂಸ್ಥೆಯಿಂದ ಬರತಕ್ಕ/ ಭಾರತ ಸರಕಾರದ ಯಾವುದೇ ಯೋಜನೆಯನ್ವಯ ಲಭಿಸುವ ಅಥವಾ ವಾರ್ಷಿಕ ಶೇ. ೫ರಷ್ಟು : ಇದರಲ್ಲಿ ಯಾವುದು ಕಡಿಮೆಯೋ ಆ ಮೊತ್ತಕ್ಕೆ ಸಮ). ಬಡ್ಡಿ ಸಹಾಯಧನದ ಅವಧಿಯು ಹೆಚ್‌ಕೆ ಕರ್ನಾಟಕೇತರ ವಲಯ-೧, ವಲಯ-೨ ಮತ್ತು ವಲಯ-೩ಕ್ಕಾಗಿ ಅನುಕ್ರಮವಾಗಿ ೬ ವರ್ಷಗಳು, ೫ ವರ್ಷಗಳು ಮತ್ತು ೪ ವರ್ಷಗಳಾಗಿರುತ್ತವೆ ಹಾಗೂ ಹೆಚ್‌ಕೆ ವಲಯ-೧ ಮತ್ತು ವಲಯ-೨ ಕ್ಕಾಗಿ ಅನುಕ್ರಮವಾಗಿ ೭ ವರ್ಷಗಳು ಮತ್ತು ೬ ವರ್ಷಗಳಾಗಿರುತ್ತವೆ.

**ಹೆಚ್) ವಿದ್ಯುಚ್ಛಕ್ತಿ ದರಗಳ ಮೇಲಿನ ತೆರಿಗೆಯಿಂದ ವಿನಾಯಿತಿ**

**ಅತಿ ಸಣ್ಣ, ಸಣ್ಣ ಮತ್ತು ಮಧ್ಯಮ ಉತ್ಪಾದನಾ ಘಟಕಗಳಿಗೆ**

ವಲಯ-೧, ವಲಯ-೨, ಮತ್ತು ಹೆಚ್‌ಕೆ ವಲಯ-೧ ಮತ್ತು ವಲಯ-೨ಕ್ಕಾಗಿ ಅನುಕ್ರಮವಾಗಿ ೬ ವರ್ಷಗಳು, ೫ ವರ್ಷಗಳು, ೪ ವರ್ಷಗಳು, ೭ ವರ್ಷಗಳು, ಮತ್ತು ೬ ವರ್ಷಗಳ ಆರಂಭಿಕ ಅವಧಿಗಾಗಿ ವಿದ್ಯುತ್ ತೆರಿಗೆಯಿಂದ ಶೇ.೧೦೦ ರಷ್ಟು ವಿನಾಯಿತಿ.

**ಐ) ತಂತ್ರಜ್ಞಾನ ನವೀಕರಣ, ಗುಣಮಟ್ಟ ಪ್ರಾಮಾಣೀಕರಣ**

**ಅತಿ ಸಣ್ಣ, ಸಣ್ಣ ಮತ್ತು ಮಧ್ಯಮ ಉತ್ಪಾದನಾ ಕೈಗಾರಿಕೆಗಳು**

**೧. ತಂತ್ರಜ್ಞಾನ ನವೀಕರಣ ಸಾಲದ ಮೇಲಿನ ಬಡ್ಡಿ ಸಹಾಯಧನ**

ವಲಯ-೧, ೨, ೩ ಮತ್ತು ಹೆಚ್‌ಕೆ ವಲಯ-೧, ೨: ಭಾರತ ಸರ್ಕಾರದ ಸಿಎಲ್‌ಸಿಎಸ್‌ಎಸ್‌ಗೆ ಒಳಪಡದೆ, ಕೆಎಸ್‌ಎಫ್‌ಸಿ ಹಾಗೂ ಶೆಡ್ಯೂಲ್ಡ್ ವಾಣಿಜ್ಯ ಬ್ಯಾಂಕುಗಳಿಂದ ಮೇಲೆ ಪಡೆದ ಸಾಲದ ಮೇಲೆ ಶೇ. ೫ರಷ್ಟು.

**೨. ಐಎಸ್‌ಒ ಸರಣಿಯ ಪ್ರಮಾಣೀಕರಣ ವೆಚ್ಚ**

ವಲಯ-೧, ೨, ೩ ಮತ್ತು ಹೆಚ್‌ಕೆ ವಲಯ-೧, ೨: ವೆಚ್ಚದ ಶೇ. ೭೫ರಷ್ಟು, (ಗರಿಷ್ಠ ೭೫,೦೦೦ ರೂ.ಗಳು)

**೩. ಬಿಐಎಸ್ ಪ್ರಮಾಣ ಪತ್ರ:**

ಬಿಐಎಸ್‌ಗೆ ನೀಡಲಾದ ಶುಲ್ಕದ ಶೇ. ೫೦ರಷ್ಟು (ಗರಿಷ್ಠ ೨೦,೦೦೦ ರೂ ಗಳು) ಮತ್ತು ಬಿಐಎಸ್‌ನಿಂದ ಅನುಮೋದಿತವಾದ ಪರೀಕ್ಷಣಾ ಉಪಕರಣಗಳ ಖರೀದಿ ವೆಚ್ಚದ ಶೇ. ೨೫ರಷ್ಟು (ಗರಿಷ್ಠ ೫೦,೦೦೦ ರೂ.ಗಳು).

**೪. ತಂತ್ರಜ್ಞಾನದ ಅಳವಡಿಕೆ**

ಮಾನ್ಯತೆ ಪಡೆದ ರಾಷ್ಟ್ರೀಯ ಪ್ರಯೋಗಾಲಯಗಳ ತಂತ್ರಜ್ಞಾನ ಅಳವಡಿಕೆ ವೆಚ್ಚದ ಶೇ. ೨೫ರಷ್ಟು (ಗರಿಷ್ಠ ೫೦,೦೦೦).

**೫. ಟೆಕ್ನಾಲಜಿ ಬಿಸಿನೆಸ್ ಇಂಕ್ಯುಬೇಷನ್ ಸೆಂಟರ್:**

ವೆಚ್ಚದ ಶೇ. ೨೫ರಷ್ಟು (ಗರಿಷ್ಠ ೫೦ ಲಕ್ಷ ರೂ ಗಳು).

**೬. ಎಲೆಕ್ಟ್ರಾನಿಕ್ ತ್ಯಾಜ್ಯಗಳು ಮತ್ತು ಪ್ಲಾಸ್ಟಿಕ್ ತ್ಯಾಜ್ಯಗಳ ಮನರ್ ಬಳಕೆ**

ವಲಯ-೧, ೨, ೩ ಮತ್ತು ಹೆಚ್‌ಕೆ ವಲಯ-೧, ೨ರಲ್ಲಿ ರೂ.೧೦ ಲಕ್ಷಗಳ ಪರಿಮಿತಿಗೆ ಒಳಪಟ್ಟಂತೆ ೫ರಷ್ಟು ಹೆಚ್ಚುವರಿ ಬಂಡವಾಳ ಉತ್ತೇಜನ ಸಹಾಯಧನ.

**ಜೆ. ಮಳೆ ಕೊಯ್ಲು ಮತ್ತು ಜಲ ಸಂರಕ್ಷಣೆ ಕ್ರಮಗಳು**

ವಲಯ-೧, ೨, ೩ ಮತ್ತು ಹೆಚ್‌ಕೆ ವಲಯ-೧, ೨ ರಲ್ಲಿ ಚಿಕ್ಕ ಮತ್ತು ಮಧ್ಯಮ ಉತ್ಪಾದನಾ ಘಟಕಗಳು

೧. **ಮಳೆ ಕೊಯ್ಲು:** ಉಪಕರಣ ವೆಚ್ಚದ ಶೇ. ೫೦ರಷ್ಟು (ಗರಿಷ್ಠ ರೂ.೧.೦೦ ಲಕ್ಷ)

೨. **ತ್ಯಾಜ್ಯ ನೀರಿನ ಮನರ್ ಬಳಕೆ** : ಉಪಕರಣ ವೆಚ್ಚದ ಶೇ. ೫೦ರಷ್ಟು (ಗರಿಷ್ಠ ರೂ.೫.೦೦ ಲಕ್ಷ)

೩. **ಶೂನ್ಯ ತಾಜ್ಯ ಸಂಸ್ಕರಣಾ ಕಾರ್ಯ ವಿಧಾನ** : ಉಪಕರಣ ವೆಚ್ಚದ ಶೇ. ೫೦ರಷ್ಟು (ಗರಿಷ್ಠ ರೂ.೫.೦೦ ಲಕ್ಷ)

**ಕೆ) ಇಂಧನ ಸಂರಕ್ಷಣೆ**

**ಎಲ್ಲಾ ವಲಯಗಳಲ್ಲಿನ ಅತಿ ಸಣ್ಣ, ಸಣ್ಣ ಮತ್ತು ಮಧ್ಯಮ ಉತ್ಪಾದನಾ ಕೈಗಾರಿಕೆಗಳು**

ಇಂಧನ ಉಳಿತಾಯದ ಕ್ರಮಗಳನ್ನು ಬಳಸಿ, ಈ ಮೊದಲು ಬಳಸಲಾಗುತ್ತಿದ್ದ ಇಂಧನದ ಕನಿಷ್ಠ ಶೇ. ೧೦ರಷ್ಟು ಉಳಿತಾಯವಾದಲ್ಲಿ: ಬಂಡವಾಳ ವೆಚ್ಚದ ಶೇ. ೧೦ರಷ್ಟು (ಗರಿಷ್ಠ ರೂ.೫ ಲಕ್ಷ); ಅಸಾಂಪ್ರದಾಯಿಕ ಇಂಧನ ಮೂಲಗಳ ಬಳಕೆ :ಬಂಡವಾಳ ವೆಚ್ಚದ ಶೇ. ೧೦ರಷ್ಟು (ಗರಿಷ್ಠ ರೂ.೫ ಲಕ್ಷ); ಕ್ಯಾಪ್ಟಿವ್ ವಿದ್ಯುತ್ ಉತ್ಪಾದನೆ ಸೌರ ಹಾಗೂ ವಾಯು ಇಂಧನ ಮೂಲಗಳ ಬಳಕೆ: ಪ್ರತಿ ಯುನಿಟ್‌ಗೆ ರೂ.೦.೫೦ ಸಹಾಯಧನ.

**ಎಸ್‌ಸಿ/ಎಸ್‌ಟಿ ಉದ್ಯಮಶೀಲರಿಗೆ ವಿಶೇಷ ಒತ್ತಾಸೆ:**

ಎಸ್‌ಸಿ/ಎಸ್‌ಟಿ ಉದ್ಯಮಶೀಲರಲ್ಲಿ ಉದ್ಯಮ ಆಸಕ್ತಿ ಮತ್ತು ಕೈಗಾರಿಕಾ ಸಾಮರ್ಥ್ಯವನ್ನು ಉತ್ತೇಜಿಸುವ ಉದ್ದೇಶದಿಂದ ಮಾಲೀಕತ್ವ ಸಂಸ್ಥೆಯಾಗಿ ಅಥವಾ ಪಾಲುಗಾರಿಕೆ ಸಂಸ್ಥೆಯಾಗಿ/ ಖಾಸಗಿ ನಿಯಮಿತ ಕಂಪನಿಯಾಗಿ ಸ್ಥಾಪಿತವಾಗಿ ಎಲ್ಲಾ ಪಾಲುಗಾರರು ಅಥವಾ ನಿರ್ದೇಶಕರು ಎಸ್‌ಸಿ/ಎಸ್‌ಟಿ ಸಮುದಾಯಕ್ಕೆ ಸೇರಿದವರಾಗಿದ್ದಲ್ಲಿ, ಕೆಳಗಿನ ಉತ್ತೇಜನಗಳನ್ನು ನೀಡಲಾಗುತ್ತದೆ.

೧) ಎಲ್ಲಾ ಹೊಸ ಕೈಗಾರಿಕಾ ಪ್ರದೇಶಗಳು/ನಿವೇಶನಗಳಲ್ಲಿ ಎಸ್‌ಸಿ/ಎಸ್‌ಟಿ ಉದ್ಯಮ ಶೀಲರಿಗಾಗಿ ವಿತರಣಾ ಸೂಕ್ತ ಭೂಮಿ/ಶೆಡ್‌ಗಳ ಶೇ. ೨೨.೫ರಷ್ಟು ಭಾಗವನ್ನು ಮೀಸಲಾಗಿಡಬೇಕೆಂದು ಕೆಐಎಡಿಬಿ ಮತ್ತು ಕೆಎಸ್‌ಎಸ್ ಐಡಿಸಿಗೆ ಆದೇಶ ನೀಡಲಾಗುವುದು. ಇದಕ್ಕಾಗಿ ಪ್ರತ್ಯೇಕ ಮಾರ್ಗದರ್ಶನಗಳನ್ನು ನೀಡಲಾಗುವುದು.

೨) ಕೆಐಎಡಿಬಿ ಮತ್ತು ಕೆಎಸ್‌ಎಸ್‌ಐಡಿಸಿ, ಸಬ್ಸಿಡಿ ದರಗಳಲ್ಲಿ ಭೂಮಿ ಮತ್ತು ಶೆಡ್‌ಗಳನ್ನು ಒದಗಿಸತಕ್ಕದ್ದು.

೩) ಸರ್ಕಾರದ ನಿಧಿಯಿಂದ ಬೆಂಬಲಿತ ಇನ್‌ಕ್ಯೂಬೇಷನ್ ಕೇಂದ್ರಗಳು ಮತ್ತು ಕುಶಲತೆ ಅಭಿವೃದ್ಧಿ ಕೇಂದ್ರಗಳಲ್ಲಿ ಎಸ್‌ಸಿ / ಎಸ್‌ಟಿ – ಎಮ್‌ಎಸ್‌ಎಮ್‌ಇ ಉದ್ಯಮಶೀಲರಿಗಾಗಿ ಸ್ಥಳದ ಮೀಸಲಾತಿ.

೪) ಸಿಡಾಕ್ ಅಥವಾ ಮಾನ್ಯತೆ ಪಡೆದ ತರಬೇತಿ ಸಂಸ್ಥೆಗಳಲ್ಲಿ ತರಬೇತಿ ಪಡೆದ ಉದ್ಯಮಶೀಲರಿಗೆ ಲೋ ಇಂಟೆರೆಸ್ಟ್ ಸ್ಟಾರ್ಟ್ ಆಫ್ ಸಾಲ (ಬಡ್ಡಿ ಸಹಾಯ ಧನದೊಂದಿಗೆ) ಮರುಪಾವತಿ ವೇಳಾ ಪಟ್ಟಿಯಲ್ಲಿ ಸಡಿಲತೆ ನೀಡಲಾಗುವುದು.

೫) ರಾಜ್ಯವು ಸಂಭಾವ್ಯ ಉದ್ಯಮಶೀಲರಿಗಾಗಿ ಉದ್ಯಮಶೀಲ ಅಭಿವೃದ್ಧಿ ಕಾರ್ಯಕ್ರಮವನ್ನು ವಿಶೇಷವಾಗಿ ಆರಂಭಿಸಲಿದೆ.

೬) ಎಸ್‌ಸಿ/ಎಸ್‌ಟಿ ಉದ್ಯಮಶೀಲರು ಹೂಡುವ ಎಮ್‌ಎಸ್ ಎಮ್‌ಇಗಳಿಗೆ ಕೊಡಲಾಗುವ ಪ್ರೋತ್ಸಾಹಗಳು ಮತ್ತು ರಿಯಾಯಿತಿಗಳ ವಿಶೇಷ ಪ್ಯಾಕೇಜ್ ಕೆಳಕಂಡಂತೆ ಇರುತ್ತವೆ:

### ಎ) ಬಂಡವಾಳ ಪ್ರೋತ್ಸಾಹ ಸಹಾಯಧನ

#### ಅ) ಅತಿ ಸಣ್ಣ ಕೈಗಾರಿಕೆಗಳು

#### ಹೈದರಾಬಾದ್-ಕರ್ನಾಟಕಯೇತರ ಪ್ರದೇಶ

**ವಲಯ-೧** : ಸ್ಥಿರಾಸ್ತಿಗಳ ಮೌಲ್ಯದ (ವಿಎಫ್‌ಎ) ಶೇ ೩೦ರಷ್ಟು (ಗರಿಷ್ಠ ರೂ.೧೮.೦೦ ಲಕ್ಷ); ಸ್ಥಿರಾಸ್ತಿಗಳ ಮೌಲ್ಯದ (ವಿಎಫ್‌ಎ) ಶೇ ೩೫ರಷ್ಟು (ಗರಿಷ್ಠ ರೂ.೨೦.೦೦ ಲಕ್ಷ)– ಎಸ್‌ಸಿ/ ಎಸ್‌ಟಿ ಮಹಿಳಾ ಉದ್ಯಮಶೀಲರಿಗೆ ಸಂಬಂಧಪಟ್ಟಂತೆ

**ವಲಯ-೨** : ಸ್ಥಿರಾಸ್ತಿಗಳ ಮೌಲ್ಯದ (ವಿಎಫ್‌ಎ) ಶೇ ೨೫ರಷ್ಟು (ಗರಿಷ್ಠ ರೂ.೧೫.೦೦ ಲಕ್ಷ); ಸ್ಥಿರಾಸ್ತಿಗಳ ಮೌಲ್ಯದ (ವಿಎಫ್‌ಎ) ಶೇ ೩೦ರಷ್ಟು (ಗರಿಷ್ಠ ರೂ.೧೮.೦೦ ಲಕ್ಷ)– ಎಸ್‌ಸಿ/ ಎಸ್‌ಟಿ ಮಹಿಳಾ ಉದ್ಯಮಶೀಲರಿಗೆ ಸಂಬಂಧಪಟ್ಟಂತೆ

**ವಲಯ-೩** : ಸ್ಥಿರಾಸ್ತಿಗಳ ಮೌಲ್ಯದ (ವಿಎಫ್‌ಎ) ಶೇ ೨೦ರಷ್ಟು (ಗರಿಷ್ಠ ರೂ.೧೨.೦೦ ಲಕ್ಷ); ಸ್ಥಿರಾಸ್ತಿಗಳ ಮೌಲ್ಯದ (ವಿಎಫ್‌ಎ) ಶೇ ೨೫ರಷ್ಟು (ಗರಿಷ್ಠ ರೂ.೧೫.೦೦ ಲಕ್ಷ) –ಎಸ್‌ಸಿ/ ಎಸ್‌ಟಿ ಮಹಿಳಾ ಉದ್ಯಮಶೀಲರಿಗೆ ಸಂಬಂಧಪಟ್ಟಂತೆ

**ವಲಯ-೪** : ಸ್ಥಿರಾಸ್ತಿಗಳ ಮೌಲ್ಯದ (ವಿಎಫ್‌ಎ) ಶೇ ೧೦ರಷ್ಟು (ಗರಿಷ್ಠ ರೂ.೮.೦೦ ಲಕ್ಷ); ಸ್ಥಿರಾಸ್ತಿಗಳ ಮೌಲ್ಯದ (ವಿಎಫ್‌ಎ) ಶೇ ೧೫ರಷ್ಟು (ಗರಿಷ್ಠ ರೂ.೧೨.೦೦ ಲಕ್ಷ) –ಎಸ್‌ಸಿ/ಎಸ್‌ಟಿ ಮಹಿಳಾ ಉದ್ಯಮಶೀಲರಿಗೆ ಸಂಬಂಧಪಟ್ಟಂತೆ

#### ಹೈದರಾಬಾದ್- ಕರ್ನಾಟಕ ಪ್ರದೇಶ

**ಹೆಚ್‌ಕೆ ವಲಯ-೧** : ಸ್ಥಿರಾಸ್ತಿಗಳ ಮೌಲ್ಯದ (ವಿಎಫ್‌ಎ) ಶೇ ೩೫ರಷ್ಟು (ಗರಿಷ್ಠ ರೂ.೨೦.೦೦ ಲಕ್ಷ); ಸ್ಥಿರಾಸ್ತಿಗಳ ಮೌಲ್ಯದ (ವಿಎಫ್‌ಎ) ಶೇ ೪೦ರಷ್ಟು (ಗರಿಷ್ಠ ರೂ.೨೨.೦೦ ಲಕ್ಷ) –ಎಸ್‌ಸಿ/ ಎಸ್‌ಟಿ ಮಹಿಳಾ ಉದ್ಯಮಶೀಲರಿಗೆ ಸಂಬಂಧಪಟ್ಟಂತೆ

**ಹೆಚ್‌ಕೆ ವಲಯ-೨** : ಸ್ಥಿರಾಸ್ತಿಗಳ ಮೌಲ್ಯದ (ವಿಎಫ್‌ಎ) ಶೇ ೩೦ರಷ್ಟು (ಗರಿಷ್ಠ ರೂ.೧೮.೦೦ ಲಕ್ಷ); ಸ್ಥಿರಾಸ್ತಿಗಳ ಮೌಲ್ಯದ (ವಿಎಫ್‌ಎ) ಶೇ ೩೫ರಷ್ಟು (ಗರಿಷ್ಠ ರೂ.೨೦.೦೦ ಲಕ್ಷ) –ಎಸ್‌ಸಿ/ ಎಸ್‌ಟಿ ಮಹಿಳಾ ಉದ್ಯಮಶೀಲರಿಗೆ ಸಂಬಂಧಪಟ್ಟಂತೆ

#### ಆ) ಸಣ್ಣ ಉದ್ಯಮಗಳು

#### ಹೈದರಾಬಾದ್-ಕರ್ನಾಟಕ ಯೇತರ ಪ್ರದೇಶ

**ವಲಯ-೧** :ಸ್ಥಿರಾಸ್ತಿಗಳ ಮೌಲ್ಯದ (ವಿಎಫ್‌ಎ) ಶೇ ೨೫ರಷ್ಟು (ಗರಿಷ್ಠ ರೂ.೪೫.೦೦ ಲಕ್ಷ); ಸ್ಥಿರಾಸ್ತಿಗಳ ಮೌಲ್ಯದ (ವಿಎಫ್‌ಎ) ಶೇ ೩೦ರಷ್ಟು (ಗರಿಷ್ಠ ರೂ.೫೦.೦೦ ಲಕ್ಷ) – ಎಸ್‌ಸಿ/ಎಸ್‌ಟಿ ಮಹಿಳಾ ಉದ್ಯಮಶೀಲರಿಗೆ ಸಂಬಂಧಪಟ್ಟಂತೆ

**ವಲಯ-೨** :ಸ್ಥಿರಾಸ್ತಿಗಳ ಮೌಲ್ಯದ (ವಿಎಫ್‌ಎ) ಶೇ ೨೦ರಷ್ಟು (ಗರಿಷ್ಠ ರೂ.೩೫.೦೦ ಲಕ್ಷ); ಸ್ಥಿರಾಸ್ತಿಗಳ ಮೌಲ್ಯದ (ವಿಎಫ್‌ಎ) ಶೇ ೨೫ರಷ್ಟು (ಗರಿಷ್ಠ ರೂ.೪೦.೦೦ ಲಕ್ಷ)– ಎಸ್‌ಸಿ/ಎಸ್‌ಟಿ ಮಹಿಳಾ ಉದ್ಯಮಶೀಲರಿಗೆ ಸಂಬಂಧಪಟ್ಟಂತೆ

**ವಲಯ-೩** :ಸ್ಥಿರಾಸ್ತಿಗಳ ಮೌಲ್ಯದ (ವಿಎಫ್‌ಎ) ಶೇ ೧೫ರಷ್ಟು (ಗರಿಷ್ಠ ರೂ.೨೫.೦೦ ಲಕ್ಷ); ಸ್ಥಿರಾಸ್ತಿಗಳ ಮೌಲ್ಯದ (ವಿಎಫ್‌ಎ) ಶೇ ೨೦ರಷ್ಟು (ಗರಿಷ್ಠ ರೂ.೩೦.೦೦ ಲಕ್ಷ) –ಎಸ್‌ಸಿ/ಎಸ್‌ಟಿ ಮಹಿಳಾ ಉದ್ಯಮಶೀಲರಿಗೆ ಸಂಬಂಧಪಟ್ಟಂತೆ

**ವಲಯ-೪** :ಸ್ಥಿರಾಸ್ತಿಗಳ ಮೌಲ್ಯದ (ವಿಎಫ್‌ಎ) ಶೇ ೧೦ರಷ್ಟು (ಗರಿಷ್ಠ ರೂ.೧೦.೦೦ ಲಕ್ಷ); ಸ್ಥಿರಾಸ್ತಿಗಳ ಮೌಲ್ಯದ (ವಿಎಫ್‌ಎ) ಶೇ ೧೫ರಷ್ಟು (ಗರಿಷ್ಠ ರೂ.೧೫.೦೦ ಲಕ್ಷ) –ಎಸ್‌ಸಿ/ಎಸ್‌ಟಿ ಮಹಿಳಾ ಉದ್ಯಮಶೀಲರಿಗೆ ಸಂಬಂಧಪಟ್ಟಂತೆ

#### ಹೈದರಾಬಾದ್- ಕರ್ನಾಟಕ ಪ್ರದೇಶ

**ಹೆಚ್‌ಕೆ ವಲಯ-೧** : ಸ್ಥಿರಾಸ್ತಿಗಳ ಮೌಲ್ಯದ (ವಿಎಫ್‌ಎ) ಶೇ ೩೦ರಷ್ಟು (ಗರಿಷ್ಠ ರೂ.೫೦.೦೦ ಲಕ್ಷ); ಸ್ಥಿರಾಸ್ತಿಗಳ ಮೌಲ್ಯದ (ವಿಎಫ್‌ಎ) ಶೇ ೩೫ರಷ್ಟು (ಗರಿಷ್ಠ ರೂ.೫೫.೦೦ ಲಕ್ಷ)–ಎಸ್‌ಸಿ/ ಎಸ್‌ಟಿ ಮಹಿಳಾ ಉದ್ಯಮಶೀಲರಿಗೆ ಸಂಬಂಧಪಟ್ಟಂತೆ

**ಹೆಚ್‌ಕೆ ವಲಯ-೨** : ಸ್ಥಿರಾಸ್ತಿಗಳ ಮೌಲ್ಯದ (ವಿಎಫ್‌ಎ) ಶೇ ೨೫ರಷ್ಟು (ಗರಿಷ್ಠ ರೂ.೪೫.೦೦ ಲಕ್ಷ); ಸ್ಥಿರಾಸ್ತಿಗಳ ಮೌಲ್ಯದ (ವಿಎಫ್‌ಎ) ಶೇ ೩೦ರಷ್ಟು (ಗರಿಷ್ಠ ರೂ.೫೦.೦೦ ಲಕ್ಷ) –ಎಸ್‌ಸಿ/ ಎಸ್‌ಟಿ ಮಹಿಳಾ ಉದ್ಯಮಶೀಲರಿಗೆ ಸಂಬಂಧಪಟ್ಟಂತೆ

#### ಇ) ಮಧ್ಯಮ ವಲಯದ ಉತ್ಪಾದನಾ ಘಟಕಗಳು (ಎಮ್‌ಎಸ್‌ಎಮ್‌ಇ ಕಾಯ್ದೆಯಲ್ಲಿ ವಿವರಿಸಿದಂತೆ ಕನಿಷ್ಠ ೨೫ ನೇರ ಉದ್ಯೋಗಗಳನ್ನು ಒದಗಿಸುವ ಘಟಕಗಳು)

**ಹೈದರಾಬಾದ್-ಕರ್ನಾಟಕೇತರ ಪ್ರದೇಶ**

**ವಲಯ-೧** : ರೂ.೫೫ ಲಕ್ಷ; ರೂ.೬೦ ಲಕ್ಷ - ಎಸ್‌ಸಿ/ಎಸ್‌ಟಿ ಮಹಿಳಾ ಉದ್ಯಮಶೀಲರಿಗೆ ಸಂಬಂಧಪಟ್ಟಂತೆ

**ವಲಯ-೨** : ರೂ.೪೫ ಲಕ್ಷ; ರೂ.೫೦ ಲಕ್ಷ - ಎಸ್‌ಸಿ/ಎಸ್‌ಟಿ ಮಹಿಳಾ ಉದ್ಯಮಶೀಲರಿಗೆ ಸಂಬಂಧಪಟ್ಟಂತೆ

**ವಲಯ-೩** : ರೂ.೩೫ ಲಕ್ಷ; ರೂ.೪೦ ಲಕ್ಷ - ಎಸ್‌ಸಿ/ಎಸ್‌ಟಿ ಮಹಿಳಾ ಉದ್ಯಮಶೀಲರಿಗೆ ಸಂಬಂಧಪಟ್ಟಂತೆ

**ವಲಯ-೪** : ರೂ.೨೦ ಲಕ್ಷ; ರೂ.೨೫ ಲಕ್ಷ - ಎಸ್‌ಸಿ/ಎಸ್‌ಟಿ ಮಹಿಳಾ ಉದ್ಯಮಶೀಲರಿಗೆ ಸಂಬಂಧಪಟ್ಟಂತೆ

**೨) ಹೈದರಾಬಾದ್-ಕರ್ನಾಟಕ ಪ್ರದೇಶ**

**ಹೆಚ್ಚಕೆ ವಲಯ-೧** : ರೂ.೬೦ ಲಕ್ಷ; ರೂ.೬೫ ಲಕ್ಷ - ಎಸ್‌ಸಿ/ಎಸ್‌ಟಿ ಮಹಿಳಾ ಉದ್ಯಮಶೀಲರಿಗೆ ಸಂಬಂಧಪಟ್ಟಂತೆ

**ಹೆಚ್ಚಕೆ ವಲಯ-೨** : ರೂ.೫೦ ಲಕ್ಷ; ರೂ.೫೫ ಲಕ್ಷ - ಎಸ್‌ಸಿ/ಎಸ್‌ಟಿ ಮಹಿಳಾ ಉದ್ಯಮಶೀಲರಿಗೆ ಸಂಬಂಧಪಟ್ಟಂತೆ

**ಬಿ) ಸ್ಟ್ಯಾಂಪ್ ಡ್ಯೂಟಿಯಿಂದ ವಿನಾಯಿತಿ**

**ಎಂಎಸ್‌ಎಂಇಗಳು:**

(i) ಆರಂಭಿಕ ೫ ವರ್ಷಗಳಗಾಗಿ ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆಯ ವ್ಯಾಟ್ ಲೋನ್ ಒಳಪಟ್ಟಂತೆ ಮತ್ತು/ಅಥವಾ ರಾಜ್ಯ ಹಣಕಾಸು ನಿಗಮ, ಕೈಗಾರಿಕಾ ಬಂಡವಾಳ ಅಭಿವೃದ್ಧಿ ನಿಗಮ, ರಾಷ್ಟ್ರೀಯ ಮಟ್ಟದ ಹಣಕಾಸು ಸಂಸ್ಥೆಗಳು, ವಾಣಿಜ್ಯ ಬ್ಯಾಂಕಗಳು, ಆರ್‌ಆರ್‌ಬಿಗಳು, ಸಹಕಾರಿ ಬ್ಯಾಂಕಗಳು, ಕೆವಿಐಬಿ/ಕೆವಿಐಸಿ, ಕರ್ನಾಟಕ ರಾಜ್ಯ ಎಸ್‌ಸಿ/ಎಸ್‌ಟಿ ಅಭಿವೃದ್ಧಿ ನಿಗಮ, ಕರ್ನಾಟಕ ರಾಜ್ಯ ಅಲ್ಪಸಂಖ್ಯಾತ ಅಭಿವೃದ್ಧಿ ನಿಗಮ ಹಾಗೂ ಸರ್ಕಾರ ಸಮಯಕ್ಕೆ ತಕ್ಕಂತೆ ಪ್ರಕಟಿಸುವ ಇತರ ಯಾವುದೇ ಸಂಸ್ಥೆಯಿಂದ ಸಾಲಗಳನ್ನು ಪಡೆಯಲು ಸಹಿ ಹಾಕಲಾದ ಸಾಲ ಒಪ್ಪಂದಗಳು, ಕ್ರೆಡಿಟ್ ಡೀಡ್‌ಗಳು, ಭೋಗ್ಯ ಮತ್ತು ಒತ್ತೆ ಕಾಗದ ಪತ್ರಗಳಿಗೆ ಸಂಬಂಧಪಟ್ಟಂತೆ ಹಾಗೂ

(ii) ಕೆಐಎಡಿಬಿ, ಕೆಎಸ್‌ಎಸ್‌ಐಡಿಸಿ, ಕಿಯೋನಿಕ್ಸ್, ಕೈಗಾರಿಕಾ ಸಹಕಾರಿಗಳು ಮತ್ತು ಅನುಮೋದಿತ ಖಾಸಗಿ ಕೈಗಾರಿಕಾ ನಿವೇಶನಗಳಿಂದ ಕೈಗಾರಿಕಾ ನಿವೇಶನಗಳು, ಶೆಡ್‌ಗಳು, ಕೈಗಾರಿಕಾ ವಸಾಹತುಗಳಿಗೆ ಸಂಬಂಧಪಟ್ಟಂತೆ ಕೈಗಾರಿಕಾ ಸಂಸ್ಥೆಗಳು ಸಹಿ ಹಾಕಿರುವ ಲೀಸ್ ಡೀಡ್‌ಗಳು, ಲೀಸ್ ಮತ್ತು ಮಾರಾಟ ಹಾಗೂ ಸಂಪೂರ್ಣ ಮಾರಾಟದ ಕಾಗದ ಪತ್ರಗಳಿಗೆ ಸಂಬಂಧಪಟ್ಟಂತೆ ಸ್ಟ್ಯಾಂಪ್ ಶುಲ್ಕವನ್ನು ಕೆಳಕಂಡಂತೆ ಮನ್ನಾ ಮಾಡಲಾಗಿದೆ.

**ಹೈದರಾಬಾದ್-ಕರ್ನಾಟಕೇತರ ಪ್ರದೇಶ**

**ವಲಯ-೧,೨,೩** : ಶೇ. ೧೦೦ರಷ್ಟು;

**ವಲಯ-೪** : ಶೇ. ೭೫ರಷ್ಟು

**ಹೈದರಾಬಾದ್-ಕರ್ನಾಟಕ ಪ್ರದೇಶ**

**ವಲಯ-೧ ಮತ್ತು ೨** : ಶೇ. ೧೦೦ರಷ್ಟು

**ಮಹಿಳಾ ಉದ್ಯಮಶೀಲರಿಗಾಗಿ ಉತ್ತೇಜನ**

ಮಹಿಳಾ ಉದ್ಯಮಶೀಲರಿಗೆ ವಿಶೇಷ ಆದ್ಯತೆ ನೀಡಿ, ಮುಂದಿನ ಐದು ವರ್ಷಗಳಲ್ಲಿ ರಾಜ್ಯದಲ್ಲಿ ಇನ್ನೂ ಹೆಚ್ಚು ಮಹಿಳಾ ಉದ್ಯಮಗಳ ಸ್ಥಾಪನೆಯನ್ನು ಸುಗಮಗೊಳಿಸಿ, ಅವರುಗಳ ಕೊಡುಗೆಯನ್ನು ಉತ್ತಮಪಡಿಸಲು, ಮಾಲಿಕತ್ವ ಸಂಸ್ಥೆಯಾಗಿ ಅಥವಾ ಪಾಲುಗಾರಿಕೆ ಸಂಸ್ಥೆಯಾಗಿ/ ಖಾಸಗಿ ನಿಯಮಿತ ಕಂಪನಿಯಾಗಿ ಸ್ಥಾಪಿತವಾಗಿ, ಅದರ ಎಲ್ಲಾ ಪಾಲುಗಾರರು ಅಥವಾ ನಿರ್ದೇಶಕರು ಮಹಿಳೆಯರಾಗಿದ್ದಲ್ಲಿ ಕೆಳಗಿನ ಉತ್ತೇಜನಗಳನ್ನು ನೀಡಲು ಉದ್ದೇಶಿಸಲಾಗಿದೆ.

(i) ಮಹಿಳೆಯರಿಗಾಗಿ ಹುಬ್ಬಳ್ಳಿ/ ಧಾರವಾಡ ಮತ್ತು ಕನಕಪುರದ ಹಾರೋಹಳ್ಳಿ ಮುಂತಾದ ಸಂಭಾವ್ಯ ನಿವೇಶನಗಳಲ್ಲಿ ಎರಡು ಕೈಗಾರಿಕಾ ಪ್ರದೇಶಗಳನ್ನು ಸ್ಥಾಪಿಸಲು ಉದ್ದೇಶಿಸಲಾಗಿದೆ. (ii) ಎಲ್ಲಾ ಹೊಸ ಕೈಗಾರಿಕಾ ಪ್ರದೇಶಗಳು/ ನಿವೇಶನಗಳಲ್ಲಿ ವಿತರಣಾ ಸೂಕ್ತ ಭೂಮಿ/ಶೆಡ್‌ಗಳ ಶೇ. ೫ರಷ್ಟು ಭಾಗವನ್ನು ಕೆಐಎಡಿಬಿ ಮಹಿಳಾ ಉದ್ಯಮಶೀಲರಿಗಾಗಿ ಗೊತ್ತುಪಡಿಸಲಿದೆ. (iii) ಜವಳಿ, ಬೆಲೆಬಾಳುವ ಹರಳುಗಳು ಮತ್ತು ಆಭರಣ ಕ್ಷೇತ್ರಗಳಲ್ಲಿ ಮಹಿಳೆಯರಿಗಾಗಿ ವಿಶೇಷ ಸಮೂಹ. (iv) ಸಿಡಾಕ್ ಅಥವಾ ಮಾನ್ಯತೆ ಪಡೆದ ತರಬೇತಿ ಸಂಸ್ಥೆಗಳಲ್ಲಿ ತರಬೇತಿ ಪಡೆದ ಉದ್ಯಮಶೀಲರಿಗೆ ಲೋ ಇಂಟೆರೆಸ್ಟ್ ಸ್ಟಾರ್ಟ್ ಅಪ್ ಸಾಲ (ಬಡ್ಡಿ ಸಹಾಯಧನದೊಂದಿಗೆ) ಮರುಪವತಿ ವೇಳಾ ಪಟ್ಟಿಯಲ್ಲಿ ಸಡಿಲತೆ ನೀಡಲಾಗುವುದು. (v) ರಾಜ್ಯವು ಸಂಭಾವ್ಯ ಮಹಿಳಾ ಉದ್ಯಮಶೀಲರಿಗಾಗಿ ಉದ್ಯಮಶೀಲ ಅಭಿವೃದ್ಧಿ ಕಾರ್ಯಕ್ರಮವನ್ನು ವಿಶೇಷವಾಗಿ ಆರಂಭಿಸಲಿದೆ. (vi) ಮಹಿಳಾ ಉದ್ಯಮಶೀಲರು ಹೂಡುವ ಎಮ್‌ಎಸ್‌ಎಮ್‌ಇಗಳಿಗೆ ಕೆಳಕಂಡಂತೆ ಆಕರ್ಷಕ ಪ್ರೋತ್ಸಾಹಗಳು ಮತ್ತು ವಿನಾಯಿತಿಗಳನ್ನು ಕೊಟ್ಟು ಉತ್ತೇಜಿಸಲಾಗುವುದು.

**ಎ) ಬಂಡವಾಳ ಪ್ರೋತ್ಸಾಹ ಸಹಾಯಧನ**

**ಅ) ಅತಿ ಸಣ್ಣ ಘಟಕಗಳು**

**ಹೈದರಾಬಾದ್ - ಕರ್ನಾಟಕೇತರ ಪ್ರದೇಶ**

**ವಲಯ-೧** : ಸ್ಥಿರಾಸ್ತಿಗಳ ಮೌಲ್ಯದ (ವಿಎಫ್‌ಎ) ಶೇ ೩೦ರಷ್ಟು (ಗರಿಷ್ಠ ರೂ.೧೮.೦೦ ಲಕ್ಷ); ಸ್ಥಿರಾಸ್ತಿಗಳ ಮೌಲ್ಯದ (ವಿಎಫ್‌ಎ) ಶೇ ೩೫ರಷ್ಟು (ಗರಿಷ್ಠ ರೂ.೨೦.೦೦ ಲಕ್ಷ)-ಎಸ್‌ಸಿ/ಎಸ್‌ಟಿ ಮಹಿಳಾ ಉದ್ಯಮಶೀಲರಿಗೆ ಸಂಬಂಧಪಟ್ಟಂತೆ.

**ವಲಯ-೨** : ಸ್ಥಿರಾಸ್ತಿಗಳ ಮೌಲ್ಯದ (ವಿಎಫ್‌ಎ) ಶೇ ೨೫ರಷ್ಟು (ಗರಿಷ್ಠ ರೂ.೧೫.೦೦ ಲಕ್ಷ); ಸ್ಥಿರಾಸ್ತಿಗಳ ಮೌಲ್ಯದ (ವಿಎಫ್‌ಎ) ಶೇ ೩೦ರಷ್ಟು (ಗರಿಷ್ಠ ರೂ.೧೮.೦೦ ಲಕ್ಷ)-ಎಸ್‌ಸಿ/ಎಸ್‌ಟಿ ಮಹಿಳಾ ಉದ್ಯಮಶೀಲರಿಗೆ ಸಂಬಂಧಪಟ್ಟಂತೆ

**ವಲಯ-೩** : ಸ್ಥಿರಾಸ್ತಿಗಳ ಮೌಲ್ಯದ (ವಿಎಫ್‌ಎ) ಶೇ ೨೦ರಷ್ಟು (ಗರಿಷ್ಠ ರೂ.೧೨.೦೦ ಲಕ್ಷ); ಸ್ಥಿರಾಸ್ತಿಗಳ ಮೌಲ್ಯದ (ವಿಎಫ್‌ಎ) ಶೇ ೨೫ರಷ್ಟು (ಗರಿಷ್ಠ ರೂ.೧೫.೦೦ ಲಕ್ಷ)-ಎಸ್‌ಸಿ/ಎಸ್‌ಟಿ ಮಹಿಳಾ ಉದ್ಯಮಶೀಲರಿಗೆ ಸಂಬಂಧಪಟ್ಟಂತೆ.

**ವಲಯ-೪** : ಸ್ಥಿರಾಸ್ತಿಗಳ ಮೌಲ್ಯದ (ವಿಎಫ್ಎ) ಶೇ ೧೦ರಷ್ಟು (ಗರಿಷ್ಠ ರೂ.೮.೦೦ ಲಕ್ಷ); ಸ್ಥಿರಾಸ್ತಿಗಳ ಮೌಲ್ಯದ (ವಿಎಫ್ಎ) ಶೇ ೧೫ರಷ್ಟು (ಗರಿಷ್ಠ ರೂ.೧೨.೦೦ ಲಕ್ಷ)-ಎಸ್‌ಸಿ/ಎಸ್‌ಟಿ ಮಹಿಳಾ ಉದ್ಯಮಶೀಲರಿಗೆ ಸಂಬಂಧಪಟ್ಟಂತೆ.

### ಹೈದರಾಬಾದ್ - ಕರ್ನಾಟಕ ಪ್ರದೇಶ

**ಹೆಚ್‌ಕೆ ವಲಯ-೧:** ಸ್ಥಿರಾಸ್ತಿಗಳ ಮೌಲ್ಯದ (ವಿಎಫ್ಎ) ಶೇ ೩೫ರಷ್ಟು (ಗರಿಷ್ಠ ರೂ.೨೦.೦೦ ಲಕ್ಷ); ಸ್ಥಿರಾಸ್ತಿಗಳ ಮೌಲ್ಯದ (ವಿಎಫ್ಎ) ಶೇ.೪೦ರಷ್ಟು(ಗರಿಷ್ಠ ರೂ.೨೨.೦೦ ಲಕ್ಷ)-ಎಸ್‌ಸಿ/ಎಸ್‌ಟಿ ಮಹಿಳಾ ಉದ್ಯಮಶೀಲರಿಗೆ ಸಂಬಂಧಪಟ್ಟಂತೆ.

**ಹೆಚ್‌ಕೆ ವಲಯ-೨:** ಸ್ಥಿರಾಸ್ತಿಗಳ ಮೌಲ್ಯದ (ವಿಎಫ್ಎ) ಶೇ ೩೦ರಷ್ಟು (ಗರಿಷ್ಠ ರೂ.೧೮.೦೦ ಲಕ್ಷ); ಸ್ಥಿರಾಸ್ತಿಗಳ ಮೌಲ್ಯದ (ವಿಎಫ್ಎ) ಶೇ.೩೫ರಷ್ಟು(ಗರಿಷ್ಠ ರೂ.೨೦.೦೦ ಲಕ್ಷ)-ಎಸ್‌ಸಿ/ಎಸ್‌ಟಿ ಮಹಿಳಾ ಉದ್ಯಮಶೀಲರಿಗೆ ಸಂಬಂಧಪಟ್ಟಂತೆ.

### ಆ) ಸಣ್ಣ ಉದ್ಯಮಗಳು

### ಹೈದರಾಬಾದ್ - ಕರ್ನಾಟಕೇತರ ಪ್ರದೇಶ

**ವಲಯ-೧** : ಸ್ಥಿರಾಸ್ತಿಗಳ ಮೌಲ್ಯದ (ವಿಎಫ್ಎ) ಶೇ ೨೫ರಷ್ಟು (ಗರಿಷ್ಠ ರೂ.೪೫.೦೦ ಲಕ್ಷ); ಸ್ಥಿರಾಸ್ತಿಗಳ ಮೌಲ್ಯದ (ವಿಎಫ್ಎ) ಶೇ ೩೦ರಷ್ಟು (ಗರಿಷ್ಠ ರೂ.೫೦.೦೦ ಲಕ್ಷ)-ಎಸ್‌ಸಿ/ಎಸ್‌ಟಿ ಮಹಿಳಾ ಉದ್ಯಮಶೀಲರಿಗೆ ಸಂಬಂಧಪಟ್ಟಂತೆ.

**ವಲಯ-೨** : ಸ್ಥಿರಾಸ್ತಿಗಳ ಮೌಲ್ಯದ (ವಿಎಫ್ಎ) ಶೇ ೨೦ರಷ್ಟು (ಗರಿಷ್ಠ ರೂ.೩೫.೦೦ ಲಕ್ಷ); ಸ್ಥಿರಾಸ್ತಿಗಳ ಮೌಲ್ಯದ (ವಿಎಫ್ಎ) ಶೇ ೨೫ರಷ್ಟು (ಗರಿಷ್ಠ ರೂ.೪೦.೦೦ ಲಕ್ಷ)-ಎಸ್‌ಸಿ/ಎಸ್‌ಟಿ ಮಹಿಳಾ ಉದ್ಯಮಶೀಲರಿಗೆ ಸಂಬಂಧಪಟ್ಟಂತೆ.

**ವಲಯ-೩** : ಸ್ಥಿರಾಸ್ತಿಗಳ ಮೌಲ್ಯದ (ವಿಎಫ್ಎ) ಶೇ ೧೫ರಷ್ಟು (ಗರಿಷ್ಠ ರೂ.೨೫.೦೦ ಲಕ್ಷ); ಸ್ಥಿರಾಸ್ತಿಗಳ ಮೌಲ್ಯದ (ವಿಎಫ್ಎ) ಶೇ ೨೦ರಷ್ಟು (ಗರಿಷ್ಠ ರೂ.೩೦.೦೦ ಲಕ್ಷ)-ಎಸ್‌ಸಿ/ಎಸ್‌ಟಿ ಮಹಿಳಾ ಉದ್ಯಮಶೀಲರಿಗೆ ಸಂಬಂಧಪಟ್ಟಂತೆ.

**ವಲಯ-೪** : ಸ್ಥಿರಾಸ್ತಿಗಳ ಮೌಲ್ಯದ (ವಿಎಫ್ಎ) ಶೇ ೧೦ರಷ್ಟು (ಗರಿಷ್ಠ ರೂ.೧೦.೦೦ ಲಕ್ಷ); ಸ್ಥಿರಾಸ್ತಿಗಳ ಮೌಲ್ಯದ (ವಿಎಫ್ಎ) ಶೇ ೧೫ರಷ್ಟು (ಗರಿಷ್ಠ ರೂ.೧೫.೦೦ ಲಕ್ಷ)-ಎಸ್‌ಸಿ/ಎಸ್‌ಟಿ ಮಹಿಳಾ ಉದ್ಯಮಶೀಲರಿಗೆ ಸಂಬಂಧಪಟ್ಟಂತೆ.

### ಹೈದರಾಬಾದ್ - ಕರ್ನಾಟಕ ಪ್ರದೇಶ

**ಹೆಚ್‌ಕೆ ವಲಯ-೧** : ಸ್ಥಿರಾಸ್ತಿಗಳ ಮೌಲ್ಯದ (ವಿಎಫ್ಎ) ಶೇ ೩೦ರಷ್ಟು (ಗರಿಷ್ಠ ರೂ.೫೦.೦೦ ಲಕ್ಷ); ಸ್ಥಿರಾಸ್ತಿಗಳ ಮೌಲ್ಯದ (ವಿಎಫ್ಎ) ಶೇ ೩೫ರಷ್ಟು (ಗರಿಷ್ಠ ರೂ.೫೫.೦೦ ಲಕ್ಷ)-ಎಸ್‌ಸಿ/ಎಸ್‌ಟಿ ಮಹಿಳಾ ಉದ್ಯಮಶೀಲರಿಗೆ ಸಂಬಂಧಪಟ್ಟಂತೆ.

**ಹೆಚ್‌ಕೆ ವಲಯ-೨** : ಸ್ಥಿರಾಸ್ತಿಗಳ ಮೌಲ್ಯದ (ವಿಎಫ್ಎ) ಶೇ ೨೫ರಷ್ಟು (ಗರಿಷ್ಠ ರೂ.೪೫.೦೦ ಲಕ್ಷ); ಸ್ಥಿರಾಸ್ತಿಗಳ ಮೌಲ್ಯದ (ವಿಎಫ್ಎ) ಶೇ ೩೦ರಷ್ಟು (ಗರಿಷ್ಠ ರೂ.೫೦.೦೦ ಲಕ್ಷ)-ಎಸ್‌ಸಿ/ಎಸ್‌ಟಿ ಮಹಿಳಾ ಉದ್ಯಮಶೀಲರಿಗೆ ಸಂಬಂಧಪಟ್ಟಂತೆ.

### ಇ) ಮಧ್ಯಮ ಉತ್ಪಾದನಾ ಘಟಕಗಳು (ಎಮ್‌ಎಸ್‌ಎಮ್‌ಇ ಕಾಯ್ದೆಯಲ್ಲಿ ನಮೂದಿಸಿದಂತೆ ಹಾಗೂ ಕನಿಷ್ಠ ೨೫ ನೇರ ಉದ್ಯೋಗಗಳನ್ನು ಒದಗಿಸುವ ಘಟಕಗಳು)

### ೧) ಹೈದರಾಬಾದ್-ಕರ್ನಾಟಕೇತರ ಪ್ರದೇಶ

**ವಲಯ-೧** : ರೂ.೫೫.೦೦ ಲಕ್ಷ; ರೂ.೬೦.೦೦ ಲಕ್ಷ - ಎಸ್‌ಸಿ/ಎಸ್‌ಟಿ ಮಹಿಳಾ ಉದ್ಯಮಶೀಲರಿಗೆ ಸಂಬಂಧಪಟ್ಟಂತೆ.

**ವಲಯ-೨** : ರೂ.೪೫.೦೦ ಲಕ್ಷ; ರೂ.೫೦.೦೦ ಲಕ್ಷ - ಎಸ್‌ಸಿ/ಎಸ್‌ಟಿ ಮಹಿಳಾ ಉದ್ಯಮಶೀಲರಿಗೆ ಸಂಬಂಧಪಟ್ಟಂತೆ.

**ವಲಯ-೩** : ರೂ.೩೫.೦೦ ಲಕ್ಷ; ರೂ.೪೦.೦೦ ಲಕ್ಷ - ಎಸ್‌ಸಿ/ಎಸ್‌ಟಿ ಮಹಿಳಾ ಉದ್ಯಮಶೀಲರಿಗೆ ಸಂಬಂಧಪಟ್ಟಂತೆ.

**ವಲಯ-೪** : ರೂ.೨೦.೦೦ ಲಕ್ಷ; ರೂ.೨೫.೦೦ ಲಕ್ಷ - ಎಸ್‌ಸಿ/ಎಸ್‌ಟಿ ಮಹಿಳಾ ಉದ್ಯಮಶೀಲರಿಗೆ ಸಂಬಂಧಪಟ್ಟಂತೆ.

### ಹೈದರಾಬಾದ್ - ಕರ್ನಾಟಕ ಪ್ರದೇಶ

**ಹೆಚ್‌ಕೆ ವಲಯ-೧** : ರೂ. ೬೦.೦೦ ಲಕ್ಷ; ರೂ.೬೫.೦೦ ಲಕ್ಷ - ಎಸ್‌ಸಿ/ಎಸ್‌ಟಿ ಮಹಿಳಾ ಉದ್ಯಮಶೀಲರಿಗೆ ಸಂಬಂಧಪಟ್ಟಂತೆ.

**ಹೆಚ್‌ಕೆ ವಲಯ-೨** : ರೂ. ೫೫.೦೦ ಲಕ್ಷ; ರೂ.೬೦.೦೦ ಲಕ್ಷ - ಎಸ್‌ಸಿ/ಎಸ್‌ಟಿ ಮಹಿಳಾ ಉದ್ಯಮಶೀಲರಿಗೆ ಸಂಬಂಧಪಟ್ಟಂತೆ.

### ಬಿ) ಸ್ಟ್ಯಾಂಪ್ ಡ್ಯೂಟಿಯಿಂದ ವಿನಾಯಿತಿ

**ಎಂಎಸ್‌ಎಂಇಗಳು:**

(i) ಆರಂಭಿಕ ೫ ವರ್ಷಗಳಿಗಾಗಿ ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆಯ ವ್ಯಾಟ್ ಲೋನ್ ಒಳಪಟ್ಟಂತೆ ಮತ್ತು ಅಥವಾ ರಾಜ್ಯ ಹಣಕಾಸು ನಿಗಮ, ಕೈಗಾರಿಕಾ ಬಂಡವಾಳ ಅಭಿವೃದ್ಧಿ ನಿಗಮ, ರಾಷ್ಟ್ರೀಯ ಮಟ್ಟದ ಹಣಕಾಸು ಸಂಸ್ಥೆಗಳು, ವಾಣಿಜ್ಯ ಬ್ಯಾಂಕುಗಳು, ಆರ್‌ಆರ್‌ಬಿಗಳು, ಸಹಕಾರಿ ಬ್ಯಾಂಕುಗಳು, ಕೆವಿಐಬಿ/ಕೆವಿಐಸಿ, ಕರ್ನಾಟಕ ರಾಜ್ಯ ಎಸ್‌ಸಿ/ಎಸ್‌ಟಿ ಅಭಿವೃದ್ಧಿ ನಿಗಮ, ಕರ್ನಾಟಕ ರಾಜ್ಯ ಅಲ್ಪಸಂಖ್ಯಾತ ಅಭಿವೃದ್ಧಿ ನಿಗಮ ಹಾಗೂ ಸರ್ಕಾರ ಸಮಯಾಸಮಯಕ್ಕೆ ಪ್ರಕಟಿಸುವ ಇತರ ಯಾವುದೇ ಸಂಸ್ಥೆಯಿಂದ ಸಾಲಗಳನ್ನು ಪಡೆಯಲು ಸಹಿ ಹಾಕಲಾದ ಸಾಲ ಒಪ್ಪಂದಗಳು, ಕ್ರೆಡಿಟ್ ಡೀಡ್‌ಗಳು, ಭೋಗ್ಯ ಮತ್ತು ಒತ್ತೆ ಕಾಗದ ಪತ್ರಗಳಿಗೆ ಸಂಬಂಧಪಟ್ಟಂತೆ ಹಾಗೂ

(ii) ಕೆಐಎಡಿಬಿ, ಕೆಎಸ್‌ಐಡಿಸಿ, ಕಿಯೋನಿಕ್ಸ್, ಕೈಗಾರಿಕಾ ಸಹಕಾರಿ ಮತ್ತು ಅನುಮೋದಿಸಿ ಖಾಸಗಿ ಕೈಗಾರಿಕಾ ನಿವೇಶನಗಳಿಂದ ಕೈಗಾರಿಕಾ ನಿವೇಶನಗಳು, ಶೆಡ್‌ಗಳು, ಕೈಗಾರಿಕಾ ವಸಾಹತುಗಳಿಗೆ ಸಂಬಂಧಪಟ್ಟಂತೆ ಕೈಗಾರಿಕಾ ಸಂಸ್ಥೆಗಳು ಸಹಿ ಹಾಕಿರುವ ಲೀಸ್ ಮತ್ತು ಮಾರಾಟ ಹಾಗೂ ಸಂಪೂರ್ಣ ಮಾರಾಟದ ಕಾಗದ ಪತ್ರಗಳಿಗೆ ಸಂಬಂಧಪಟ್ಟಂತೆ ಸ್ಟ್ಯಾಂಪ್ ಶುಲ್ಕವನ್ನು ಕೆಳಕಂಡಂತೆ ಮನ್ನಾ ಮಾಡಲಾಗಿದೆ.

### ೧) ಹೈದರಾಬಾದ್ - ಕರ್ನಾಟಕೇತರ ಪ್ರದೇಶ

**ವಲಯ-೧, ೨, ೩** : ಶೇ. ೧೦೦ರಷ್ಟು; ವಲಯ-೪ : ಶೇ. ೭೫ರಷ್ಟು

**ಹೈದರಾಬಾದ್ – ಕರ್ನಾಟಕ ಪ್ರದೇಶ**

**ಹೆಚ್‌ಕೆ ವಲಯ– ೧ ಮತ್ತು ೨ :** ಶೇ. ೧೦೦ರಷ್ಟು

**ಅಲ್ಪಸಂಖ್ಯಾತರು, ಹಿಂದುಳಿದ ವರ್ಗಗಳು (ವರ್ಗ–೧ ಮತ್ತು ೨ಎ ಮಾತ್ರ) ದೈಹಿಕ ಅಂಗವಿಕಲರು ಮತ್ತು ಮಾಜಿ–ಯೋಧರಲ್ಲಿ ಉದ್ಯಮಶೀಲತೆಗೆ ಉತ್ತೇಜನ**

ಅಲ್ಪಸಂಖ್ಯಾತರು, ಹಿಂದುಳಿದ ವರ್ಗಗಳು ಆರಂಭಿಸಲಿರುವ ಮತ್ತು ಮಾಜಿ–ಯೋಧರು ಹೂಡುವ ಎಮ್‌ಎಸ್‌ಎಮ್‌ಇಗಳಿಗೆ ಕೆಳಕಂಡಂತೆ ಆಕರ್ಷಕ ಪ್ರೋತ್ಸಾಹಗಳು ಮತ್ತು ರಿಯಾಯಿತಿಗಳನ್ನು ಕೊಟ್ಟು ಉತ್ತೇಜಿಸಲಾಗುವುದು.

**ಎ) ಬಂಡವಾಳ ಪ್ರೋತ್ಸಾಹ ಸಹಾಯಧನ**

**ಅ) ಅತಿ ಸಣ್ಣ ಕೈಗಾರಿಕೆಗಳು**

**ಹೈದರಾಬಾದ್–ಕರ್ನಾಟಕೇತರ ಪ್ರದೇಶ**

**ವಲಯ–೧:** ಸ್ಥಿರಾಸ್ತಿಗಳ ಮೌಲ್ಯದ (ವಿಎಫ್‌ಎ) ಶೇ೩೦ರಷ್ಟು (ಗರಿಷ್ಠ ರೂ. ೧೭.೦೦ ಲಕ್ಷ);

**ವಲಯ–೨:** ಸ್ಥಿರಾಸ್ತಿಗಳ ಮೌಲ್ಯದ (ವಿಎಫ್‌ಎ) ಶೇ.೨೫ರಷ್ಟು (ಗರಿಷ್ಠ ರೂ.೧೫.೦೦ ಲಕ್ಷ);

**ವಲಯ–೩:** ಸ್ಥಿರಾಸ್ತಿಗಳ ಮೌಲ್ಯದ (ವಿಎಫ್‌ಎ) ಶೇ೨೦ರಷ್ಟು (ಗರಿಷ್ಠ ರೂ. ೧೨.೦೦ ಲಕ್ಷ);

**ವಲಯ–೪:** ಇಲ್ಲ

**ಹೈದರಾಬಾದ್–ಕರ್ನಾಟಕ ಪ್ರದೇಶ**

**ಹೆಚ್‌ಕೆ ವಲಯ–೧:** ಸ್ಥಿರಾಸ್ತಿಗಳ ಮೌಲ್ಯದ (ವಿಎಫ್‌ಎ) ಶೇ ೩೫ರಷ್ಟು (ಗರಿಷ್ಠ ರೂ. ೨೦.೦೦ ಲಕ್ಷ);

**ಹೆಚ್‌ಕೆ ವಲಯ–೨:** ಸ್ಥಿರಾಸ್ತಿಗಳ ಮೌಲ್ಯದ (ವಿಎಫ್‌ಎ) ಶೇ ೩೦ರಷ್ಟು(ಗರಿಷ್ಠ ರೂ. ೧೮.೦೦ ಲಕ್ಷ)

**ಆ) ಸಣ್ಣ ಕೈಗಾರಿಕೆಗಳು**

**ಹೈದರಾಬಾದ್– ಕರ್ನಾಟಕೇತರ ಪ್ರದೇಶ**

**ವಲಯ–೧:** ಸ್ಥಿರಾಸ್ತಿಗಳ ಮೌಲ್ಯದ (ವಿಎಫ್‌ಎ) ಶೇ. ೨೫ರಷ್ಟು (ಗರಿಷ್ಠ ರೂ. ೪೫.೦೦ ಲಕ್ಷ);

**ವಲಯ–೨:** ಸ್ಥಿರಾಸ್ತಿಗಳ ಮೌಲ್ಯದ (ವಿಎಫ್‌ಎ) ಶೇ ೨೦ರಷ್ಟು (ಗರಿಷ್ಠ ರೂ. ೩೫.೦೦ ಲಕ್ಷ);

**ವಲಯ–೩:** ಸ್ಥಿರಾಸ್ತಿಗಳ ಮೌಲ್ಯದ (ವಿಎಫ್‌ಎ) ಶೇ ೧೫ರಷ್ಟು (ಗರಿಷ್ಠ ರೂ. ೨೫.೦೦ ಲಕ್ಷ);

**ವಲಯ–೪:** ಇಲ್ಲ

**ಹೈದರಾಬಾದ್– ಕರ್ನಾಟಕ ಪ್ರದೇಶ**

**ಹೆಚ್‌ಕೆ ವಲಯ–೧ :** ಸ್ಥಿರಾಸ್ತಿಗಳ ಮೌಲ್ಯದ (ವಿಎಫ್‌ಎ) ಶೇ ೩೦ರಷ್ಟು (ಗರಿಷ್ಠ ರೂ. ೫೦.೦೦ ಲಕ್ಷ);

**ಹೆಚ್‌ಕೆ ವಲಯ–೨ :** ಸ್ಥಿರಾಸ್ತಿಗಳ ಮೌಲ್ಯದ (ವಿಎಫ್‌ಎ) ಶೇ ೨೫ರಷ್ಟು (ಗರಿಷ್ಠ ರೂ. ೪೫.೦೦ ಲಕ್ಷ)

**ಇ) ಮಧ್ಯಮ ಉತ್ಪಾದನಾ ಘಟಕಗಳು**

(ಎಮ್‌ಎಸ್‌ಎಮ್‌ಇ ಕಾಯ್ದೆಯಲ್ಲಿ ನಮೂದಿಸಿದಂತೆ ಕನಿಷ್ಠ ೨೫ ನೇರ ಉದ್ಯೋಗಗಳನ್ನು ಒದಗಿಸುವ ಘಟಕಗಳು)

**ಹೈದರಾಬಾದ್–ಕರ್ನಾಟಕೇತರ ಪ್ರದೇಶ**

**ವಲಯ–೧:** ರೂ.೫೫ ಲಕ್ಷ,

**ವಲಯ–೨:** ರೂ.೪೫ ಲಕ್ಷ

**ವಲಯ–೩:** ರೂ.೩೫ಲಕ್ಷ,

**ವಲಯ–೪:** ಇಲ್ಲ

**ಹೈದರಾಬಾದ್–ಕರ್ನಾಟಕೇತರ ಪ್ರದೇಶ**

**ಹೆಚ್‌ಕೆ ವಲಯ–೧ :** ರೂ.೬೦ ಲಕ್ಷ,

**ಹೆಚ್‌ಕೆ ವಲಯ–೨ :** ರೂ.೫೫ ಲಕ್ಷ

**ಬಿ) ಸ್ಟ್ಯಾಂಪ್ ಡ್ಯೂಟಿಯಿಂದ ವಿನಾಯಿತಿ**

**ಎಂಎಸ್‌ಎಂಇಗಳು;**

(i) ಆರಂಭಿಕ ಐದು ವರ್ಷಗಳಿಗಾಗಿ ಸಿ ಅಂಡ್ ಐ ಇಲಾಖೆಯಿಂದ ವ್ಯಾಟ್ ಲೋನ್ ಒಳಪಟ್ಟಂತೆ ಮತ್ತು/ ಅಥವಾ ರಾಜ್ಯ ಹಣಕಾಸು ನಿಗಮ, ಕೈಗಾರಿಕಾ ಬಂಡವಾಳ ಅಭಿವೃದ್ಧಿ ನಿಗಮ, ರಾಷ್ಟ್ರೀಯ ಮಟ್ಟದ ಹಣಕಾಸು ಸಂಸ್ಥೆಗಳು, ವಾಣಿಜ್ಯ ಬ್ಯಾಂಕುಗಳು, ಆರ್‌ಆರ್‌ಬಿಗಳು, ಸಹಕಾರಿ ಬ್ಯಾಂಕುಗಳು, ಕೆವಿಐಬಿ/ಕೆವಿಐಸಿ, ಕರ್ನಾಟಕ ರಾಜ್ಯ ಎಸ್‌ಸಿ/ಎಸ್‌ಟಿ ಅಭಿವೃದ್ಧಿ ನಿಗಮ, ಕರ್ನಾಟಕ ರಾಜ್ಯ ಅಲ್ಪಸಂಖ್ಯಾತ ಅಭಿವೃದ್ಧಿ ನಿಗಮ ಹಾಗೂ ಸರ್ಕಾರ ಕಾಲಕಾಲಕ್ಕೆ ಪ್ರಕಟಿಸುವ ಇತರ ಯಾವುದೇ ಸಂಸ್ಥೆಯಿಂದ ಸಾಲಗಳನ್ನು ಪಡೆಯಲು ಸಹಿ ಹಾಕಲಾದ ಸಾಲ ಒಪ್ಪಂದಗಳು, ಕ್ರೆಡಿಟ್ ಡೀಡ್‌ಗಳು, ಭೋಗ್ಯ ಮತ್ತು ಒತ್ತೆ ಕಾಗದ ಪತ್ರಗಳಿಗೆ ಸಂಬಂಧಪಟ್ಟಂತೆ ಹಾಗೂ

(ii) ಕೆಐಎಡಿಬಿ, ಕೆಎಸ್‌ಎಸ್‌ಐಡಿಸಿ, ಕಿಯೋನಿಕ್ಸ್, ಕೈಗಾರಿಕಾ ಸಹಕಾರಿಗಳು ಮತ್ತು ಅನುಮೋದಿತ ಖಾಸಗಿ ಕೈಗಾರಿಕಾ ನಿವೇಶನಗಳಿಂದ ಕೈಗಾರಿಕಾ ನಿವೇಶನಗಳು, ಶೆಡ್‌ಗಳು, ಕೈಗಾರಿಕಾ ವಸಾಹತುಗಳಿಗೆ ಸಂಬಂಧಪಟ್ಟಂತೆ ಕೈಗಾರಿಕಾ ಸಂಸ್ಥೆಗಳು ಸಹಿ ಹಾಕಿರುವ ಲೀಸ್ ಡೀಡ್‌ಗಳು, ಲೀಸ್ ಮತ್ತು ಮಾರಾಟ ಹಾಗೂ ಸಂಪೂರ್ಣ ಮಾರಾಟದ ಕಾಗದ ಪತ್ರಗಳಿಗೆ ಸಂಬಂಧಪಟ್ಟಂತೆ ಸ್ಟ್ಯಾಂಪ್ ಶುಲ್ಕವನ್ನು ಕೆಳಕಂಡಂತೆ ಮನ್ನಾ ಮಾಡಲಾಗಿದೆ.

**ಹೈದರಾಬಾದ್–ಕರ್ನಾಟಕೇತರ ಪ್ರದೇಶ**

**ವಲಯ–೧,೨,೩ :** ಶೇ ೧೦೦ರಷ್ಟು,

**ವಲಯ–೪:** ಇಲ್ಲ

**ಹೈದರಾಬಾದ್–ಕರ್ನಾಟಕೇತರ ಪ್ರದೇಶ**

**ಹೆಚ್‌ಕೆ ವಲಯ– ೧ ಮತ್ತು ೨ :** ಶೇ.೧೦೦ರಷ್ಟು

**ಸಿ) ನೋಂದಣಿ ಶುಲ್ಕದಲ್ಲಿ ರಿಯಾಯಿತಿ**

**ಎಂಎಸ್‌ಎಂಇಗಳು :**

ಮೇಲಿನ "ಬಿ"ದಲ್ಲಿ ನಿರ್ದಿಷ್ಟ ಪಡಿಸಿರುವ ಎಲ್ಲಾ ಸಾಲ ದಾಸ್ತಾವೇಜುಗಳು ಮತ್ತು ಮಾರಾಟ ಕಾಗದ ಪತ್ರಗಳಿಗಾಗಿ

ನೋಂದಣಿ ಶುಲ್ಕಗಳು ಪ್ರತಿ ರೂ. ೧೦೦೦/-ಕ್ಕಾಗಿ ರೂ.೦.೫೦ ರಿಯಾಯಿತಿ ದರದಲ್ಲಿರುತ್ತವೆ.

**ಡಿ) ಭೂಪರಿತರ್ವತನೆ ಶುಲ್ಕದ ಮರುಪಾವತಿ**

**ಎಂಎಸ್‌ಎಂಇಗಳು:**

ಭೂಮಿಯನ್ನು ಕೃಷಿ ಬಳಕೆಯಿಂದ ಕೈಗಾರಿಕಾ ಬಳಕೆಗೆ ಪರಿವರ್ತಿಸಲು ಸೂಚಿತವಾಗಿರುವ ಭೂಪರಿವರ್ತನಾ ಶುಲ್ಕವನ್ನು ಕೆಳಗೆ ವಿವರಿಸಿರುವಂತೆ ಮರುಪಾವತಿ ಮಾಡಲಾಗುವುದು.

**ಹೈದರಾಬಾದ್-ಕರ್ನಾಟಕೇತರ ಪ್ರದೇಶ**

**ವಲಯ-೧.೨.೩:** ಶೇ.೧೦೦ರಷ್ಟು,

**ವಲಯ-೪:** ಇಲ್ಲ

**ಹೈದರಾಬಾದ್-ಕರ್ನಾಟಕೇತರ ಪ್ರದೇಶ**

**ಹೆಚ್‌ಕೆ ವಲಯ-೧** ಮತ್ತು **೨:** ಶೇ.೧೦೦ರಷ್ಟು

**ಇ) ಪ್ರವೇಶ ತೆರಿಗೆಯಿಂದ ವಿನಾಯಿತಿ**

**ಎಂಎಸ್‌ಎಂಇಗಳು:**

**ವಲಯ-೧.೨.೩** ಮತ್ತು ಹೆಚ್‌ಕೆ **ವಲಯ- ೧ ಮತ್ತು ೨.** ಯೋಜನಾ ಅನುಷ್ಠಾನದ ಆರಂಭ ದಿನಾಂಕದಿಂದ ಮೂರು ವರ್ಷಗಳ ಪ್ರಾರಂಭಿಕ ಅವಧಿಗಾಗಿ "ಕಾರ್ಯಾಗಾರಮತ್ತು ಯಂತ್ರೋಪಕರಣ ಮತ್ತು ಬಂಡವಾಳ ಸಾಮಗ್ರಿಗಳ" ಮೇಲೆ ಪ್ರವೇಶ ತೆರಿಗೆಯನ್ನು ಕಟ್ಟುವಲ್ಲಿ ಶೇ.೧೦೦ರಷ್ಟು ವಿನಾಯಿತಿಗೆ ಅರ್ಹವಾಗುತ್ತವೆ. ಈ ಉದ್ದೇಶಕ್ಕಾಗಿ ಕಾರ್ಯಾಗಾರಮತ್ತು ಯಂತ್ರೋಪಕರಣ ಮತ್ತು ಕ್ಯಾಪಿಟಲ್ ಗೂಡ್ಸ್ ಕುರಿತ ಅರ್ಥ ವಿವರಣೆಯಲ್ಲಿ ಕ್ಯಾಪ್ಟಿವ್ ವಿದ್ಯುತ್ ಉತ್ಪಾದನೆಗೆ ಅಗತ್ಯವಾಗುವ ಯಂತ್ರೋಪಕರಣಗಳು ಒಳಪಟ್ಟಂತೆ ಕಾರ್ಯಾಗಾರ ಮತ್ತು ಯಂತ್ರೋಪಕರಣ, ಸಲಕರಣೆ ಇತ್ಯಾದಿ ಸಹ ಸೇರಿರುತ್ತದೆ. ಕಚ್ಚಾ ಸಾಮಗ್ರಿಗಳು, ಉಪಕರಣಗಳು, ಬಿಡಿ ಭಾಗಗಳು ಮತ್ತು ಇತರ ಸಾಮಗ್ರಿಗಳು (ಪೆಟ್ರೋಲಿಯಂ ಉತ್ಪನ್ನಗಳನ್ನು ಹೊರತುಪಡಿಸಿ) (ಅನ್ವಯಿತವಾದೆಡೆ) ಮೇಲಿನ ತೆರಿಗೆ ವಿನಾಯಿತಿ ವಾಣಿಜ್ಯ ಉತ್ಪಾದನೆಯ ಆರಂಭ ದಿನಾಂಕದಿಂದ ಆರು ವರ್ಷಗಳ ಅವಧಿಗಾಗಿ ಇರುತ್ತದೆ.

**ಎಫ್) ಇಟಿಪಿಗಳನ್ನು ಸ್ಥಾಪಿಸಲು ಸಬ್ಸಿಡಿ**

**ಉತ್ಪಾದನಾ ಎಂಎಸ್‌ಎಂಇಗಳು:**

**ಹೆಚ್‌ಕೆ ವಲಯ-೧** ಮತ್ತು **೨** ಕ್ಕಾಗಿ ಹಾಗೂ ಹೈದರಾಬಾದ್ ಕರ್ನಾಟಕೇತರ **ವಲಯ-೧, ೨, ೩** ಕ್ಕಾಗಿ ರೂ. ೧೦೦ ಲಕ್ಷಗಳ ಮತ್ತು ಹೈದರಾಬಾದ್ ಕರ್ನಾಟಕೇತರ ಪ್ರದೇಶದ ವಲಯ-೪ ಕ್ಕಾಗಿ ರೂ. ೫೦ ಲಕ್ಷಗಳ ಪರಿಮಿತಿಗೆ ಒಳಪಟ್ಟಂತೆ ಇಟಿಪಿ ವೆಚ್ಚದ ಶೇ. ೭೫ ರವರೆಗೆ ಏಕಕಾಲದ ಬಂಡವಾಳ ಸಬ್ಸಿಡಿ.

**ಜಿ) ಅತಿ ಸಣ್ಣ ಉತ್ಪಾದನಾ ಘಟಕಗಳಿಗೆ ಮಾತ್ರ ಬಡ್ಡಿ ಸಾಹಾಯಧನ**

ಅತಿಸಣ್ಣ ಘಟಕಗಳಿಗೆ ನೀಡಲಾಗುವ ಅವಧಿ ಸಾಲಗಳ ಮೇಲೆ ಶೇ. ೬ರಷ್ಟು ಬಡ್ಡಿ ಸಬ್ಸಿಡಿ. ಈ ಬಡ್ಡಿ ಸಬ್ಸಿಡಿಯನ್ನು ಉದ್ಯಮವು ಅಸಲು ಅಥವಾ ಬಡ್ಡಿ ಕಂತುಗಳ ಪಾವತಿಯನ್ನು ತಪ್ಪದೇ ಕಟ್ಟಿದಲ್ಲಿ ಮಾತ್ರ, ಉದ್ಯಮದ ಪರವಾಗಿ ಹಣಕಾಸು ಸಂಸ್ಥೆಗೆ ಪಾವತಿ ಮಾಡಲಾಗುತ್ತದೆ. ಬಡ್ಡಿ ಸಹಾಯಧನವು ಪರಿಣಾಮಕಾರಿ ಬಡ್ಡಿ ದರವಾಗಿರುತ್ತದೆ. (ಬಡ್ಡಿ ಸಹಾಯಧನವನ್ನು ಕಳೆದ ನಂತರ) (ಯಾವುದೇ ಸಂಸ್ಥೆಯಿಂದ ಬರತಕ್ಕ/ಭಾರತ ಸರ್ಕಾರದ ಯಾವುದೇ ಯೋಜನೆಯನ್ವಯ ಲಭಿಸುವ ಅಥವಾ ವಾರ್ಷಿಕ ಶೇ. ೬ರಷ್ಟು ಇದರಲ್ಲಿ ಯಾವುದು ಕಡಿಮೆಯೋ ಆ ಮೊತ್ತಕ್ಕೆ ಸಮ). ಬಡ್ಡಿ ಸಹಾಯಧನದ ಅವಧಿಯು ವಲಯ-೧, ವಲಯ-೨ ಮತ್ತು ವಲಯ-೩ಕ್ಕಾಗಿ ಅನುಕ್ರಮವಾಗಿ ೬ ವರ್ಷಗಳು, ೫ ವರ್ಷಗಳು ಮತ್ತು ೪ ವರ್ಷಗಳಾಗಿರುತ್ತವೆ ಹಾಗೂ ಹೆಚ್‌ಕೆ ವಲಯ-೧ ಮತ್ತು ವಲಯ-೨ಕ್ಕಾಗಿ ಅನುಕ್ರಮವಾಗಿ ೭ ವರ್ಷಗಳು ಮತ್ತು ೬ ವರ್ಷಗಳಾಗಿರುತ್ತದೆ.

**ಹೆಚ್) ವಿದ್ಯುಚ್ಛಕ್ತಿ ದರಗಳ ಮೇಲಿನ ತೆರಿಗೆಯಿಂದ ವಿನಾಯಿತಿಗಳು**

**ಅತಿ ಸಣ್ಣ, ಸಣ್ಣ ಮತ್ತು ಮಧ್ಯಮ ಉತ್ಪಾದನಾ ಘಟಕಗಳಿಗೆ**

ಹೈದರಾಬಾದ್ ಕರ್ನಾಟಕೇತರ ಪ್ರದೇಶದ ವಲಯ-೧, ವಲಯ-೨, ವಲಯ-೩ ಮತ್ತು ವಲಯ-೪, ಹೆಚ್ ಕೆ ವಲಯ-೧ ಮತ್ತು -೨ಕ್ಕಾಗಿ ಅನುಕ್ರಮವಾಗಿ ೭- ವರ್ಷಗಳು, ೬ ವರ್ಷಗಳು ೫ ವರ್ಷಗಳು, ೪ ವರ್ಷಗಳು, ೮ ವರ್ಷಗಳು ಮತ್ತು ೭ ವರ್ಷಗಳ ಆರಂಭಿಕ ಅವಧಿಗಾಗಿ ವಿದ್ಯುತ್ ತೆರಿಗೆಯಿಂದ ಶೇ. ೧೦೦ ರಷ್ಟು ವಿನಾಯಿತಿ.

**ಐ) ತಂತ್ರಜ್ಞಾನ ನವೀಕರಣ, ಗುಣಮಟ್ಟ ಪ್ರಮಾಣೀಕರಣ**

**ಅತಿಸಣ್ಣ, ಸಣ್ಣ ಮತ್ತು ಮಧ್ಯಮ ಉತ್ಪಾದನಾ ಘಟಕಗಳು**

**೧) ತಂತ್ರಜ್ಞಾನ ನವೀಕರಣ ಸಾಲದ ಮೇಲಿನ ಬಡ್ಡಿ ಸಹಾಯಧನ**

ಹೈದರಾಬಾದ್ ಕರ್ನಾಟಕೇತರ ಪ್ರದೇಶದ ವಲಯ-೧, ೨, ೩, ಮತ್ತು ಹೆಚ್‌ಕೆ ವಲಯ-೧, ೨ : ಭಾರತ ಸರ್ಕಾರದ ಸಿಎಲ್‌ಸಿಎಸ್‌ಎಸ್ ಗೆ ಒಳಪಡದ, ಕೆಎಸ್‌ಎಫ್‌ಸಿ, ಶೆಡ್ಯೂಲ್ಡ್ ವಾಣಿಜ್ಯ ಬ್ಯಾಂಕುಗಳಿಂದ ಪಡೆದ ಸಾಲಗಳ ಮೇಲೆ ೫ರಷ್ಟು.

**೨) ಐಎಸ್‌ಓ ಸರಣಿಯ ಪ್ರಮಾಣೀಕರಣ ವೆಚ್ಚ**

ಹೈದರಾಬಾದ್ ಕರ್ನಾಟಕೇತರ ಪ್ರದೇಶದ ವಲಯ ೧, ೨, ೩ ಮತ್ತು ಹೆಚ್ ಕೆ ವಲಯ ೧,೨: ವೆಚ್ಚದ ಶೇ ೭೫ರಷ್ಟು (ಗರಿಷ್ಠ ೧ ಲಕ್ಷ ರೂ.ಗಳು)

**೩) ಬಿಐಎಸ್ ಪ್ರಮಾಣ ಪತ್ರ :**

ಬಿಐಎಸ್ ಗೆ ನೀಡಲಾದ ಶುಲ್ಕದ ೫೦ರಷ್ಟು (ಗರಿಷ್ಠ ೨೦,೦೦೦ ರೂ ಗಳು) ಮತ್ತು ಬಿಐಎಸ್ ನಿಂದ ಅನುಮೋದಿತವಾದ ಪರೀಕ್ಷಣಾ ಉಪಕರಣಗಳ ಖರೀದಿ ವೆಚ್ಚದ ಶೇ.೫೦ರಷು (ಗರಿಷ್ಠ ೧ ಲಕ್ಷ ರೂಗಳು).

**೪) ತಂತ್ರಜ್ಞಾನದ ಅಳವಡಿಕೆ**

ಮಾನ್ಯತೆ ಪಡೆದ ರಾಷ್ಟ್ರೀಯ ಪ್ರಯೋಗಾಲಯಗಳ ತಂತ್ರಜ್ಞಾನ ಅಳವಡಿಕೆ ವೆಚ್ಚದ ಶೇ.೫೦ ರಷ್ಟು (ಗರಿಷ್ಠ ೧ ಲಕ್ಷ ರೂ ಗಳು).

**೫) ಟೆಕ್ನಾಲಜಿ ಬಿಸಿನೆಸ್ ಇಂಕ್ಯುಬೇಷನ್ ಸೆಂಟರ್:**

ವೆಚ್ಚದ ಶೇ.೫೦ರಷ್ಟು (ಗರಿಷ್ಠ ೭೫ ಲಕ್ಷ ರೂ ಗಳು)

**೬) ಎಲೆಕ್ಟ್ರಾನಿಕ್ ತ್ಯಾಜ್ಯಗಳು ಮತ್ತು ಪ್ಲಾಸ್ಟಿಕ್ ತ್ಯಾಜ್ಯಗಳನ್ನು**

**ಪುನರ್‌ಬಳಸಿ ಸ್ಥಾಪಿಸಲಾಗುವ ಎಮ್‌ಎಸ್‌ಎಮ್‌ಇಗಳಿಗಾಗಿ:**

ಹೈದರಾಬಾದ್ ಕರ್ನಾಟಕೇತರ ಪ್ರದೇಶದ ವಲಯ–೧, ೨, ೩ ಮತ್ತು ಹೆಚ್‌ಕೆ ವಲಯ–೧, ೨ ರಲ್ಲಿ ರೂ.೧೫ ಲಕ್ಷಗಳ ಪರಿಮಿತಿಗೆ ಒಳಪಟ್ಟಂತೆ ಶೇ.೫೦ರಷ್ಟು ಬಂಡವಾಳ ಉತ್ತೇಜನ ಸಹಾಯಧನ

**ಜೆ. ಮಳೆ ಕೊಯ್ಲು ಮತ್ತು ಜಲಸಂರಕ್ಷಣೆ ಕ್ರಮಗಳು**

**ಹೈದರಾಬಾದ್ ಕರ್ನಾಟಕೇತರ ಪ್ರದೇಶದ ವಲಯ–೧, ೨, ೩ ಮತ್ತು ಹೆಚ್‌ಕೆವಲಯ–೧, ೨ ರಲ್ಲಿ ಸಣ್ಣ ಮತ್ತು ಮಧ್ಯಮ ಉತ್ಪಾದನಾ ಸಂಸ್ಥೆಗಳು**

**(೧) ಮಳೆ ಕೊಯ್ಲು** : ಉಪಕರಣಾ ವೆಚ್ಚದ ಶೇ.೭೫ (ಗರಿಷ್ಠ ರೂ.೧.೫೦ ಲಕ್ಷ)

**(೨) ತ್ಯಾಜ್ಯ ನೀರಿನ ಪುನರ್ ಬಳಕೆ** : ಉಪಕರಣಾ ವೆಚ್ಚದ ಶೇ. ೭೫ (ಗರಿಷ್ಠ ರೂ. ೭.೫೦ ಲಕ್ಷ)

**(೩) ಶೂನ್ಯ ತ್ಯಾಜ್ಯ ಸಂಸ್ಕರಣಾ ಕಾರ್ಯವಿಧಾನ** : ಉಪಕರಣಾ ವೆಚ್ಚದ ಶೇ.೭೫ (ಗರಿಷ್ಠ ರೂ.೭.೫೦ ಲಕ್ಷ)

**ಕೆ) ಇಂಧನ ಸಂರಕ್ಷಣೆ**

**ಎಲ್ಲಾ ವಲಯಗಳಲ್ಲಿನ ಅತಿಸಣ್ಣ, ಸಣ್ಣ ಮತ್ತು ಮಧ್ಯಮ ಉತ್ಪಾದನಾ ಘಟಕಗಳು**

ಇಂಧನ ಉಳಿತಾಯದ ಕ್ರಮಗಳನ್ನು ಬಳಸಿ, ಮೊದಲು ಬಳಸಲಾಗುತ್ತಿದ್ದ ಇಂಧನದ ಕನಿಷ್ಠ ಶೇ.೧೦ರಷ್ಟು ಉಳಿತಾಯ ವಾದಲ್ಲಿ : ಬಂಡವಾಳ ವೆಚ್ಚದ ಶೇ.೧೫ (ಗರಿಷ್ಠ ರೂ. ೭.೫೦ ಲಕ್ಷ); ಕ್ಯಾಪ್ಟಿವ್ ಅಸಾಂಪ್ರದಾಯಿಕ ಇಂಧನ ಮೂಲಗಳ ಬಳಕೆ: ಬಂಡವಾಳ ವೆಚ್ಚದ ಶೇ.೧೫ (ಗರಿಷ್ಠ ರೂ. ೭.೫೦ ಲಕ್ಷ) ವಿದ್ಯುತ್ ಉತ್ಪಾದನೆ ಮತ್ತು ಸೌರ ಹಾಗೂ ವಾಯು ಇಂಧನ ಮೂಲಗಳ ಬಳಕೆ: ಪ್ರತಿ ಯೂನಿಟ್‌ಗೆ ರೂ. ೦.೭೫ ಸಹಾಯಧನ

**ಎಲ್) ಯೋಜನಾ ವರದಿಗಳನ್ನು ಸಿದ್ಧಪಡಿಸುವ ವೆಚ್ಚದ ಮರುಪಾವತಿ**

ಟೆಕ್ಸಾಕ್ ಮತ್ತು ಸಿಡಾಕ್ ಸಿದ್ಧಪಡಿಸಿದ ಯೋಜನಾ ವರದಿಗಳ ವೆಚ್ಚದ ಶೇ. ೭೫ರಷ್ಟನ್ನು ಪ್ರತಿ ಘಟಕಕ್ಕೆ ರೂ.೨.೦೦ ಲಕ್ಷದವರೆಗೆ ಹೀಮಪಾವತಿ ಮಾಡಲಾಗುವುದು. ಇದಕ್ಕಾಗಿ ಬ್ಯಾಂಕ್ ಸಾಲಗಳು ಮಂಜೂರಾಗಿರಬೇಕು.

**ರಫ್ತು ವೃದ್ಧಿಗೆ ಉತ್ತೇಜನ**

ಅಖಿಲ ಭಾರತ ಸರಕು ರಫ್ತುಗಳಲ್ಲಿ ಕರ್ನಾಟಕದ ಪಾಲನ್ನು ಪ್ರಸಕ್ತ ಶೇ ೬.೩ ಮಟ್ಟದಿಂದ ಶೇ ೧೨ಗೆ ಹೆಚ್ಚಿಸಿ, ಮುಂದಿನ ೫ ವರ್ಷಗಳಲ್ಲಿ ಜಿಎಸ್‌ಡಿಪಿಯಲ್ಲಿ ರಫ್ತುಗಳ ಪಾಲನ್ನು ಈಗಿನ ೪೮% ಮಟ್ಟದಿಂದ ಶೇ ೬೦ಗೆ ಹೆಚ್ಚಿಸುವ ಧ್ಯೇಯದಿಂದ ವಿಭಿನ್ನ ಉಪಕ್ರಮಗಳನ್ನು ಕೈಗೊಳ್ಳಲಾಗುವುದು.

ಈ ಉದ್ದೇಶಿತ ಉಪಕ್ರಮಗಳ ವಿವರಗಳನ್ನುನ ಅನುಬಂಧ–೪ರಲ್ಲಿ ಕೊಡಲಾಗಿದೆ. ರಾಜ್ಯದಿಂದ ವ್ಯಾಪಾರ ಮತ್ತು ರಫ್ತುಗಳನ್ನು ಹೆಚ್ಚಿಸಲು ಭಾರತ ಸರ್ಕಾರದ ಸೂತ್ರಗಳಿಗೆ ಅನುಗುಣವಾಗಿ ಎಸ್‌ಇಜೆಡ್‌ಗಳಿಗೆ ಬೆಂಬಲ ನೀಡುವುದನ್ನು ರಾಜ್ಯ ಮುಂದುವರೆಸುತ್ತದೆ. ರಾಜ್ಯದಿಂದ ರಫ್ತನ್ನು ಬಳಸುವ ಗುರಿಯಿಂದ ಮೂಲವ್ಯವಸ್ಥೆ ಅಭಿವೃದ್ಧಿಯನ್ನು ಎಎಸ್‌ಐಡಿಇ ಸೂತ್ರದಡಿ ಲಭಿಸುವ ನಿಧಿಗಳೊಂದಿಗೆ ಸಹ ಒಗ್ಗೂಡಿಸಲಾಗುವುದು.

**ಇಂಧನ ದಕ್ಷತೆ ಕ್ರಮಗಳನ್ನು ಅಳವಡಿಸಿಕೊಳ್ಳುವ ಘಟಕಗಳಿಗೆ ಉತ್ತೇಜನ**

- ಕಡಿಮೆ ಕಾರ್ಬನ್, ಕಡಿಮೆ ತ್ಯಾಜ್ಯ, ಪ್ರದೂಷಣೆಯೇತರ ಮತ್ತು ಸುರಕ್ಷಿತ ತಂತ್ರಜ್ಞಾನಗಳ ಬಗ್ಗೆ ಕೈಗಾರಿಕೆಗಳಿಗೆ ಶಿಕ್ಷಣ ನೀಡಲು ಯತ್ನಿಸಲಾಗುವುದು.
- ಕಾರ್ಬನ್ ಪರಿಶೋಧನೆಯನ್ನು ಅಂಗೀಕರಿಸಬೇಕೆಂದು ಕೈಗಾರಿಕೆಗಳನ್ನು ಉತ್ತೇಜಿಸಲಾಗುವುದು.
- ಕೈಗಾರಿಕೆಗಳಲ್ಲಿ ಇಂಧನ ದಕ್ಷಸಲಕರಣೆಗಳ ಬಳಕೆಯನ್ನು ಉತ್ತೇಜಿಸಲಾಗುವುದು.
- ಇಂಧನ ಪರಿಶೋಧನೆಯನ್ನು ಅಂಗೀಕರಿಸುವಂತೆ ೧೦೦ ಕೆ.ಡಬ್ಲ್ಯೂ. ಮೀರಿದ ಕನೆಕ್ಟೆಡ್ ಲೋಡ್ ಇರುವ ಕೈಗಾರಿಕೆಗಳನ್ನು ಉತ್ತೇಜಿಸಲಾಗುವುದು.
- ಭಾರತ ಸರ್ಕಾರದ ವಿಭಿನ್ನ ಸೂತ್ರಗಳನ್ನು ಬಳಸಿಕೊಂಡು ಸ್ವಚ್ಛ ತಂತ್ರಜ್ಞಾನ ಯೋಜನೆಗಳನ್ನು ಜಾರಿಗೊಳಿಸುವಲ್ಲಿ ಕೈಗಾರಿಕೆಗಳಿಗೆ ನೆರವಾಗುವುದು.

**ಪುನರ್ ನವಿಕರಣದ ಇಂಧನ ಯೋಜನೆಗಳಿಗೆ ಉತ್ತೇಜನ**

- ರಿನಿವೆಬಲ್ ಇಂಧನ ಯೋಜನೆಗಳು ಒಳಪಟ್ಟಂತೆ ಎಲ್ಲಾ ಇಂಧನ ಯೋಜನೆಗಳನ್ನು ಉತ್ಪಾದನಾ ಕೈಗಾರಿಕೆ ಎಂದು ಪರಿಗಣಿಸಲಾಗುವುದು ಹಾಗೂ ಈ ನೀತಿಯಲ್ಲಿ ಉತ್ಪಾದನಾ ಕೈಗಾರಿಕೆಗಳಿಗೆ ಲಭ್ಯವಿರುವ ಎಲ್ಲಾ ಉತ್ತೇಜನ ಮತ್ತು ರಿಯಾಯಿತಿಗಳನ್ನುನ ನೀಡಲಾಗುವುದು.
- ಸೌರ, ವಾಯು, ಬಯೋಮಾಸ್ ಮತ್ತು ಅತಿಸಣ್ಣ ಜಲವಿದ್ಯುತ್ ಯೋಜನೆಗಳು ಒಳಪಟ್ಟಂತೆ ಪುನರ್ ನವೀಕರಣದ ಎಲ್ಲಾ ಇಂಧನ ಯೋಜನೆಗಳಿಗಾಗಿ ಭೂಖರೀದಿ ಮತ್ತು ಪರಿವರ್ತನ ಕ್ರಮ ವಿಧಾನಗಳನ್ನು ಸರಳೀಕರಿಸಲು ಉದ್ದೇಶಿಸಲಾಗಿದೆ.
- ಪುನರ್ ನವೀಕರಣ ಇಂಧನ ಯೋಜನೆಗಳಿಗಾಗಿ ಖರೀದಿಸಲಾದ ಸ್ಥಾವರ ಮತ್ತು ಯಂತ್ರೋಪಕರಣಗಳ ಮೇಲಿನ ವ್ಯಾಟ್‌ನ ಶೇ ೫೦ ರಷ್ಟನ್ನು ಮರುಪಾವತಿ ಮಾಡಲಾಗುವುದು.

**ಹಸಿರು ಮತ್ತು ಸ್ವಚ್ಛಪದ್ಧತಿಗಳ ಅಂಗೀಕಾರಕ್ಕಾಗಿ ಉತ್ತೇಜನ**

(i) ವಾಣಿಜ್ಯ ಮತ್ತು ಕೈಗಾರಿಕೆಗಳ ಇಲಾಖೆಯು, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ (ಕೆಎಸ್‌ಪಿಸಿಬಿ) ಯ ಸಹಯೋಗದೊಂದಿಗೆ ಪರಿಸರ ಪ್ರದೂಷಣೆಯನ್ನು ತಗ್ಗಿಸುವತ್ತ ಕೈಗಾರಿಕೆಗೆ ಜಾಗೃತಿ ನೀಡಿ, ಶಿಕ್ಷಣ ಕೊಟ್ಟು ಅವುಗಳನ್ನು ತೊಡಗಿಸಲಿದೆ.

(ii) ಜಲ ಬಳಕೆ ಸ್ವರೂಪ, ಇಂಧನ ಬಳಕೆ ಸ್ವರೂಪ, ಘನತ್ಯಾಜ್ಯ ನಿರ್ವಹಣೆ ಪದ್ಧತಿಗಳು, ವಿಸರ್ಜನೆ ಪದ್ಧತಿಗಳು

ಇತ್ಯಾದಿಗಳನ್ನು ಕುರಿತಂತೆ ಶ್ರೇಷ್ಠ ಅಂತರಾಷ್ಟ್ರೀಯ ಕೈಗಾರಿಕಾ ಮಾನಕಗಳು ಮತ್ತು ಪದ್ಧತಿಗಳನ್ನು ಗಮನದಲ್ಲಿಟ್ಟುಕೊಂಡು ರಾಜ್ಯದಲ್ಲಿನ ಪ್ರಮುಖ ಕೆಐಎಡಿಬಿ ಕೈಗಾರಿಕಾ ಪ್ರದೇಶಗಳಲ್ಲಿ ಒಂದು ವಿಶೇಷ ಅಧ್ಯಯನವನ್ನು ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆಯು ಕೈಗೊಳ್ಳಲಿದೆ.

(iii) ಕೈಗರಿಕೆಗಳು ಇಂಧನ ದಕ್ಷ, ಕಡಿಮೆ ಕಾರ್ಬನ್, ಕಡಿಮೆ ತ್ಯಾಜ್ಯ, ಪ್ರದೂಷಣೆಯೇತರ ಮತ್ತು ಸುರಕ್ಷಿತ ತಂತ್ರಜ್ಞಾನಗಳನ್ನು ಅಂಗೀಕರಿಸಬೇಕು ಹಾಗೂ ಸತತ ಜೀವನೋಪಾಯಗಳು ಮತ್ತು ಉದ್ಯೋಗಗಳನ್ನು ಒದಗಿಸುವ ಸಮಯದಲ್ಲೇ ಜವಾಬ್ದಾರಿಯಿಂದ ಉತ್ಪನ್ನಗಳನ್ನು ತಯಾರಿಸುವಂತಹ ಪದ್ಧತಿಗಳನ್ನು ಅನುಸರಿಸಬೇಕೆಂದು ಮನವೊಲಿಸಲು ಯತ್ನಿಸಲಾಗುವುದು.

(iv) ಶೂನ್ಯ ವಿಸರ್ಜನೆಯನ್ನು ಆಚರಿಸುವ ಘಟಕಗಳು ಸಮಂಜಸ ಸಲಕರಣೆ/ತಂತ್ರಜ್ಞಾನ ನವೀಕರಣಕ್ಕಾಗಿ ಏಕಕಾಲದ ಸಹಾಯಧನಕ್ಕೆ ಅರ್ಹವಾಗುತ್ತವೆ.

(v) ವಾಣಿಜ್ಯ ಮತ್ತು ಕೈಗಾರಿಕೆಗಳ ಇಲಾಖೆಯು ಕೆಎಸ್‌ಪಿಸಿಬಿಯ ಸಹಕಾರದೊಂದಿಗೆ ಕೈಗಾರಿಕೆಗಳ ಹಸಿರು, ಕೆಂಪು ಮತ್ತು ಕಿತ್ತಳೆ ವರ್ಗಗಳ ಪ್ರಸಕ್ತ ಪಟ್ಟಿಯನ್ನು ಸಮೀಕ್ಷಿಸಿ ತರ್ಕಬದ್ಧ ಕ್ರಮಗಳನ್ನು ಕೈಗೊಳ್ಳುತ್ತದೆ.

(vi) ಸಾಮಾನ್ಯ ವಿಸರ್ಜನಾ ಸಂಸ್ಕರಣೆಯ ಘಟಕ (ಸಿಇಟಿಪಿ) ಮತ್ತು ಇತರ ಸಾಮಾನ್ಯ ಸಂಸ್ಕರಣ ಕ್ರಮಗಳನ್ನು ಸ್ಥಾಪಿಸಲು ಎಲ್ಲಾ ಹೊಸ ಕೈಗಾರಿಕಾ ಪ್ರದೇಶಗಳು/ ನಿವೇಶನಗಳಲ್ಲಿ ಸಾಕಷ್ಟು ಭೂಮಿಯನ್ನು ನಿಗಧಿಪಡಿಸಲಾಗುವುದು.

(vii) ಹೊಸ ಕೈಗಾರಿಕೆಗಳು ನಿರ್ದಿಷ್ಟ ಸ್ವಚ್ಛ ತಯಾರಿಕಾ ಕ್ರಮಗಳನ್ನು ಅಂಗೀಕರಿಸುವಲ್ಲಿ ರೂ.೫.೦೦ ಲಕ್ಷಗಳ ಮಿತಿಗೆ ಒಳಪಟ್ಟಂತೆ ವೆಚ್ಚದ ಶೇ ೨೫ ರಷ್ಟು ಪ್ರೋತ್ಸಾಹಗಳನ್ನು ಒದಗಿಸಲಾಗುವುದು.

(viii) ಕೆಐಎಡಿಬಿ/ಕೆಎಸ್‌ಎಸ್‌ಐಡಿಸಿ ಕೈಗಾರಿಕಾ ಪ್ರದೇಶಗಳಲ್ಲಿ ಅಗತ್ಯವಾದೆಡೆ ಆಸ್ಪತ್ರೆ, ಅಂಚೆ ಕಚೇರಿ, ಬ್ಯಾಂಕು, ಅಗ್ನಿಶಾಮಕ ಕೇಂದ್ರ, ಪೊಲೀಸ್ ಠಾಣೆ, ಇನ್‌ಲ್ಯಾಂಡ್ ಕಂಟೇನರ್ ಡಿಪೋ/ಕಂಟೇನರ್ ಫ್ರೈಟ್ ಸ್ಟೇಷನ್ (ಐಸಿಡಿ/ಸಿಎಫ್‌ಎಸ್), ಸಾಮಾನ್ಯ ಅನುಕೂಲಗಳ ಕೇಂದ್ರ (ಸಿಎಫ್‌ಎಸ್) ಇತ್ಯಾದಿಗಾಗಿ ನಾಗರೀಕ ಸೌಲಭ್ಯಗಳ ನಿವೇಶನಗಳನ್ನು ರಿಯಾಯಿತಿಯ/ ಸಮಂಜಸ ಶುಲ್ಕದಲ್ಲಿ ದೀರ್ಘಾವಧಿ ಗುತ್ತಿಗೆ ಆಧಾರದಲ್ಲಿ ನಿಗಧಿಪಡಿಸಲಾಗುವುದು.

(ix) ಕ್ಯಾಂಟೀನ್‌ಗಳು, ಕಚೇರಿ ಸಂಘಗಳು ಮುಂತಾದ ಸೌಲಭ್ಯಗಳು ಹಾಗೂ ಸಿಇಟಿಪಿ, ಘನ ತ್ಯಾಜ್ಯ ನಿರ್ವಹಣೆ ಮುಂತಾದವುಗಳಗಾಗಿ ಪ್ರತಿ ಕೈಗಾರಿಕಾ ಪ್ರದೇಶ/ನಿವೇಶನದಲ್ಲಿ ಭೂಮಿಯನ್ನು ಗುರುತಿಸಿ ಇದರ ಸಮರ್ಥ ನಿರ್ವಹಣೆಗಾಗಿ ರಿಯಾಯಿತಿ/ಸಮಂಜಸ ಶುಲ್ಕದಲ್ಲಿ ದೀರ್ಘಾವಧಿ ಗುತ್ತಿಗೆ ಆಧಾರದ ಮೇಲೆ ಸಂಬಂಧಪಟ್ಟ ಕೈಗಾರಿಕೆಗಳ ಸಂಘಗಳಿಗೆ ಒದಗಿಸಲಾಗುವುದು.

(x) ಇ-ತ್ಯಾಜ್ಯ ಪುನರ್ ಬಳಕೆ ಘಟಕಗಳನ್ನು ಸ್ಥಾಪಿಸಲು ಉತ್ತೇಜಿಸಲಾಗುವುದು.

**ಆರ್ ಅಂಡ್ ಡಿ ಮತ್ತು ಡೈರೆಕ್ಟ್ ಡಿಜಿಟಲ್ ತಯಾರಿಕೆಗಾಗಿ ಬೆಂಬಲ ಸಂಶೋಧನೆ ಮತ್ತು ಅಭಿವೃದ್ಧಿಯನ್ನು (ಆರ್ ಅಂಡ್ ಡಿ) ಉತ್ತೇಜಿಸಲು:**

ವಲಯ-೧,೨,೩ ಮತ್ತು ಹೆಚ್‌ಕೆ-೧ ಮತ್ತು ಹೆಚ್‌ಕೆ-೨ ರಲ್ಲಿ ಉತ್ಪಾದನಾ ಕೈಗಾರಿಕೆಗೆ ಬೆಂಬಲ ನೀಡಲು ಸ್ಥಾಪಿಸಲಾಗುವ ಮಾನ್ಯತೆ ಪಡೆದ ಆರ್ ಅಂಡ್ ಡಿ ಕೇಂದ್ರಗಳು ರೂ.೫೦೦.೦೦ ಲಕ್ಷದ ಪರಿಮಿತಿಗೆ ಒಳಪಟ್ಟಂತೆ ಶೇ ೫೦ ಕ್ಯಾಪಿಟಲ್ ಸಬ್ಸಿಡಿಗೆ ಅರ್ಹವಾಗುತ್ತವೆ. ವಾರ್ಷಿಕವಾಗಿ ಕನಿಷ್ಠ ೨ ಆರ್ ಅಂಡ್ ಡಿ ಕೇಂದ್ರಗಳನ್ನು ಆರಂಭಿಸಲಾಗುವುದು.

ರಾಜ್ಯ ಸರ್ಕಾರವು, ಸಂಶೋಧನಾ ಸಂಸ್ಥೆಗಳು, ಕೈಗಾರಿಕಾ ಸಂಘಗಳು ಮತ್ತು ಇತರ ಪಾಲುಗಾರಿಕೆಗಳ ಮೂಲಕ ಎಂಎಸ್‌ಎಂಇಗಳಿಗೆ ಪ್ರಯೋಜನ ತರುವ ಆರ್ ಅಂಡ್ ಡಿ ತಂತ್ರಜ್ಞಾನದ ಅಭಿವೃದ್ಧಿಗೆ ನೆರವಾಗುವಂತೆ ರೂ.೧೦೦.೦೦ ಕೋಟಿಯ ಒಂದು "ತಾಂತ್ರಿಕ ಅಭಿವೃದ್ಧಿ ನಿಧಿ"ಯನ್ನು ರಚಿಸಲಿದೆ.

**ಡೈರೆಕ್ಟ್ ಡಿಜಿಟಲ್ ಮ್ಯಾನ್ಯುಫಾಕ್ಚರಿಂಗ್ :**

ಉತ್ಪಾದನೆಯಲ್ಲಿ ಡೈರೆಕ್ಟ್ ಡಿಜಿಟಲ್ ತಯಾರಿಕೆ/ ರ್‍ಯಾಪಿಡ್ ಪ್ರೋಟೋಟೈಪಿಂಗ್/೩ಡಿ ಪ್ರಿಂಟಿಂಗ್ ಹಾಗೂ ಉಚ್ಛ ತಂತ್ರಜ್ಞಾನದ ಅವಶ್ಯಕತೆ ಮತ್ತು ಮೇಲುಗೈಯನ್ನು ದೃಷ್ಟಿಯಲ್ಲಿಟ್ಟುಕೊಂಡು ರಾಜ್ಯದಲ್ಲಿ ಐಟಿ ಮತ್ತು ಉನ್ನತ ಕುಶಲತೆಯುಳ್ಳ ಜನರಿಗೆ ನೆರವಾಗುವುದಲ್ಲದೆ ಈ ವಿನೂತನ ತಂತ್ರಜ್ಞಾನದ ಪ್ರಯೋಜನವನ್ನು ಪಡೆಯುವುದನ್ನು ಉದ್ಯಮಶೀಲರಿಗೆ ನೆರವಾಗಲು, ಮೊಟ್ಟ ಮೊದಲಿಗೆ ಬೆಂಗಳೂರಿನ ಕೈಗಾರಿಕಾ ಸಂಘಗಳ ಸಹಯೋಗದೊಂದಿಗೆ, ನಂತರವಾಗಿ ಹಂತಾನುಹಂತದಲ್ಲಿ ಆಯ್ದ ಕೈಗಾರಿಕಾ ಪ್ರದೇಶಗಳಲ್ಲಿ ೩ಡಿ ಪ್ರಿಂಟರ್‌ಗಳ 'ಪಾವತಿಸಿ-ಬಳಸಿ' ಪ್ರಾರಂಭಿಕ ಸೌಕರ್ಯವನ್ನು ಕಲ್ಪಿಸಲು ಉದ್ದೇಶಿಸಲಾಗಿದೆ.

ಈ ಸಾಮಾನ್ಯ ಸೌಲಭ್ಯವನ್ನು ಕೈಗಾರಿಕಾ ಸಂಘಗಳು 'ಪಾವತಿಸಿ-ಬಳಸಿ' ಆಧಾರದ ಮೇಲೆ ಗುರುತಿಸಿ, ಸ್ಥಾಪಿಸಿ, ನಿರ್ವಹಿಸುತ್ತವೆ ಮತ್ತು ಇದು ನೀತಿಯ ಅವಧಿಯಲ್ಲಿ ರಾಜ್ಯದ ಪ್ರಥಮ ೫ ಘಟಕಗಳಿಗೆ ಪ್ರತಿ ಕೇಂದ್ರಕ್ಕಾಗಿ ರೂ.೧೦.೦೦ ಕೋಟಿಗಳ ಪರಿಮಿತಿಗೆ ಒಳಪಟ್ಟಂತೆ ಶೇ ೫೦ ರಷ್ಟು ಬಂಡವಾಳ ಸಹಾಯಧನಕ್ಕೆ ಅರ್ಹವಾಗುತ್ತದೆ.

ಈ ಕೇಂದ್ರವು ೩ಡಿ ಮುದ್ರಣ ತಂತ್ರಜ್ಞಾನದ ನಿಕ್ಷೇಪವಾಗಿ ಕಾರ್ಯನಿರ್ವಹಿಸಿ ತಯಾರಿಕೆಯಲ್ಲಿ ಸಂಶೋಧನೆ, ವಿನೂತನ ಅಗತ್ಯಕ್ಕೆ ತಕ್ಕ ಅಳವಡಿಕೆ ಮತ್ತು ಸೃಜನಶೀಲತೆಯನ್ನು ವೃದ್ಧಿಸುತ್ತದೆ ಮತ್ತು ತೀವ್ರಗೊಳಿಸುತ್ತದೆ.

**ಇಂಟಲೆಕ್ಚುವಲ್ ಪ್ರಾಪರ್ಟಿ ರೈಟ್ಸ್‌ಗಾಗಿ ಉತ್ತೇಜನ**

ಕರ್ನಾಟಕವು ವಿಶ್ವದಲ್ಲಿ ಒಂದು ಅತ್ಯಂತ ವಿನೂತನ ಮತ್ತು ಸೃಜನಶೀಲ ಪ್ರದೇಶವಾಗಿದ್ದು, ಸಂಪೂರ್ಣ ಕೈಗಾರಿಕಾ ಮತ್ತು ಮೂಲಭೂತ ಸೌಕರ್ಯ ನೀತಿಗಳಿಂದಾಗಿ ಬಹುಮುಖ ಕೈಗಾರಿಕಾ ಸಂಸ್ಕೃತಿಗೆ ಒಂದು ಆರೋಗ್ಯಕರ ಬೆಳವಣಿಗೆಯನ್ನು

ಒದಗಿಸುತ್ತದೆ. ರಾಜ್ಯವು ವಿಶ್ವದಲ್ಲಿ ಅತಿದೊಡ್ಡ ಸಂಖ್ಯೆಯ ಸಾಂಪ್ರದಾಯಕ ಜಿಯೋಗ್ರಾಫಿಕಲ್ ಇಂಡಿಕೇಷನ್‌ಗಳಿಗೆ (ಜಿಐ) ತವರಾಗಿದೆ ಹಾಗೂ ದೇಶದಲ್ಲಿ ೪೨ ಅನೋಂದಾಯಿತ ಜಿಐಗಳನ್ನು ಹೊಂದಿದೆ. ಕರ್ನಾಟಕವು ಜಾಗತಿಕ ಐಪಿ ಅರ್ಥವ್ಯವಸ್ಥೆಯ ಅಗತ್ಯಗಳನ್ನು ಪೂರೈಸುವ ಅನೇಕ ಐಪಿ ಪ್ರಾಧಾನ್ಯ ಉತ್ಪನ್ನಗಳು ಮತ್ತು ಸೇವೆಗಳಿಗೆ ಪ್ರವೇಶ ಕಲ್ಪಿಸಿಕೊಟ್ಟು ರಾಷ್ಟ್ರದ ಜಿಡಿಪಿಗೆ ಮಹತ್ತರ ಕೊಡುಗೆ ಸಲ್ಲಿಸಿದೆ.

ಕರ್ನಾಟಕವು ಐಪಿ ಫೈಲಿಂಗ್‌ನಲ್ಲಿ ೪ನೆಯ ಸ್ಥಾನಗಳಿಸಿದೆ ಹಾಗೂ ಸಂಶೋಧನೆ ಮತ್ತು ಅಭಿವೃದ್ಧಿ ಚಟುವಟಿಕೆಗಳನ್ನು ಕೈಗೊಂಡಿರುವ ಪ್ರಮುಖ ರಾಜ್ಯಗಳ ಪೈಕಿ ಒಂದು ಎನ್ನುವ ಹೆಗ್ಗಳಿಕೆ ಗಳಿಸಿದೆ. ಇದು ಆರ್ ಅಂಡ್ ಡಿ ಕ್ಷೇತ್ರದಲ್ಲಿ ದೇಶದ ಐದು ಅಗ್ರರಾಜ್ಯಗಳ ಪೈಕಿ ಸೇರಿದ್ದು "ಕರ್ನಾಟಕವು ಏಷ್ಯಾದ ಐಪಿ ಕೇಂದ್ರವಾಗಿ ಹೊರಹೊಮ್ಮುತ್ತಿದೆ" ಎಂದು ಹೇಳಿಕೊಳ್ಳುವಂತೆ ಅನೇಕ ವಾಸ್ತವಿಕ ಮತ್ತು ಸೃಜನಾತ್ಮಕ ಉಪಕ್ರಮಗಳನ್ನು ಹಮ್ಮಿಕೊಂಡಿದೆ.

ಆದ್ದರಿಂದಲೇ ಐಪಿ ಸ್ಪಷ್ಟನೆ, ಐಪಿ ಸಂರಕ್ಷಣೆ, ಐಪಿ ವಾಣಿಜ್ಯೀಕರಣ ಮತ್ತು ಐಪಿ ಅನುಷ್ಠಾನಕ್ಕೆ ಇಂಬು ನೀಡುವಂತಹ ಒಂದು ಬಲಿಷ್ಠ ಐಪಿ ವ್ಯವಸ್ಥೆಯನ್ನು ಪೋಷಿಸುವ ತುರ್ತು ಪ್ರಮೇಯ ರಾಜ್ಯಕ್ಕೆ ಇದೆ. ಇದು ಸರತಿಯಾಗಿ ಒಂದು ಸಮಗ್ರ ಐಪಿ ಧೋರಣೆ/ರಾಜ್ಯಕ್ಕಾಗಿ ಕ್ರಮಗಳನ್ನು ರೂಪಿಸಬೇಕಾದ ಅಗತ್ಯಕ್ಕೆ ಒತ್ತುಕೊಡುತ್ತದೆ. ಈ ನೀತಿಯನ್ನು ಪ್ರತ್ಯೇಕವಾಗಿ ಪ್ರಕಟಿಸಲಾಗುವುದು.

### ಬಂಡವಾಳ ಮತ್ತು ವ್ಯಾಪಾರಕ್ಕೆ ಉತ್ತೇಜನ:

ರಾಜ್ಯಕ್ಕೆ ಬಂಡವಾಳವನ್ನು ಆಕರ್ಷಿಸಲು ರಾಜ್ಯ/ರಾಷ್ಟ್ರ/ಅಂತಾರಾಷ್ಟ್ರೀಯ ಮಟ್ಟಗಳಲ್ಲಿ ಹೂಡಿಕೆದಾರರ ಸಮಾವೇಶಗಳು ಮತ್ತು ಪ್ರದರ್ಶನಗಳನ್ನು ಆಗಾಗ್ಗೆ ಏರ್ಪಡಿಸಲಾಗುವುದು.ಇದೇ ರೀತಿ ರಾಜ್ಯದಿಂದ ವ್ಯಾಪಾರವನ್ನು ಉತ್ತೇಜಿಸಲು ವ್ಯಾಪಾರವನ್ನು ಉತ್ತೇಜಿಸಲು ವ್ಯಾಪಾರ ಮೇಳಗಳು/ಖರೀದಿಗಾರರು / ಮಾರಾಟಗಾರರ ಮೇಳಗಳನ್ನು ರಾಜ್ಯ/ರಾಷ್ಟ್ರ/ಅಂತರರಾಷ್ಟ್ರೀಯ ಮಟ್ಟಗಳಲ್ಲಿ ಆಗಾಗ್ಗೆ ಏರ್ಪಡಿಸಲಾಗುವುದು. ಕೈಗಾರಿಕಾ ಅದಾಲತ್‌ಗಳನ್ನು ನಿಯಮಿತವಾಗಿ ನಡೆಸಲಾಗುವುದು.

### ಆ್ಯಂಕರ್ ಕೈಗಾರಿಕೆಗಳಿಗೆ ಉತ್ತೇಜನ

ಕನಿಷ್ಠ ೧೫೦ ಜನರಿಗೆ ಉದ್ಯೋಗ ಮತ್ತು ರೂ.೨೫೦ ಕೋಟಿಗಳನ್ನು ಮೀರಿದ ಬಂಡವಾಳಗಳ ಕೈಗಾರಿಕೆಗಳು ಇಲ್ಲದಂತಹ ತಾಲ್ಲೂಕುಗಳಲ್ಲಿ ಬಂಡವಾಳವನ್ನು ಉತ್ತೇಜಿಸಿ, ಬಂಡವಾಳ ಪ್ರೋತ್ಸಾಹ ಸಹಾಯಧನವನ್ನು ಉದ್ದೇಶಿಸಲಾಗಿದೆ. ಕನಿಷ್ಠ ೧೫೦ ಜನರಿಗೆ ನೇರ ಉದ್ಯೋಗ ಒದಗಿಸಿ, ರೂ.೨೫೦ ಕೋಟಿಗಳ ಕನಿಷ್ಠ ಬಂಡವಾಳ ಹೂಡುವ ಯಾವುದೇ ತಾಲ್ಲೂಕಿನ ಮೊಟ್ಟ ಮೊದಲ ಎರಡು ಉತ್ಪಾದನಾ ಸಂಸ್ಥೆಗಳನ್ನು ಆ್ಯಂಕರ್ ಕೈಗಾರಿಕೆಗಳೆಂದು ಕರೆಯಲಾಗುತ್ತದೆ. ಈ ಅರ್ಥವಿವರಣೆಯು ಪ್ರಸ್ತುತ ಯಾವುದೇ ಕೈಗಾರಿಕೆಯಿಲ್ಲದ ತಾಲ್ಲೂಕಿಗೆ ಅನ್ವಯಿಸುತ್ತದೆ.

ರಾಜ್ಯ ಸರ್ಕಾರವು ರಾಜ್ಯದೆಲ್ಲೆಡೆ ವ್ಯಾಪಿಸಿದಂತೆ ಕೈಗಾರಿಕೆಗಳನ್ನು ಹೂಡಿ ಸ್ಥಳೀಯ ಉದ್ಯೋಗಗಳನ್ನು ಕಲ್ಪಿಸಲು ಈ ನೀತಿಯ ಅವಧಿಯಲ್ಲಿ ಕನಿಷ್ಠ ೨೦ ತಾಲ್ಲೂಕುಗಳಲ್ಲಿ ಆ್ಯಂಕರ್ ಕೈಗಾರಿಕೆಗಳನ್ನು ಉತ್ತೇಜಿಸಲು ಉದ್ದೇಶಿಸಿದೆ. ಸಧ್ಯಕ್ಕೆ ರಾಜ್ಯದಲ್ಲಿ ಯಾವುದೇ ಆ್ಯಂಕರ್ ಕೈಗಾರಿಕೆಯಿಲ್ಲದ ೧೪೫ ತಾಲ್ಲೂಕುಗಳಿವೆ. ಆ್ಯಂಕರ್ ಕೈಗಾರಿಕೆಗಳು ಕೆಳಕಂಡತೆ ವಿಶೇಷ ಬಂಡವಾಳ ಸಹಾಧನಕ್ಕೆ ಅರ್ಹವಾಗುತ್ತವೆ.

ಆಸರೆಯುಕ್ತ ಘಟಕಗಳಿಗೆ ಹೆಚ್‌ಕೆ ವಲಯ–೧ ರಲ್ಲಿ ರೂ. ೨೦.೦೦ ಕೋಟಿಗಳ ಹಾಗೂ ಇತರೆ ಎಲ್ಲಾ ವಲಯಗಳಲ್ಲಿ ರೂ. ೧೫.೦೦ ಕೋಟಿಗಳ ಬಂಡವಾಳ ಸಹಾಯಧನವನ್ನು ಒದಗಿಸಲಾಗುವುದು. ಈ ಸಹಾಯಧನವು ಮೇಲೆ ಸೂಚಿಸಿರುವ ಗಾತ್ರದ ಕೈಗಾರಿಕಾ ಉದ್ಯಮಗಳು ಇಲ್ಲದಂತಹ ತಾಲ್ಲೂಕಿಗೆ ಮಾತ್ರ ಪ್ರಸ್ತುತವಾಗಿ ಅನ್ವಯಿಸುತ್ತದೆ. ಯಾವುದೇ ಆ್ಯಂಕರ್ ಘಟಕವು ರೂ.೧,೦೦೦ ಕೋಟಿಗಿಂತಲೂ ಅಧಿಕ ಬಂಡವಾಳ ಹೂಡಿದಲ್ಲಿ ಕೆಳಗಿನ ಹೆಚ್ಚುವರಿ ಪ್ರೋತ್ಸಾಹಕಗಳನ್ನು ನೀಡಲಾಗುವುದು.

ಎ) ವಾಣಿಜ್ಯ ಉತ್ಪಾದನೆ ಆರಂಭವಾಗುವ ದಿನಾಂಕದಿಂದ ೧೮ ವರ್ಷಗಳ ಅವಧಿಗೆ ಅರ್ಹ ಸ್ಥಿರಾಸ್ತಿಗಳ ಮೌಲ್ಯದ ಶೇ ೧೨೫ ಮೀರದಂತೆ ಶೇ ೧೦೦ ನಿವ್ವಳ ವ್ಯಾಟ್ ಮತ್ತು ಸಿಎಸ್‌ಟಿಯ ಸರಿಸಮನಾಗಿ ಬಡ್ಡಿರಹಿತ ಸಾಲವನ್ನು ಒದಗಿಸಲಾಗುವುದು.

ಮೊದಲನೆಯ ವರ್ಷ ಪಡೆದ ಸಾಲವನ್ನು ೧೧ನೆಯ ವರ್ಷದಲ್ಲೂ, ೨ನೆಯ ವರ್ಷದ್ದನ್ನು ೧೨ನೆಯ ವರ್ಷದಲ್ಲೂ ಮತ್ತು ಇದೇ ರೀತಿಯಾಗಿ ಮರುಪಾವತಿಸಬೇಕು.

ಬಿ) ಎಲ್ಲಾ ಪ್ರೋತ್ಸಾಹಗಳು ಮತ್ತು ವಿನಾಯಿತಿಗಳ ಪ್ರಮಾಣವು ಸ್ಥಿರಾಸ್ತಿಗಳ ಮೌಲ್ಯದ (ವಿಎಫ್‌ಎ) ಶೇ ೧೨೫ ಮೀರಕೂಡದು.

### ಬೃಹತ್, ಮೆಗಾ, ಅಲ್ಟ್ರಾಮೆಗಾ ಮತ್ತು ಸೂಪರ್ ಮೆಗಾ ಸಂಸ್ಥೆಗಳಿಗಾಗಿ ಪ್ರೋತ್ಸಾಹಕಗಳು ಮತ್ತು ವಿನಾಯಿತಿಗಳು:

ಬೃಹತ್, ಮೆಗಾ ಅಲ್ಟ್ರಾಮೆಗಾ ಮತ್ತು ಸೂಪರ್ ಮೆಗಾ ಸಂಸ್ಥೆಗಳ ವರ್ಗಗಳಡಿ ಕೈಗಾರಿಕೆಗಳ ಸ್ಥಾಪನೆಗಾಗಿ ಒದಗಿಸಲಾಗುವ ನಿಗಧಿತ ಪ್ರೋತ್ಸಾಹಕಗಳ ಮತ್ತು ವಿನಿಯಾಯಿತಿಗಳ ವಿವರಗಳು ಕೆಳಕಂಡಂತಿವೆ:

#### ಎ. ಸ್ಟ್ಯಾಂಪ್ ಡ್ಯೂಟಿಯಿಂದ ವಿನಾಯಿತಿ

(i) ಆರಂಭಿಕ ೫ ವರ್ಷಗಳಿಗಾಗಿ ಇಲಾಖೆಯಿಂದ ವ್ಯಾಟ್ ಲೋನ್ ಒಳಪಟ್ಟಂತೆ ಮತ್ತು / ಅಥವಾ ರಾಜ್ಯ ಹಣಕಾಸು ನಿಗಮ, ಕೈಗಾರಿಕಾ ಬಂಡವಾಳ ಅಭಿವೃದ್ಧಿ ನಿಗಮ, ರಾಷ್ಟ್ರೀಯ ಮಟ್ಟದ ಹಣಕಾಸು ಸಂಸ್ಥೆಗಳು, ವಾಣಿಜ್ಯಕ ಬ್ಯಾಂಕುಗಳು, ಆರ್‌ಆರ್‌ಬಿಗಳು, ಸಹಕಾರಿ ಬ್ಯಾಂಕುಗಳು ಮತ್ತು ಸಮಯ ಸಮಯಕ್ಕೆ ಸರ್ಕಾರ ಪ್ರಕಟಿಸುವ ಇತರೆ ಸಂಸ್ಥೆಗಳು ಹಾಗೂ

(ii) ಕೆಐಎಡಿಬಿ, ಕಿಯೋನಿಕ್ಸ್, ಕೆಎಸ್‌ಐಐಡಿಸಿ, ಕೈಗಾರಿಕಾ ಸಹಕಾರಿಗಳು ಮತ್ತು ಅನುಮೋದಿತ ಖಾಸಗಿ ಕೈಗಾರಿಕಾ ನಿವೇಶನಗಳಿಂದ ಕೈಗಾರಿಕಾ ನಿವೇಶನಗಳು–ಇವುಗಳಿಗೆ ಸಂಬಂಧಪಟ್ಟ ಸಾಲ ಒಪ್ಪಂದಗಳು, ಕ್ರೆಡಿಟ್ ಕಾಗದ ಪತ್ರಗಳು, ಗುತ್ತಿಗೆ ಮತ್ತು ಭೋಗ್ಯ ದಸ್ತಾವೇಜುಗಳು ಹಾಗೂ

(iii) ಖಾಸಗಿ ಕೈಗಾರಿಕಾ ಪ್ರದೇಶಗಳು/ ಪಾರ್ಕ್‌ಗಳ ಅಭಿವೃದ್ಧಿಗಾಗಿ ಖರೀದಿಸಲಾದ ಭೂಮಿಗೆ ಸಂಬಂಧಪಟ್ಟಂತೆ

ಡೆವಲಪರ್ ಸಹಿ ಹಾಕುವ ಲೀಸ್‌ಡೀಡ್‌ಗಳು ಲೀಸ್ ಮತ್ತು ಮಾರಾಟ ಹಾಗೂ ಸಂಪೂರ್ಣ ಮಾರಾಟದ ಕಾಗದ ಪತ್ರಗಳಿಗೆ ಸಂಬಂಧಪಟ್ಟಂತೆ ಸ್ಟ್ಯಾಂಪ್ ಶುಲ್ಕವನ್ನು ಕೆಳಕಂಡಂತೆ ಮನ್ನಾ ಮಾಡಲಾಗಿದೆ.

**ಹೈದರಾಬಾದ್–ಕರ್ನಾಟಕೇತರ ಪ್ರದೇಶ**

**ವಲಯ–೧** : ೧೦೦%
**ವಲಯ–೨** : ೧೦೦%
**ವಲಯ–೩** : ೭೫%
**ವಲಯ–೪** : ಇಲ್ಲ

**ಹೈದರಾಬಾದ್–ಕರ್ನಾಟಕೇತರ ಪ್ರದೇಶ**

**ಹೆಚ್ಕೆ ವಲಯ– ೧** : ೧೦೦%
**ಹೆಚ್ಕೆ ವಲಯ– ೨** : ೧೦೦%

**ಬಿ) ನೋಂದಣಿ ಶುಲ್ಕದಲ್ಲಿ ರಿಯಾಯಿತಿ :**

ಮೇಲೆ 'ಎ' ಯಲ್ಲಿ ನಿರ್ದಿಷ್ಟ ಪಡಿಸಿರುವ ಎಲ್ಲಾಸಾಲ ದಸ್ತೈವಜುಗಳು, ಗುತ್ತಿಗೆ ಕಾಗದಪತ್ರಗಳು ಮತ್ತು ಮಾರಾಟ ಕಾಗದ ಪತ್ರಗಳಿಗಾಗಿ ನೋಂದಣಿ ಶುಲ್ಕ ಪ್ರತಿ ರೂ.೧೦೦೦/–ಕ್ಕಾಗಿ ರೂ.೧/–ರ ರಿಯಾಯಿತಿ ದರದಲ್ಲಿರುತ್ತದೆ.

**ಟಿಪ್ಪಣಿ :**

(i) ಸ್ಟ್ಯಾಂಪ್ ಶುಲ್ಕದ ವಿನಾಯಿತಿ ಹಾಗೂ ರಿಯಾಯಿತಿಯಲ್ಲಿ ನೋಂದಣಿ ಶುಲ್ಕಗಳು, ಕೆಎಲ್‌ಆರ್ ಕಾಯ್ದೆಯ ಸೆಕ್ಷನ್ ೧೦೯ ರಡಿ ಖರೀದಿಸಲಾದ ಭೂಮಿ ಹಾಗೂ ಎಸ್‌ಎಲ್‌ಎಸ್‌ಡಬ್ಲ್ಯೂಸಿಸಿ/ ಡಿಎಲ್ ಎಸ್‌ಡಬ್ಲ್ಯೂಸಿಸಿ ಅನುಮೋದಿಸಿದ ಯೋಜನೆಗಳಿಗಾಗಿ ಕೈಗಾರಿಕವಾಗಿ ಪರಿವರ್ತಿತ ಭೂಮಿಯ ನೇರ ಖರೀದಿಗಾಗಿ ಸಹ ಅನ್ವಯಿಸುತ್ತದೆ. ಈ ಪ್ರೋತ್ಸಾಹಕವು ಸ್ವಾಧಿನಪಡಿಸಿಕೊಂಡ ಭೂಮಿಯ ನೇರ ಖರೀದಿಗಾಗಿ ಸಹ ಅನ್ವಯಿಸುತ್ತವೆ. ಈ ಪ್ರೋತ್ಸಾಹಕವು ಸ್ವಾಧೀನ ಪಡಿಸಿಕೊಂಡ ಭೂಮಿಯ ನಷ್ಟ ಪರಿಹಾರವಾಗಿ ಕೆಐಎಡಿಬಿ ಭೂಮಾಲೀಕರಿಗೆ ವರ್ಗಾಯಿಸುವ ಭೂಮಿಗೂ ಅನ್ವಯಿಸುತ್ತದೆ.

(ii) ಸ್ಟ್ಯಾಂಪ್ ಶುಲ್ಕದ ವಿನಾಯಿತಿ ಹಾಗೂ ರಿಯಾಯಿತಿಯಲ್ಲಿ ನೋಂದಣಿ ಶುಲ್ಕಗಳು, ಗುತ್ತಿಗೆ ಅವಧಿ ತೀರಿದ ನಂತರ ಭೂಮಿ, ಶೆಡ್‌ಗಳು, ಸೈಟ್‌ಗಳು, ಕೈಗಾರಿಕಾ ವಸಾಹತುಗಳಿಗೆ ಸಂಬಂಧಪಟ್ಟಂತೆ ಅಂತಿಮ ಮಾರಾಟ ಪತ್ರದ ನೋಂದಣಿಗೆ ಸಹ ಅನ್ವಯಿಸುತ್ತವೆ ಮತ್ತು ಈ ದರ ಗುತ್ತಿಗೆ ಹಾಗೂ ಮಾರಾಟ ಪತ್ರಕ್ಕೆ ಸಹಿ ಹಾಕುವ ಸಮಯದಲ್ಲಿ ಜಾರಿಯಲ್ಲಿದ್ದಂತೆ ಕೈಗಾರಿಕಾ ನೀತಿ ನಿರ್ದಿಷ್ಟಪಡಿಸಿರುವ ದರದಲ್ಲಿರುತ್ತದೆ.

**ಸಿ) ಭೂಪರಿವರ್ತನೆ ಶುಲ್ಕದ ಮರುಪಾವತಿ**

ಖಾಸಗಿ ಹೂಡಿಕೆದಾರರು ಕೈಗಾರಿಕಾ ಪ್ರದೇಶಗಳನ್ನು ಅಭಿವೃದ್ಧಿ ಪಡಿಸುವುದು ಒಳಪಟ್ಟಂತೆ, ಭೂಮಿಯನ್ನು ಕೃಷಿ ಬಳಕೆಯಿಂದ ಕೈಗಾರಿಕಾ ಬಳಕೆಗೆ ಪರಿವರ್ತಿಸಲು ಸೂಚಿತವಾಗಿರುವ ಭೂ ಪರಿವರ್ತನಾ ಶುಲ್ಕವನ್ನು ಕೆಳಗೆ ವಿವರಿಸಿರುವಂತೆ ಮರುಪಾವತಿ ಸಲಾಗುವುದು.

**೧) ಹೈದರಾಬಾದ್–ಕರ್ನಾಟಕ ಪ್ರದೇಶವನ್ನು ಹೊರತುಪಡಿಸಿ**

**ವಲಯ – ೧** : ೧೦೦%
**ವಲಯ – ೨** ; ೧೦೦%
**ವಲಯ – ೩** : ೭೫%
**ವಲಯ – ೪** : ಇಲ್ಲ

**೨) ಹೈದರಾಬಾದ್ ಕರ್ನಾಟಕ ಪ್ರದೇಶ**

**ಹೆಚ್ಕೆ ವಲಯ – ೧** : ೧೦೦%
**ಹೆಚ್ಕೆ ವಲಯ – ೨** : ೧೦೦%

**ಡಿ) ಪ್ರವೇಶ ತೆರಿಗೆಯಿಂದ ವಿನಾಯಿತಿ**

**ಬೃಹತ್, ಮೆಗಾ ಅಲ್ಟ್ರಾಮೆಗಾ ಮತ್ತು ಸೂಪರ್ ಮೆಗಾ ಸಂಸ್ಥೆಗಳು**

ವಲಯ–೧,೨,೩ ಮತ್ತು ಹೆಚ್ಕೆವಲಯ–೧ ಮತ್ತು ೨ ರಲ್ಲಿ ಬೃಹತ್ ಮತ್ತು ಮೆಗಾ ಉದ್ಯಮಗಳು ೩ ವರ್ಷಗಳ ಪ್ರಾರಂಭಿಕ ಅವಧಿಗಾಗಿ, ಅಲ್ಟ್ರಾಮೆಗಾ ಮತ್ತು ಸೂಪರ್ ಮೆಗಾ ಸಂಸ್ಥೆಗಳು ಯೋಜನಾ ಅನುಷ್ಠಾನದ ಆರಂಭಿಕ ದಿನಾಂಕದಿಂದ ೫ ವರ್ಷಗಳ ಅವಧಿಗಾಗಿ "ಸ್ಥಾವರ ಮತ್ತು ಯಂತ್ರೋಪಕರಣ ಮತ್ತುಬಂಡವಾಳ ಸಾಮಾಗಿಗಳನ್ನು ಕುರಿತ ಅರ್ಥ ವಿವರಣೆಯಲ್ಲಿ ಕ್ಯಾಪಿಟಲ್ ವಿದ್ಯುತ್ ಉತ್ಪಾದನೆಗೆ ಅಗತ್ಯವಾಗುವ ಯಂತ್ರೋಪಕರಣಗಳು ಒಳಪಟ್ಟಂತೆ ಸ್ಥಾವರ ಮತ್ತು ಯಂತ್ರೋಪಕರಣ, ಉಪಕರಣ ಇತ್ಯಾದಿ ಸಹ ಸೇರಿರುತ್ತದೆ.

ಕಚ್ಚಾ ಸಾಮಾಗ್ರಿಗಳು, ಉಪಕರಣಗಳು, ಬಿಡಿ ಭಾಗಗಳು ಮತ್ತು ಇತರ ಸಾಮಾಗ್ರಿಗಳು (ಪೆಟ್ರೋಲಿಯಂ ಉತ್ಪನ್ನಗಳನ್ನು ಹೊರತುಪಡಿಸಿ ಅನ್ವಯಿತವಾದೆಡೆ) ವಾಣಿಜ್ಯ ಉತ್ಪಾದನೆಯ ಆರಂಭ ದಿನಾಂಕದಿಂದ ೫ ವರ್ಷಗಳ ಅವಧಿಗಾಗಿ ವಿನಾಯಿತಿ ಇರುತ್ತದೆ. ಬೃಹತ್, ಮೆಗಾ, ಅಲ್ಟ್ರಾಮೆಗಾ ಮತ್ತು ಸೂಪರ್ ಮೆಗಾ ಸಂಸ್ಥೆಗಳಿಗೆ ಸಂಬಂಧಪಟ್ಟಂತೆ, ಕಾರ್ಯಚರಣೆಯ ಅವಧಿಗಾಗಿ ೧, ೨ ಮತ್ತು ೩ ವರ್ಷಗಳ ಹೆಚ್ಚುವರಿ ಅವಧಿಯನ್ನು ಅನುಕ್ರಮವಾಗಿ ಅನುಮತಿಸಲಾಗುವುದು.

**ಇ) ಇಟಿಪಿಗಳನ್ನು ಸ್ಥಾಪಿಸಲು ಸಹಾಯಧನ**

**ಬೃಹತ್, ಮೆಗಾ ಅಲ್ಟ್ರಾಮೆಗಾ ಮತ್ತು ಸೂಪರ್ ಮೆಗಾ ಸಂಸ್ಥೆಗಳು ಹಾಗೂ ಖಾಸಗಿ ಕೈಗಾರಿಕಾ ಪ್ರದೇಶ ಲೇಔಟ್‌ಗಳಿಗಾಗಿ (ಸಿಇಟಿಪಿ) :**

ಹೆಚ್ಕೆ ವಲಯ–೧ ಮತ್ತು ೨, ಇತರ ವಲಯಗಳು ೧, ೨ ಮತ್ತು ೩ ಕ್ಕೆ ಸಂಬಂಧಪಟ್ಟಂತೆ ರೂ.೨.೦೦ ಕೋಟಿಗಳ ಮತ್ತು ವಲಯ–೪ಕ್ಕಾಗಿ ರೂ.೧.೦೦ ಕೋಟಿಗಳ ಪರಿಮಿತಿಗೆ ಒಳಪಟ್ಟಂತೆ ಇಟಿಪಿ ವೆಚ್ಚದ ಏಕಕಾಲದ ಬಂಡವಾಳ ಸಹಾಯಧನ.

**ಎಫ್) ಬೃಹತ್, ಮೆಗಾ, ಅಲ್ಟ್ರಾಮೆಗಾ ಮತ್ತು ಸೂಪರ್ ಮೆಗಾ ಸಂಸ್ಥೆಗಳಿಗಾಗಿ ಅನುದಾನ ಕೊಡಲಾಗುವ ನಿವ್ವಳ ವ್ಯಾಟ್ ಮತ್ತು ಸಿಎಸ್‌ಟಿಯಯ ಮರುಪಾವತಿ**

ವಲಯ–೧,೨,೩ ಮತ್ತು ಹೆಚ್ಕೆ ವಲಯ–೧ ಮತ್ತು ೨ ರಲ್ಲಿ ಸ್ಥಾಪಿಸಲಾಗುವ ಎಲ್ಲಾ ಬೃಹತ್, ಮೆಗಾ, ಅಲ್ಟ್ರಾಮೆಗಾ, ಸೂಪರ್ ಮೆಗಾ ಸಂಸ್ಥೆಗಳಿಗೆ, ನೇರ ಉದ್ಯೋಗ ಒದಗಿಸುವ ಕನಿಷ್ಠ ಸಂಖ್ಯೆಯ ಆಧಾರದ ಮೇಲೆ ನಿವ್ವಳ ರಿಯಾಯಿತಿ ಮತ್ತು ಸಿಎಸ್‌ಟಿಯನ್ನು ಅನುದಾನವಾಗಿ ಮರುಪಾವತಿ ಮಾಡಲಾಗುವುದು.

## ಪ್ರಮುಖ ಒತ್ತಾಸೆಯ ಕೈಗಾರಿಕೆಗಳು

### ಏರೋಸ್ಪೇಸ್ ವಲಯ:

ಏರೋಸ್ಪೇಸ್ ವಲಯದಲ್ಲಿ ಅನೇಕ ಪ್ರಮುಖ ಬಹುರಾಷ್ಟ್ರೀಯ ಸಂಸ್ಥೆಗಳು ಮತ್ತು ಪಿಎಸ್‌ಯುಗಳ ಅಸ್ತಿತ್ವ ಹಾಗೂ ಉತ್ತಮ ಪರಿಸರ ವ್ಯವಸ್ಥೆಯಿಂದಾಗಿ ರಾಜ್ಯವು ಈ ವಲುಯದಲ್ಲಿ ವಿಶ್ವಾಸಾರ್ಹ ಜಾಗತಿಕ ತಾಣವಾಗಿ ಹೊರಹೊಮ್ಮುತ್ತಿದೆ. ಈ ವಲಯದ ಬೆಳವಣಿಗೆಗೆ ಮತ್ತಷ್ಟು ಇಂಬು ನೀಡಲು ಕರ್ನಾಟಕವು, ಕರ್ನಾಟಕ ಏರೋಸ್ಪೇಸ್ ಪಾಲಿಸಿ ೨೦೧೩-೨೩ ಯನ್ನು ಪ್ರತ್ಯೇಕ ನೀತಿ ಕ್ರಮಗಳು ಮತ್ತು ಹೆಚ್ಚಿನ ಪ್ರೋತ್ಸಾಹಗಳು ಹಾಗೂ ರಿಯಾಯಿತಿಗಳೊಂದಿಗೆ ಈ ನೀತಿಯಲ್ಲಿ ಮೊದಲ ೫ ವರ್ಷಗಳಲ್ಲಿ ರೂ.೨೪,೦೦೦ ಕೋಟಿ ಬಂಡವಾಳವನ್ನು ಆಕರ್ಷಿಸುವ ನಿರೀಕ್ಷೆಯಿದೆ.

ಅಗತ್ಯಾನುಸಾರವಾಗಿ ಪ್ರೋತ್ಸಾಹಗಳನ್ನು ನೀಡುವುದರ ಮೂಲಕ ಕನಿಷ್ಠ ೨ ಒಇಎಂ ಆ್ಯಂಕರ್ ಘಟಕಗಳನ್ನು ಆಕರ್ಷಿಸಲು ಪ್ರಯತ್ನಿಸಲಗುವುದು. ಏರೋಸ್ಪೇಸ್ ವಲಯದ ಕೈಗಾರಿಕೆಗಳು ಹೂಡುವ ಇತರ ಎಲ್ಲಾ ಬಂಡವಾಳಗಳು, ಏರೋಸ್ಪೇಸ್ ನೀತಿ ೨೦೧೩-೨೩ಗೆ ಒಳಪಟ್ಟಿರುತ್ತವೆ.

### ಆಟೋಮೋಟಿವ್ ವಲಯ

ರಾಜುವು ಟಾಟಾ ಮೋಟಾರ್ಸ್, ಟಿವಿಎಸ್ ಮೋಟಾರ್ಸ್, ಟೊಯೋಟಾ, ವೋಲ್ವೋ, ಹೋಂಡಾ, ಸ್ಕ್ಯಾನಿಯಾ ಇಂಡಿಯಾ, ಎಲ್ ಅಂಡ್ ಟಿ ಕೊಮಾಟ್ಸು, ಟಾಟಾ ಹಿಟಾಚಿ, ಟಾಟಾ ಮಾರ್ಕೋಪೋಲೋ ಮುಂತಾದ ಪ್ರಮುಖ ವಾಹನ ತಯಾರಕ ಉದ್ಯಮಗಳಿಗೆ ಆಸರೆ ನೀಡಿದೆ. ಹೀರೋ ಮೋಟೋಕಾರ್ಪ್, ಟ್ರಯಂಫ್ ಮುಂತಾದ ಇತರ ಪ್ರಮುಖ ವಾಹನ ತಯಾರಕರು ಸಹ ರಾಜ್ಯದ ಬಗ್ಗೆ ತೀವ್ರ ಆಸಕ್ತಿಯನ್ನು ತೋರಿಸಿವೆ. ಈ ವಲಯ ಕಲ್ಪಿಸಬಹುದಾದ ಬೃಹತ್ ಉದ್ಯೋಗವಕಾಶಗಳು ಹಾಗೂ ಸಂಬಂಧಪಟ್ಟ ಉಪ ಕೈಗಾರಿಕೆಗಳ ಪರಿಣಾಮಕಾರಿ ಸ್ಥಾಪನೆಯನ್ನು ಪರಿಗಣಿಸಿ, ಹೆಚ್ಚುವರಿ ಬಂಡವಾಳಗಳನ್ನು ಆಕರ್ಷಿಸುವಂತಹ ಒಂದು ಸೂಕ್ತ ವಾತಾವರಣವನ್ನು ಕಲ್ಪಿಸಲು ಉದ್ದೇಶಿಸಲಾಗಿದೆ.

- ರಾಜ್ಯದಲ್ಲಿ ವಾಹನ ವಲಯಕ್ಕಾಗಿ ಆರ್ ಅಂಡ್ ಡಿ ಪ್ರಯತ್ನಗಳನ್ನು ಪ್ರೇರೇಪಿಸಿ ಸಾಂಸ್ಥಿಕಗೊಳಸುವುದು.
- ಸಂಶೋಧನೆಗಾಗಿ ಕೈಗಾರಿಕೆ ಮತ್ತು ತಜ್ಞರ ನಡುವೆ ಸಂಪರ್ಕವನ್ನು ಬೆಂಬಲಿಸಿ ಪೋಷಿಸುವುದು.
- ರಾಜ್ಯದಲ್ಲಿ ಕರ್ನಾಟಕ ವಾಹನ ಸಂಶೋಧನೆ ಮತ್ತು ನವೀನತೆ ಕೇಂದ್ರವನ್ನು ಕಾರ್ಯಾರಂಭ ಮಾಡಲು ಉದ್ದೇಶಿಸಲಾಗಿದೆ ಪಿಪಿಪಿ ಮಾದರಿಯಲ್ಲಿ ಸ್ಥಾಪಿಸಲಾಗುವುದು.
- ರಾಜ್ಯದಲ್ಲಿ ವಾಹನ ಬಿಡಿ ಭಾಗಗಳ ಬೆಳವಣಿಗೆಗಾಗಿ ಕ್ರಮಗಳನ್ನು ಅಧ್ಯಯನ ಮಾಡಿ ಶಿಫಾರಸ್ಸು ಮಾಡಲು ಒಂದು ಕೈಗಾರಿಕಾ ಗುಂಪಿನ ಸ್ಥಾಪನೆ.
- ವಾಯು ಮಾಲಿನ್ಯವನ್ನು ಕಡಿಮೆ ಮಾಡಿ ಹಸಿರು ಹೈಬ್ರಿಡ್ ಮತ್ತು ಎಲೆಕ್ಟ್ರಿಕಲ್ ವಾಹನಗಳ ತಯಾರಿಕೆಯನ್ನು ಉತ್ತೇಜಿಸುವ ಗುರಿಯಿಂದ ಪರೋಕ್ಷ ಪ್ರೋತ್ಸಾಹಗಳಾಗಿ ರಸ್ತೆ ತೆರಿಗೆ, ನೋಂದಣಿ ತೆರಿಗೆಗಳನ್ನು ಕಡಿಮೆ ಮಾಡಲು ಉದ್ದೇಶಿಸಲಾಗಿದೆ.

### ಮಷಿನ್ ಟೂಲ್ ವಲಯ

ಮಷಿನ್ ಟೂಲ್ ವಲಯವು ರಾಜ್ಯದಲ್ಲಿ ವಿವಿಧ ಕೈಗಾರಿಕೆಗಳ ಉತ್ಪಾದನಾ ಕಾರ್ಯಾಚರಣೆಗಳಿಗಾಗಿ ಬೆನ್ನೆಲುಬಾಗಿದೆ ಮತ್ತು ಎಂಎಸ್‌ಎಂಇಗಳ ದೊಡ್ಡ ನೆಲೆಯನ್ನು ಆಧಾರವಾಗಿ ಹೊಂದಿದೆ. ಮಷಿನ್ ಟೂಲ್ ವಲಯವು ಆಟೋಮೋಟಿವ್, ಏರೋಸ್ಪೇಸ್ ಮತ್ತು ರಕ್ಷಣೆ, ಜವಳಿ, ಭಾರಿ ಎಂಜಿನಿಯರಿಂಗ್ ಮತ್ತು ಉಕ್ಕು ಮುಂತಾದ ಕೈಗಾರಿಕೆಗಳಿಗೆ ಬೆಂಬಲ ನೀಡುತ್ತದೆ.

ಬೆಂಗಳೂರು ಪ್ರದೇಶವೊಂದೇ ರೂ.೨,೧೬೦ ಕೋಟಿಗಳ ಮೌಲ್ಯದ ಭಾರತೀಯ ಮಷಿನ್ ಟೂಲ್‌ಗಳ ಕ್ಷೇತ್ರದಲ್ಲಿ ಮಹತ್ತರ ಪಾತ್ರ ವಹಿಸಿದೆ.

ಈ ವಲಯದಲ್ಲಿ ಮುಂದಾಳತ್ವವನ್ನು ಉಳಿಸಿಕೊಳ್ಳಲು ಕೆಳಗಿನ ಕ್ರಮಗಳನ್ನು ಉದ್ದೇಶಿಸಲಾಗಿದೆ.

i) ಕೆಐಎಡಿಬಿ ಅಥವಾ ಪಿಪಿಪಿ ನಮೂನೆಯ ಮೂಲಕ ರಾಜ್ಯದಲ್ಲಿ ಒಂದು ವಿಶಿಷ್ಟ ಮಷಿನ್ ಟೂಲ್ ಪಾರ್ಕ್‌ನ ಸ್ಥಾಪನೆಯನ್ನು ಪ್ರೋತ್ಸಾಹಿಸುವುದು.

ii) ಪಿಪಿಪಿ ನಮೂನೆಯಡಿ ಕೈಗಾರಿಕೆಯ ಸಹಯೋಗದೊಂದಿಗೆ ರಾಜ್ಯದಲ್ಲಿ ಮಷಿನ್ ಟೂಲ್ ಕೇಂದ್ರೀಕೃತ ತಂತ್ರಜ್ಞಾನ ಇನ್‌ಕ್ಯೂಬೇಷನ್ ಸೆಂಟರ್‌ನ್ನು ಸ್ಥಾಪಿಸಲು ಉದ್ದೇಶಿಸಲಾಗಿದೆ.

iii) ಕರ್ನಾಟಕದ ಕುಶಲ ಅಭಿವೃದ್ಧಿ ನಿಗಮವು ಮಷಿನ್ ಟೂಲ್ಸ್ ಕೈಗಾರಿಕೆಯಲ್ಲಿ ಉದ್ಯೋಗಕ್ಕಾಗಿ ಸೂಕ್ತ ವಿಶೇಷ ಪಠ್ಯಕ್ರಮಗಳನ್ನು ಒದಗಿಸುತ್ತದೆ.

iv) ಪಿಪಿಪಿ ನಮೂನೆಯಲ್ಲಿ ಪ್ರಸಕ್ತ ಟೂಲ್ ರೂಂಗಳ ಆಧುನೀಕರಣ ಮತ್ತು ಹೊಸ ಟೂಲ್‌ರೂಂಗಳ ಸ್ಥಾಪನೆಯ ಸಾಧ್ಯತೆಯನ್ನು ಸಹ ಪರಿಶೀಲಿಸಲಾಗುವುದು.

## ಕರಕುಶಲ ಕಲೆಗಳು

ವಂಶಪಾರಂಪರ್ಯವಾಗಿ ಮೈಗೂಡಿಸಿ ಕೊಂಡಿರುವ ಸಾಂಪ್ರದಾಯಕ ಕಲೆ ಮತ್ತು ಉದ್ಯಮಗಳನ್ನು ಹೊಂದಿರುವ ಕರ್ನಾಟಕವು ಕರಕುಶಲ ಕೈಗಾರಿಕೆಯಲ್ಲಿ ಪ್ರಾಮುಖ್ಯತೆಯನ್ನು ಪಡೆದಿರುವ ರಾಜ್ಯಗಳ ಪೈಕಿ ಒಂದಾಗಿದೆ. ಮೆರಗು ಲೇಪನ ವಸ್ತುಗಳು (ಲ್ಯಾಕರ್ ವೇರ್), ಗಂಧದ ತುಂಡಿನ ಕೆತ್ತನೆ, ಬೀಟೆ ಮರದ ಕೆತ್ತನೆಗೆ ದಂತದ ಮೆರಗು ನೀಡುವುದು, ಬೆಂಡಿನ ಕುಸರಿ ಕಲೆ, ಅಲಂಕಾರಿಕ ಮಣ್ಣಿನ ಕುಶಲಕಲೆ, ಕಂಚಿನ ಉದ್ಯಮ, ಬೆತ್ತ ಮತ್ತು ಬಿದಿರಿನ ಉದ್ಯಮ, ಚರ್ಮದ ಉದ್ಯಮ, ಕಲ್ಲಿನ ಮತ್ತು ಲೋಹದ ವಿಗ್ರಹಗಳು, ಚಿನ್ನ ಮತ್ತು ಬೆಳ್ಳಿ ಒಡವೆಗಳು, ರೇಷ್ಮೆ ಜರತಾರಿ ನೇಯ್ಗೆ, ಕೊಂಬಿನ ಕೆತ್ತನೆ ಮೊದಲಾದ ಕರಕುಶಲ ವಸ್ತುಗಳ ತಯಾರಿಕೆಗೆ ರಾಜ್ಯವು ಹೆಸರುವಾಸಿಯಾಗಿರುವುದು. ರಾಜ್ಯದಲ್ಲಿ ಸುಮಾರು ೧೦೦೦ ಪರಿಣಿತ ಕುಶಲಕರ್ಮಿಗಳನ್ನು

ಗುರುತಿಸಲಾಗಿದೆ ಮತ್ತು ಕರಕುಶಲ ಅಭಿವೃದ್ಧಿ ನಿಗಮವು ಪ್ರತಿಶತ ೬೦ರಷ್ಟನ್ನು ಸಂಪರ್ಕಿಸಿ ತನ್ನ ಅಧೀನಕ್ಕೆ ತೆಗೆದುಕೊಂಡಿದೆ. ಇಲಾಖೆಯು ಕರಕುಶಲ ಕರ್ಮಿಗಳಿಗೆ ರಿಯಾಯಿತಿ ದರದಲ್ಲಿ ಕಚ್ಚಾ ಸರಕನ್ನೊದಗಿಸುವುದು, ಕುಶಲಕರ್ಮಿಗಳಿಗೆ ತರಬೇತಿ ನೀಡುವುದು, ವಿವಿಧ ಉದ್ಯಮಗಳಿಗೆ ತೀವ್ರ ಅಭಿವೃದ್ಧಿ ಯೋಜನೆಗಳನ್ನು ರೂಪಿಸುವುದು ಮೊದಲಾದ ಸಹಾಯವನ್ನು ನೀಡುತ್ತಿದೆ.

ನಿಗಮವು ಗಂಧದ ಮರ, ಬಿದಿರು, ಮೆರಗು ಮತ್ತು ಮೆರಗು ಲೇಪನ ವಸ್ತುಗಳಿಗೆ ಮಳಿಗೆಗಳನ್ನು ಸ್ಥಾಪಿಸಿದೆ. ಆರು ಕಚ್ಚಾ ಸರಕಿನ ಡಿಪೋಗಳು ಮತ್ತು ಒಂಬತ್ತು ಪ್ರದರ್ಶನ ಮತ್ತು ಮಾರಾಟ ಮಳಿಗೆಗಳನ್ನು ಸ್ಥಾಪಿಸಿರುವುದರ ಜೊತೆಗೆ ಬೆಂಗಳೂರಿನಲ್ಲಿ ಕಂಚಿನ ಉತ್ಪಾದನೆ ಮತ್ತು ವಿನ್ಯಾಸ ಕೇಂದ್ರ ಕಿನ್ನಾಲ್ ಬೊಂಬೆಗಳ ಸಂಗ್ರಹಣಾ ಕೇಂದ್ರವನ್ನು ಸ್ಥಾಪಿಸಿದೆ.

ಮಲ್ಟಿಕ್ರಾಫ್ಟ್ ಕಾಂಪ್ಲೆಕ್ಸ್, ಬೆಲವತ್ತ, ಮೈಸೂರು; ಸ್ಯಾಂಡಲ್‌ವುಡ್ ಕ್ರಾಫ್ಟ್ ಕಾಂಪ್ಲೆಕ್ಸ್, ಸಾಗರ (ಶಿವಮೊಗ್ಗ); ಸಿರಸಿ ಹಾಗೂ ಕುಮಟ(ಉತ್ತರಕನ್ನಡ); ಸೊರಬ(ಶಿವಮೊಗ್ಗ); ಬಿದರಿವೇರ್ ಕ್ರಾಫ್ಟ್ ಕಾಂಪ್ಲೆಕ್ಸ್ (ಬೀದರ್); ವ್ಯಾಕರ್‌ವೇರ್ ಕ್ರಾಫ್ಟ್, ಕಾಂಪ್ಲೆಕ್ಸ್, ಚನ್ನಪಟ್ಟಣ (ರಾಮನಗರ); ಬ್ರಾಂಜ್ ಕ್ರಾಫ್ಟ್ ಕಾಂಪ್ಲೆಕ್ಸ್ ಪೀಣ್ಯ (ಬೆಂಗಳೂರು); ಪಾಟರಿ ಕ್ರಾಫ್ಟ್ ಕಾಂಪ್ಲೆಕ್ಸ್, ರಾಮನಗರ, ಪೈಲ್ ಕಾರ್ಪೆಟ್ ಸೆಂಟರ್ ಮುಂಡಗೋಡ್ (ಉತ್ತರಕನ್ನಡ); ರೂರಲ್ ಮಾರ್ಕೆಟಿಂಗ್ ಅಂಡ್ ಸರ್ವಿಸ್ ಸೆಂಟರ್, ನವಲಗುಂದ (ಧಾರವಾಡ ಜಿಲ್ಲೆ); ರೂರಲ್ ಮಾರ್ಕೆಟಿಂಗ್ ಅಂಡ್ ಸರ್ವಿಸ್ ಸೆಂಟರ್ ಶಿವಾರಪಟ್ಟಣ (ಕೋಲಾರ ಜಿಲ್ಲೆ); ಕಿನ್ನಾಳ ಪ್ರೋಕ್ಯೂರ್‌ಮೆಂಟ್ ಸೆಂಟರ್, ಕಿನ್ನಾಳ (ಕೊಪ್ಪಳ ಜಿಲ್ಲೆ); ಮೊದಲಾದ ಕರಕುಶಲ ಸಂಗ್ರಹಣಾ ಸಂಕೀರ್ಣಗಳು ಕರ್ನಾಟಕದಲ್ಲಿವೆ.

ಸ್ಪೈನ್ ಮತ್ತು ಯು.ಕೆ. ಮಾರುಕಟ್ಟೆಗಳಲ್ಲಿ ಕರ್ನಾಟಕದ ಕರಕುಶಲ ವಸ್ತುಗಳನ್ನು ಪ್ರಚಾರ ಮಾಡುವ ಸಲುವಾಗಿ ದಿ: ೦೮-೦೯-೨೦೧೦ರಿಂದ ೧೨-೦೯-೨೦೧೦ರವರೆಗೆ ಸ್ಪೈನ್ ಮ್ಯಾಡ್ರಿಡ್‌ನಲ್ಲಿ ನಡೆದ ಇಂಟರ್ ಗಿಫ್ಟ್ ಫೇರ್‌ನಲ್ಲಿ ಹಾಗೂ ದಿ:೦೬-೦೨-೧೧ರಿಂದ ೧೦-೦೨-೧೧ರವರೆಗೆ ಯು.ಕೆ.ನ ಬರ್ಮಿಂಗ್‌ಹ್ಯಾಮ್‌ನಲ್ಲಿ ನಡೆದ ಅಂತರರಾಷ್ಟ್ರೀಯ ಸ್ಪ್ರಿಂಗ್ ಫೇರ್‌ನಲ್ಲಿ ನಿಗಮವು ಭಾಗವಹಿಸಿತ್ತು.

ಬೆಂಗಳೂರಿನಲ್ಲಿ ಮೂರು ಮತ್ತು ಮೈಸೂರಿನ ಜೆ.ಎಸ್. ಎಸ್. ಅರ್ಬನ್ ಹಾತ್‌ನಲ್ಲಿ ಒಂದು, ಒಟ್ಟು ನಾಲ್ಕು ಗಾಂಧಿ ಶಿಲ್ಪ ಬಜಾರ್ ವಸ್ತು ಪ್ರದರ್ಶನಗಳನ್ನು ಏರ್ಪಡಿಸಲಾಗಿತ್ತು. ಇದರಲ್ಲಿ ಭಾರತದಾದ್ಯಂತ ೧೫೦ ಕುಶಲಕರ್ಮಿಗಳು ಭಾವಹಿಸಿದ್ದರು.

ಕಲಾತ್ಮಕ ಫರ್ನೀಚರ್ ಮಳಿಗೆಯಲ್ಲಿ **"ಮಾರಾಟ ಒಪ್ಪಂದದ ಮೇರೆಗೆ"** (ಕನ್ಸೈನ್‌ಮೆಂಟ್ ಸೇಲ್) ಬೀಟೆ ಮರದ ಫರ್ನೀಚರ್ ಮಾರಾಟವನ್ನು ಪುನರಾರಂಭಿಸಲಾಗಿದೆ.

ರಾಜ್ಯದಲ್ಲಿ ವಿವಿಧ ಕಲೆಗಳ ಹೆಚ್ಚಿನ ಕುಶಲಕರ್ಮಿಗಳ ಸಾಂದ್ರತೆಯಿರುವೆಡೆಗಳಲ್ಲಿ ನಿಗಮವು ಕಲಾ ಸಂಕೀರ್ಣಗಳನ್ನು ಸ್ಥಾಪಿಸಿದೆ. ಪ್ರತ್ಯಕ್ಷ ಹಾಗೂ ಪರೋಕ್ಷ ಸಹಕಾರಗಳಾದ ತಾಂತ್ರಿಕ ಸಹಾಯ, ತರಬೇತಿ, ಕಚ್ಚಾವಸ್ತುಗಳ ಪೂರೈಕೆ, ಸಾಧನ ಸಲಕರಣೆಗಳ ಪೂರೈಕೆಗಳೇ ಅಲ್ಲದೆ ಮಾರುಕಟ್ಟೆ ಸಹಾಯವನ್ನೂ ಸಹ ನಿಗಮವು ಇಂತಹ ಕಲಾ ಸಂಕೀರ್ಣಗಳ ಮೂಲಕ ಕುಶಲಕರ್ಮಿಗಳಿಗೆ ಒದಗಿಸಿದೆ. ಮೈಸೂರಿನ ಎಂ.ಸಿ.ಸಿಯಲ್ಲಿ **'ಕುಶಲಕಲಾ ಗ್ರಾಮ'** (ವಿಲೇಜ್ ಕ್ರಾಫ್ಟ್ ಕಾಂಪ್ಲೆಕ್ಸ್) ಸ್ಥಾಪಿಸಲು ಸಿವಿಲ್ ವರ್ಕ್ ಆರಂಭವಾಗಿದೆ.

ಸರ್ಕಾರದ ಗುರುಕುಲ ಯೋಜನೆಯಡಿ ಸಾಗರದ ಶ್ರೀಗಂಧದ ಕಲಾ ಸಂಕೀರ್ಣದಲ್ಲಿ ಮರ ಹಾಗೂ ಲೋಹ ಕಲೆಗಳಲ್ಲಿ ಡಿಪ್ಲೋಮಾ ತರಗತಿಯನ್ನು ಪ್ರಾರಂಭಿಸಲಾಗಿದ್ದು, ೨೧ ವಿದ್ಯಾರ್ಥಿಗಳು ನೋಂದಾಯಿಸಿಕೊಂಡಿದ್ದಾರೆ. ಇದು ಸರ್ಕಾರದ ಉಚಿತ ಶಿಕ್ಷಣ ಯೋಜನೆಯಾಗಿದೆ.

## ನಾರಿನ ಕೈಗಾರಿಕೆಗಳು

ಕರ್ನಾಟಕವು ತೆಂಗು ಉತ್ಪಾದನೆಯಲ್ಲಿ ಎರಡನೆಯ ಸ್ಥಾನವನ್ನು ಪಡೆದಿರುವುದರ ಜೊತೆಗೆ ನಾರಿನ ಕೈಗಾರಿಕೆಗೆ ಬೇಕಾಗುವ ಎಲ್ಲಾ ಕಚ್ಚಾ ಸರಕುಗಳ ಜೊತೆಗೆ ಮೂಲಭೂತ ಸೌಕರ್ಯಗಳನ್ನು ಹೊಂದಿದೆ. ರಾಜ್ಯ ಸರ್ಕಾರವು ನಾರು ಆಧಾರಿತ ಕೈಗಾರಿಕೆಗಳನ್ನು ಪ್ರವರ್ಧಿಸಲು ಮತ್ತು ಗ್ರಾಮಾಂತರ ಪ್ರದೇಶದ ಜನರಿಗೆ ಉದ್ಯೋಗಾವಕಾಶ ದೊರಕುವಂತೆ ಮಾಡುವುದರ ಜೊತೆಗೆ ಸಂಗ್ರಹಣೆ ಮತ್ತು ವಿತರಣೆ ಹಾಗೂ ತರಬೇತಿ ಕೇಂದ್ರಗಳ ಸೌಲಭ್ಯವನ್ನೊದಗಿಸುವುದಕ್ಕಾಗಿ ನಾರಿನ ಅಭಿವೃದ್ಧಿ ನಿಗಮವನ್ನು ಸ್ಥಾಪಿಸಿದೆ.

## ಅಖಂಡ ನಾರಿನ ಅಭಿವೃದ್ಧಿ ಯೋಜನೆ

ಕರ್ನಾಟಕ ರಾಜ್ಯ ನಾರಿನ ಸಹಕಾರಿ ಒಕ್ಕೂಟ ನಿಯಮಿತ, ಪ್ರಾಥಮಿಕ ನಾರಿನ ಸಹಕಾರ ಸಂಘಗಳು ಮತ್ತು ಕರ್ನಾಟಕ ರಾಜ್ಯ ನಾರಿನ ಅಭಿವೃದ್ಧಿ ನಿಗಮ ಇವುಗಳ ಮೂಲಕ ನಾಲ್ಕು ಪ್ರಾಥಮಿಕ ನಾರಿನ ಸಹಕಾರ ಸಂಘಗಳಿಗೆ ಮತ್ತು ೧೮ ಮಾನವ ಸಂಪನ್ಮೂಲ ಅಭಿವೃದ್ಧಿ ಯೋಜನೆಗಳಿಗಾಗಿ ರೂ. ೨೦೦ ಲಕ್ಷ ನೀಡಲಾಗಿದ್ದು, ಅದರಲ್ಲಿ ರೂ.೧೦೦ಲಕ್ಷ ಅನುದಾನ ರೂಪದಲ್ಲೂ ಮತ್ತು ರೂ.೧೦೦ ಲಕ್ಷ ಬಂಡವಾಳ ಹೂಡಿಕೆ ರೂಪದಲ್ಲೂ ನೀಡಲಾಗಿದೆ. ಬೀದರ್ ಮತ್ತು ಶಿವಮೊಗ್ಗಗಳಲ್ಲಿ ಹೊಸ ಸಾಧನ ಕೊಠಡಿಗಳನ್ನು ತೆರೆಯಲು ರೂ. ನಾಲ್ಕು ಕೋಟಿಗಳನ್ನು ನೀಡಲಾಗಿದೆ.

## ಖಾದಿ ಮತ್ತು ಗ್ರಾಮೋದ್ಯೋಗ

೧೯೫೬ರ ಕರ್ನಾಟಕ ಖಾದಿ ಮತ್ತು ಗ್ರಾಮೋದ್ಯೋಗ ಕಾಯಿದೆಯ ಅನ್ವಯ ಕರ್ನಾಟಕ ರಾಜ್ಯ ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿಯನ್ನು ೧೯೫೭ರಲ್ಲಿ ಸ್ಥಾಪಿಸಲಾಯಿತು. ಕರ್ನಾಟಕದಲ್ಲಿನ ಖಾದಿ ಮತ್ತು ಗ್ರಾಮೋದ್ಯೋಗ ಚಟುವಟಿಕೆಗಳನ್ನು ಸಂಘಟಿಸುವುದು, ಅಭಿವೃದ್ಧಿ ಪಡಿಸುವುದು ಮತ್ತು ನಿಯಂತ್ರಣದಲ್ಲಿಡುವ ಉದ್ದೇಶದಿಂದ ಕರ್ನಾಟಕ ರಾಜ್ಯ ಸರ್ಕಾರ ಕರ್ನಾಟಕ ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿಯನ್ನು ಸ್ಥಾಪಿಸಿತು. ಗ್ರಾಮಾಂತರ ಪ್ರದೇಶದಲ್ಲಿ ಖಾದಿ ಮತ್ತು ಗ್ರಾಮೋದ್ಯೋಗಗಳಿಗೆ ಆದ್ಯತೆ ದೊರಕಿಸಿಕೊಡುವುದು, ಅವುಗಳ ಅಭಿವೃದ್ಧಿಗೆ ಸಹಾಯ ಹಸ್ತ ನೀಡುವುದು, ಗ್ರಾಮಾಂತರ ಪ್ರದೇಶದಲ್ಲಿ

ಉದ್ಯೋಗಾವಕಾಶವನ್ನು ಸೃಷ್ಟಿಸುವುದು ಮತ್ತು ಗ್ರಾಮಾಂತರ ಕುಶಲಕರ್ಮಿಗಳ ಆರ್ಥಿಕ ಮಟ್ಟವನ್ನು ಸುಧಾರಿಸುವುದು ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿಯ ಮುಖ್ಯ ಉದ್ದೇಶವಾಗಿದೆ.

ರಾಜ್ಯದ ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿಯು ಸುಮಾರು ಮೂರು ಲಕ್ಷ ಕಸಬುದಾರರಿಗೆ ಉದ್ಯೋಗವನ್ನೊದಗಿಸಿರುವುದರ ಜೊತೆಗೆ ಕರ್ನಾಟಕ ರಾಜ್ಯ ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿಯು ೧.೪ ಲಕ್ಷ ಕುಶಲಕರ್ಮಿಗಳಿಗೆ ಸೂಕ್ತ ಮಾರ್ಗದರ್ಶನ ನೀಡುತ್ತಿದೆ. ಮಂಡಳಿಯು ರಾಜ್ಯದಲ್ಲಿ ತನ್ನ ಸಂಪರ್ಕದಿಂದ ದೂರ ಉಳಿದಿದ್ದ ಪ್ರದೇಶಗಳಲ್ಲಿ ಹೊಸ ಸಂಸ್ಥೆಗಳನ್ನು ಸಂಘಟಿಸಲು ಪ್ರಾರಂಭಿಸಿರುವುದು. ಇದು ಗ್ರಾಮ ಕೈಗಾರಿಕೆಗಳಾದ ಬಡಗಿ ಕೆಲಸ, ತೈಲಗಾರಿಕೆ, ಕಮ್ಮಾರಿಕೆ, ಚಮ್ಮಾರಿಕೆ, ಸಾಬೂನು ತಯಾರಿಕೆ, ಚಾಪೆಹೆಣಿಕೆ ಮೊದಲಾದವುಗಳಿಗೆ ತನ್ನ ಸಹಾಯವನ್ನು ಹೆಚ್ಚಿಸಿದೆ. ರಾಜ್ಯದಲ್ಲಿ ಬಯೋಗ್ಯಾಸ್ ಸ್ಥಾವರಗಳ ಸ್ಥಾಪನೆಗೂ ಕೂಡ ಮುಂದೆ ಬಂದಿದೆ. ಖಾದಿ ವಲಯದಲ್ಲಿ ರಾಷ್ಟ್ರಧ್ವಜಗಳ ತಯಾರಿಕೆ ಮತ್ತು ಪ್ರಿಂಟೆಡ್ ಖಾದಿ ರೇಷ್ಮೆ ಸೀರೆಗಳ ತಯಾರಿಕೆಗೆ ಕರ್ನಾಟಕ ಪ್ರಸಿದ್ಧಿ ಹೊಂದಿದೆ.

ಕೃಷಿ ಆಧಾರಿತ ಕೈಗಾರಿಕೆಗಳಲ್ಲಿ ಜೇನು ಸಾಕಣೆ ಕೂಡ ಗಮನಾರ್ಹವಾಗಿರುವುದು. ಪಶ್ಚಿಮಘಟ್ಟ ಜಿಲ್ಲೆಗಳಾದ ಕೊಡಗು, ಹಾಸನ, ಚಿಕ್ಕಮಗಳೂರು ಮತ್ತು ಶಿವಮೊಗ್ಗಗಳಲ್ಲಿ ಅಧಿಕ ಪ್ರಮಾಣದಲ್ಲಿ ಜೇನು ತುಪ್ಪವನ್ನು ಉತ್ಪಾದಿಸಲಾಗುತ್ತಿದೆ.

### ಗ್ರಾಮಾಂತರ ಉದ್ಯೋಗ ಸೃಷ್ಟಿ ಯೋಜನೆಗಳು (ಮಾರ್ಜಿನ್ ಮನಿ ಸ್ಕೀಂ)

ಗ್ರಾಮಾಂತರ ಪ್ರದೇಶದ ಕುಶಲಕರ್ಮಿಗಳಿಗೆ ಹೆಚ್ಚಿನ ಉದ್ಯೋಗವಕಾಶವನ್ನು ದೊರಕಿಸಿಕೊಡುವುದಕ್ಕಾಗಿ ಭಾರತ ಸರ್ಕಾರ ಗ್ರಾಮಾಂತರ ಉದ್ಯೋಗ ಸೃಷ್ಟಿ ಯೋಜನೆಯನ್ನು ಆರಂಭಿಸಿತು. ಮಾರ್ಜಿನ್ ಮನಿಯನ್ನು ಖಾದಿ ಮತ್ತು ಗ್ರಾಮೋದ್ಯೋಗ ಆಯೋಗ/ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿಗಳು ಗುರುತಿಸಿದ ಉದ್ಯೋಗ ಘಟಕಗಳಿಗೆ ನೀಡಲಾಗುವುದು. ಮಾರ್ಜಿನ್ ಮನಿಯನ್ನು ಉದ್ದಿಮೆದಾರರ ಸಾಲದ ಬಾಕಿಗೆ ಸರಿದೂಗಿಸಬೇಕಾದರೆ ಉದ್ದಿಮೆದಾರರು ಸ್ಥಾಪಿಸಿದ ಉದ್ದಿಮೆಯು ಯಶಸ್ವಿಯಾಗಿ ಎರಡು ವರ್ಷ ಕಾರ್ಯನಿರ್ವಹಿಸಿದರೆ ಮಾತ್ರ ಸಾಧ್ಯವಾಗುವುದು.

### ಈ ಯೋಜನೆಯನ್ವಯ

೧) ಇದು ಗ್ರಾಮೀಣ ಕೈಗಾರಿಕೆಗಳಿಗೆ ಮಾತ್ರ ಅನ್ವಯವಾಗುವುದು. ಗ್ರಾಮೀಣ ಕೈಗಾರಿಕೆಗಳ ವ್ಯಾಪ್ತಿಗೊಳಪಡದ ಕೈಗಾರಿಕೆಗಳಿಗೆ ಇದು ಅನ್ವಯವಾಗುವುದಿಲ್ಲ.

೨) ಮಾರ್ಜಿನ್ ಮನಿ ಯೋಜನೆಯ ಸೌಲಭ್ಯವು ಖಾದಿ, ಪಾಲಿವಸ್ತ್ರ, ಉಣ್ಣೆ ಮತ್ತು ರೇಷ್ಮೆ ಕೈಗಾರಿಕೆಗಳಿಗೆ ದೊರಕುವುದಿಲ್ಲ.

೩) ಯೋಜನೆಗಳಿಗೆ ನೀಡಲಾಗುವ ಸಾಲ ಸೌಲಭ್ಯವನ್ನು ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿಯಿಂದ ಅನುಮೋದನೆ ಪಡೆದ ಆಯ್ದ ರಾಷ್ಟ್ರೀಕೃತ ಬ್ಯಾಂಕುಗಳು, ಖಾಸಗಿ ಷೆಡ್ಯೂಲ್ಡ್ ಬ್ಯಾಂಕುಗಳು, ಗ್ರಾಮೀಣ ಬ್ಯಾಂಕುಗಳು ಮತ್ತು ಸಹಕಾರಿ ಬ್ಯಾಂಕುಗಳ ಮೂಲಕ ಒದಗಿಸಲಾಗುವುದು.

೪) ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿಯು ೬೯ ಬ್ಯಾಂಕುಗಳನ್ನು ಈ ಯೋಜನೆಗೆ ಗುರುತಿಸಿದೆ.

### ವಿಶ್ವ ಯೋಜನೆ

ಸಾಂಪ್ರದಾಯ ಉದ್ದಿಮೆಗಳು ಮತ್ತು ಗ್ರಾಮ ಕೈಗಾರಿಕೆಗಳಿಗೆ ಪುನಃಶ್ಚೇತನ ನೀಡುವುದು ಮತ್ತು ನಿರುದ್ಯೋಗಿ ಯುವಕರಿಗೆ ಸ್ಥಳೀಯವಾಗಿ ದೊರಕುವ ಕಚ್ಚಾ ಸರಕನ್ನು ಉಪಯೋಗಿಸಿಕೊಂಡು ಸ್ವಂತ ಉದ್ಯೋಗವನ್ನು ಪ್ರಾರಂಭಿಸಲು ಪ್ರೋತ್ಸಾಹಿಸುವುದಕ್ಕಾಗಿ ವಿಶ್ವ ಯೋಜನೆಯನ್ನು ಜಾರಿಗೊಳಿಸಲಾಗಿದೆ. ಸರ್.ಎಂ.ವಿಶ್ವೇಶ್ವರಯ್ಯನವರ ಜ್ಞಾಪಕಾರ್ಥವಾಗಿರುವ ಈ ಯೋಜನೆಯನ್ನು ಅಕ್ಟೋಬರ್-೨, ೧೯೯೧ರಲ್ಲಿ ಆರಂಭಿಸಲಾಯಿತು. ಕರ್ನಾಟಕದ ಗ್ರಾಮಾಂತರ ಪ್ರದೇಶದಲ್ಲಿನ ಕಸಬುದಾರರಿಗಿರುವ ಕಚ್ಚಾ ಸರಕಿನ ಅಭಾವ ಮತ್ತು ಮಾರುಕಟ್ಟೆಯ ಸೌಲಭ್ಯದ ಕೊರತೆಯಿಂದ ಹೊರತರುವುದಕ್ಕಾಗಿ ಈ ಯೋಜನೆಯನ್ನು ಜಾರಿಗೊಳಿಸಲಾಗಿದೆ. ಇದರಿಂದ ಸಾಂಪ್ರದಾಯಕ ಕಸುಬುದಾರರು ತಮಗೆ ಗೊತ್ತಿರುವ ಕಸುಬಿನಿಂದಲೇ ಮುಂದುವರಿಯಲು ಸಾಧ್ಯವಾಗಿದೆ. ಈ ಯೋಜನೆಯಡಿಯಲ್ಲಿ ಯುವಕರಿಗೆ ಕೈಗಾರಿಕಾ ಕಾರ್ಯಗಳಲ್ಲಿ ತೊಡಗಿಸಿಕೊಳ್ಳಲು ಅನುಕೂಲವಾಗುವಂತೆ ತರಬೇತಿ ನೀಡುವುದು ಮತ್ತು ಸ್ವಂತ ಉದ್ಯೋಗದಲ್ಲಿ ತೊಡಗಿಸಿಕೊಳ್ಳಲು ಹಣಕಾಸಿನ ನೆರವನ್ನೊದಗಿಸುವುದಕ್ಕಾಗಿ ಗ್ರಾಮಾಂತರ ಪ್ರದೇಶದ ಕೈಗಾರಿಕೆಗಳು ಮತ್ತು ಕಸುಬುಗಳಿಗೆ ಸಂಸ್ಥೆಗಳ ಸ್ಥಾನಮಾನವನ್ನು ನೀಡಲಾಗಿದೆ. ಈ ಯೋಜನೆಯಡಿಯಲ್ಲಿ ಸಂಘ/ಸಂಸ್ಥೆಗಳಿಗೆ, ತರಬೇತಿಗಾಗಿ, ಉತ್ಪಾದನಾ ಕೇಂದ್ರಗಳ ಸ್ಥಾಪನೆಗೆ ಹಾಗೂ ಪೂರಕ ಸೇವೆಗಳಾದ ಕಚ್ಚಾ ಸಾಮಗ್ರಿಗಳ ಸರಬರಾಜು ಮತ್ತು ಮಾರುಕಟ್ಟೆ ಅಭಿವೃದ್ಧಿಗೆ ಧನ ಸಹಾಯ ಒದಗಿಸಲಾಗುವುದು. ಡಿ.ಎಸ್.ಎಂ.ಎಸ್ ಮುಖಾಂತರ ಅಥವಾ ನಿಗಮ ಮತ್ತು ಮಂಡಳಿಗಳ ಮುಖಾಂತರ ಮಾರುಕಟ್ಟೆ ಸಹಾಯಧನ ನೀಡುವುದು ಇತ್ಯಾದಿಗಳನ್ನ ಒಳಗೊಂಡಿದೆ. ತರಬೇತಿ ಮತ್ತು ಕುಶಲತೆಯ ಅಭಿವೃದ್ಧಿಯ ಕಾರ್ಯಕ್ರಮಗಳನ್ನು ಜಿಲ್ಲಾ ಕೈಗಾರಿಕಾ ಕೇಂದ್ರಗಳ ಮೂಲಕ ಅಥವಾ ರಾಜ್ಯ ಮಟ್ಟದ ನಿಗಮ ಮತ್ತು ಮಂಡಳಿಗಳ ಮೂಲಕ ನೀಡಲಾಗುತ್ತಿದೆ. ಶಿವಮೊಗ್ಗ, ಗದಗ, ಬೆಂಗಳೂರು, ಚಿಕ್ಕಬಳ್ಳಾಪುರ ಮತ್ತು ಚಿತ್ರದುರ್ಗದಲ್ಲಿರುವ ಸರ್ಕಾರೇತರ ಸಂಸ್ಥೆಗಳಿಗೆ ರೂ.೧೫.೫೦ ಲಕ್ಷಗಳನ್ನು ಬಿಡುಗಡೆಗೊಳಿಸಲಾಗಿದೆ. ಶಿವಮೊಗ್ಗ ಜಿಲ್ಲಾ ಸ್ತ್ರೀ-ಶಕ್ತಿ ವೇದಿಕೆ (ರಿ) ಶಿವಮೊಗ್ಗ ಇವರಿಗೆ ಸ್ಯಾರಿ ಜರ್‌ದೋಸಿ ವರ್ಕ್ಸ್ ಮತ್ತು ಜರಿ ಎಂಬ್ರಾಯಿಡರಿಗಾಗಿ ರೂ.೦.೪೨ಲಕ್ಷ ನೀಡಿದ್ದರೆ, ಶ್ರೀ ಅನ್ನದಾನಿ ವಿಜಯ ವಿದ್ಯಾ ಸಮಿತಿ ಗಜೇಂದ್ರಗಡ, ಗದಗ ಜಿಲ್ಲೆ ಇವರಿಗೆ ಪೂರಕ ಸೌಲಭ್ಯಗಳ ನಿರ್ಮಾಣಕ್ಕಾಗಿ ರೂ.೯.೦೬ಲಕ್ಷಗಳು, ಇಲಾಖೆಯ ಕುಶಲಕರ್ಮಿ ತರಬೇತಿ ಸಂಸ್ಥೆಗಳಿಗೆ ಇಲಾಖಾ ಕುಶಲಕರ್ಮಿ ತರಬೇತಿ ಸಂಸ್ಥೆಗಳ ಮುಖಾಂತರ ತರಬೇತಿ ನೀಡಲು ರೂ.ಐದು ಲಕ್ಷಗಳನ್ನು ಹಾಗೂ ಡಾ॥ಭೀಮ್‌ಜೀ ಕಲಾ ಯುವಕ ಸಂಘ ಬಿ.ಜಿ.ಕೆರೆ ಮೊಳಕಾಲ್ಮೂರು, ಚಿತ್ರದುರ್ಗ ಇವರಿಗೆ ಪೂರಕ ಸೌಲಭ್ಯಗಳ ನಿರ್ಮಾಣಕ್ಕಾಗಿ ರೂ.೧.೦೨ ಲಕ್ಷಗಳನ್ನು ಬಿಡುಗಡೆಗೊಳಿಸಿದೆ.

## ಕರ್ನಾಟಕದ ರಫ್ತುಗಳು

ದೇಶದ ಆರ್ಥಿಕಾಭಿವೃದ್ಧಿಗೆ ಅಂತರರಾಷ್ಟ್ರೀಯ ವ್ಯಾಪಾರವು ಪ್ರಮುಖ ಸಾಧನಗಳಲ್ಲೊಂದಾಗಿರುವುದು. ಈಗಿನ ಕಾಲದಲ್ಲಿನ ಉದಾರೀಕರಣ, ಖಾಸಗೀಕರಣ ಮತ್ತು ಜಾಗತೀಕರಣವು ಅನೇಕ ಸವಾಲುಗಳಿಗೆ ಮತ್ತು ಅವಕಾಶಗಳಿಗೆ ಮಾರ್ಗದರ್ಶಕಗಳಾಗಿವೆ. ಜಾಗತಿಕ ವಾಣಿಜ್ಯ ಸಂಸ್ಥೆಯನ್ನು(WTO) ಸ್ಥಾಪಿಸಿದ ಮೇಲೆ ಪ್ರಪಂಚವು ಜಾಗತಿಕ ಗ್ರಾಮದ ಮಟ್ಟಕ್ಕೆ ಸಂಕುಚಿತಗೊಂಡಿದೆ. ಈಗ ಪ್ರಪಂಚವು ಒಂದೇ ಮಾರುಕಟ್ಟೆ ಕೇಂದ್ರವಾಗಿದೆ. ಎಲೆಕ್ಟ್ರಾನಿಕ್ಸ್ ಮತ್ತು ಕಂಪ್ಯೂಟರ್ ಸಾಫ್ಟ್‌ವೇರ್ ಸರಕುಗಳನ್ನು ರಫ್ತು ಮಾಡುವುದರಲ್ಲಿ ಕರ್ನಾಟಕವು ತ್ವರಿತ ಹಾಗೂ ಆಶ್ಚರ್ಯಕರ ರೀತಿಯಲ್ಲಿ ದಾಪುಗಾಲು ಹಾಕಿದೆ. ಸಾಂಪ್ರದಾಯಕ ವಲಯದ ಸರಕುಗಳಾದ ರೇಷ್ಮೆ, ಗೋಡಂಬಿ, ಸಾಂಬಾರ ಪದಾರ್ಥಗಳು, ಕಾಫಿ ಮತ್ತು ಕರಕುಶಲ ಸರಕುಗಳ ಜೊತೆಗೆ ಪೆಟ್ರೋಲಿಯಂ ಮತ್ತು ಪೆಟ್ರೋಲಿಯಂ ಉತ್ಪನ್ನಗಳು, ಸಿದ್ಧ ಉಡುಪುಗಳು, ಮುತ್ತು-ರತ್ನ ಮತ್ತು ಆಭರಣಗಳು, ಎಂಜಿನಿಯರಿಂಗ್ ಸರಕುಗಳು, ಕಬ್ಬಿಣದ ಅದಿರು ಮತ್ತು ಖನಿಜ ಸಂಪನ್ಮೂಲಗಳು ರಾಜ್ಯದಿಂದ ರಫ್ತಾಗುವ ಸರಕುಗಳು. ೧೯೯೦ ರ ದಶಕದ ದ್ವಿತೀಯಾರ್ಧದ ನಂತರದಿಂದ ಕರ್ನಾಟಕವು ಜಾಗತಿಕ ಮಾರುಕಟ್ಟೆಯಲ್ಲಿ ತನ್ನನ್ನು ದೇಶದ ಮಾಹಿತಿ ಮತ್ತು ತಂತ್ರಜ್ಞಾನ ಬಂಡವಾಳದ ಒಂದು ಪ್ರಮುಖ ತಾಣವಾಗಿ ಬಿಂಬಿಸಿಕೊಂಡಿದೆ. ರಾಜ್ಯವು ಆಧುನಿಕ ಅರ್ಥವ್ಯವಸ್ಥೆಯಲ್ಲಿ ತ್ವರಿತಗತಿಯ ಮತ್ತು ಗೋಚರಾತ್ಮಕ ಚುರುಕನ್ನು ಪಡೆದುಕೊಂಡಿದೆ. ಮಾಹಿತಿ ತಂತ್ರಜ್ಞಾನ, ಬಯೋ-ಟೆಕ್ನಾಲಜಿ ಮತ್ತು ಸಂಶೋಧನಾ ಮತ್ತು ಅಭಿವೃದ್ಧಿ ಸಂಸ್ಥೆಗಳು ರಾಷ್ಟ್ರೀಯ ಮತ್ತು ಜಾಗತಿಕ ಮಟ್ಟಗಳಲ್ಲಿ ಕರ್ನಾಟಕದ ಹೆಸರು ಮತ್ತು ಕೀರ್ತಿಯನ್ನು ವರ್ಧಿಸಿವೆ, ಅವು ಬೆಂಗಳೂರು ನಗರವನ್ನು **"ನಾಲೆಜ್ ಕ್ಯಾಪಿಟಲ್ ಆಫ್ ಇಂಡಿಯಾ, ಐಟಿ ಕ್ಯಾಪಿಟಲ್ ಆಫ್ ಇಂಡಿಯಾ, ಸಿಲಿಕಾನ್ ವ್ಯಾಲಿ ಆಫ್ ಇಂಡಿಯಾ ಮತ್ತು ಐಟಿ ಹಬ್ ಆಫ್ ಏಷಿಯಾ"** ಎಂಬುದಾಗಿ ವರ್ಣಿಸಿವೆ. ರಾಜ್ಯದಲ್ಲಿನ ಅತ್ಯುತ್ತಮ ಜೀವನಶೈಲಿಯ ಪರಿಸ್ಥಿತಿಯು ದೇಶದ ಎಲ್ಲಾ ಭಾಗಗಳ ಮತ್ತು ವಿದೇಶಗಳ ಪ್ರತಿಭಾವಂತ ಉದ್ಯೋಗಾಕಾಂಕ್ಷಿಗಳನ್ನು ನೆಲಸಲು ಮತ್ತು ಉದ್ಯೋಗ ನಿರ್ವಹಿಸಲು ಆಕರ್ಷಿಸುತ್ತದೆ. ಇಲ್ಲಿರುವ ಅನೇಕ ವಸತಿ ಶಾಲೆಗಳು ಮತ್ತು ಅಂತಾರರಾಷ್ಟ್ರೀಯ ಶಾಲೆಗಳು ಉತ್ತೇಜನದಾಯಕ ವಾತಾವರಣದಲ್ಲಿ ಒಳ್ಳೆಯ ಗುಣಮಟ್ಟದ ವಿದ್ಯೆಯನ್ನು ನೀಡುತ್ತಿವೆ.

## ಕರ್ನಾಟಕ ರಾಜ್ಯದಲ್ಲಿ ರಫ್ತು ಪ್ರವರ್ಧನೆಗೆ ಚಾಲನೆ

ಕರ್ನಾಟಕದಿಂದ ರಫ್ತು ಪ್ರವರ್ಧನೆಗೊಳ್ಳುವಂತೆ ಮಾಡುವ ಕಾರ್ಯಕ್ಕೆ '**ವಿಶ್ವೇಶ್ವರಯ್ಯ ಕೈಗಾರಿಕಾ ವ್ಯಾಪಾರ ಕೇಂದ್ರ**'ವು (ವಿಐಟಿಸಿ) ರಾಜ್ಯ ಸರ್ಕಾರದ ನೋಡಲ್ ಏಜೆನ್ಸಿಯಾಗಿ ಕಾರ್ಯನಿರ್ವಹಿಸುತ್ತಿದೆ. 'ವಿಐಟಿಸಿ'ಯು ನಿರಂತರವಾಗಿ ನಿರ್ಯಾತಕ್ಕೆ ಸಂಬಂಧಿಸಿದ ಕಾರ್ಯಕ್ರಮಗಳು/ಕಾರ್ಯಾಗಾರಗಳನ್ನು ನಡೆಸುತ್ತದೆ ಮತ್ತು ರಾಷ್ಟ್ರೀಯ ಹಾಗೂ ಅಂತರರಾಷ್ಟ್ರೀಯ ಮಟ್ಟದ ವ್ಯಾಪಾರ ಮೇಳ/ಪ್ರದರ್ಶನಗಳಲ್ಲಿ ಭಾಗವಹಿಸುತ್ತದೆ. ಇದು ನಿರಂತರವಾಗಿ ರಫ್ತು ಮಾಡುವವರನ್ನು ಆಲೋಚನಾ ಸಭೆಗೆ ಆಹ್ವಾನಿಸಿ ಅವರ ದೂರುಗಳನ್ನು ರಾಜ್ಯಮಟ್ಟದ ರಫ್ತು ಪ್ರವರ್ಧನ ಆಲೋಚನಾ ಸಭೆ, ರಾಜ್ಯಮಟ್ಟದ ರಫ್ತು ಪ್ರವರ್ಧನ ಸಮಿತಿ, ರಫ್ತು ಸೌಲಭ್ಯ ಸಮನ್ವಯ ಸಮಿತಿ ಹಾಗೂ ಕೇಂದ್ರ ಮತ್ತು ರಾಜ್ಯ ಸರ್ಕಾರಿ ಸಂಸ್ಥೆಗಳ ಸಮಿತಿಗಳ ಮೂಲಕ ಬಗೆಹರಿಸುತ್ತದೆ. ರಫ್ತು ಪ್ರವರ್ಧನ ಕಾರ್ಯಕ್ರಮಗಳನ್ನು ಕೈಗೆತ್ತಿಕೊಂಡು ರಾಜ್ಯದ ರಫ್ತಿನ ದೃಶ್ಯವನ್ನು ಹೆಚ್ಚಿಸುವುದು ಮತ್ತು ರಾಜ್ಯದ ರಫ್ತುದಾರರು ಅಂತರರಾಷ್ಟ್ರೀಯ ವ್ಯವಹಾರಗಳಲ್ಲಿ ಭಾಗವಹಿಸಲು ರಾಜ್ಯದ ಎಂಡಿಎ ಯೋಜನೆಯಡಿಯಲ್ಲಿ ಹಣಕಾಸಿನ ನೆರವನ್ನೊದಗಿಸಲು 'ವಿಐಟಿಸಿ', 'ಜಿಲ್ಲಾ ಕೈಗಾರಿಕಾ ಕೇಂದ್ರಗಳು' ಮತ್ತು 'ಛೇಂಬರ್ಸ್ ಆಫ್ ಕಾಮರ್ಸ್'ಗಳೊಂದಿಗೆ ನಿಕಟ ಸಂಪರ್ಕವನ್ನಿಟ್ಟುಕೊಂಡು ಕಾರ್ಯನಿರ್ವಹಿಸುತ್ತದೆ. ಕರ್ನಾಟಕವು ಭಾರತದ ಇತರ ರಾಜ್ಯಗಳ ಪೈಕಿ ರಫ್ತು ವಹಿವಾಟಿನ ಮೇಲೆ ಒಂದು ನಿರಂತರವಾದ ಮಾಹಿತಿ ದಾಖಲೆಯನ್ನು ಸ್ಥಾಪಿಸುವಲ್ಲಿನ ಮೊದಲ ರಾಜ್ಯವಾಗಿದೆ. ಕರ್ನಾಟಕ ಸರ್ಕಾರದ ಕೈಗಾರಿಕೆಗಳು ಮತ್ತು ವಾಣಿಜ್ಯ ವಿಭಾಗದಲ್ಲಿ ವಿಶ್ವೇಶ್ವರಯ್ಯ ಕೈಗಾರಿಕಾ ಮತ್ತು ವಾಣಿಜ್ಯ ಕೇಂದ್ರ (ವಿಐಟಿಸಿ)ವು ಹಲವಾರು ರಫ್ತು ಪ್ರಮೋಷನ್ ಮಂಡಳಿಗಳಿಂದ ಮತ್ತು ಕೊಮೊಡಿಟೀಸ್ ಬೋರ್ಡ್ ಮತ್ತು ಎಕ್ಸ್‌ಪೋರ್ಟ್ ಹೌಸ್ ಗಳಿಂದ ತೆಗೆದುಕೊಳ್ಳಲ್ಪಟ್ಟ ೧೯ ಸರಕುಗಳ ರಫ್ತು ಮಾಹಿತಿಯ ಸಂಯೋಜನೆ ಮತ್ತು ಪ್ರಕಟಣೆಯ ಒಂದು ವಿಧ್ಯುಕ್ತ ಸಂಸ್ಥೆಯಾಗಿದೆ. ವಿಐಟಿಸಿಯು ಯಾವುದೇ ಶಾಸನಾತ್ಮಕ ಹಿನ್ನೆಲೆಯನ್ನು ಹೊಂದಿಲ್ಲದ ಕಾರಣದಿಂದ ಮತ್ತು ಅಲ್ಲಿ ವ್ಯಾಪಾರಿ ರಫ್ತುದಾರರು ಮತ್ತು ಉತ್ಪಾದಕ ರಫ್ತುದಾರರ ವಿಭಾಗಗಳಲ್ಲಿ ಹಲವಾರು ರಫ್ತುದಾರರು ಇರುವ ಕಾರಣದಿಂದ, ಅವರೆಲ್ಲರೂ ಕೂಡ ನಿಯಮಿತವಾಗಿ ಕೇಂದ್ರಕ್ಕೆ ಅಥವಾ ಅವರ ಸಂಬಂಧಿತ ಇಪಿಗಳಿಗೆ, ಎಕ್ಸ್‌ಪೋರ್ಟ್ ಹೌಸ್‌ಗಳಿಗೆ ರಿಟರ್ನ್‌ಗಳನ್ನು ಸಲ್ಲಿಸುವುದಿಲ್ಲ, ಆ ಕಾರಣದಿಂದ ಇಲ್ಲಿಯವರೆಗೂ ಒಂದು ಪೂರ್ಣ ಪ್ರಮಾಣದ ಮಾಹಿತಿ ದಾಖಲೆಯು ನಿರ್ಮಿಸಲ್ಪಟ್ಟಿಲ್ಲ. ಆದ್ದರಿಂದ ಇಲ್ಲಿ ಪ್ರಸ್ತುತಪಡಿಸಿರುವ ಮಾಹಿತಿಯು ಒಂದು ಒಟ್ಟಾರೆ ರಫ್ತು ಮಾದರಿಯ ಸೂಚಿ ಎಂದು ಪರಿಗಣಿಸಲ್ಪಡಬೇಕು ಮತ್ತು ಪ್ರತಿ ರಫ್ತು ಸರಕಿನ ನಿಖರವಾದ ಪ್ರಮಾಣ ಎಂಬುದಾಗಿ ಪರಿಗಣಿಸಬಾರದು.

ಕರ್ನಾಟಕವು ವಿಭಿನ್ನ ಬಗೆಯ ಸರಕುಗಳ ರಫ್ತನ್ನು ಮಾಡುತ್ತದೆ ಕೃಷಿ ಮತ್ತು ಕೈಗಾರಿಕೋತ್ಪನ್ನಗಳನ್ನು ರಫ್ತನ್ನು ಮಾಡುತ್ತದೆ, ಅಂದರೆ ರೇಷ್ಮೆ, ಶ್ರೀಗಂಧದ ಎಣ್ಣೆ ಕರಕುಶಲ ವಸ್ತುಗಳು, ರೆಡಿಮೇಡ್ ಬಟ್ಟೆಗಳು, ಕಾಫಿ, ಕಬ್ಬಿಣದ ಅದಿರು, ಸಂಸ್ಕರಿತ ಮೆಷಿನ್ ಸಲಕರಣೆಗಳು, ಎಲೆಕ್ಟ್ರಾನಿಕ್ ಉತ್ಪನ್ನಗಳು, ಕಂಪ್ಯೂಟರ್ ಹಾರ್ಡ್‌ವೇರ್, ಕಂಪ್ಯೂಟರ್ ಸಾಫ್ಟ್‌ವೇರ್ ಇತ್ಯಾದಿ. ೧೯೯೦ ರ ದಶಕದ ದ್ವಿತೀಯಾರ್ಧದ ನಂತರದಿಂದ, ಕರ್ನಾಟಕವು ಜಾಗತಿಕ ಮಾರುಕಟ್ಟೆಯಲ್ಲಿ ತನ್ನನ್ನು ದೇಶದ ಮಾಹಿತಿ ಮತ್ತು ತಂತ್ರಜ್ಞಾನ ಬಂಡವಾಳದ ಒಂದು ಪ್ರಮುಖ ತಾಣವಾಗಿ ಬಿಂಬಿಸಿಕೊಂಡಿದೆ. ರಾಜ್ಯವು ಆಧುನಿಕ ಅರ್ಥವ್ಯವಸ್ಥೆಯಲ್ಲಿ ತ್ವರಿತಗತಿಯ ಮತ್ತು ಗೋಚರಾತ್ಮಕ ಚುರುಕನ್ನು ಪಡೆದುಕೊಂಡಿದೆ. ಮಾಹಿತಿ ತಂತ್ರಜ್ಞಾನ, ಬಯೋಟೆಕ್ನಾಲಜಿ ಮತ್ತು ಕಲೆಯ ಸಂಶೋಧನೆ ಮತ್ತು ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆಗಳು ಕರ್ನಾಟಕಕ್ಕೆ ಭಾರತದಲ್ಲಿ ಜ್ಞಾನದ ರಾಜ್ಯದ ಪ್ರಧಾನ್ ಭಾಗ ಎಂಬ ಖ್ಯಾತಿಯನ್ನು

ತಂದುಕೊಟ್ಟಿವೆ. ಕರ್ನಾಟಕವು ದೇಶದ ಎಲೆಕ್ಟ್ರಾನಿಕ್ಸ್ ಮತ್ತು ಕಂಪ್ಯೂಟರ್ ಸಾಫ್ಟ್‌ವೇರ್ ರಫ್ತುಗಳ ಮೂರನೆಯ ಒಂದು ಭಾಗವನ್ನು ವ್ಯಾಪಿಸಿಕೊಂಡಿದೆ. ಇದು ದಕ್ಷಿಣ ಭಾಗದಲ್ಲಿನ ಎಂಜಿನಿಯರಿಂಗ್ ಸರಕುಗಳ ರಫ್ತಿನಲ್ಲಿ ಅಗ್ರ ಶ್ರೇಯಾಂಕವನ್ನು ಪಡೆದುಕೊಂಡಿದೆ.

ಕರ್ನಾಟಕವು ಎಲೆಕ್ಟ್ರಾನಿಕ್ಸ್ ಮತ್ತು ಕಂಪ್ಯೂಟರ್ ಸಾಫ್ಟ್‌ವೇರ್ ರಫ್ತಿನಲ್ಲಿ ಭಾರತದಲ್ಲಿ ಒಂದು ಉನ್ನತ ಸ್ಥಾನವನ್ನು ಹೊಂದಿದೆ. ಕರ್ನಾಟಕ ರಾಜ್ಯದ ರಫ್ತು ಸಾಮರ್ಥ್ಯ ವಿವರಗಳನ್ನು ಕೋಷ್ಟಕ ೫.೩೫ರಲ್ಲಿ ನೀಡಲಾಗಿದೆ.

**ಕೋಷ್ಟಕ ೫.೩೫: ಕರ್ನಾಟಕ ರಾಜ್ಯದ ರಫ್ತು ಸಾಮರ್ಥ್ಯ ೨೦೧೨-೧೩ ರಿಂದ ೨೦೧೫-೧೬ (ಮೌಲ್ಯ ರೂ. ಕೋಟಿಗಳಲ್ಲಿ)**

| ಕ್ರ. ಸಂ. | ಪದಾರ್ಥಗಳು | ೨೦೧೨-೧೩ | ೨೦೧೩-೧೪ | ೨೦೧೪-೧೫ | ೨೦೧೫-೧೬ |
|---|---|---|---|---|---|
| ೧ | ಎಲೆಕ್ಟ್ರಾನಿಕ್ಸ್, ಕಂಪ್ಯೂಟರ್ ಸಾಫ್ಟ್ ವೇರ ಮತ್ತು ಬಿಟಿ | ೧೫೬೦೦೦ | ೧೭೮೦೦೦ | ೧೯೪೦೨೦ | ೬೭೯೮೦ |
| ೨ | ಸಿದ್ಧ ಉಡುಪುಗಳು | ೭೬೭೦ | ೮೯೦೦ | ೯೮೨೧ | ೫೭೪೭ |
| ೩ | ಪೆಟ್ರೋಲ್ ಮತ್ತು ಪೆಟ್ರೋಲಿಯಂ ಉತ್ಪನ್ನಗಳು | ೩೬೯೧೫ | ೩೫೩೬೨ | ೪೦೮೮೨ | ೬೬೧೩ |
| ೪ | ಎಂಜಿನಿಯರಿಂಗ್ ಉತ್ಪನ್ನಗಳು | ೧೨೫೬೮ | ೧೭೯೭೮ | ೨೦೯೫೮ | ೧೭೨೪೫ |
| ೫ | ಕಬ್ಬಿಣದ ಅದಿರು ಮತ್ತು ಖನಿಜಗಳು ಮತ್ತು ಶಿಲೆಗಳು | ೧೭೩೫ | ೭೩೯ | ೭೪೯ | ೬೯೫೮ |
| ೬ | ರೇಷ್ಮೆ ಉತ್ಪನ್ನಗಳು | ೬೫೪ | ೬೫೦ | ೫೫೪ | ೨೧೩ |
| ೭ | ಕಾಫಿ ಉತ್ಪನ್ನಗಳು | ೩೫೩೪ | ೩೫೯೮ | ೪೯೭೩ | ೧೬೭೭ |
| ೮ | ಮೂಲಭೂತ ರಾಸಾಯನಿಕಗಳು, ಔಷಧಗಳು ಮತ್ತು ಕಾಸ್ಮೆಟಿಕ್ಸ್ | ೭೨೩೩ | ೮೦೩೦ | ೫೮೯೬ | ೩೪೧೦ |
| ೯ | ಕೃಷಿ ಮತ್ತು ಸಂಸ್ಕರಿತ ಆಹಾರ ಉತ್ಪನ್ನಗಳು | ೧೧೪೯ | ೧೩೦೦ | ೧೩೮೩ | ೨೭೦೩ |
| ೧೦ | ರತ್ನ ಮತ್ತು ಆಭರಣಗಳು | ೨೪೪೮೩ | ೨೪೧೭೫ | ೨೧೯೯೮ | ೧೪೨೮೯ |
| ೧೧ | ಗೋಡಂಬಿ ಮತ್ತು ಗೋಡಂಬಿ ಬೀಜಗಳು | ೮೪೭ | ೧೨೦೦ | ೧೫೦೫ | ೨೮೬ |
| ೧೨ | ಕರಕುಶಲ ವಸ್ತುಗಳು | ೩೭೪ | ೫೧೬ | ೫೪೮ | ೯೦ |
| ೧೩ | ಚರ್ಮದ ಉತ್ಪನ್ನಗಳು | ೪೫೨ | ೪೫೦ | ೫೪೩ | ೧೪೦ |
| ೧೪ | ರಾಸಾಯನಿಕಗಳು ಮತ್ತು ಸಂಬಂಧಿತ ಉತ್ಪನ್ನಗಳು | ೪೯೧ | ೫೬೨ | ೯೫೫ | ೭೧೫ |
| ೧೫ | ಕಡಲಿನ ಉತ್ಪನ್ನಗಳು | ೬೩೨ | ೧೦೬೭ | ೧೩೧೩ | ೧೫೦ |
| ೧೬ | ಪ್ಲಾಸ್ಟಿಕ್ ವಸ್ತುಗಳು | ೭೮೮ | ೭೦೦ | ೩೭೬ | ೫೬ |
| ೧೭ | ಮಸಾಲೆ ಪದಾರ್ಥಗಳು | ೯೦೫ | ೧೧೫೦ | ೧೧೨೬ | ೧೩೩ |
| ೧೮ | ಉಣ್ಣೆ ಮತ್ತು ಉಣ್ಣೆಯ ಉತ್ಪನ್ನಗಳು | ೧೫೧ | ೧೭೬ | ೧೯೧ | ೪ |
| ೧೯ | ಸಣ್ಣ ಪುಟ್ಟ ಮತ್ತು ಇತರೆ | ೪೭೮೯ | ೫೫೬೫ | ೫೭೭೭ | ೧೨೬ |
| | **ಒಟ್ಟು** | **೨೫೮೩೭೦** | **೨೯೦೪೧೮** | **೩೧೩೫೭೦** | **೧೨೮೫೩೫** |

**ಮೂಲ: ವಿಶ್ವೇಶ್ವರಯ್ಯ ವ್ಯಾಪಾರ ಅಭಿವೃದ್ಧಿ ಕೇಂದ್ರ, ಕರ್ನಾಟಕ ಸರ್ಕಾರ**

೨೦೧೪-೧೫ರಲ್ಲಿ ಕರ್ನಾಟಕದ ರಫ್ತುಗಳು ಸುಮಾರು ರೂ.೩,೧೩,೫೭೦ ಕೋಟಿಯಾಗಿದ್ದು, ಇದು ಸದರಿ ವರ್ಷದಲ್ಲಿ ಒಟ್ಟು ರಫ್ತುಗಳ ಶೇ.೧೩.೦೧ ರಷ್ಟಾಗಿರುತ್ತದೆ. ೨೦೧೪-೧೫ರಲ್ಲಿ ರಾಷ್ಟ್ರದ ರಫ್ತುಗಳಲ್ಲಿ, ವಾಣಿಜ್ಯ ರಫ್ತುಗಳ ಪಾಲು ಸುಮಾರು ಶೇ.೬.೨೧ರಷ್ಟಾಗಿದ್ದು, ತಂತ್ರಾಂಶ/ಸೇವೆಯ ರಫ್ತುಗಳ ಪಾಲು ಸುಮಾರು ಶೇ.೪೦ ಆಗಿರುತ್ತದೆ.

ರಾಜ್ಯದ ಒಟ್ಟು ಆಂತರಿಕ ಉತ್ಪನ್ನಗಳಲ್ಲಿ ಕರ್ನಾಟಕದ ರಫ್ತುಗಳು ಶೇಕಡಾವಾರು ಸಾಕಷ್ಟು ದೊಡ್ಡ ಪಾಲನ್ನು ಹೊಂದಿದ್ದು, ಕಾಲಾವಧಿಯಲ್ಲಿ ಇದು ಗಣನೀಯವಾಗಿ ಏರಿಕೆಯಾಗಿರುತ್ತದೆ. ೧೯೯೩-೯೪ರಲ್ಲಿ ರಾಜ್ಯದ ಒಟ್ಟು ಆಂತರಿಕ ಉತ್ಪನ್ನಗಳಲ್ಲಿ ರಫ್ತುಗಳ ಪಾಲು ಶೇ.೭.೩೬ರಷ್ಟಿದ್ದು, ಇದು ೨೦೧೪-೧೫ರಲ್ಲಿ ಶೇ.೪೪.೬೮ಗೆ ಏರಿಕೆಯಾಗಿರುತ್ತದೆ.

ರಾಜ್ಯದ ರಫ್ತುಗಳಲ್ಲಿ ಎಲೆಕ್ಟ್ರಾನಿಕ್ಸ್ ಮತ್ತು ಸಾಫ್ಟ್‌ವೇರ್ ರಫ್ತುಗಳು ಬೃಹತ್ ಪಾಲನ್ನು ಹೊಂದಿರುತ್ತದೆ. ೨೦೧೪-೧೫ರಲ್ಲಿ ಇದರ ಪಾಲು ಶೇ. ೬೧.೮ರಷ್ಟು ಆಗಿರುತ್ತದೆ. ಕರ್ನಾಟಕದ ರಫ್ತುಗಳಲ್ಲಿ ಇತರೆ ಸರಕುಗಳು ೨೦೧೪-೧೫ರಲ್ಲಿ ಗಣನೀಯ ಪ್ರಮಾಣದ ಪಾಲನ್ನು ಹೊಂದಿದ್ದು, ಇವುಗಳು ಪೆಟ್ರೋಲಿಯಂ ಮತ್ತು ಪೆಟ್ರೋಲಿಯಂ ಉತ್ಪನ್ನಗಳ (ಶೇ.೧೩.೦೩) ಹಾಗೂ ರತ್ನ ಮತ್ತು ಆಭರಣಗಳಾಗಿರುತ್ತವೆ (ಶೇ.೭). ಕರ್ನಾಟಕದ ರಫ್ತುಗಳಲ್ಲಿ ಈ ಮೂರು ಪದಾರ್ಥಗಳ ರಫ್ತು ಸುಮಾರು ಶೇ.೮೨ ಆಗಿರುತ್ತದೆ. ರಾಜ್ಯದ ರಫ್ತುಗಳಲ್ಲಿ ಗಣನೀಯ ಪಾಲನ್ನು ಹೊಂದಿರುವ ಇತರೇ ಪದಾರ್ಥಗಳು ಎಂಜಿನಿಯರಿಂಗ್ ಸರಕುಗಳು (ಶೇ.೬.೬೮) ಹಾಗೂ ಸಿದ್ಧ ಉಡುಪುಗಳು (ಶೇ.೩.೧೩) ಆಗಿರುತ್ತದೆ.

ಕರ್ನಾಟಕದ ರಫ್ತುಗಳು ಏಪ್ರಿಲ್‌ನಿಂದ ಸೆಪ್ಟೆಂಬರ್ ೨೦೧೫ರ ಅವಧಿಯಲ್ಲಿ ರೂ.೧೨೮೫೩೫ ಕೋಟಿಗಳಾಗಿತ್ತು. ಎಲೆಕ್ಟ್ರಾನಿಕ್ಸ್ ಮತ್ತು ಕಂಪ್ಯೂಟರ್ ಸಾಫ್ಟ್‌ವೇರ್ ರಫ್ತುಗಳು ರಾಜ್ಯದ ರಫ್ತುಗಳಲ್ಲಿ ಬೃಹತ್ ಪಾಲನ್ನು ಹೊಂದಿರುತ್ತದೆ. ೨೦೧೫-೧೬ರಲ್ಲಿ (ಡಿಸೆಂಬರ್ ೨೦೧೫ರ ವರೆಗೆ) ಅದರ ಪಾಲು ಶೇ.೫೩ ರಷ್ಟಿರುತ್ತದೆ. ೨೦೧೫-೧೬ರಲ್ಲಿ (ಡಿಸೆಂಬರ್ ೨೦೧೫ರ ವರೆಗೆ) ರಫ್ತುಗಳಲ್ಲಿ ಇತರೇ ಸರಕುಗಳು ಅಂದರೆ ರತ್ನಗಳು ಮತ್ತು ಆಭರಣಗಳ (ಶೇ.೧೧.೧೨) ಮತ್ತು ಎಂಜಿನಿಯರಿಂಗ್ ಉತ್ಪನ್ನಗಳ (ಶೇ.೧೩.೪೨) ಪಾಲು ಗಮನಾರ್ಹವಾಗಿರುತ್ತದೆ.

೧೧ನೇ ಪಂಚವಾರ್ಷಿಕ ಅವಧಿಯಲ್ಲಿ ಭಾರತದ ರಫ್ತುಗಳಿಗೆ ಕರ್ನಾಟಕದ ಕೊಡುಗೆಯು ಶೇ ೧೧ ರಿಂದ ಶೇ ೧೫ ರವರೆಗೆ ಬದಲಾಗಿರುತ್ತದೆ. ಇದಲ್ಲದೆ, ಭಾರತದ ಮಾಹಿತಿ ಮತ್ತು ಸಂವಹನ ತಂತ್ರಜ್ಞಾನ ಉತ್ಪನ್ನಗಳ ಒಟ್ಟು ರಫ್ತುಗಳಲ್ಲಿ ಕರ್ನಾಟಕದ ಪಾಲು ೨೦೦೫-೦೬ ರಂದ ಶೇ. ೨೫ ಗಿಂತಲೂ ಹೆಚ್ಚಾಗಿಯೇ ಇರುತ್ತದೆ.

## ವಿದ್ಯುಚ್ಛಕ್ತಿ

ತೀವ್ರ ಗತಿಯ ಅರ್ಥಿಕ ಪ್ರಗತಿಯ ಪ್ರಭಾವದಿಂದಾಗಿ ವಿದ್ಯುತ್‌ನ ನಿರಂತರ ಏರುತ್ತಿರುವ ಬೇಡಿಕೆಯ ಕಾರಣದಿಂದ ಕರ್ನಾಟಕ ರಾಜ್ಯವು ವಿದ್ಯುತ್ ಕೊರತೆಯನ್ನು ಅನುಭವಿಸುತ್ತಿದೆ. ರಾಜ್ಯ ಸರ್ಕಾರವು ಸಾರ್ವಜನಿಕ ಹಾಗೂ ಖಾಸಗಿ ವಲಯಗಳಲ್ಲಿ ವಿದ್ಯುತ್ ಉತ್ಪಾದನೆಗಾಗಿ ಹೊಸ ವಿದ್ಯುತ್ ಸ್ಥಾವರಗಳ ಸೇರ್ಪಡೆಗಾಗಿ ಯೋಜನೆಗಳನ್ನು ಜಾರಿಗೊಳಿಸಲು ಹಲವಾರು ಉತ್ತೇಜನಗಳನ್ನು ಕೈಗೊಂಡಿದೆ. ಸಾರ್ವಜನಿಕ ಕ್ಷೇತ್ರದ ವಿದ್ಯುತ್ ಉತ್ಪಾದನೆಯು ಕರ್ನಾಟಕ ವಿದ್ಯುತ್ ನಿಗಮ ನಿಯಮಿತದಿಂದ ನಿರ್ವಹಿಸಲ್ಪಡುತ್ತಿದ್ದು, ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತವು ವಿದ್ಯುತ್ ಪ್ರಸರಣೆ ಮತ್ತು ವಿದ್ಯುತ್ ರವಾನೆ ಕಾರ್ಯಗಳನ್ನು ನಿರ್ವಹಿಸುತ್ತಿದೆ. ರಾಜ್ಯದಲ್ಲಿನ ವಿದ್ಯುತ್ ರಂಗದ ಪುನರ್ ರಚನೆಯ ಭಾಗವಾಗಿ ಹಿಂದಿನ ಕರ್ನಾಟಕ ವಿದ್ಯುತ್ ಮಂಡಳಿಯನ್ನು ೧೯೯೯ರಲ್ಲಿ ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತವಾಗಿ ಪುನರ್ ರಚನೆ ಮಾಡಿ ಕಾರ್ಪೊರೇಟ್ ರೂಪವನ್ನು ನೀಡಲಾಗಿದೆ. ಕರ್ನಾಟಕ ವಿದ್ಯುತ್ ಅಧಿನಿಯಮ ೨೦೦೩ರ ಪ್ರಕಾರ ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತವು ರಾಜ್ಯದಲ್ಲಿನ ಪ್ರಸರಣಾ ಸೌಲಭ್ಯ ನೀಡುವ ಸಂಸ್ಥೆಯಾಗಿದ್ದು ವಿದ್ಯುತ್ ವ್ಯವಹರಣೆ ಮಾಡುವ ಅಧಿಕಾರವನ್ನು ಹೊಂದಿರುವುದಿಲ್ಲ. ಆದ್ದರಿಂದ, ವಿತರಣಾ ಸಂಸ್ಥೆಗಳು ವಿದ್ಯುತ್‌ನ್ನು ನೇರವಾಗಿ ಸಾರ್ವಜನಿಕ ಹಾಗೂ ಖಾಸಗಿ ವಿದ್ಯುತ್ ಉತ್ಪಾದಕರಿಂದ ಮತ್ತು ಸ್ವತಃ ವಿತರಣಾ ಜಾಲದಿಂದ ವಿದ್ಯುತ್ ಸರಬರಾಜು ಕಂಪನಿಗಳಿಂದ ಸಂಗ್ರಹಿಸುತ್ತಿದ್ದು, ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತವನ್ನು ವಿತರಣೆಗಾಗಿ ಬಳಸುತ್ತಿದೆ.

### ವಿದ್ಯುತ್ ಕ್ಷೇತ್ರದಲ್ಲಿ ಸುಧಾರಣೆಗಳು:

ಆರ್ಥಿಕ ಪ್ರಗತಿಯನ್ನು ಸಾಧಿಸುವಲ್ಲಿ ವಿದ್ಯುತ್‌ನ ಅಮೂಲ್ಯ ಪಾತ್ರವನ್ನು ಗುರುತಿಸಿದ ಮತ್ತು ವಿದ್ಯುತ್ ಕ್ಷೇತ್ರದಲ್ಲಿ ಸುಧಾರಣೆಗಳನ್ನು ಜಾರಿಗೊಳಿಸುವಲ್ಲಿ ಭಾರತದ ರಾಜ್ಯಗಳ ಪೈಕಿ ಕರ್ನಾಟಕವು ಮಂಚೂಣಿಯಲ್ಲಿರುತ್ತದೆ. ೧೯೯೯ರ ಕರ್ನಾಟಕ ವಿದ್ಯುತ್ ಸುಧಾರಣಾ ಅಧಿನಿಯಮವನ್ನು ರೂಪಿಸುವುದರ ಮೂಲಕ ಸುಧಾರಣೆಗಳನ್ನು ಅನುಷ್ಠಾನಗೊಳಿಸಲು ಸಾಂಸ್ಥಿಕ ವ್ಯವಸ್ಥೆಯನ್ನು ಬಲಪಡಿಸಲಾಯಿತು. ರಾಜ್ಯದ ವಿದ್ಯುತ್ ಕ್ಷೇತ್ರದಲ್ಲಿ ನಿಯಂತ್ರಣ ಪ್ರಾಧಿಕಾರವಾಗಿ ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗವನ್ನು ಸ್ಥಾಪಿಸಲಾಯಿತು.

ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗವು ತನ್ನ ಇತರೆ ಕಾರ್ಯಾಚರಣೆಗಳ ಜೊತೆಗೆ ವಿವಿಧ ವರ್ಗಗಳ ಗ್ರಾಹಕರಿಗೆ ಸರಬರಾಜು ಮಾಡುವ ವಿದ್ಯುತ್‌ಗೆ ದರವನ್ನು ನಿಗದಿಪಡಿಸುತ್ತದೆ. ನಾಲ್ಕು ವಿದ್ಯುತ್ ಸರಬರಾಜು ಕಂಪನಿಗಳು ಅಂದರೆ ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ, ಮಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ, ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ ನಿಯಮಿತ ಮತ್ತು ಗುಲಬರ್ಗಾ ವಿದ್ಯುತ್ ಸರಬರಾಜು ಕಂಪನಿ ನಿಯಮಿತ ಇವುಗಳು ೨೦೦೨ರಲ್ಲಿ ಸ್ಥಾಪನೆಯಾಗಿದ್ದು, ಮತ್ತೊಂದು ವಿದ್ಯುತ್ ಸರಬರಾಜು ಕಂಪನಿ-ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮವು ೨೦೦೫ರಲ್ಲಿ ಸ್ಥಾಪನೆಯಾಗಿರುತ್ತದೆ. ಹುಕ್ಕೇರಿ ಗ್ರಾಮೀಣ ವಿದ್ಯುತ್ ಸಹಕಾರ ಸಂಘವು ಹುಕ್ಕೇರಿ ತಾಲೂಕಿನಲ್ಲಿ ವಿದ್ಯುತ್ ಸರಬರಾಜನ್ನು ಮಾಡುತ್ತಿದೆ.

ಈ ಐದು ವಿತರಣಾ ಕಂಪನಿಗಳು ಮತ್ತು ಹುಕ್ಕೇರಿ ಗ್ರಾಮೀಣ ವಿದ್ಯುತ್ ಸಹಕಾರ ಸಂಘವು ಕಟ್ಟಕಡೆಯ ಗ್ರಾಹಕರಿಗೆ ವಿದ್ಯುತ್‌ನ್ನು ಚಿಲ್ಲರೆಯಾಗಿ ಸರಬರಾಜು ಮಾಡುತ್ತಿವೆ.

ಕರ್ನಾಟಕ ವಿದ್ಯುತ್ ನಿಗಮ ನಿಯಮಿತದಿಂದ ಸಾಮರ್ಥ್ಯ ವೃದ್ಧಿಗಾಗಿ ಕೈಗೊಳ್ಳಲಾಗುತ್ತಿರುವ ಪ್ರಯತ್ನಗಳಿಗೆ ಪೂರಕವಾದ ವಿಶೇಷ ಉದ್ದೇಶಗಳ ಅಳವಡಿಕೆಗಾಗಿ ಅಂದರೆ ಪವರ್ ಕಂಪನಿ ಆಫ್ ಕರ್ನಾಟಕ ಲಿಮಿಟೆಡ್ ಸ್ಥಾಪನೆಗೆ ಕರ್ನಾಟಕ ಸರ್ಕಾರವು ಏಪ್ರಿಲ್, ೨೦೦೭ರಲ್ಲಿ ಮಂಜೂರಾತಿಯನ್ನು ನೀಡಿರುತ್ತದೆ. ಪವರ್ ಕಂಪನಿ ಆಫ್ ಕರ್ನಾಟಕ ಲಿಮಿಟೆಡ್ ಅನ್ನು ೨೦, ಆಗಸ್ಟ್ ೨೦೦೭ರಂದು ಕಂಪನಿಗಳ ಅಧಿನಿಯಮ ೧೯೫೬ರಡಿ ಸ್ಥಾಪಿಸಲಾಗಿರುತ್ತದೆ. ವಿದ್ಯುತ್‌ನ ಸಾಮರ್ಥ್ಯ ವೃದ್ಧಿಗಾಗಿ ಹೊಸ ಯೋಜನೆಗಳನ್ನು ಭಾರತ ಸರ್ಕಾರದ ಇಂಧನ ಮಂತ್ರಾಲಯದ ಕೇಸ್– II ರಡಿಯ ಹರಾಜು ಪ್ರಕ್ರಿಯೆಗಳ ಮೂಲಕ ಹಾಗೂ ಭಾರತ ಸರ್ಕಾರದ ಇಂಧನ ಮಂತ್ರಾಲಯದ ಕೇಸ್– I ರಡಿಯ ಹರಾಜು ಪ್ರಕ್ರಿಯೆಗಳ ಮೂಲಕ ದೀರ್ಘಾವಧಿಗಾಗಿ ವಿದ್ಯುತ್ ಸಂಗ್ರಹಿಸುವುದು ಪವರ್ ಕಂಪನಿ ಆಫ್ ಕರ್ನಾಟಕ ಲಿಮಿಟೆಡ್‌ನ ಜವಾಬ್ದಾರಿಯಾಗಿರುತ್ತದೆ. ಬೇಡಿಕೆ ಮತ್ತು ಪೂರೈಕೆ ನಡುವಿನ ಅಂತರವನ್ನು ಹೋಗಲಾಡಿಸಲು, ವಿದ್ಯುತ್ ಸರಬರಾಜು ಕಂಪನಿಗಳ ಪರವಾಗಿ, ಪವರ್ ಕಂಪನಿ ಆಫ್ ಕರ್ನಾಟಕ ಲಿಮಿಟೆಡ್ ಇದು ಇಂಧನ ವಿನಿಮಯದ ಮೂಲಕ ವಿದ್ಯುತ್ ಖರೀದಿ, ಬ್ಯಾಂಕಿಂಗ್ (SWAP) ಮೂಲಕ, ಹಾಗೂ ದ್ವಿಪಕ್ಷೀಯ ವಹಿವಾಟುಗಳು ಸೇರಿದಂತೆ ವಿವಿಧ ಮೂಲಗಳಿಂದ ವಿದ್ಯುತ್ ಸಂಗ್ರಹಿಸುತ್ತಿದೆ. ವಿದ್ಯುತ್‌ನ ವಿಷಯಗಳಿಗೆ ಸಂಬಂಧಿಸಿದಂತೆ, ಪವರ್ ಕಂಪನಿ ಆಫ್ ಕರ್ನಾಟಕ ಲಿಮಿಟೆಡ್ ಇದು ದಕ್ಷಿಣ ಪ್ರಾದೇಶಿಕ ಸಮಿತಿಯ ವೇದಿಕೆಯ ಮೂಲಕವೂ ಇತರೆ ರಾಜ್ಯಗಳು ಹಾಗೂ ಕೇಂದ್ರ ಸರ್ಕಾರದ ಏಜೆನ್ಸಿಗಳೊಂದಿಗೆ ಸಮನ್ವಯತೆ ಸಾಧಿಸುತ್ತಿದೆ.

### ವಿದ್ಯುತ್ ಉತ್ಪಾದನೆ

ಕರ್ನಾಟಕ ರಾಜ್ಯವು ಅದರ ವಿದ್ಯುತ್ ಅವಶ್ಯಕತೆಗಳನ್ನು ಪೂರೈಸಲು ಹಲವಾರು ಸರಬರಾಜು ಮೂಲಗಳನ್ನು ಅವಲಂಬಿಸಿರುತ್ತದೆ. ರಾಜ್ಯದಲ್ಲಿ ವಿದ್ಯುತ್ ಉತ್ಪಾದನೆಯ ಮೂಲ ಸೌಕರ್ಯಗಳು ಸಾರ್ವಜನಿಕ ಮತ್ತು ಖಾಸಗಿ ಎರಡೂ ಕ್ಷೇತ್ರಗಳಲ್ಲಿ ಸೇರಿರುತ್ತವೆ. ಇದಲ್ಲದೆ ಕೇಂದ್ರ ವಿದ್ಯುತ್ ಉತ್ಪಾದನಾ ಘಟಕಗಳಿಂದಲೂ ನಿರ್ದಿಷ್ಟ ಪಾಲಿನ ಭರವಸೆ ಇದ್ದು, ಬೇಡಿಕೆ ಮತ್ತು ಸರಬರಾಜು ನಡುವಿನ ಅಂತರವನ್ನು ಕಡಿಮೆಮಾಡಲು ಇತರೆ ರಾಜ್ಯಗಳಿಂದಲೂ ವಿದ್ಯುತ್ ಖರೀದಿಯ ಮೇಲೆ ಅವಲಂಬಿತವಾಗಿರುತ್ತದೆ. ಕರ್ನಾಟಕದಲ್ಲಿ ವಿದ್ಯುತ್ ಸರಬರಾಜಿನ ಪ್ರಮುಖ ಮೂಲಗಳು ಈ ರೀತಿಯಾಗಿರುತ್ತವೆ.

ಎ. ಕರ್ನಾಟಕ ವಿದ್ಯುತ್ ನಿಗಮ ನಿಯಮಿತದ ಉತ್ಪಾದನಾ ಘಟಕಗಳು

ಬಿ. ಸ್ವಾಯತ್ತ ವಿದ್ಯುತ್ ಉತ್ಪಾದಕರು (ಸಾಂಪ್ರದಾಯಿಕ ಮತ್ತು ಅಸಾಂಪ್ರದಾಯಿಕ)

ಸಿ. ಕೇಂದ್ರ ವಿದ್ಯುತ್ ಉತ್ಪಾದನಾ ಘಟಕಗಳಲ್ಲಿ ರಾಜ್ಯದ ಪಾಲು

ಡಿ. ಇತರೆ ರಾಜ್ಯಗಳಿಂದ ದ್ವಿಪಕ್ಷೀಯ ಒಪ್ಪಂದ ಖರೀದಿ ಮತ್ತು ಇಂಧನ ವಿನಿಮಯಗಳ ಮೂಲಕ ಸಂಗ್ರಹಣೆ.

ಇ. ಪದಾರ್ಥ ವಿನಿಮಯ ವ್ಯವಸ್ಥೆ (ವಿದ್ಯುತ್ ಬ್ಯಾಂಕಿಂಗ್)

ಕರ್ನಾಟಕ ವಿದ್ಯುತ್ ನಿಗಮ ನಿಯಮಿತವು ರಾಜ್ಯದ ಸಾರ್ವಜನಿಕ ಕ್ಷೇತ್ರದಲ್ಲಿ ಸಾಮರ್ಥ್ಯ ಸೇರ್ಪಡೆ ಜವಾಬ್ದಾರಿಯನ್ನು ನಿರ್ವಹಿಸುತ್ತಿದೆ. ಕರ್ನಾಟಕದಲ್ಲಿ ಸುಧಾರಣಾ ಕ್ರಮಗಳಿಂದ ಅನುಕೂಲ ಪಡೆದು ಹಲವಾರು ಖಾಸಗಿ ಉತ್ಪಾದಕರು ಸಹ ವಿದ್ಯುತ್ ಸ್ಥಾವರಗಳನ್ನು ಸ್ಥಾಪಿಸಿರುತ್ತಾರೆ. ಅಲ್ಲದೇ ಅಸಂಪ್ರದಾಯಿಕ ವಿದ್ಯುತ್ ಮೂಲಗಳಿಂದ ಇಂಧನ ಉತ್ಪಾದನೆ ಮಾಡಲು ರಾಜ್ಯ ಸರ್ಕಾರವು ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಗಮ ನಿಯಮಿತವನ್ನು ಸ್ಥಾಪಿಸಿದೆ.

ಕೇಂದ್ರ ಸರ್ಕಾರದ ವಿದ್ಯುತ್ ಉತ್ಪಾದನಾ ಘಟಕಗಳಲ್ಲಿ ರಾಜ್ಯದ ಪಾಲನ್ನೂ ಒಳಗೊಂಡಂತೆ, ರಾಜ್ಯದಲ್ಲಿ ಸಾರ್ವಜನಿಕ ಕ್ಷೇತ್ರ ಮತ್ತು ಖಾಸಗಿ ಕ್ಷೇತ್ರಗಳ ಒಟ್ಟು ವಿದ್ಯುತ್ ಸ್ಥಾಪಿತ ಸಾಮರ್ಥ್ಯವು ಡಿಸೆಂಬರ್ ೨೦೧೫ ರಂದು ೧೫೭೨೦.೪೩ ಮೆ.ವ್ಯಾ. ಆಗಿರುತ್ತದೆ. ಸಾರ್ವಜನಿಕ ಕ್ಷೇತ್ರದ ಸ್ಥಾಪಿತ ಸಾಮರ್ಥ್ಯವು ೯೨೦೧.೩೫ ಮೆ. ವ್ಯಾ. (ಕೇಂದ್ರ ಸರ್ಕಾರದ ವಿದ್ಯುತ್ ಉತ್ಪಾದನಾ ಘಟಕಗಳ ಹಂಚಿಕೆಯೂ ಸೇರಿ) ಮತ್ತು ಖಾಸಗಿ ಕ್ಷೇತ್ರಗಳ ಪಾಲು ೬೫೧೯.೦೮ ಮೆ.ವ್ಯಾ. ಆಗಿರುತ್ತದೆ. ಖಾಸಗಿ ಕ್ಷೇತ್ರದ ಸಾಮರ್ಥ್ಯದಲ್ಲಿ, ವಿದ್ಯುತ್ ಉತ್ಪಾದನೆಯ ನವೀಕರಿಸಬಹುದಾದ ಇಂಧನ ಮೂಲಗಳ ಪಾಲು (ಸ್ವಾಯತ್ತ ವಿದ್ಯುತ್ ಉತ್ಪಾದಕರ ಶಾಖೋತ್ವನ್ನ ಮತ್ತು ಮಿನಿ ಜಲೋತ್ವನ್ನ ಪಾಲು ಹೊರತುಪಡಿಸಿ) ಸುಮಾರು ಶೇ.೬೮.೭೭ ಆಗಿರುತ್ತದೆ. ಕರ್ನಾಟಕದಲ್ಲಿ ವಿದ್ಯುತ್ ಕ್ಷೇತ್ರದ ಗತಿಯನ್ನು ಸ್ಥಾಪಿತ ಸಾಮರ್ಥ್ಯ ಮತ್ತು ವಿದ್ಯುತ್ ಉತ್ಪಾದನೆಯ ಮಾಹಿತಿಯೊಂದಿಗೆ ಕೋಷ್ಟಕ ೫.೫೨ರಲ್ಲಿ ಒದಗಿಸಲಾಗಿದೆ.

ರಾಜ್ಯದಲ್ಲಿ ૩೧–೧೨–೨೦೧೫ ರಂದು ಇದ್ದಂತಹ ವಿದ್ಯುತ್ ಉತ್ಪಾದನೆಯ ಒಟ್ಟು ಸ್ಥಾಪಿತ ಸಾಮರ್ಥ್ಯದಲ್ಲಿ ಶೇ.೨೩.೩೩ರಷ್ಟು ಪಾಲು ಜಲವಿದ್ಯುತ್‌ನದಾಗಿರುತ್ತದೆ. ಇದಕ್ಕೆ ಮಿನಿ ಜಲೋತ್ವನ್ನ ವಿದ್ಯುತ್ ಪಾಲು ಸೇರಿಸಿದರೆ ಶೇ.೨೮.೬೪ಕ್ಕೆ ಏರುತ್ತದೆ. ಜಲೋತ್ವನ್ನ ಮತ್ತು ಕಲ್ಲಿದ್ದಲು ಶಾಖೋತ್ವನ್ನ ವಿದ್ಯುತ್ ಉತ್ಪಾದನೆಯ ನಂತರದಲ್ಲಿ ಪವನ ವಿದ್ಯುತ್ ಉತ್ಪಾದನೆಯ ಕಾಣಿಕೆಯು ೨೮೭೬.೫೪ ಮೆಗಾ ವ್ಯಾಟ್ಸ್ ಆಗಿದ್ದು, ಇದು ಮೂರನೆಯ ಅತೀ ಹೆಚ್ಚಿನದಾಗಿರುತ್ತದೆ.

ಕೋಷ್ಟಕ ೫.೩೬ನ್ನು ಗಮನಿಸಿದಾಗ ૩೧–೧೨–೨೦೧೫ ರಂದು ಇದ್ದಂತಹ ಒಟ್ಟು ಸ್ಥಾಪಿತ ಸಾಮರ್ಥ್ಯ ೧೫೭೨೦.೪೩ ಮೆಗಾ ವ್ಯಾಟ್ಸ್ ಪೈಕಿ ನವೀಕರಿಸಬಹುದಾದ ಇಂಧನದ ಪಾಲು ಶೇ.૩૩.೦೯ ರಷ್ಟು ಪಾಲು ಆಗಿರುತ್ತದೆ. ರಾಜ್ಯದ ಸಾರ್ವಜನಿಕ ಕ್ಷೇತ್ರದಲ್ಲಿ ಜಲ ವಿದ್ಯುತ್, ಶಾಖೋತ್ವನ್ನ ವಿದ್ಯುತ್ ಉತ್ಪಾದನೆಯ ಪ್ರಮಾಣವು ಸುಮಾರು ೪.૩ ರಷ್ಟಿದೆ. ೨೦೧೫–೧೬ರ ಆರ್ಥಿಕ ವರ್ಷದಲ್ಲಿ ನಿರೀಕ್ಷಿತ ಸಾಮರ್ಥ್ಯ ಸೇರ್ಪಡೆಯು ೧೭೨೧ ಮೆಗಾ ವ್ಯಾಟ್ಸ್ ಆಗಿರುತ್ತದೆ.

೨೦೧೪–೧೫ ರಲ್ಲಿ ಒಟ್ಟು ವಿದ್ಯುತ್ ಉತ್ಪಾದನೆಯು ೬೦,೫೪೫ ಮಿಲಿಯನ್ ಯೂನಿಟ್ಸ್ ಆಗಿದ್ದು ಉತ್ತಮ ಮಳೆಯಿಂದಾಗಿ ಇದು ೨೦೧૩–೧೪ರ ವಿದ್ಯುತ್ ಉತ್ಪಾದನೆಯಾದ ೫೮,೭೮૩ ಮಿಲಿಯನ್ ಯೂನಿಟ್ಸ್‌ಗಿಂತ ಗಣನೀಯವಾಗಿ ಹೆಚ್ಚಾಗಿರುತ್ತದೆ. ಬಹುತೇಕ ಉತ್ಪಾದನಾ ಘಟಕಗಳ ಲಭ್ಯ ಅಂಶಗಳು ತುಲನಾತ್ಮಕವಾಗಿ ಮೇಲ್ಮಟ್ಟದ್ದಾಗಿದ್ದು, ಪರಿಣಾಮಕಾರಿ ಪ್ರತಿಬಂಧಕ ನಿರ್ವಹಣೆ ವ್ಯವಸ್ಥೆಯಿರುವುದನ್ನು ಕಾಣುತ್ತೇವೆ.

**ಕೋಷ್ಟಕ ೫.೩೬: ವಿದ್ಯುತ್ ಕ್ಷೇತ್ರದಲ್ಲಿ ಪ್ರಗತಿ**

| ಮೂಲ | ಘಟಕ | ೨೦೧೧-೧೨ | ೨೦೧೨-೧೩ | ೨೦೧೩-೧೪ | ೨೦೧೪-೧೫ | ೨೦೧೫-೧೬ |
|---|---|---|---|---|---|---|
| ಎ. ಸ್ಥಾಪಿತ ಸಾಮರ್ಥ್ಯ | | | | | | |
| ೧. ಸಾರ್ವಜನಿಕ ಕ್ಷೇತ್ರ | | | | | | |
| ಎ. ಜಲವಿದ್ಯುತ್ | ಮೆ.ವ್ಯಾ. | ೩೬೫೨ | ೩೬೫೨ | ೩೬೫೨ | ೩೬೫೨ | ೩೬೬೭.೩೫ |
| ಬಿ. ಪವನ ಶಕ್ತಿ | ಮೆ.ವ್ಯಾ. | ೦೫ | ೦೫ | ೦೫ | ೦೫ | ೦೫ |
| ಸಿ. ಶಾಖೋತ್ಪನ್ನ | ಮೆ.ವ್ಯಾ. | ೨೨೪೦ | ೨೭೨೦ | ೨೭೨೦ | ೨೭೨೦ | ೨೭೨೦ |
| ಡಿ. ಡೀಸೆಲ್ ಸ್ಥಾವರಗಳು | ಮೆ.ವ್ಯಾ. | ೧೦೮ | ೧೦೮ | ೧೦೮ | ೧೦೮ | ೧೦೮ |
| ಇ. ಸೌರ ದ್ಯುತಿ ವಿದ್ಯುಜ್ಜನಕ ಸ್ಥಾವರ | ಮೆ.ವ್ಯಾ. | ೦೯ | ೧೪ | ೧೪ | ೧೪ | ೨೪ |
| **ಒಟ್ಟು** | **ಮೆ.ವ್ಯಾ.** | **೬೦೧೪** | **೬೪೯೯** | **೬೪೯೯** | **೬೪೯೯** | **೬೫೨೪.೩೫** |
| ಎಫ್. ಜುರಾಲ ಹೈಡ್ರೊ | ೦೦ | ೦೦ | ೦೦ | ೧೧೭ | ೧೧೭ | ೧೧೭ |
| **೨. ಖಾಸಗಿ ಕ್ಷೇತ್ರ** | | | | | | |
| ಜಿ. ಸ್ವಾಯತ್ತ ಶಾಖೋತ್ಪನ್ನ ವಿದ್ಯುತ್ | ಮೆ.ವ್ಯಾ. | ೭೦೯ | ೧೫೫೦ | ೧೫೫೦ | ೧೨೦೦ | ೧೨೦೦ |
| ಹೆಚ್. ಕಿರುಜಲ ವಿದ್ಯುತ್ | ಮೆ.ವ್ಯಾ. | ೬೫೬ | ೭೦೧ | ೭೪೨.೦೬ | ೭೮೫ | ೮೩೫.೪೬ |
| ಐ. ಪವನ ಶಕ್ತಿ | ಮೆ.ವ್ಯಾ. | ೧೯೭೬ | ೨೧೭೭ | ೨೩೬೫.೩೪ | ೨೬೭೭ | ೨೮೭೧.೫೪ |
| ಜೆ. ಸಹ ಉತ್ಪಾದನೆ ಮತ್ತು ಬಯೋಮಾಸ್ | ಮೆ.ವ್ಯಾ. | ೧೦೦೧ | ೧೧೭೧ | ೧೨೪೭.೫೮ | ೧೨೮೬ | ೧೩೭೧.೦೮ |
| ಕೆ. ಸೌರ ಶಕ್ತಿ | ಮೆ.ವ್ಯಾ. | ೦೦ | ೦೦ | ೩೧.೦೦ | ೮೪ | ೧೨೪ |
| **ಒಟ್ಟು** | | **೪೩೪೨** | **೫೫೯೯** | **೫೯೩೫.೯೮** | **೬೧೪೯** | **೬೫೧೯.೦೮** |
| **೩. ಕೇಂದ್ರೀಯ ಉತ್ಪಾದನಾ ಘಟಕ ಕೇಂದ್ರದ ಹಂಚಿಕೆ** | ಮಿ.ಯೂ. | ೧೭೦೦ | ೧೮೩೬ | ೧೯೨೧ | ೨೧೬೯ | ೨೬೭೭ |
| **ಒಟ್ಟು ಸ್ಥಾಪಿತ ಸಾಮರ್ಥ್ಯ** | | **೧೨೦೫೬** | **೧೩೯೩೪** | **೧೪೩೫೫.೯೮** | **೧೪೮೧೭** | **೧೫೭೨೦.೪೩** |
| **ಬಿ. ವಿದ್ಯುಚ್ಛಕ್ತಿ ಉತ್ಪಾದನೆ (ನಿವ್ವಳ)** | | | | | | |
| ಎಲ್. ಜಲವಿದ್ಯುತ್ (ಕರ್ನಾಟಕ ವಿದ್ಯುತ್ ನಿಗಮ ನಿಯಮಿತ) | ಮಿ.ಯೂ. | ೧೪೦೨೪.೦೫ | ೯೮೬೩.೭೮ | ೧೨೧೭೮.೮೦ | ೧೨೭೭೫.೩೧ | ೫೬೨೧.೭೧ |
| ಎಂ. ಶಾಖೋತ್ಪನ್ನ (ಕರ್ನಾಟಕ ವಿದ್ಯುತ್ ನಿಗಮ ನಿಯಮಿತ) | ಮಿ.ಯೂ. | ೧೨೮೫೬.೫೫ | ೧೨೪೧೪.೯೮ | ೧೪೯೭೮.೨೦ | ೧೫೪೨೮.೮೩ | ೧೧೮೪೫.೧೩ |
| ಎನ್. ಡೀಸೆಲ್ (ಕರ್ನಾಟಕ ವಿದ್ಯುತ್ ನಿಗಮ ನಿಯಮಿತ) | ಮಿ.ಯೂ. | ೦೦ | ೦೦ | ೦೦ | ೦೦ | ೦೦ |
| ಒ. ಪವನ ಶಕ್ತಿ (ಕರ್ನಾಟಕ ವಿದ್ಯುತ್ ನಿಗಮ ನಿಯಮಿತ) | ಮಿ.ಯೂ. | ೦೦ | ೦೦ | ೦೦ | ೦೦ | ೬.೬೯ |
| ಪಿ. ಸೌರ ದ್ಯುತಿ ವಿದ್ಯುಜ್ಜನಕ ಸ್ಥಾವರ | ಮಿ.ಯೂ. | ೦೦ | ೦೦ | ೦೦ | ೦೦ | ೨೦.೪೭ |
| ಕ್ಯೂ. ಖಾಸಗಿ ವಲಯ | ಮಿ.ಯೂ. | ೧೪೯೨೦.೮೫ | ೨೩೩೨೮.೨೯ | ೧೯೦೦೮.೯೫ | ೧೭೯೯೯.೭೫ | ೧೯೨೫೩ |
| **ಒಟ್ಟು** | | **೪೧೮೦೧.೪೫** | **೪೫೬೦೭.೦೫** | **೪೬೧೬೫.೯೫** | **೪೬೨೦೪.೧೯** | **೩೬೭೪೭** |
| **ಸಿ. ವಿದ್ಯುಚ್ಛಕ್ತಿ ಆಮದು** | | | | | | |
| ಎ. ಕೇಂದ್ರ ಯೋಜನೆಗಳು | ಮಿ.ಯೂ. | ೧೧೫೭೧.೮೧ | ೧೧೪೪೩.೫೪ | ೧೨೬೧೭.೩೦ | ೧೪೩೪೦.೩೧ | ೯೩೧೧ |
| ಬಿ. ಇತರೆ ರಾಜ್ಯಗಳು | ಮಿ.ಯೂ. | ೦೦ | ೦೦ | ೦೦ | ೦೦ | ೦೦ |
| **ಒಟ್ಟು** | **ಮಿ.ಯೂ.** | **೧೧೫೭೧.೮೧** | **೧೧೪೪೩.೫೪** | **೧೨೬೧೭.೩೦** | **೧೪೩೪೦.೩೧** | **೯೩೧೧** |
| **ಒಟ್ಟು ವಿದ್ಯುತ್ ಸರಬರಾಜು** | **ಮಿ.ಯೂ.** | **೫೩೩೭೩.೨೬** | **೫೭೦೫೦.೫೯** | **೫೮೭೮೩.೨೫** | **೬೦೫೪೪.೫೦** | **೪೬೦೫೮** |

**ಮೂಲ: ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ**

### ಶಾಖೋತ್ಪನ್ನ ಸ್ಥಾವರಗಳು ಮತ್ತು ಜಲ ವಿದ್ಯುತ್ ಸ್ಥಾವರಗಳು

೨೦೧೩–೧೪ ರಿಂದ ೨೦೧೫–೧೬ ರ ವರೆಗಿನ ಪ್ಲಾಂಟ್ ಲೋಡ್ ಫ್ಯಾಕ್ಟರ್ಸ್‌ಗಳ ವಿವರಗಳನ್ನು ಕೋಷ್ಟಕ ೫.೩೭ ರಲ್ಲಿ ನೀಡಲಾಗಿದೆ. ಶಾಖೋತ್ಪನ್ನ ಸ್ಥಾವರಗಳನ್ನು ಜಲ ವಿದ್ಯುತ್ ಸ್ಥಾವರಗಳೊಂದಿಗೆ ಹೋಲಿಸಿದಾಗ ವಿದ್ಯುತ್ ಉತ್ಪಾದನೆಯ ಸರಾಸರಿ ವೆಚ್ಚವು ಶಾಖೋತ್ಪನ್ನ ಸ್ಥಾವರಗಳಲ್ಲಿ ಅಧಿಕವಾಗಿರುವುದನ್ನು ಹಾಗೂ ಶಾಖೋತ್ಪನ್ನ ಸ್ಥಾವರಗಳಲ್ಲಿ ವಿದ್ಯುತ್ ಉತ್ಪಾದನೆಯ ಮೇಲಿನ ರಾಜ್ಯದ ಅವಲಂಬನೆಯು ವರ್ಷಗಳಿಂದ ಈಚೆಗೆ ಏರಿಕೆಯಾಗಿರುವುದನ್ನು ಕಾಣಬಹುದಾಗಿದೆ. ವಿವರಗಳಿಗೆ ಕೋಷ್ಟಕ ೫.೩೮ರಲ್ಲಿ ಗಮನಿಸಬಹುದಾಗಿದೆ. ಈ ಕಾರಣ ಸರಾಸರಿ ವಿದ್ಯುತ್ ಉತ್ಪಾದನೆಯ ವೆಚ್ಚದಲ್ಲಿ (ಪೈಸ/ಕಿ. ವ್ಯಾ) ಹೆಚ್ಚಳವಾಗುತ್ತಿದೆ. ೧೯೯೯–೨೦೦೦ ರಿಂದ ಆಮದು, ಪ್ರಸರಣ ಮತ್ತು ವಿತರಣ ನಷ್ಟಗಳು ಮತ್ತು ವಿದ್ಯುತ್ ಬಳಕೆ ವಿವರಗಳನ್ನು ಕೋಷ್ಟಕ ೫.೩೯ರಲ್ಲಿ ನೀಡಲಾಗಿದೆ.

**ಕೋಷ್ಟಕ ೫.೩೭: ಕರ್ನಾಟಕದ ವಿದ್ಯುತ್ ನಿಗಮ ನಿಯಮಿತದ ಜಲವಿದ್ಯುತ್ ಮತ್ತು ಶಾಖೋತ್ಪನ್ನ ಸ್ಥಾವರಗಳ ಪ್ಲಾಂಟ್ ಲೋಡ್ ಫ್ಯಾಕ್ಟರ್ಸ್**

| ಕ್ರ. ಸಂ. | ಕೇಂದ್ರಗಳು | ೨೦೧೩–೧೪ | | | ೨೦೧೪–೧೫ | | | ೨೦೧೫–೧೬ (ಡಿಸೆಂಬರ್ ೨೦೧೫ ರವರೆಗೆ) | | |
|---|---|---|---|---|---|---|---|---|---|---|
| | | ಸ್ಥಾಪಿತ ಸಾಮರ್ಥ್ಯ | ಪ್ಲಾಂಟ್ ಲೋಡ್ ಫ್ಯಾಕ್ಟರ್ | ಸರಾಸರಿ ಫ್ಯಾಕ್ಟರ್ (%) | ಸ್ಥಾಪಿತ ಸಾಮರ್ಥ್ಯ | ಪ್ಲಾಂಟ್ ಲೋಡ್ ಫ್ಯಾಕ್ಟರ್ | ಸರಾಸರಿ ಫ್ಯಾಕ್ಟರ್ (%) | ಸ್ಥಾಪಿತ ಸಾಮರ್ಥ್ಯ | ಪ್ಲಾಂಟ್ ಲೋಡ್ ಫ್ಯಾಕ್ಟರ್ | ಸರಾಸರಿ ಫ್ಯಾಕ್ಟರ್ (%) |
| ೧ | ರಾಯಚೂರು ಶಾಖೋತ್ಪನ್ನ ವಿದ್ಯುತ್ ಕೇಂದ್ರ (೧–೭) | ೧೪೭೦ | ೬೯.೮೩ | ೮೫.೧೧ | ೧೪೭೦ | ೭೭.೫೯ | ೮೭.೯೦ | ೧೪೭೦ | ೭೬.೩೨ | ೮೨.೯೮ |
| ೨ | ರಾಯಚೂರು ಶಾಖೋತ್ಪನ್ನ ವಿದ್ಯುತ್ ಕೇಂದ್ರ (ಯುನಿಟ್–೮) | ೨೫೦ | ೩೬.೭೯ | ೭೫.೯೮ | ೨೫೦ | ೪೫.೧೦ | ೭೧.೨೯ | ೨೫೦ | ೭೯.೧೭ | ೯೪.೨೮ |
| ೩ | ಬಳ್ಳಾರಿ ಶಾಖೋತ್ಪನ್ನ ವಿದ್ಯುತ್ ಕೇಂದ್ರ (ಯುನಿಟ್–೧) | ೫೦೦ | ೬೯.೬೧ | ೮೫.೮೯ | ೫೦೦ | ೬೧.೬೫ | ೭೨.೫೯ | ೫೦೦ | ೫೫.೭೦ | ೬೪.೦೬ |
| | ಬಳ್ಳಾರಿ ಶಾಖೋತ್ಪನ್ನ ವಿದ್ಯುತ್ ಕೇಂದ್ರ (ಯುನಿಟ್–೨) | ೫೦೦ | ೬೮.೦೫ | ೮೪.೩೨ | ೫೦೦ | ೭೦.೯೪ | ೮೨.೯೪ | ೫೦೦ | ೭೦.೬೭ | ೮೫.೧೬ |
| | ಒಟ್ಟು ಶಾಖೋತ್ಪನ್ನ | ೨೭೨೦ | – | – | ೨೭೨೦ | – | – | ೨೭೨೦ | – | – |
| ೪ | ಶರಾವತಿ ಉತ್ಪಾದನಾ ಕೇಂದ್ರ | ೧೦೩೫ | ೬೧.೦೭ | ೯೨.೬೩ | ೧೦೩೫ | ೫೭.೪೫ | ೯೨.೭೨ | ೧೦೩೫ | ೩೧.೧೨ | ೯೬.೧೬ |
| ೫ | ಗೇರುಸೊಪ್ಪ ಡ್ಯಾಂ ಪವರ್‌ಹೌಸ್ | ೨೪೦ | ೨೯.೦೩ | ೯೯.೦೭ | ೨೪೦ | ೨೬.೧೬ | ೯೮.೪೫ | ೨೪೦ | ೧೩.೭೭ | ೯೮.೦೪ |
| ೬ | ಲಿಂಗನಮಕ್ಕಿ ಡ್ಯಾಂ ಪವರ್‌ಹೌಸ್ | ೫೫ | ೫೫.೧೮ | ೮೮.೭೧ | ೫೫ | ೫೨.೫೦ | ೯೪.೭೮ | ೫೫ | ೨೦.೭ | ೯೧.೭೨ |
| ೭ | ನಾಗ್ಜರಿ ಪವರ್‌ಹೌಸ್ | ೮೮೫ | ೩೩.೭೫ | ೮೭.೪೧ | ೮೮೫ | ೪೧.೫೮ | ೮೭.೭೯ | ೯೦೦ | ೨೪.೫ | ೭೨.೭೯ |
| ೮ | ಸೂಪಾ ಡ್ಯಾಂ ಪವರ್‌ಹೌಸ್ | ೧೦೦ | ೫೩.೧೭ | ೯೫.೩೯ | ೧೦೦ | ೫೧.೧೮ | ೮೪.೯೨ | ೧೦೦ | ೩೬.೯೮ | ೯೮.೧೭ |
| ೯ | ಕದ್ರಾ ಡ್ಯಾಂ ಪವರ್‌ಹೌಸ್ | ೧೫೦ | ೨೭.೪೬ | ೯೯.೨೦ | ೧೫೦ | ೩೦.೫೧ | ೮೭.೮೯ | ೧೫೦ | ೧೮.೮೧ | ೮೧.೭೮ |
| ೧೦ | ಕೊಡಸಳ್ಳಿ ಡ್ಯಾಂ ಪವರ್‌ಹೌಸ್ | ೧೨೦ | ೩೦.೮೮ | ೯೭.೩೬ | ೧೨೦ | ೩೬.೪೨ | ೯೫.೭೯ | ೧೨೦ | ೨೦.೦೩ | ೯೫.೩೯ |
| ೧೧ | ವರಾಹಿ ಅಂಡರ್‌ಗ್ರೌಂಡ್ ಪವರ್ ಹೌಸ್ | ೪೬೦ | ೩೨.೫೬ | ೯೯.೨೩ | ೪೬೦ | ೨೭.೯೮ | ೯೭.೫೮ | ೪೬೦ | ೧೭.೨೦ | ೮೦.೮೨ |
| ೧೨ | ಮಾಣಿ ಡ್ಯಾಂ ಪವರ್‌ಹೌಸ್ | ೦೯ | ೪೧.೬೯ | ೯೬.೨೨ | ೦೯ | ೩೫.೪೫ | ೯೯.೪೬ | ೦೯ | ೧೮.೭೩ | ೭೮.೬೯ |
| ೧೩ | ಅಲಮಟ್ಟಿ ಡ್ಯಾಂ ಪವರ್‌ಹೌಸ್ | ೨೯೦ | ೧೯.೮೧ | ೯೪.೬೯ | ೨೯೦ | ೧೮.೮೨ | ೭೪.೧೦ | ೨೯೦ | ೭.೬೨ | ೭೬.೧೪ |

| | | | | | | | | | | |
|---|---|---|---|---|---|---|---|---|---|---|
| ೧೪ | ಘಟಪ್ರಭಾ ಡ್ಯಾಂ ಪವರ್‌ಹೌಸ್ | ೩೨ | ೨೯.೧೫ | ೮೯.೭೦ | ೩೨ | ೨೩.೩೧ | ೯೯.೯೭ | ೩೨ | ೧೧.೫೮ | ೯೩.೯೦ |
| ೧೫ | ಭದ್ರಾ ಡ್ಯಾಂ ಪವರ್‌ಹೌಸ್ | ೩೯.೨೦ | ೧೮.೩೮ | ೫೭.೭೪ | ೩೯.೨೦ | ೧೪.೫೯ | ೫೬.೭೫ | ೩೯.೨ | ೧೧.೬೫ | ೫೯.೨೪ |
| ೧೬ | ಕಲ್ಮಲ, ಸರವಾರ್ ಗಾನೆಕಲ್ ಮತ್ತು ಮಲ್ಲಾಪುರ | ೧೦.೭೫ | ೦೦ | ೦೦ | ೧೦.೭೫ | ೦೦ | ೦೦ | ೧೦.೭೫ | ೦೦ | ೦೦ |
| ೧೭ | ಶಿವಸಮುದ್ರಮ್ | ೪೨ | ೫೮.೮೮ | ೯೮.೮೧ | ೪೨ | ೫೯.೬೨ | ೮೮.೪೯ | ೪೨ | ೭೦.೨೭ | ೮೧.೧೧ |
| ೧೮ | ಶಿಂಷಾ ಜಲ ವಿದ್ಯುತ್ ಕೇಂದ್ರ | ೧೭.೨ | ೪೫.೦೦ | ೯೨.೬೯ | ೧೭.೨೦ | ೫೬.೨೫ | ೮೯.೫೨ | ೧೭.೨೦ | ೪೬.೭೪ | ೫೯.೭೩ |
| ೧೯ | ಮಹಾತ್ಮಾ ಗಾಂಧಿ ಜಲ ವಿದ್ಯುತ್ ಕೇಂದ್ರ | ೧೩೯.೨ | ೨೧.೭೧ | ೬೧.೪೬ | ೧೩೯.೨ | ೨೮.೨೬ | ೮೮.೦೩ | ೧೩೯.೨ | ೨೩.೦೩ | ೯೨.೩೯ |
| ೨೦ | ಮುನಿರಾಬಾದ್ ಪವರ್ ಹೌಸ್ | ೨೮ | ೪೧.೬೧ | ೭೪.೪೬ | ೨೮ | ೪೩.೫೫ | ೯೬.೦೩ | ೨೮ | ೩೩.೪೦ | ೯೯.೪೯ |
| | ಒಟ್ಟು ಜಲ ವಿದ್ಯುತ್ | ೩೬೫೨.೩೫ | – | – | ೩೬೫೨.೩೫ | – | – | ೩೬೬೭.೩೫೫ | – | – |
| ೨೧ | ಯಲಹಂಕ ಡಿಜಿ ಪ್ಲಾಂಟ್ | ೧೦೮ | ೨.೪೨ | ೦೦ | ೧೦೮ | ೦೦ | ೦೦ | ೧೦೮ | ೦೦ | ೦೦ |
| ೨೨ | ಕಪ್ಪತಗುಡ್ಡ ವಿಂಡ್ ಫಾರಮ್ | ೪.೫೬ | ೩೪.೨೫ | ೯೭.೬೬ | ೪.೫೬ | ೨೪.೦೪ | ೮೨.೪೫ | ೪.೫೫೫ | ೦೦ | ೦೦ |
| ೨೩ | ಸೋಲಾರ್ ಪಿ ವಿ ಪ್ಲಾಂಟ್ | ೧೪ | ೦೦ | ೦೦ | ೧೪ | ೦೦ | ೦೦ | ೨೪ | ೦೦ | ೦೦ |
| | ಇತರೇ ಒಟ್ಟು | ೧೨೬.೫೫ | – | – | ೧೨೬.೫೫ | – | – | ೧೩೬.೫೫೫ | – | – |
| | **ಒಟ್ಟಾರೆ ಮೊತ್ತ** | **೬೪೯೮.೯೦೫** | – | – | **೬೪೯೮.೯೦೫** | – | – | **೬೫೨೩.೯೦೫** | – | – |

**ಮೂಲ: ಕರ್ನಾಟಕ ವಿದ್ಯುತ್ ನಿಗಮ ನಿಯಮಿತ**

### ಕೋಷ್ಟಕ ೫.೩೮: ಆಯ್ದ ವಿದ್ಯುತ್ ಘಟಕಗಳ ಪ್ಲಾಂಟ್ ಲೋಡ್ ಫ್ಯಾಕ್ಟರ್ಸ್ ಹಾಗೂ ವಿದ್ಯುತ್ ಯೂನಿಟ್‌ಗಾಗಿ ವೆಚ್ಚ ವಿವರ

| ಕ್ರ. ಸಂ. | ವಿದ್ಯುತ್ ಕೇಂದ್ರ | ಪ್ಲಾಂಟ್ ಲೋಡ್ ಫ್ಯಾಕ್ಟರ್ (ಶೇಕಡಾವಾರು) | | | | ಯೂನಿಟ್ ವೆಚ್ಚ *೨೦೧೪-೧೫ ಪೈಸೆ/ಕಿವ್ಯಾ |
|---|---|---|---|---|---|---|
| | | ೨೦೧೨-೧೩ | ೨೦೧೩-೧೪ | ೨೦೧೪-೧೫ | ೨೦೧೫-೧೬ (೩೧ ಡಿಸೆಂಬರ್ ೨೦೧೫ರವರೆಗೆ) | |
| ೧ | ಶರಾವತಿ | ೫೧.೫೦ | ೬೧.೦೭ | ೫೭.೪೫ | ೩೧.೧೨ | ೨೩.೮೮ |
| ೨ | ನಾಗಝರಿ | ೨೫.೨೭ | ೩೩.೭೫ | ೪೧.೫೮ | ೨೪.೫೦ | ೪೨.೮೦ |
| ೩ | ಸೂಪಾ | ೩೭.೭೬ | ೫೩.೧೭ | ೫೧.೧೮ | ೩೬.೯೮ | ೪೨.೮೦ |
| ೪ | ವರಾಹಿ | ೨೫.೫೫ | ೩೨.೫೬ | ೨೭.೯೮ | ೧೭.೨೦ | ೧೧೫.೨೪ |
| ೫ | ಆರ್.ಟಿ.ಪಿ.ಎಸ್. ಘಟಕ-೧ | ೬೩.೬೮ | ೫೮.೭೦ | ೭೧ | ೯೧.೫೮ | ೩೯೦.೦೦ |
| ೬ | ಆರ್.ಟಿ.ಪಿ.ಎಸ್. ಘಟಕ-೨ | ೫೩.೬೩ | ೬೭.೬೩ | ೭೪.೩೯ | ೮೩.೩೩ | ೩೯೦.೦೦ |
| ೭ | ಆರ್.ಟಿ.ಪಿ.ಎಸ್. ಘಟಕ-೩ | ೭೯.೦೫ | ೭೦.೦೫ | ೭೯.೬೦ | ೩೮.೦೯ | ೩೯೦.೦೦ |
| ೮ | ಆರ್.ಟಿ.ಪಿ.ಎಸ್. ಘಟಕ-೪ | ೮೨.೯೦ | ೭೯.೦೭ | ೮೩.೫೩ | ೮೪.೧೨ | ೩೯೦.೦೦ |
| ೯ | ಆರ್.ಟಿ.ಪಿ.ಎಸ್. ಘಟಕ-೫ | ೭೯.೨೪ | ೭೬.೪೬ | ೭೪.೫೮ | ೮೧.೫೫ | ೩೯೦.೦೦ |

| | | | | | | |
|---|---|---|---|---|---|---|
| ೧೦ | ಆರ್.ಟಿ.ಪಿ.ಎಸ್. ಘಟಕ–೬ | ೭೬.೭೭ | ೭೭.೨೮ | ೮೫.೬೫ | ೭೯.೬೯ | ೩೯೦.೦೦ |
| ೧೧ | ಆರ್.ಟಿ.ಪಿ.ಎಸ್. ಘಟಕ–೭ | ೭೮.೩೧ | ೫೯.೬೩ | ೭೪.೩೯ | ೭೫.೯೧ | ೩೯೦.೦೦ |
| ೧೨ | ಆರ್.ಟಿ.ಪಿ.ಎಸ್. ಘಟಕ–೮ | ೨೮.೭೯ | ೩೬.೭೯ | ೪೫.೧೦ | ೭೯.೧೭ | ೪೫೫.೦೦ |
| ೧೩ | ಬಿ.ಟಿ.ಪಿ.ಎಸ್. ಯೂನಿಟ್–೧ | ೬೮.೨೮ | ೬೯.೬೧ | ೬೧.೬೪ | ೫೫.೭೦ | ೩೯೯.೧೭ |
| ೧೪ | ಬಿ.ಟಿ.ಪಿ.ಎಸ್. ಯೂನಿಟ್–೨ | – | ೬೮.೦೫ | ೭೦.೯೪ | ೭೦.೬೭ | ೩೯೬.೮೨ |

* ಸಾಗಣೆ ಮತ್ತು ಹಂಚಿಕೆ ವಿತರಣೆಯಲ್ಲಿನ ನಷ್ಟಗಳನ್ನು ಲೆಕ್ಕ ಮಾಡುವ ಮೊದಲು

### ಕೋಷ್ಟಕ ೫.೩೯: ಕರ್ನಾಟಕದಲ್ಲಿ ವಿದ್ಯುತ್ ಉತ್ಪಾದನೆ, ಆಮದು, ಪ್ರಸರಣೆ ಮತ್ತು ವಿತರಣೆಯ ನಷ್ಟದ ವಿವರಗಳು

| ವರ್ಷ | ವಿದ್ಯುತ್ ಉತ್ಪಾದನೆಯ ಸ್ಥಾಪಿತ ಸಾಮರ್ಥ್ಯ (ಮೆಗಾ ವ್ಯಾ.ಟ್) | ವಿದ್ಯುತ್ ಉತ್ಪಾದನೆ ಮಿಲಿಯನ್ ಯುನಿಟ್‌ಗಳಲ್ಲಿ | ಆಮದು ಮಿಲಿಯನ್ ಯುನಿಟ್‌ಗಳಲ್ಲಿ | ಪ್ರಸರಣೆ ಮತ್ತು ವಿತರಣೆ ನಷ್ಟ (%) | ವಿದ್ಯುತ್ ಬಳಕೆ ಮಿಲಿಯನ್ ಯುನಿಟ್‌ಗಳಲ್ಲಿ |
|---|---|---|---|---|---|
| ೧೯೯೯–೦೦ | ೪೪೨೩.೮೭ | ೨೧೦೯೨ | ೬೦೫೬ | ೩೮.೦೦ | ೧೬೧೫೧ |
| ೨೦೦೦–೦೧ | ೪೫೨೫.೧೪ | ೨೧೧೧೯ | ೬೬೨೧ | ೩೫.೫೦ | ೧೭೮೬೭ |
| ೨೦೦೧–೦೨ | ೪೪೧೧.೫೪ | ೧೯೨೧೪ | ೭೬೦೯ | ೩೫.೮೬ | ೧೮೬೩೯ |
| ೨೦೦೨–೦೩ | ೪೬೯೯.೦೩ | ೧೮೧೦೫ | ೯೦೪೩ | ೩೧.೯೫ | ೧೯೮೮೮ |
| ೨೦೦೩–೦೪ | ೪೭೧೩.೯೦ | ೧೮೦೩೨ | ೧೩೧೭೮ | ೩೦.೮೮ | ೨೧೫೨೬ |
| ೨೦೦೪–೦೫ | ೫೮೩೬.೦೦ | ೨೨೬೭೭ | ೧೪೩೭೫ | ೨೯.೪೪ | ೨೩೧೭೩ |
| ೨೦೦೫–೦೬ | ೬೨೭೮.೭೧ | ೨೪೦೭೦ | ೧೧೪೫೩ | ೨೯.೩೮ | ೨೪೪೬೩ |
| ೨೦೦೬–೦೭ | ೬೫೬೩.೦೮ | ೩೦೭೧೯ | ೧೧೧೭೪ | ೨೯.೬೮ | ೨೮೪೫೪ |
| ೨೦೦೭–೦೮ | ೭೨೭೮.೯೪ | ೩೦೩೪೪ | ೧೧೬೩೪ | ೨೫.೧೬ | ೨೯೯೮೮ |
| ೨೦೦೮–೦೯ | ೮೫೨೪.೨೮ | ೩೦೧೮೮ | ೧೧೬೦೦ | ೨೪.೦೩ | ೩೨೦೨೦ |
| ೨೦೦೯–೧೦ | ೮೬೮೫.೯೧ | ೩೧೫೬೬ | ೧೧೦೦೯ | ೨೨.೦೭ | ೩೩೮೧೦ |
| ೨೦೧೦–೧೧ | ೧೧೩೬೬.೦೦ | ೩೦೪೭೪ | ೧೬೭೯೮ | ೨೧.೨೭ | ೩೭೨೧೬ |
| ೨೦೧೧–೧೨ | ೧೨೦೫೬.೦೦ | ೪೩೭೨೬ | ೧೩೨೦೨ | ೨೦.೨೦ | ೪೨೩೫೬ |
| ೨೦೧೨–೧೩ | ೧೩೯೩೪.೦೦ | ೪೧೨೯೬ | ೧೭೪೮೯ | ೨೦.೦೯ | ೪೫೬೫೮ |
| ೨೦೧೩–೧೪ | ೧೪೦೨೯.೦೦ | ೪೫೭೬೭ | ೧೪೮೨೬ | ೧೯.೦೭ | ೪೬೮೪೯ |
| ೨೦೧೪–೧೫ | ೧೪೮೧೬.೭೩ | ೬೦೫೪೪.೫ | ೧೪೩೪೦.೩೧ | ೧೮.೫೨ | ೪೯೪೦೦.೫೭ |
| ೨೦೧೫–೧೬* | ೧೫೭೨೦.೪೩ | ೩೬೭೪೭ | ೯೩೧೧ | ೧೮.೫೨ | ೩೭೧೫೬.೨೭ |

* ಡಿಸೆಂಬರ್ ೨೦೧೫ರವರೆಗೆ ಮೂಲ: ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

### ಇತರೆ ರಾಜ್ಯಗಳಂದ ವಿದ್ಯುತ್ ಖರೀದಿ ಮತ್ತು ವಿದ್ಯುತ್ ವಿನಿಯಮಗಳು

ವಿದ್ಯುತ್ ಸರಬರಾಜಿನ ಕೊರತೆಗಳನ್ನು ನೀಗಿಸಲು, ಕರ್ನಾಟಕವು ನೆರೆ ರಾಜ್ಯಗಳಂದ ಮತ್ತು ಇತರೆ ರಾಜ್ಯಗಳಂದ ವಿದ್ಯುತ್ ಖರೀದಿ ಮತ್ತು ವಿದ್ಯುತ್ ವಿನಿಮಯಗಳನ್ನು ಮಾಡಿಕೊಳ್ಳುತ್ತಿದೆ. ೨೦೧೧-೧೨ ರಿಂದ ೨೦೧೪-೧೫ ಮತ್ತು ೨೦೧೫-೧೬ರಲ್ಲಿ (ಡಿಸೆಂಬರ್ ೨೦೧೫ ರವರೆಗೆ) ಈ ರೀತಿಯ ಖರೀದಿ ವಿವರಗಳನ್ನು ಕೋಷ್ಟಕ ೫.೪೦ರಲ್ಲಿ ನೀಡಲಾಗಿದೆ.

**ಕೋಷ್ಟಕ ೫.೪೦: ಇತರೇ ರಾಜ್ಯಗಳಂದ ದ್ವಿಪಕ್ಷೀಯ ವಾಣಿಜ್ಯ ಮತ್ತು ವಿದ್ಯುತ್ ವಿನಿಮಯಗಳ ಮೂಲಕ ವಿದ್ಯುತ್ ಸಂಗ್ರಹಣೆ**

| ವರ್ಷ | ಇಂಧನ ಮಿ.ಯೂ. ಗಳಲ್ಲಿ | ಒಟ್ಟು ಮೊತ್ತ (ರೂ. ಕೋಟಿಗಳಲ್ಲಿ) | ಸರಾಸರಿ ದರ ರೂ/ಕಿವ್ಯಾ/ಅವರ್ |
|---|---|---|---|
| ೨೦೧೧-೧೨ | ೬೩೧೯.೬೪* | ೩೦೩೫.೨೯* | ೪.೮೦* |
| ೨೦೧೨-೧೩ | ೧೧೦೪೬.೩೬ | ೪೮೩೯.೨೭ | ೪.೩೮ |
| ೨೦೧೩-೧೪ | ೬೪೭೯.೧೫ | ೩೨೧೨.೮೭ | ೪.೯೬ |
| ೨೦೧೪-೧೫ | ೫೯೧೫.೭೧ | ೩೧೦೭.೫೭ | ೫.೨೫ |
| ೨೦೧೫-೧೬<br>ಡಿಸೆಂಬರ್ ೨೦೧೫ರವರೆಗೆ | ೪೮೫೧.೭೭ | ೨೪೬೦.೩೬ | ೫.೦೭ |

**ಆಧಾರ: ಪವರ್ ಕಂಪನಿ ಆಫ್ ಕರ್ನಾಟಕ ಲಮಿಟೆಡ್**

ಏರುತ್ತಿರುವ ಬೇಡಿಕೆ ಮತ್ತು ರಾಜ್ಯದೊಳಗಿನ ಹಾಗೂ ಕೇಂದ್ರ ಸರ್ಕಾರದ ವಿದ್ಯುತ್ ಉತ್ಪಾದನಾ ಘಟಕಗಳಂದ ವಿದ್ಯುತ್ ಉತ್ಪಾದನಾ ಯೋಜನೆಗಳನ್ನು ಪೂರ್ಣಗೊಳಿಸುವಲ್ಲಿ ವಿಳಂಬದಿಂದಾಗಿ, ಇತ್ತೀಚಿನ ವರ್ಷಗಳಲ್ಲಿ ಸ್ವಾಯತ್ತ ವಿದ್ಯುತ್ ಉತ್ಪಾದಕ ಸಂಸ್ಥೆಗಳಂದ ವಿದ್ಯುತ್ ಖರೀದಿಯಲ್ಲಿ ಏರಿಕೆಯಾಗಿರುತ್ತದೆ. ಮುಂದುವರಿದು ದಕ್ಷಿಣ ಮತ್ತು ಇತರೇ ಪ್ರದೇಶಗಳ ನಡುವಿನ ಪ್ರಸರಣದ ತೊಂದರೆಯಿಂದಾಗಿ ದಕ್ಷಿಣ ಪ್ರದೇಶದಲ್ಲಿ ಹೆಚ್ಚಿನ ಬೆಲೆಯಲ್ಲಿ ವಿದ್ಯುತ್ ಅನ್ನು ಖರೀದಿಸಲು ಕಾರಣವಾಗಿರುತ್ತವೆ.

### ವಿದ್ಯುತ್ ಪ್ರಸರಣೆ

#### ರಾಜ್ಯ ಪ್ರಸರಣ ಸೌಲಭ್ಯ ಸಂಸ್ಥೆ-(ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ)

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತವು ರಾಜ್ಯದ ಪ್ರಸರಣ ಸೌಲಭ್ಯ ಸಂಸ್ಥೆಯಾಗಿದ್ದು ರಾಜ್ಯದಲ್ಲಿ ವಿದ್ಯುತ್ ಪ್ರಸರಣ ವ್ಯವಹಾರದಲ್ಲಿ ನಿರತವಾಗಿದೆ. ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತದ ಜವಾಬ್ದಾರಿಯು ವಿದ್ಯುತ್ ಕೇಂದ್ರಗಳನ್ನು ಮತ್ತು ವಿದ್ಯುತ್ ಮಾರ್ಗಗಳನ್ನು ನಿರ್ಮಿಸುವುದು, ಕಾರ್ಯಜಾಲದಲ್ಲ ದಟ್ಟಣೆಯನ್ನು ಸುಲಲತಗೊಳಸುವ ಪದ್ಧತಿಯನ್ನು ಬಲಪಡಿಸುವುದು, ವಿದ್ಯುತ್ ಅನ್ನು ಬಿಡುಗಡೆಗೊಳಸುವುದು ಇತ್ಯಾದಿ ಆಗಿರುತ್ತದೆ. ಡಿಸೆಂಬರ್ ೨೦೧೫ ರಲ್ಲಿದ್ದಂತೆ ಪ್ರಸರಣ ಮೂಲಸೌಕರ್ಯದ ಸ್ಥಿತಿಯನ್ನು ಕೋಷ್ಟಕ ೫.೪೧ರಲ್ಲಿ ನೀಡಲಾಗಿದೆ.

**ಕೋಷ್ಟಕ ೫.೪೧: ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತದ ವಿದ್ಯುತ್ ಕೇಂದ್ರಗಳು ಮತ್ತು ವಿದ್ಯುತ್ ಮಾರ್ಗಗಳು (೩೧-೧೨-೨೦೧೫ರಲ್ಲಿದ್ದಂತೆ)**

| ವೋಲ್ಟೇಜ್ ಮಟ್ಟ | ಕೇಂದ್ರಗಳ ಸಂಖ್ಯೆ | ಪ್ರಸರಣ ಮಾರ್ಗಗಳು ಸರ್ಕ್ಯೂಟ್ ಕಿಲೋ ಮೀಟರ್‌ಗಳಲ್ಲಿ |
|---|---|---|
| ೪೦೦ ಕೆವಿ | ೦೪ | ೨೬೮೩ |
| ೨೨೦ ಕೆವಿ | ೯೭ | ೧೦೫೨೮ |
| ೧೧೦ ಕೆವಿ | ೩೭೮ | ೧೦೧೧೪ |
| ೬೬ ಕೆವಿ | ೫೯೪ | ೧೦೩೯೦ |
| ೩೩ ಕೆವಿ | ೩೪೩ | ೮೭೪೯ |
| **ಒಟ್ಟು** | **೧೪೧೬** | **೪೨೪೬೫** |

**ಮೂಲ: ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ**

ವಿವಿಧ ವೋಲ್ಟೇಜ್ ವರ್ಗಗಳ ಪ್ರಸರಣ ಮಾರ್ಗಗಳು, ಹೊಸ ಉಪಕೇಂದ್ರಗಳು ಹಾಲಿ ಇರುವ ಉಪಕೇಂದ್ರಗಳಲ್ಲಿ ಸಾಮರ್ಥ್ಯ ವೃದ್ಧಿ ಮತ್ತು ೧೨ನೇ ಪಂಚವಾರ್ಷಿಕ ಯೋಜನೆಯ ಅವಧಿಯಲ್ಲಿ, ೨೦೧೧-೧೨ ರಿಂದ ೨೦೧೪-೧೫ ರವರೆಗಿನ ಸೇರ್ಪಡೆಯನ್ನು ಕೋಷ್ಟಕ ೫.೪೨ ಮತ್ತು ೫.೪೩ರಲ್ಲಿ ಕೊಡಲಾಗಿದೆ.

### ಕೋಷ್ಟಕ ೫.೪೨: ೨೦೧೧-೧೨ ರಿಂದ ೨೦೧೪-೧೫ ರವರೆಗೆ ಸೇರ್ಪಡೆಯಾದ ವಿವಿಧ ವೋಲ್ಟೇಜ್ ವರ್ಗಗಳ ಪ್ರಸರಣ ಮಾರ್ಗಗಳು ಮತ್ತು ೧೨ನೇ ಪಂಚವಾರ್ಷಿಕ ಯೋಜನೆಯ ಅವಧಿಗೆ ಪ್ರಸ್ತಾವನೆ (ಪ್ರಸರಣ ಮಾರ್ಗ ಉದ್ದ ಸರ್ಕ್ಯೂಟ್ ಕಿಲೋ ಮೀಟರ್‌ಗಳಲ್ಲಿ)

| ಕಿಲೊ ವೋಲ್ಟ್‌ನಲ್ಲಿ ವೋಲ್ಟೇಜ್ ವರ್ಗ | ೨೦೧೧-೧೨ | ೨೦೧೨-೧೩ | ೨೦೧೩-೧೪ | ೨೦೧೪-೧೫ | ಒಟ್ಟು |
|---|---|---|---|---|---|
| ೪೦೦ | ೦೦ | ೬೭೧.೮೪ | ೦೦ | ೦೦ | ೬೭೧.೮೪ |
| ೨೨೦ | ೩೧೭.೭೩ | ೧೯೩.೧೩ | ೯೮.೬೫ | ೨೪೫.೪೮ | ೮೫೪.೯೯ |
| ೧೧೦ | ೨೬೬.೮೫ | ೨೮೭.೭೦ | ೩೫೧.೯೭ | ೩೧೮.೪೨೩ | ೧೨೨೪.೯೪ |
| ೬೬ | ೧೭೦.೨೨ | ೧೭೦.೮೨ | ೧೫೭.೨೭ | ೧೬೯.೦೦೪ | ೬೬೭.೩೧೪ |
| **ಒಟ್ಟು** | **೭೫೪.೮೦** | **೧೩೨೩.೪೯** | **೬೦೭.೮೯** | **೭೩೨.೯೦೭** | **೩೪೧೯.೦೮೭** |

ಆಧಾರ: ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

### ಕೋಷ್ಟಕ ೫.೪೩: ಹೊಸ ಉಪಕೇಂದ್ರಗಳಲ್ಲಿ ೧೨ನೇ ಪಂಚವಾರ್ಷಿಕ ಯೋಜನೆಯ ಅವಧಿಯಲ್ಲಿ ಸಾಮರ್ಥ್ಯ ವೃದ್ಧಿ ವಿವರಗಳು

| ವೋಲ್ಟೇಜ್ ವರ್ಗ (ಕಿಲೊ ವೋಲ್ಟ್ ಆಂಪ್ಸ್) | ಸೇರ್ಪಡೆ ಮಾಡಲಾದ ಉಪಕೇಂದ್ರಗಳು | | | | | ಉಪಕೇಂದ್ರಗಳಲ್ಲಿ ಸಾಮರ್ಥ್ಯ ವೃದ್ಧಿ | | | | |
|---|---|---|---|---|---|---|---|---|---|---|
| | ೨೦೧೧-೧೨ | ೨೦೧೨-೧೩ | ೨೦೧೩-೧೪ | ೨೦೧೪-೧೫ | ಒಟ್ಟು | ೨೦೧೧-೧೨ | ೨೦೧೨-೧೩ | ೨೦೧೩-೧೪ | ೨೦೧೪-೧೫ | ಒಟ್ಟು |
| ೪೦೦ | - | - | - | - | - | - | - | - | ೨ | ೨ |
| ೨೨೦ | ೧ | ೩ | ೧ | ೧ | ೬ | ೧ | ೨ | ೪ | ೨ | ೯ |
| ೧೧೦ | ೧೭ | ೧೩ | ೧೫ | ೧೬ | ೬೧ | ೨೬ | ೧೫ | ೨೭ | ೧೮ | ೮೬ |
| ೬೬ | ೮ | ೧೭ | ೧೦ | ೧೫ | ೫೦ | ೨೯ | ೩೪ | ೪೩ | ೨೧ | ೧೨೭ |
| ಒಟ್ಟು | ೨೬ | ೩೩ | ೨೬ | ೩೨ | ೧೧೭ | ೫೬ | ೫೧ | ೭೪ | ೪೩ | ೨೨೪ |

ಆಧಾರ: ಇಂಧನ ನಿರ್ವಹಣಾ ಕೇಂದ್ರ

## ಪ್ರಸರಣ ಮತ್ತು ವಿತರಣ ನಷ್ಟ

ಕರ್ನಾಟಕದ ವಿದ್ಯುತ್ ಕ್ಷೇತ್ರವು ೨೦೦೪-೨೦೦೫ರಲ್ಲಿದ್ದ ಅದರ ಪ್ರಸರಣ ಮತ್ತು ವಿತರಣ ನಷ್ಟವನ್ನು ಶೇ.೨೭.೫ ರಿಂದ ೨೦೧೪-೧೫ಕ್ಕೆ ಶೇ. ೧೮.೨೫ ರವರೆಗೆ ತಗ್ಗಿಸಿದೆ. ಪ್ರಸರಣ ಮತ್ತು ವಿತರಣ ನಷ್ಟದಲ್ಲಿ ಮಾರ್ಚ್ ೨೦೧೬ರಲ್ಲಿ ಸುಮಾರು ಶೇ.೧೭.೦೦ರಷ್ಟು ಇಳಿಕೆಯನ್ನು ನಿರೀಕ್ಷಿಸಲಾಗಿದೆ.

ತಾಂತ್ರಿಕ ನಷ್ಟವನ್ನು ಕಡಿಮೆ ಮಾಡುವುದಕ್ಕಾಗಿ ಜಾಲವನ್ನು ಬಲಪಡಿಸಿ ಉನ್ನತೀಕರಿಸಲು ಕ್ಷೇತ್ರದಲ್ಲಿನ ಸಂಸ್ಥೆಗಳು ಯೋಜಿತ ಹೂಡಿಕೆಗಳನ್ನು ಮಾಡುತ್ತಿವೆ.

ವಿದ್ಯುತ್ ವಿತರಣಾ ಕಂಪನಿಗಳ ವಿವಿಧ ಅಧಿಕಾರಿಗಳು ಕೈಗೊಂಡ ಜಾಗೃತ ದಳದ ಪ್ರಯತ್ನಗಳು ಒಟ್ಟಾರೆ ತಾಂತ್ರಿಕ ಮತ್ತು ವಾಣಿಜ್ಯ ನಷ್ಟಗಳನ್ನು ಕಡಿಮೆಯಾಗಲು ಕೊಡುಗೆ ನೀಡಿರುತ್ತವೆ. ವಿವರಗಳಿಗೆ ಕೋಷ್ಟಕ ೫.೪೪ ನೋಡಿ.

### ಕೋಷ್ಟಕ ೫.೪೪: ವಿದ್ಯುತ್ ಕಳ್ಳತನವನ್ನು ಕಡಿಮೆ ಮಾಡಲು ಜಾಗೃತ ದಳದ ಪ್ರಯತ್ನಗಳು

| ವರ್ಷ | ತಪಾಸಣೆ ಗೊಳಿಸಿದ ಸ್ಥಾಪನಗಳ ಸಂಖ್ಯೆ | ಪತ್ತೆ ಮಾಡಲ್ಪಟ್ಟ ಪ್ರಕರಣಗಳ ಸಂಖ್ಯೆ | ವಿಧಿಸಿದ ದಂಡ (ರೂ.ಕೋಟಿ) |
|---|---|---|---|
| ೨೦೧೦-೧೧ | ೬೧೫೧೦೧ | ೧೧೫೬೮೭ | ೧೫೦.೪೪ |
| ೨೦೧೧-೧೨ | ೪೩೬೭೯೮ | ೮೯೨೮೮ | ೧೧೧.೪೬ |
| ೨೦೧೨-೧೩ | ೪೧೨೩೬೮ | ೮೫೯೫೫ | ೧೨೯.೪೧ |
| ೨೦೧೩-೧೪ | ೪೮೨೨೫೧ | ೯೧೦೬೭ | ೧೫೪.೯೦ |
| ೨೦೧೪-೧೫ | ೪೦೮೯೫೫ | ೯೩೪೧೨ | ೧೫೭.೬೨ |
| ೨೦೧೫-೧೬ (ಡಿಸೆಂಬರ್ ೨೦೧೫ರ ವರೆಗೆ) | ೨೯೬೬೩೮ | ೩೩೫೫೭ | ೧೨೯.೬೯ |

ಆಧಾರ: ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತಗಳ ಜಾಗೃತ ದಳ

**ವಿದ್ಯುತ್ ಬಳಕೆ:**

ಕೋಷ್ಟಕ ೫.೪೫ರಲ್ಲಿ ತೋರಿಸಿದಂತೆ, ರಾಜ್ಯದಲ್ಲಿ ೨೦೧೪-೧೫ರಲ್ಲಿ ಕೃಷಿ ಕ್ಷೇತ್ರವು (ನೀರಾವರಿ ಪಂಪ್‌ಸೆಟ್‌ಗಳ ಮೂಲಕ ನೀರನ್ನು ಮೇಲೆತ್ತಿ) ವಿದ್ಯುತ್ ಬಳಕೆಯಲ್ಲಿ ಅತೀ ಹೆಚ್ಚು ಪಾಲು ಅಂದರೆ ಶೇ.೨೬ ಪಡೆದಿದ್ದು, ಜತೆಗೆ ದೂರದ ಅಂತರದಲ್ಲಿ ಎರಡನೇ ಸ್ಥಾನವು ಗೃಹ ಬಳಕೆಯ ಪಾಲು ಶೇಕಡಾ ೨೧ ಪಡೆದಿರುತ್ತದೆ. ಆದಾಗ್ಯೂ ವಿದ್ಯುತ್ ಬಳಕೆ ಶುಲ್ಕ ಪಾವತಿಯಲ್ಲಿ ಕೃಷಿ ಕ್ಷೇತ್ರವು ಅತ್ಯಂತ ಕಡಿಮೆ ಪಾವತಿಸುತ್ತಿದ್ದರೆ ವಾಣಿಜ್ಯ ಗ್ರಾಹಕರು ಅತೀ ಹೆಚ್ಚು ಶುಲ್ಕವನ್ನು ಪಾವತಿಸಿರುತ್ತಾರೆ.

**ಕೋಷ್ಟಕ ೫.೪೫: ವಿವಿಧ ವರ್ಗದ ಬಳಕೆದಾರರು ವಿದ್ಯುತ್ ಬಳಸಿದ ವಿವರಗಳು**

| ಕ್ರ. ಸಂ | ಜಿಲ್ಲೆಗಳು | ಭಾಗ್ಯಜ್ಯೋತಿ ಕುಟೀರ ಜ್ಯೋತಿ ಫಲಾನುಭವಿಗಳು | ವಿದ್ಯುಚ್ಛಕ್ತಿ ಒದಗಿಸಿದ | | | ವಿದ್ಯುಚ್ಛಕ್ತಿ ಒದಗಿಸದ | | |
|---|---|---|---|---|---|---|---|---|
| | | | ಗ್ರಾಮಗಳು | ಉಪ ಗ್ರಾಮಗಳು | ಐ.ಪಿ. ಸೆಟ್ಟುಗಳು | ಗ್ರಾಮಗಳು | ಉಪ ಗ್ರಾಮಗಳು | ಐ.ಪಿ. ಸೆಟ್ಟುಗಳು |
| ೧ | ೨ | ೩ | ೪ | ೫ | ೬ | ೭ | ೮ | ೯ |
| ೧ | ಬೆಂಗಳೂರು | ೨೫೯೭೩ | ೪೮೯ | ೧೧೯ | ೩೬೩೭೩ | ೦ | ೦ | ೦ |
| ೨ | ಬೆಂಗಳೂರು (ಗ್ರಾ) | ೩೬೧೧೬ | ೯೫೦ | ೨೦೨ | ೬೪೫೩೭ | ೦ | ೦ | ೦ |
| ೩ | ರಾಮನಗರ | ೮೦೪೪೨ | ೧೨೮೮ | ೫೯೩ | ೬೫೬೨೮ | ೦ | ೦ | ೦ |
| ೪ | ಚಿತ್ರದುರ್ಗ | ೧೨೪೪೪೬ | ೧೦೬೫ | ೫೬೬ | ೧೦೨೯೦೯ | ೦ | ೦ | ೦ |
| ೫ | ದಾವಣಗೆರೆ | ೧೩೨೫೭೪ | ೯೨೩ | ೯೨೬ | ೧೦೧೨೬೦ | ೦ | ೦ | ೦ |
| ೬ | ಕೋಲಾರ | ೯೪೯೩೬ | ೧೮೮೮ | ೧೪೨ | ೯೧೮೬೯ | ೦ | ೦ | ೦ |
| ೭ | ಚಿಕ್ಕಬಳ್ಳಾಪುರ | ೯೪೧೫೪ | ೧೫೭೨ | ೬೭ | ೯೧೦೦೬ | ೦ | ೦ | ೦ |
| ೮ | ಶಿವಮೊಗ್ಗ | ೯೫೯೭೩ | ೧೪೪೦ | ೨೨೦೩ | ೬೪೨೩೯ | ೩ | ೨೧ | ೩೭೫೮ |
| ೯ | ತುಮಕೂರು | ೧೬೦೪೮೧ | ೨೭೧೬ | ೩೫೧೪ | ೨೧೬೮೮೭ | ೦ | ೦ | ೦ |
| ೧೦ | ಚಿಕ್ಕಮಗಳೂರು | ೫೮೫೯೪ | ೧೦೩೩ | ೩೫೮೯ | ೫೦೪೭೨ | ೦ | ೩೧ | ೨೮೨೮ |
| ೧೧ | ದಕ್ಷಿಣ ಕನ್ನಡ | ೨೮೬೨೩ | ೩೫೬ | ೪೨೫೭ | ೮೬೪೯೬ | ೦ | ೨೯ | ೩೬೦೧ |
| ೧೨ | ಉಡುಪಿ | ೧೨೧೫೩ | ೨೫೪ | ೩೬೪೫ | ೬೨೩೩೬ | ೦ | ೧೨ | ೬೫೯ |
| ೧೩ | ಹಾಸನ | ೧೧೧೩೨೬ | ೨೫೭೬ | ೧೫೦೪ | ೮೫೭೪೬ | ೦ | ೫ | ೭೫೦೯ |
| ೧೪ | ಕೊಡಗು | ೧೬೭೧೧ | ೨೯೬ | ೩೪೮ | ೮೭೮೨ | ೦ | ೩೦ | ೩೬೨ |
| ೧೫ | ಮಂಡ್ಯ | ೧೧೨೪೧೯ | ೧೩೭೦ | ೭೮೬ | ೮೪೬೮೯ | ೦ | ೦ | ೧೦೭೯೮ |
| ೧೬ | ಮೈಸೂರು | ೧೭೪೪೧೫ | ೧೩೪೪ | ೧೬೬೯ | ೭೩೯೨೫ | ೦ | ೨೬ | ೩೯೮೩ |
| ೧೭ | ಚಾಮರಾಜನಗರ | ೮೨೫೯೮ | ೪೨೪ | ೪೦೨ | ೫೨೫೦೫ | ೧ | ೨೮ | ೩೯೧೦ |
| ೧೮ | ಬೆಳಗಾವಿ | ೨೪೫೫೩೮ | ೧೨೭೦ | ೫೨೬ | ೨೫೮೮೧೨ | ೫ | ೨೧ | ೨೪೬೬ |
| ೧೯ | ವಿಜಯಪುರ | ೧೧೨೧೧೦ | ೬೭೭ | ೩೯೪ | ೧೦೯೨೪೫ | ೦ | ೦ | ೩೩೦೬ |
| ೨೦ | ಬಾಗಲಕೋಟೆ | ೮೬೫೪೦ | ೬೨೭ | ೪೨೪ | ೯೫೯೮೯ | ೦ | ೦ | ೪೮೨೬ |
| ೨೧ | ಧಾರವಾಡ | ೬೭೭೧೧ | ೩೭೯ | ೨೩೯ | ೨೨೨೫೬ | ೦ | ೦ | ೧೩೮೨ |
| ೨೨ | ಗದಗ | ೬೭೩೬೩ | ೩೪೧ | ೨೧೪ | ೨೪೪೧೮ | ೦ | ೦ | ೧೦೫೫ |
| ೨೩ | ಹಾವೇರಿ | ೧೩೦೧೮೧ | ೬೯೮ | ೧೬೮ | ೬೦೭೬೯ | ೦ | ೦ | ೨೩೦೮ |
| ೨೪ | ಉತ್ತರ ಕನ್ನಡ | ೫೭೦೪೧ | ೧೨೬೩ | ೭೩೪೧ | ೫೫೫೧೫ | ೨೫ | ೯೧ | ೧೧೫೮ |
| ೨೫ | ಬಳ್ಳಾರಿ | ೧೩೪೧೦೫ | ೫೨೬ | | ೬೬೫೧೦ | ೦ | ೦ | ೪೦೪೦ |
| ೨೬ | ಬೀದರ್ | ೯೧೪೧೦ | ೬೧೦ | ೨೮೦ | ೫೯೧೨೯ | ೦ | ೦ | ೬೦೫೮ |
| ೨೭ | ಕಲಬುರಗಿ | ೧೨೨೬೧೨ | ೬೭೫ | ೧೯೦ | ೫೭೫೩೫ | ೦ | ೦ | ೧೮೪೨ |
| ೨೮ | ಯಾದಗಿರಿ | ೫೮೭೩೬ | ೩೯೪ | ೧೦೭ | ೨೪೮೪೫ | ೦ | ೦ | ೬೮೯ |
| ೨೯ | ರಾಯಚೂರು | ೮೯೫೬೭ | ೬೮೦ | ೭೧ | ೪೫೫೯೯ | ೦ | ೦ | ೯೯೩ |
| ೩೦ | ಕೊಪ್ಪಳ | ೮೦೩೪೬ | ೪೩೮ | ೦ | ೫೩೪೬೩ | ೦ | ೦ | ೬೦೯ |
| | **ರಾಜ್ಯ** | **೨೭೮೫೧೯೪** | **೨೮೫೬೨** | **೩೪೪೮೬** | **೨೨೭೩೭೪೪** | **೩೪** | **೨೯೪** | **೬೮೨೭೩** |

ರಾಜ್ಯದಲ್ಲಿ ೨೦೧೫ರ ಮಾರ್ಚ್ ಅಂತ್ಯಕ್ಕೆ ವಿದ್ಯುತ್ ಸೌಲಭ್ಯ ಪಡೆದ ಬಳಕೆದಾರರ ವಿವರಗಳನ್ನು ಜಿಲ್ಲಾವಾರು ನೀಡಲಾಗಿದೆ. ಇದರಿಂದ ರೂ. ೨೬,೩೭,೪೨೬.೧೦ ಲಕ್ಷ ರೂಗಳ ಆದಾಯ ಬಂದಿರುತ್ತದೆ. ವಿವರಗಳಿಗೆ ಕೋಷ್ಟಕ ೫.೪೬ ಅನ್ನು ನೋಡಿ.

**ಕೋಷ್ಟಕ ೫.೪೬: ವಿದ್ಯುತ್ ಮಾರಾಟ ಮತ್ತು ವರ್ಗವಾರು ಗ್ರಾಹಕರಿಂದ ಆದಾಯ ಸಂಗ್ರಹಣೆ ವಿವರಗಳು**

| ಕ್ರ. ಸಂ | ಜಿಲ್ಲೆಗಳು | ಗೃಹ ಬಳಕೆ | | ಕೈಗಾರಿಕೆ | | ವಾಣಿಜ್ಯ ಬಳಕೆ | | ನೀರಾವರಿ ಐ.ಪಿ.ಸೆಟ್ಟುಗಳು | | ಇತರೆ | | ಒಟ್ಟು | | ವಿದ್ಯುಚ್ಛಕ್ತಿ ಬಳಕೆಯಿಂದ ಬಂದ ಆದಾಯ |
|---|---|---|---|---|---|---|---|---|---|---|---|---|---|---|
| | | ಸಂಖ್ಯೆ | ಮಿಲಿಯನ್ ಯೂನಿಟ್ | ಸಂಖ್ಯೆ | ಮಿಲಿಯನ್ ಯೂನಿಟ್ | ಸಂಖ್ಯೆ | ಮಿಲಿಯನ್ ಯೂನಿಟ್ | ಸಂಖ್ಯೆ | ಮಿಲಿಯನ್ ಯೂನಿಟ್ | ಸಂಖ್ಯೆ | ಮಿಲಿಯನ್ ಯೂನಿಟ್ | ಸಂಖ್ಯೆ | ಮಿಲಿಯನ್ ಯೂನಿಟ್ | |
| ೧ | ೨ | ೩ | ೪ | ೫ | ೬ | ೭ | ೮ | ೯ | ೧೦ | ೧೧ | ೧೨ | ೧೩ | ೧೪ | ೧೫ |
| ೧ | ಬೆಂಗಳೂರು | ೪೧೩೫೬೧೮ | ೪೭೪೯.೩ | ೯೬೮೦೬ | ೩೯೪೯.೦ | ೫೯೧೨೦೨ | ೩೯೨೩.೪ | ೩೬೩೭೩ | ೨೭೮.೦ | ೩೧೯೬೩೬ | ೧೩೨೫.೧ | ೫೧೭೯೬೩೫ | ೧೪೨೨೪.೯ | ೯೨೫೦೧೫.೦ |
| ೨ | ಬೆಂಗಳೂರು (ಗ್ರಾ) | ೪೨೪೦೦೮ | ೨೦೭.೫ | ೧೯೩೬೮ | ೬೩೮.೩ | ೪೪೫೦೩ | ೧೯೨.೯ | ೬೪೫೩೭ | ೬೭೦.೯ | ೨೪೭೪೦ | ೬೪ | ೫೭೭೧೫೬ | ೧೭೭೩.೭ | ೯೩೨೯೯.೧ |
| ೩ | ರಾಮನಗರ | ೨೮೫೨೭೦ | ೧೧೦.೨ | ೯೬೦೮ | ೨೪೫.೨ | ೨೪೭೨೮ | ೩೮.೪ | ೬೫೬೨೮ | ೨೭೭.೯ | ೧೫೨೨೨ | ೩೩೦ | ೪೦೦೪೫೬ | ೧೦೦೧.೮ | ೫೦೭೭೮.೭ |
| ೪ | ಚಿತ್ರದುರ್ಗ | ೩೭೮೧೨೬ | ೧೨೭.೪ | ೮೨೭೧ | ೫೬.೪ | ೩೦೭೧೮ | ೩೪.೩ | ೧೦೨೯೦೯ | ೬೭೭.೯ | ೧೬೯೦೮ | ೬೩ | ೫೩೬೯೩೨ | ೯೫೯.೧ | ೩೫೩೧೬.೪ |
| ೫ | ದಾವಣಗೆರೆ | ೪೮೫೯೭೬ | ೨೩೦.೮ | ೧೧೬೪೫ | ೧೧೬.೪ | ೪೪೦೩೪ | ೫೯ | ೧೦೧೨೬೦ | ೬೩೭.೫ | ೨೭೭೧೩ | ೯೭ | ೬೭೦೬೨೮ | ೧೧೪೧ | ೪೨೭೭೩.೧ |
| ೬ | ಕೋಲಾರ | ೩೯೬೩೮೯ | ೧೫೦.೪ | ೯೬೦೩ | ೩೧೯.೧ | ೩೯೯೩೭ | ೪೧.೧ | ೯೧೮೬೯ | ೭೯೦ | ೧೬೨೪೭ | ೭೦.೪ | ೫೫೪೦೪೫ | ೧೩೭೧.೧ | ೫೪೩೭೧.೯ |
| ೭ | ಚಿಕ್ಕಬಳ್ಳಾಪುರ | ೩೧೪೪೮೮ | ೧೦೩.೦ | ೭೭೦೨ | ೬೩.೯ | ೩೦೫೩೨ | ೨೭.೧ | ೯೧೦೦೬ | ೨೮೮.೬ | ೧೪೨೬೫ | ೮೦ | ೪೫೭೯೯೩ | ೧೦೯೬.೫ | ೪೩೨೧೧.೮ |
| ೮ | ಶಿವಮೊಗ್ಗ | ೪೩೭೧೫೪ | ೨೩೩.೦ | ೮೨೧೨ | ೩೧೨.೩ | ೪೬೮೭೨ | ೭೫.೧ | ೬೪೨೩೯ | ೪೭೭.೪ | ೧೧೨೧೯ | ೧೦೨.೯ | ೫೬೭೯೬೬ | ೧೨೦೦.೬ | ೬೧೧೬೪.೪ |
| ೯ | ತುಮಕೂರು | ೭೩೮೬೧೭ | ೨೫೧.೦ | ೧೭೭೩೭ | ೩೫೫.೮ | ೬೩೮೩೯ | ೭೦.೨ | ೨೧೬೮೮೭ | ೧೭೨೨.೪ | ೩೦೫೯೩ | ೧೧೫.೫ | ೧೦೬೭೬೭೩ | ೨೫೧೪.೯ | ೮೯೫೦೫ |
| ೧೦ | ಚಿಕ್ಕಮಗಳೂರು | ೩೦೦೭೪೩ | ೧೨೩.೨ | ೫೪೮೨ | ೪೫.೬ | ೨೯೦೨೭ | ೩೩.೫ | ೫೦೪೭೨ | ೨೮೬.೫ | ೮೦೦೧ | ೩೮.೧ | ೩೯೩೭೨೫ | ೫೨೬.೯ | ೨೫೩೯೩.೮ |
| ೧೧ | ದಕ್ಷಿಣ ಕನ್ನಡ | ೫೨೫೦೨೭ | ೫೯೦.೩ | ೭೪೮೫ | ೩೧೯.೨ | ೬೮೭೯೭ | ೩೩೫.೩ | ೮೬೪೯೬ | ೨೬೨.೯ | ೧೫೨೫೦ | ೧೩೮.೯ | ೭೦೩೦೫೫ | ೫೨೬.೯ | ೯೬೯೧೬.೪ |
| ೧೨ | ಉಡುಪಿ | ೨೯೭೨೭೬ | ೨೯೫.೦ | ೫೩೭೬ | ೧೬೧ | ೩೮೩೫೪ | ೧೫೭ | ೬೨೩೩೬ | ೮೬.೯ | ೬೮೦೭ | ೩೬.೩ | ೪೧೦೧೪೯ | ೧೬೪೬.೬ | ೪೨೮೩೬.೭ |
| ೧೩ | ಹಾಸನ | ೪೭೧೯೮೫ | ೧೬೪.೩ | ೭೮೬೩ | ೧೧೧.೧ | ೩೯೯೧೯ | ೫೭.೭ | ೮೫೭೪೬ | ೫೩೫.೬ | ೧೨೮೨೩ | ೭೬.೧ | ೬೧೮೩೩೬ | ೭೩೬.೨ | ೪೩೩೩೩.೫ |
| ೧೪ | ಕೊಡಗು | ೧೫೦೯೨೦ | ೭೯.೩ | ೧೬೭೪ | ೧೬.೬ | ೧೭೦೧೯ | ೩೨.೧ | ೮೭೮೨ | ೧೬.೩ | ೪೪೪೮ | ೧೪.೬ | ೧೮೨೮೪೩ | ೯೪೪.೬ | ೮೧೦೮.೭ |
| ೧೫ | ಮಂಡ್ಯ | ೪೫೩೮೭೬ | ೧೫೯.೬ | ೧೦೦೭೦ | ೯೬.೩ | ೩೯೬೩೭ | ೫೦.೪ | ೮೪೬೮೯ | ೮೭೨.೫ | ೧೨೫೭೩ | ೩೮೪.೬ | ೬೦೦೮೪೫ | ೧೫೯.೦ | ೬೯೧೩೬.೮ |
| ೧೬ | ಮೈಸೂರು | ೭೯೯೪೦೭ | ೪೭೨.೨ | ೧೨೪೪೪ | ೬೪೦.೪ | ೮೩೭೭೭ | ೨೩೧.೨ | ೭೩೯೨೫ | ೫೦೮.೩ | ೩೫೦೫೮ | ೨೦೬.೧ | ೧೦೦೪೬೧೧ | ೧೫೬೩.೫ | ೧೦೯೫೨೮ |
| ೧೭ | ಚಾಮರಾಜನಗರ | ೨೪೭೩೭೫ | ೭೫.೯ | ೩೨೩೭ | ೧೮.೬ | ೧೭೭೧೫ | ೧೯.೭ | ೫೨೫೦೫ | ೩೭೨.೩ | ೮೨೧೨ | ೨೭.೨ | ೩೨೯೦೪೪ | ೨೦೫೮.೧ | ೨೨೬೪೩.೫ |
| ೧೮ | ಬೆಳಗಾವಿ | ೯೩೭೭೧೨ | ೪೩೮.೪ | ೩೬೪೪೪ | ೧೫೬.೭ | ೮೯೧೧೧ | ೫೨೨.೨ | ೨೫೮೮೧೨ | ೨೪೫೪.೪ | ೨೩೪೩೫ | ೨೨೧.೨ | ೧೩೪೫೫೧೪ | ೫೧೩.೬ | ೬೪೭೪೩.೪ |
| ೧೯ | ವಿಜಯಪುರ | ೩೯೨೮೪೯ | ೧೬೮.೨ | ೧೩೪೨೮ | ೫೩ | ೪೧೭೭೦ | ೮೨.೧ | ೧೦೯೨೪೫ | ೧೦೪೯.೯ | ೧೦೫೬೭ | ೭೯.೮ | ೫೬೭೮೫೯ | ೩೭೯೨.೯ | ೧೮೪೯೧.೪ |
| ೨೦ | ಬಾಗಲಕೋಟೆ | ೩೬೧೫೫೮ | ೧೪೬.೦ | ೧೯೩೨೭ | ೫೫.೪ | ೩೬೨೦೭ | ೨೦೬.೩ | ೯೫೯೮೯ | ೧೩೬೦.೧ | ೧೦೨೧೨ | ೭೯.೮ | ೫೨೩೨೯೩ | ೧೪೩೩.೧ | ೩೭೦೨೬.೯ |
| ೨೧ | ಧಾರವಾಡ | ೪೪೬೯೦೬ | ೨೯೮.೬ | ೧೦೯೬೭ | ೧೦೯.೧ | ೫೫೧೦೩ | ೨೭೧.೪ | ೨೨೨೫೬ | ೧೧೫.೯ | ೧೫೭೨೭ | ೮೯.೯ | ೫೫೦೯೫೯ | ೧೮೪೭.೫ | ೨೯೫೧೮.೭ |
| ೨೨ | ಗದಗ | ೨೪೬೪೫೧ | ೯೩.೬ | ೫೬೩೩ | ೨೧.೬ | ೨೦೮೫೩ | ೩೮.೫ | ೨೪೪೧೮ | ೧೩೫.೫ | ೬೧೩೬ | ೪೦.೬ | ೩೦೩೪೯೧ | ೮೮೪.೯ | ೧೯೦೨೦೫ |
| ೨೩ | ಹಾವೇರಿ | ೩೩೯೪೬೮ | ೧೧೮.೨ | ೬೭೫೮ | ೨೩.೩ | ೨೮೯೦೬ | ೬೧ | ೬೦೭೬೯ | ೪೦೨.೦ | ೧೧೦೯೦ | ೭೦.೫ | ೪೪೬೯೯೧ | ೩೨೯.೮ | ೯೭೨೦೬.೭ |
| ೨೪ | ಉತ್ತರ ಕನ್ನಡ | ೩೫೪೧೦೯ | ೨೧೨.೨ | ೬೨೧೧ | ೨೯.೫ | ೩೭೮೧೧ | ೧೨೨.೨ | ೫೫೫೧೫ | ೯೦.೫ | ೧೧೦೬೨ | ೫೨.೧ | ೪೬೪೭೦೮ | ೬೭೪.೯ | ೭೪೯೨೭.೩ |
| ೨೫ | ಬಳ್ಳಾರಿ | ೫೧೮೧೩೯ | ೨೮೩.೩ | ೧೧೩೮೨ | ೨೭೬.೦ | ೫೩೩೯೧ | ೯೧.೩ | ೬೬೫೧೦ | ೬೪೮.೮ | ೧೦೨೨೧ | ೧೪೬.೬ | ೬೫೯೬೪೩ | ೫೦೬.೬ | ೭೪೪೫೧.೫ |
| ೨೬ | ಬೀದರ್ | ೨೮೫೮೪೩ | ೧೬೭.೩ | ೮೬೭೦ | ೧೦೧.೧ | ೩೪೨೧೪ | ೩೮.೨ | ೫೯೧೨೯ | ೫೧೬.೪ | ೬೭೬೮ | ೯೫.೪ | ೩೯೪೬೨೪ | ೧೪೪೫.೯ | ೪೪೫೪೭.೮ |
| ೨೭ | ಕಲಬುರಗಿ | ೪೬೩೩೬೬ | ೨೬೯.೪ | ೧೫೫೦೬ | ೧೬೬.೭ | ೫೫೩೮೮ | ೮೮.೪ | ೫೭೫೩೫ | ೪೭೮ | ೧೧೨೫೫ | ೧೨೬.೩ | ೬೦೩೦೫೦ | ೯೧೮.೪ | ೫೮೯೯೫.೯ |
| ೨೮ | ಯಾದಗಿರಿ | ೧೬೦೨೪೮ | ೬೭.೬ | ೫೮೩೨ | ೧೮.೯ | ೧೬೦೯೦ | ೧೯ | ೨೪೮೪೫ | ೩೦೩.೫ | ೩೧೭೫ | ೫೮.೨ | ೨೧೦೧೯೦ | ೧೧೨೮.೮ | ೨೧೨೩೧.೪ |
| ೨೯ | ರಾಯಚೂರು | ೩೦೧೫೩೨ | ೧೫೭.೩ | ೭೧೮೫ | ೧೮೯.೮ | ೩೧೧೮೯ | ೫೩.೯ | ೪೫೫೯೯ | ೪೮೮.೧ | ೬೨೨೩ | ೯೦.೫ | ೩೯೧೭೨೮ | ೪೬೭.೧ | ೪೯೫೦೭.೧ |
| ೩೦ | ಕೊಪ್ಪಳ | ೨೪೧೩೨೨ | ೧೦೪.೫ | ೬೦೯೫ | ೪೬೪.೩ | ೨೪೩೪೦ | ೩೧.೩ | ೫೩೪೬೩ | ೫೫೬.೫ | ೯೫೫೫ | ೩೪.೨ | ೩೩೪೭೭೫ | ೯೭೯.೬ | ೬೩೨೩೮.೨ |
| | ರಾಜ್ಯ | ೧೫೮೯೧೭೫೮ | ೧೦೬೪೬.೯ | ೩೯೬೦೨೧ | ೯೧೩೧.೦ | ೧೭೭೪೯೮೩ | ೭೦೦೪.೦ | ೨೨೭೩೭೪೪ | ೧೭೮೯೫.೭ | ೭೧೫೧೪೧ | ೧೭೫೪.೪ | ೨೧೦೫೧೬೪೭ | ೧೧೯೦.೮ | ೨೬೩೭೪೨೬ |

ಡಿಸೆಂಬರ್ ೨೦೧೫ರವರೆಗೆ ಒಟ್ಟು ೨೩೪೦೫೪೩ ಭಾಗ್ಯಜ್ಯೋತಿ/ಕುಟೀರ ಜ್ಯೋತಿ ಸಂಪರ್ಕಗಳು ಮತ್ತು ೨೩೪೪೪೮೬ ನೀರಾವರಿ ಪಂಪ್‌ಸೆಟ್‌ಗಳು ರಾಜ್ಯದಲ್ಲಿರುತ್ತವೆ. ನೀರಾವರಿ ಪಂಪ್‌ಸೆಟ್‌ಗಳಿಗೆ ಮತ್ತು ಭಾಗ್ಯಜ್ಯೋತಿ/ಕುಟೀರ ಜ್ಯೋತಿ ಗ್ರಾಹಕರಿಗೆ ದಿ:೦೧-೦೮-೨೦೦೮ ರಿಂದ ಜಾರಿಗೆ ಬರುವಂತೆ ಉಚಿತವಾಗಿ ವಿದ್ಯುತ್ ಪೂರೈಕೆ ಮಾಡಲಾಗುತ್ತಿದೆ. ಕೃಷಿ ವಲಯಕ್ಕೆ ಉಚಿತ ವಿದ್ಯುತ್ ಪೂರೈಕೆಯ ಸಂಪೂರ್ಣ ವೆಚ್ಚವನ್ನು ಸಹಾಯಧನದ ಮೂಲಕ ರಾಜ್ಯ ಸರ್ಕಾರವು ಭರಿಸುತ್ತಿದೆ. ಕಳೆದ ನಾಲ್ಕು ವರ್ಷಗಳಿಂದ ಮತ್ತು ೨೦೧೫-೧೬ರಲ್ಲಿ (ಡಿಸೆಂಬರ್ ೨೦೧೫ರವರೆಗೆ) ರಾಜ್ಯ ಸರ್ಕಾರವು ಒದಗಿಸಿದ ಸಹಾಯಧನದ ವಿವರಗಳನ್ನು ಕೋಷ್ಟಕ ೫.೪೭ರಲ್ಲಿ ನೀಡಲಾಗಿದೆ.

**ಕೋಷ್ಟಕ ೫.೪೭: ಸರ್ಕಾರವು ಬಿಡುಗಡೆ ಮಾಡಿದ ಸಹಾಯಧನದ ವಿವರ**

| ವರ್ಷ | ಬಿಡುಗಡೆ ಮಾಡಿದ ಸಹಾಯಧನ (ರೂ. ಕೋಟಿಗಳಲ್ಲಿ) |
|---|---|
| ೨೦೧೧-೧೨ | ೪೮೫೧.೨೮ |
| ೨೦೧೨-೧೩ | ೬೫೦೦.೦೦ |
| ೨೦೧೩-೧೪ | ೫೪೬೦.೦೦ |
| ೨೦೧೪-೧೫ | ೬೨೦೦.೦೦ |
| ೨೦೧೫-೧೬ (ಡಿಸೆಂಬರ್ ೨೦೧೫ರವರೆಗೆ) | ೪೪೩೨.೧೮ |

ಆಧಾರ: ಇಂಧನ ಇಲಾಖೆ

## ವಿದ್ಯುಚ್ಛಕ್ತಿ ಬೇಡಿಕೆ ಹಾಗೂ ಸರಬರಾಜು:

ಬೇಡಿಕೆ ಹಾಗೂ ಸರಬರಾಜು ಪರಿಸ್ಥಿತಿಗೆ ಅನುಗುಣವಾಗಿ ಪೂರೈಕೆಯಲ್ಲಿ ಕೊರತೆ ಬಾರದಂತೆ ಖಚಿತ ಪಡಿಸಿಕೊಳ್ಳುವುದೇ ಕರ್ನಾಟಕದಲ್ಲಿ ವಿದ್ಯುತ್ ಸರಬರಾಜಿಗೆ ಸಂಬಂಧಿಸಿದ ಪ್ರಮುಖ ವಿಷಯವಾಗಿರುತ್ತದೆ. ಪ್ರಗತಿ ಪಥದೆಡೆಗೆ ಸಾಗುತ್ತಿರುವ ಕರ್ನಾಟಕ ರಾಜ್ಯವು ನಿರಂತರವಾಗಿ ಏರುತ್ತಿರುವ ವಿದ್ಯುತ್ ಬೇಡಿಕೆಯಿಂದಾಗಿ ವಿದ್ಯುತ್ ಕೊರತೆಯನ್ನು ಎದುರಿಸುತ್ತಿರುವ ರಾಜ್ಯ ಸರ್ಕಾರವು ಹಲವಾರು ಮೂಲಗಳಿಂದ ಸಾಮರ್ಥ್ಯ ಸೇರ್ಪಡೆಗಾಗಿ ಏರುತ್ತಿರುವ ಬೇಡಿಕೆಯನ್ನು ಸರಿದೂಗಿಸಲು ಹೆಚ್ಚಿನ ವಿದ್ಯುತ್ ಅನ್ನು ಶೇಖರಿಸಲು ಯೋಜನೆಗಳನ್ನು ರೂಪಿಸುತ್ತಿದೆ. ೨೦೧೫-೧೬ರಲ್ಲಿ ತೀವ್ರ ಬರ ಪರಿಸ್ಥಿತಿಯನ್ನು ಎದುರಿಸುತ್ತಿದ್ದು, ಜಲವಿದ್ಯುತ್ ನ ಲಭ್ಯತೆಯು ತೀವ್ರವಾಗಿ ಕಡಿಮೆಯಾಗಿರುತ್ತದೆ. ರಾಜ್ಯ ಸರ್ಕಾರವು ಲಭ್ಯವಿರುವ ಎಲ್ಲಾ ಮೂಲಗಳಿಂದ ವಿದ್ಯುತ್ ಬೇಡಿಕೆಯನ್ನು ಪೂರೈಸುತ್ತಿದೆ. ಆದರೂ ಸಹ ಪೂರೈಕೆಯಲ್ಲಿ ಕೊರತೆಯು ಕಂಡುಬಂದಿರುತ್ತದೆ.

ರಾಜ್ಯವು ವಿದ್ಯುತ್ ಉತ್ಪಾದನೆಯನ್ನು ವೃದ್ಧಿಪಡಿಸುವುದರೊಂದಿಗೆ ವಿದ್ಯುತ್ ಅನ್ನು ಕೇಂದ್ರೀಯ ವಿದ್ಯುತ್ ಉತ್ಪಾದನಾ ಘಟಕಗಳಿಂದ ಮತ್ತು ನೆರೆಯ ರಾಜ್ಯಗಳಿಂದ ಖರೀದಿಸುವುದರ ಮೂಲಕ ಹಾಗೂ ವಿದ್ಯುತ್ ವಿನಿಮಯಗಳ ಮೂಲಕವೂ ವಿದ್ಯುತ್ ಕೊರತೆಯನ್ನು ತಗ್ಗಿಸಲು ಕ್ರಮಗಳನ್ನು ಕೈಗೊಳ್ಳುತ್ತಿದೆ. ಇದಲ್ಲದೇ ಬೇಡಿಕೆ ಪರವಾದ ನಿರ್ವಹಣೆಯಿಂದ ರಾಜ್ಯ ಸರ್ಕಾರವು ವಿದ್ಯುತ್ ಅನ್ನು ಸಂರಕ್ಷಿಸಲು ಕ್ರಮಗಳನ್ನು ಕೈಗೊಳ್ಳುತ್ತಿದೆ. ಬೇಡಿಕೆ ಹಾಗೂ ಸರಬರಾಜು ನಡುವಿನ ಅಂತರವನ್ನು ಸರಿದೂಗಿಸಲಾಗದ ಅತ್ಯಂತ ಕ್ಲಿಷ್ಟ ಸಂದರ್ಭಗಳಲ್ಲಿ ಮಾತ್ರ ವಿದ್ಯುತ್ ನಿಲುಗಡೆಯನ್ನು (ಲೋಡ್ ಶೆಡ್ಡಿಂಗ್) ಮಾಡಲಾಗುತ್ತದೆ. ದಿನವೊಂದಕ್ಕೆ ವಿದ್ಯುತಿನ ಅತ್ಯಧಿಕ ಬೇಡಿಕೆ ಮತ್ತು ಅತ್ಯಧಿಕ ಸರಬರಾಜು ಇವೆರಡರಲ್ಲೂ ೨೦೦೭-೦೮ ರಿಂದ ಏರಿಕೆ ಗತಿಯನ್ನು ಕಾಣಬಹುದು. ೨೦೧೪-೧೫ರಲ್ಲಿ ಈಡೇರಿಸಿದ ಅತ್ಯಧಿಕ ಬೇಡಿಕೆಯು ೯೫೦೩ ಮೆಗಾ ವ್ಯಾಟ್ಸ್ ಆಗಿರುತ್ತದೆ ಮತ್ತು ೨೦೧೫-೧೬ರಲ್ಲಿ ಇದು ೯೫೪೯ ಮೆಗಾ ವ್ಯಾಟ್ಸ್ ಆಗಿದ್ದು ಶೇಕಡಾ ೦.೪೮ರಷ್ಟು ಏರಿಕೆಯನ್ನು ತೋರಿಸುತ್ತದೆ. ೨೦೧೫-೧೬ರಲ್ಲಿ ಸುಮಾರು ೧೦೦೦೦ ಮೆಗಾ ವ್ಯಾಟ್ಸ್ ನಷ್ಟು ಅತ್ಯಧಿಕ ಬೇಡಿಕೆಯು ಬರುವ ನಿರೀಕ್ಷೆ ಇರುತ್ತದೆ. ವಿದ್ಯುತ್ ಸರಬರಾಜು ಕೊರತೆಯು ೨೦೧೪-೧೫ರಲ್ಲಿ ೧೭೫೫ ಮೆಗಾ ವ್ಯಾಟ್ಸ್ ಅತ್ಯಧಿಕವಾಗಿದ್ದು, ಇಂಧನ ಸರಬರಾಜು ಕೊರತೆಯು ೨೦೦೬-೦೭ರಲ್ಲಿ ೮೨೨೬ ಮಿಲಿಯನ್ ಯೂನಿಟ್ಸ್ ಅತ್ಯಧಿಕವಾಗಿರುತ್ತದೆ. ಪ್ರಮುಖವಾಗಿ ರಾಜ್ಯವು ತೆಗೆದುಕೊಂಡಿರುವ ವಿದ್ಯುತ್ ಮೂಲಸೌಕರ್ಯ ವಿಸ್ತರಣೆಯಿಂದಾಗಿ ಸುಧಾರಣೆಗಳನ್ನು ಕಾಣಬಹುದಾಗಿದೆ.

## ಬೇಡಿಕೆಯ ನಿಟ್ಟಿನಲ್ಲಿ ನಿರ್ವಹಣೆ

ವಿದ್ಯುತ್ ಬೇಡಿಕೆಯ ನಿಟ್ಟಿನಲ್ಲಿ ನಿರ್ವಹಣೆಯ ಭಾಗವಾಗಿ ವಿದ್ಯುತ್ ಸಂರಕ್ಷಣೆಯನ್ನು ಉತ್ತೇಜಿಸಲು ಕರ್ನಾಟಕ ಸರ್ಕಾರವು ಕಾರ್ಯಕ್ರಮಗಳನ್ನು ಜಾರಿಗೊಳಿಸಿದೆ ಮತ್ತು ಕೆಲವು ಹೊಸ ಕಾರ್ಯಕ್ರಮಗಳನ್ನು ಬೇಡಿಕೆಯ ನಿಟ್ಟಿನಲ್ಲಿ ನಿರ್ವಹಣೆ ಉತ್ತೇಜನಗಳಿಗಾಗಿ ಜಾರಿಗೊಳಿಸಲು ಉದ್ದೇಶಿಸಿದೆ. ಇವುಗಳಲ್ಲಿ ಕೆಲವು ಪ್ರಮುಖ ಕಾರ್ಯಕ್ರಮಗಳು ಈ ರೀತಿ ಇರುತ್ತದೆ.

- ಪ್ರಸ್ತುತ ಐಚ್ಛಿಕವಾಗಿರುವ ದಿನದ ಸಮಯಾಧಾರಿತ ದರವನ್ನು ಕೈಗಾರಿಕಾ ಗ್ರಾಹಕರಿಗೆ ಮತ್ತು ವಿಶೇಷವಾಗಿ ಮಂಜೂರು ಮಾಡಿದ ಸಾಂಕ್ಷನ್ ಲೋಡ್ ೫೦೦ ಕೆವಿಎ ಮತ್ತು ಅದಕ್ಕಿಂತ ಮೇಲಿನ ಲೋಡ್ ಅನ್ನು ಹೊಂದಿರುವ ಹೆಚ್ ಟಿ ಗ್ರಾಹಕರಿಗೆ ಕಡ್ಡಾಯಗೊಳಿಸುವುದು.
- ಪರಿಣಾಮಕಾರಿ ವಿದ್ಯುತ್ ಬೀದಿ ದೀಪಗಳ ವ್ಯವಸ್ಥೆ ಮತ್ತು ಅವುಗಳನ್ನು ಬೆಳಗಿಸಲು ಹಾಗೂ ಆರಿಸಲು ಎಲೆಕ್ಟ್ರಾನಿಕ್ ಟೈಮ್ ಸ್ವಿಚ್‌ಗಳನ್ನು ಬೀದಿ ದೀಪಗಳಿಗೆ ಅಳವಡಿಸುವುದು.
- ಪ್ರಸ್ತುತ ಕೃಷಿಗೆ ಒದಗಿಸಲಾಗುತ್ತಿರುವ ಲೋಡ್‌ನ ಫೀಡರ್‌ಗಳನ್ನು ನಿರಂತರ ಜ್ಯೋತಿ ಯೋಜನೆಯಿಂದ ಬೇರ್ಪಡಿಸಿ ೨೪೮೭ ನಿಲುಗಡೆ ರಹಿತ ವಿದ್ಯುತ್ ಸರಬರಾಜನ್ನು ಗ್ರಾಮಾಂತರ ಪ್ರದೇಶಗಳಲ್ಲಿ ಕೃಷಿಯೇತರ ಲೋಡ್‌ಗೆ ಒದಗಿಸಲಾಗುವು.
- ಕೃಷಿ ಲೋಡ್‌ಗೆ ಅಧಿಕ ವೋಲ್ಟೇಜ್ ವಿತರಣಾ ಪದ್ಧತಿಯನ್ನು ಅಳವಡಿಸುವುದು
- ಸೋಲಾರ್ ವಾಟರ್ ಹೀಟರ್ ಅನ್ನು ಉಪಯೋಗಿಸುವಂತೆ ಗ್ರಾಹಕರನ್ನು ಉತ್ತೇಜಿಸುವುದು.
- ಮುನಿಸಿಪಾಲಿಟಿಗಳ / ಕಾರ್ಪೋರೇಷನ್‌ಗಳ ಮತ್ತು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ವ್ಯಾಪ್ತಿಯೊಳಗಿನ

೬೦೦ ಚದರ ಅಡಿ ಮತ್ತು ಅದಕ್ಕಿಂತ ಹೆಚ್ಚು ನಿರ್ಮಿತ ಸ್ಥಳ ವಿಸ್ತೀರ್ಣದಲ್ಲಿರುವ ಎಲ್ಲಾ ನಿವಾಸಿ ಕಟ್ಟಡಗಳಲ್ಲಿ ಸೋಲಾರ್ ವಾಟರ್ ಹೀಟರ್‌ನ ಉಪಯೋಗವನ್ನು ಕಡ್ಡಾಯಗೊಳಿಸುವುದು.

- ಸರ್ಕಾರಿ ಕಟ್ಟಡಗಳಲ್ಲಿ ಅನುದಾನಿತ ಸಂಸ್ಥೆಗಳಲ್ಲಿ ಮಂಡಳಿಗಳಲ್ಲಿ ಕಾರ್ಪೋರೇಷನ್‌ಗಳಲ್ಲಿ ಸಿ ಎಫ್ ಎಲ್ ಗಳನ್ನು ಕಡ್ಡಾಯಗೊಳಿಸುವುದು.
- ಪರಿಣಾಮಕಾರಿ ವಿದ್ಯುತ್ ಅಳವಡಿಕೆ ಇರುವ ಕಟ್ಟಡ ಮಾದರಿ ನಕ್ಷೆಗಳನ್ನು ಅಭಿವೃದ್ಧಿಪಡಿಸುವುದು
- ಫ್ಲೋರೋಸೆಂಟ್ ಟ್ಯೂಬ್‌ಲೈಟ್ ಗಳಲ್ಲಿ ಸಾಂಪ್ರದಾಯಿಕ ತಾಮ್ರದ ಚೋಕ್ ಬಳಕೆಯ ಬದಲಿಗೆ ಎಲೆಕ್ಟ್ರಾನಿಕ್ ಚೋಕ್ ಬಳಕೆಯನ್ನು ಕಡ್ಡಾಯಗೊಳಿಸುವುದು
- ಭಾರತ ಸರ್ಕಾರದ ಬ್ಯೂರೋ ಆಫ್ ಎನರ್ಜಿಯವರು ಆರಂಭಿಸಿದ ಬಚತ್ ಲ್ಯಾಂಪ್ ಯೋಜನೆಯನ್ನು ಅಳವಡಿಸುವುದು.
- ಮಾಪನ ಜಾಲ ಪರಿಕಲ್ಪನೆಯಡಿಯಲ್ಲಿ ಮೇಲ್ಧಾವಣಿ ಯೋಜನೆಯನ್ನು ಅನುಷ್ಠಾನಗೊಳಿಸುವುದು.

ವಿದ್ಯುತ್ ಸರಬರಾಜು ಕಂಪನಿಗಳು ಪ್ರಸ್ತುತ ಸ್ಮಾರ್ಟ್ ಗ್ರಿಡ್ ಪೈಲಟ್ ಪ್ರಾಜೆಕ್ಟನ್ನು ಮತ್ತು ಸ್ಮಾರ್ಟ್ ಮೀಟರ್ ತಾಂತ್ರಿಕತೆಗಳಿಂದ ಪ್ರತಿಯೊಂದು ಇಂಧನ ಬಳಕೆಯನ್ನು ಆನ್-ಲೈನ್ ಮುಖಾಂತರ ದಾಖಲಿಸಲು ಮತ್ತು ಪೋಸ್ಟ್ ಪೇಯ್ಡ್/ಪ್ರೀ ಪೇಯ್ಡ್ ಆಯ್ಕೆಗಳನ್ನು ವಿದ್ಯುತ್ ಗ್ರಾಹಕರಿಗೆ ಒದಗಿಸಲು ಯೋಜನೆಯೊಂದನ್ನು ಜಾರಿಗೊಳಿಸುತ್ತಿದೆ.

## ಗ್ರಾಮೀಣ ವಿದ್ಯುದೀಕರಣ

ರಾಷ್ಟ್ರೀಯ ವಿದ್ಯುತ್ ನೀತಿಯು ನಿಗದಿ ಪಡಿಸಿದ ಗುರಿಗಳನ್ನು ಸಾಧಿಸಲು ಹಳ್ಳಿಗಳು, ಕೊಪ್ಪಲುಗಳು, ಹರಿಜನ ಬಸತಿಗಳು ಮತ್ತು ತಾಂಡಾಗಳನ್ನು ವಿದ್ಯುದೀಕರಣಗೊಳಿಸಿ ಉತ್ತೇಜಿಸಲು ರಾಜ್ಯ ಸರ್ಕಾರವು ಯೋಜಿಸಿರುತ್ತದೆ. ವಿದ್ಯುತ್ ಮಾರ್ಗ ಅಳವಡಿಕೆ ತೀರಾ ಸಾಧ್ಯವಿರದ ಕೆಲವೇ ಕೆಲವು ಹಳ್ಳಿಗಳನ್ನು ಹೊರತುಪಡಿಸಿ ಕರ್ನಾಟಕದಲ್ಲಿ ಬಹುತೇಕ ಎಲ್ಲಾ ಹಳ್ಳಿಗಳ ವಿದ್ಯುದೀಕರಣವು ಪೂರ್ಣಗೊಂಡಿದೆ. ಅಂತಹ ಹಳ್ಳಿಗಳಲ್ಲಿ ವಿದ್ಯುದೀಕರಣವು ಪ್ರಗತಿಯಲ್ಲಿದ್ದು, ಸೌರಶಕ್ತಿ, ಡಿಸೆಂಟ್ರಲೈಸ್ಡ್ ಡಿಸ್ಟ್ರಿಬ್ಯೂಟೆಡ್ ಜನರೇಶನ್ ಇತ್ಯಾದಿ ಬದಲಿ ವಿದ್ಯುತ್ ಮೂಲಗಳನ್ನು ರಾಜೀವ್ ಗಾಂಧಿ ಗ್ರಾಮೀಣ ವಿದ್ಯುತ್ ಯೋಜನೆಯಡಿ ಒದಗಿಸಲು ವಿದ್ಯುತ್ ಸರಬರಾಜು ಕಂಪನಿಗಳು ಪ್ರಯತ್ನಿಸುತ್ತಿವೆ. ವಿದ್ಯುತ್ ಸರಬರಾಜು ಕಂಪನಿಗಳು ಕೊಪ್ಪಲುಗಳು ಮತ್ತು ತಾಂಡಾಗಳನ್ನು ಹಂತ ಹಂತವಾಗಿ ವಿದ್ಯುದೀಕರಣಗೊಳಿಸಲು ಯೋಜಿಸಿವೆ. ಕಳೆದ ಐದು ವರ್ಷಗಳಲ್ಲಿ ಮತ್ತು ಪ್ರಸ್ತುತ ಆರ್ಥಿಕ ವರ್ಷ ಕೊಪ್ಪಲುಗಳು ಹರಿಜನ ಬಸತಿಗಳು ಮತ್ತು ತಾಂಡಾಗಳು ಹಾಗೂ ನೀರಾವರಿ ಪಂಪ್ ಸೆಟ್ ಗಳಿಗೆ ವಿದ್ಯುತ್ ಸರಬರಾಜು ಮಾಡಿದ ವಿವರಗಳನ್ನು ಕೋಷ್ಟಕ ೫.೪೮ರಲ್ಲಿ ನೀಡಲಾಗಿದೆ.

**ಕೋಷ್ಟಕ ೫.೪೮: ಗ್ರಾಮೀಣ ವಿದ್ಯುದೀಕರಣದಲ್ಲಿ ಪ್ರಗತಿ**

| ವರ್ಷ | ವಿದ್ಯುದೀಕರಣವಾದ ಸಂಚಿತ ನೀರಾವರಿ ಪಂಪ್ ಸೆಟ್‌ಗಳು ಸಂಖ್ಯೆ (ಲಕ್ಷಗಳಲ್ಲಿ) | ಕೊಪ್ಪಲುಗಳು ಹರಿಜನ ಬಸತಿಗಳು ಮತ್ತು ತಾಂಡಗಳ ವಿದ್ಯುದೀಕರಣ (ಸಂಖ್ಯೆ) |
|---|---|---|
| ೨೦೧೧-೧೨ | ೧೯.೪೯ | ೨೭೨ |
| ೨೦೧೨-೧೩ | ೨೦.೫೨ | ೭೪೧ |
| ೨೦೧೩-೧೪ | ೨೧.೪೯ | ೦೮ |
| ೨೦೧೪-೧೫ | ೨೨.೦೩ | ೧೮೨ |
| ೨೦೧೫-೧೬ (ಡಿಸೆಂಬರ್ ೨೦೧೫ರವರೆಗೆ) | ೨೩.೪೪ | ೨೫ |

ಆಧಾರ: ಇಂಧನ ನಿರ್ವಹಣಾ ಕೇಂದ್ರ

## ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತ

ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತವು ಕರ್ನಾಟಕದಲ್ಲಿ ನವೀಕರಿಸಬಹುದಾದ ಇಂಧನ ಮೂಲಗಳನ್ನು ಅಭಿವೃದ್ಧಿಪಡಿಸುವ ನೋಡಲ್ ಏಜೆನ್ಸಿಯಾಗಿರುತ್ತದೆ. ರಾಜ್ಯದಲ್ಲಿನ ಹಸಿರು, ಸ್ವಚ್ಛ ಅನುಕೂಲಕರ ಪರಿಸರ ಹಾಗೂ ಇಂಧನದ ಭದ್ರತೆ, ಸುರಕ್ಷತೆಗಾಗಿ ಎಲ್ಲಾ ಕ್ಷೇತ್ರಗಳಲ್ಲಿ ದಕ್ಷೋಪಾಯಗಳನ್ನು ಅಭಿವೃದ್ಧಿಪಡಿಸುವ ಉದ್ದೇಶದಿಂದ ಕರ್ನಾಟಕ ಸರ್ಕಾರವು ನವೀಕರಿಸಬಹುದಾದ ಇಂಧನ ನೀತಿಯನ್ನು (೨೦೦೯-೧೪ರ ಅವಧಿಗಾಗಿ) ೧೯-೦೧-೨೦೧೦ ರಂದು ಹೊರಡಿಸಿರುತ್ತದೆ. ಅಲ್ಲದೇ ಸೌರಶಕ್ತಿಯನ್ನು ಹೊರತರುವಲ್ಲಿ ಚಾಲನೆಗಾಗಿ ೨೦೧೪-೨೧ರ ಅವಧಿಗಾಗಿ ರಾಜ್ಯ ಸರ್ಕಾರವು ತನ್ನ ಸೌರ ನೀತಿಯನ್ನೂ ಪ್ರಕಟಿಸಿರುತ್ತದೆ. ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತವು ರಾಜ್ಯದಲ್ಲಿ ನವೀಕರಿಸಬಹುದಾದ ಇಂಧನ ಯೋಜನೆಗಳ ಅಭಿವೃದ್ಧಿಗಾಗಿ ಖಾಸಗಿ ಕ್ಷೇತ್ರದಿಂದ ಹೂಡಿಕೆಯನ್ನು ಆಕರ್ಷಿಸುತ್ತಿದೆ.

೨೦೧೪-೧೫ರಲ್ಲಿ ನವೀಕರಿಸಬಹುದಾದ ಇಂಧನ ಅಧಾರಿತ ವಿದ್ಯುತ್ ಉತ್ಪಾದನೆ ಸಾಮರ್ಥ್ಯ ಸೇರ್ಪಡೆಯು ೪೪೫.೭೫ ಮೆಗಾ ವ್ಯಾಟ್ಸ್ ಮತ್ತು ೨೦೧೫-೧೬ ಅವಧಿಯಲ್ಲಿ ಡಿಸೆಂಬರ್ ವರೆಗೆ (ಕೋಷ್ಟಕ ೫.೪೯ರಲ್ಲಿ ತೋರಿಸಿದಂತೆ) ಇದು ೩೫೫.೮೫ ಮೆಗಾ ವ್ಯಾಟ್ಸ್ ಆಗಿರುತ್ತದೆ. ೩೧-೧೨-೨೦೧೫ರಲ್ಲಿದ್ದಂತೆ ನವೀಕರಿಸಬಹುದಾದ ಇಂಧನ ಕ್ಷೇತ್ರದ ಸ್ಥಾಪಿತ ಸಾಮರ್ಥ್ಯ ಸೇರ್ಪಡೆಯಲ್ಲಿ ರಾಜ್ಯದ ಸಂಚಿತ ಸಾಧನೆಯನ್ನು ಕೋಷ್ಟಕ ೫.೫೦ರಲ್ಲಿ ತೋರಿಸಲಾಗಿರುತ್ತದೆ. ಪವನ ಇಂಧನ ಮೂಲವು ಸಾಮರ್ಥ್ಯದಲ್ಲಿ ದೊಡ್ಡ ಪಾಲನ್ನು ಪಡೆದಿರುತ್ತದೆ.

### ಕೋಷ್ಟಕ ೫.೪೮: ನವೀಕರಿಸಬಹುದಾದ ಇಂಧನದಡಿ ಸಾಮರ್ಥ್ಯ ಸೇರ್ಪಡೆ (ಮೆ.ವ್ಯಾ.)

| ಮೂಲಗಳು | ಸಾಮರ್ಥ್ಯ ಸೇರ್ಪಡೆ | | | |
|---|---|---|---|---|
| | ೨೦೧೨–೧೩ | ೨೦೧೩–೧೪ | ೨೦೧೪–೧೫ | ೨೦೧೫–೧೬ (ಡಿಸೆಂಬರ್ ೨೦೧೫ರ ವರೆಗೆ) |
| ಪವನ ವಿದ್ಯುತ್ | ೨೦೧.೬೫ | ೧೮೩ | ೩೧೧.೬೦ | ೧೮೬.೧೦ |
| ಸಣ್ಣ/ಮಿನಿ ಜಲ ವಿದ್ಯುತ್ | ೫೧.೦೧ | ೪೦.೬೫ | ೪೩.೧೫ | ೫೦.೨೫ |
| ಸಹ ಉತ್ಪಾದನೆ | ೧೮೦.೫೦ | ೭೮ | ೨೮.೦೦ | ೭೯.೫೦ |
| ಸೌರ ಶಕ್ತಿ | ೫.೦೦ | ೧೭ | ೫೩.೦೦ | ೪೦.೦೦ |
| ಜೈವಿಕ ತ್ಯಾಜ್ಯ ಶಕ್ತಿ | ೨.೪೫ | ೧೨.೦೯ | ೧೦.೦೦ | ೦.೦೦ |
| ಒಟ್ಟು | ೪೪೦.೫೯ | ೩೨೮.೭೪ | ೪೪೫.೭೫ | ೩೫೫.೮೫ |

ಆಧಾರ: ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತ ಮತ್ತು ಇಂಧನ ನಿರ್ವಹಣಾ ಕೇಂದ್ರ

### ಕೋಷ್ಟಕ ೫.೫೦: ನವೀಕರಿಸಬಹುದಾದ ಇಂಧನ ಕ್ಷೇತ್ರದಲ್ಲಿ ರಾಜ್ಯದ ಸಾಧನೆ (ಮೆ.ವ್ಯಾ.)

| ಮೂಲಗಳು | ಲಭ್ಯ ಸಾಮರ್ಥ್ಯ | ಹಂಚಿಕೆಯಾದ ಸಾಮರ್ಥ್ಯ | ಸ್ಥಾಪಿತ ಸಾಮರ್ಥ್ಯ |
|---|---|---|---|
| ಪವನ ವಿದ್ಯುತ್ | ೫೫೮೫೭ | ೧೩೪೧೬.೩೨ | ೨೮೭೧.೫೪ |
| ಸಣ್ಣ/ಮಿನಿ ಜಲ ವಿದ್ಯುತ್ | ೩೦೦೦ | ೩೦೦೬.೩೬ | ೮೩೫.೪೬ |
| ಸಹ ಉತ್ಪಾದನೆ | ೨೦೦೦ | ೧೮೩೨.೮೫ | ೧೨೫೨.೦೫ |
| ಸೌರ ಶಕ್ತಿ | ೨೪೭೦೦ | ೧೧೨೪.೦೦ | ೧೨೪ |
| ಜೈವಿಕ ತ್ಯಾಜ್ಯ ಶಕ್ತಿ | ೧೦೦೦ | ೩೬೯.೯೮ | ೧೧೩.೦೩ |
| ಒಟ್ಟು | ೮೬೫೫೭ | ೧೯೭೪೯.೫೧ | ೫೧೯೬.೧ |

ಆಧಾರ: ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತ

### ರಾಷ್ಟ್ರೀಯ ಜೈವಿಕ ಅನಿಲ ಗೊಬ್ಬರ ಮತ್ತು ನಿರ್ವಹಣಾ ಕಾರ್ಯಕ್ರಮ

ಮಿಥೇನ್ ಅನಿಲ ಹೊಂದಿದ ಜಾನುವಾರು ಸಗಣಿ, ಮಾನವ ತ್ಯಾಜ್ಯ ಮತ್ತು ಇತರೆ ಸಾವಯವ ವಸ್ತುಗಳಂದ ಜೈವಿಕ ಅನಿಲ ಸ್ಥಾವರದಲ್ಲಿ ಆಮ್ಲಜನಕರಹಿತ ಜೀರ್ಣಗೊಳಸುವಿಕೆಯ ಪ್ರಕ್ರಿಯೆಯ ಮೂಲಕ ಜೈವಿಕ ಅನಿಲವು ಸ್ವಚ್ಛವಾದ, ಮಲಿನರಹಿತವಾದ, ಹೊಗೆ ಹಾಗೂ ಮಸಿರಹಿತ ಇಂಧನವಾಗಿರುತ್ತದೆ. ಜೀರ್ಣವಾದ ವಸ್ತುವನ್ನು ಕೃಷಿ ಕ್ಷೇತ್ರಗಳಲ್ಲಿ ಉತ್ತಮ ಗುಣಮಟ್ಟದ ಗೊಬ್ಬರವಾಗಿ ಬಳಸಲು ಸಾಧ್ಯವಿರುತ್ತದೆ.

ಈ ಕಾರ್ಯಕ್ರಮವು ಕೇಂದ್ರ ಪುರಸ್ಕೃತ ಯೋಜನೆಯಾಗಿದ್ದು, ರಾಜ್ಯದಲ್ಲಿ ೧೯೮೨–೮೩ರಿಂದ ಜಾರಿಯಲ್ಲಿರುತ್ತದೆ. ಇದು ಮುಖ್ಯವಾಗಿ ಶೇಕಡಾ ೧೦೦ರಷ್ಟು ಮಹಿಳೆಯರ ಕಾರ್ಯಕ್ರಮವಾಗಿರುತ್ತದೆ. ಭಾರತ ಸರ್ಕಾರವು ರಾಷ್ಟ್ರೀಯ ಜೈವಿಕ ಅನಿಲ ಗೊಬ್ಬರ ಮತ್ತು ನಿರ್ವಹಣಾ ಕಾರ್ಯಕ್ರಮದಡಿ ಕೇಂದ್ರದ ಸಹಾಯಧನವನ್ನು ಒದಗಿಸಿರುತ್ತದೆ. ಪರಿಷ್ಕೃತ ಸಹಾಯಧನದ ವಿವರಗಳನ್ನು ಕೆಳಗೆ ನೀಡಲಾಗಿದೆ.

### ಪರಿಷ್ಕೃತ ಸಹಾಯಧನದ ವಿವರಗಳು (ರೂ.ಗಳಲ್ಲಿ)

| ವಿವರಗಳು | ಪ್ರಸ್ತುತ ಸಹಾಯಧನ |
|---|---|
| ಕೇಂದ್ರ ಸಹಾಯಧನ | ೬೦೦೦ |
| ಟರ್ನ್ ಕೀ ಫೀ | ೧೫೦೦ |
| ಶೌಚಾಲಯ ಸಂಯೋಜಿತ ಜೈವಿಕ ಸ್ಥಾವರಗಳು | ೧೦೦೦ |

ರಾಜ್ಯದಲ್ಲಿನ ಪಶುಸಂಪತ್ತನ್ನು ಅವಲಂಬಿಸಿ, ಸುಮಾರು ರೂ.೬.೮೦ ಲಕ್ಷ ಜೈವಾನಿಲ ಸ್ಥಾವರಗಳನ್ನು ನಿರ್ಮಿಸಬಹುದಾಗಿರುತ್ತದೆ. ರಾಷ್ಟೀಯ ಜೈವಿಕ ಅನಿಲ ಗೊಬ್ಬರ ಮತ್ತು ನಿರ್ವಹಣಾ ಕಾರ್ಯಕ್ರಮದಡಿ ಫಲಾನುಭವಿಗಳನ್ನು ಗ್ರಾಮ ಪಂಚಾಯತ್ ಮಟ್ಟದಲ್ಲಿ ಆಯ್ಕೆ ಮಾಡಲಾಗುತ್ತದೆ. ೨೦೧೫–೧೬ರಲ್ಲಿ ರಾಜ್ಯದ ಅಭಿವೃದ್ಧಿಯಲ್ಲಿ, ರಾಜ್ಯ ಸರ್ಕಾರವು ರಾಜ್ಯದ ಮತ್ತು ಕೇಂದ್ರದ ಪಾಲು ರೂ. ೧೨೫೬.೦೦ ಲಕ್ಷವನ್ನು ಒದಗಿಸಿರುತ್ತದೆ.

### ಕರ್ನಾಟಕ ರಾಜ್ಯ ಜೈವಿಕ ಅನಿಲ ನೀತಿ–೨೦೦೯

ಕರ್ನಾಟಕ ರಾಜ್ಯ ಜೈವಿಕ ಅನಿಲ ನೀತಿ–೨೦೦೯ ಇದು ೧ನೇ ಮಾರ್ಚ್, ೨೦೦೯ರಿಂದ ಜಾರಿಗೆ ಬಂದಿರುತ್ತದೆ. ಇದು ರಾಜ್ಯ ಯೋಜನಾ ಕಾರ್ಯಕ್ರಮವಾಗಿರುತ್ತದೆ. ಕರ್ನಾಟಕ ರಾಜ್ಯ ಜೈವಿಕ ಅನಿಲ ನೀತಿಯನ್ನು ಕರ್ನಾಟಕ ರಾಜ್ಯ ಜೈವಿಕ ಅನಿಲ ಅಭಿವೃದ್ಧಿ ಮಂಡಳಿಯಿಂದ ಅನುಷ್ಠಾನಗೊಳಿಸಲಾಗುತ್ತಿದೆ. ೨೦೧೫–೧೬ ನೇ ಸಾಲಿನ ಆಯವ್ಯಯದಲ್ಲಿ ರೂ.೧೩೦ ಲಕ್ಷ ಮತ್ತು ರೂ.೨೦೦ ಲಕ್ಷಗಳನ್ನು ಒದಗಿಸಲಾಗಿರುತ್ತದೆ. ಕರ್ನಾಟಕ ರಾಜ್ಯ ಜೈವಿಕ ಅನಿಲ ಅಭಿವೃದ್ಧಿ ಮಂಡಳಿಗೆ ಜೈವಿಕ ಅನಿಲ ಚಟುವಟಿಕೆಗಳಿಗಾಗಿ ರೂ.೧೧೫ ಲಕ್ಷಗಳನ್ನು ಬಿಡುಗಡೆ ಮಾಡಲಾಗಿರುತ್ತದೆ.

### ಸೌರ ಬೆಳಕು – ಸೌರ ಬೀದಿ ದೀಪಗಳನ್ನು ಗ್ರಾಮ ಪಂಚಾಯತ್‌ಗಳಲ್ಲಿ ಅಳವಡಿಸುವುದು.

ಗ್ರಾಮ ಪಂಚಾಯತ್ ಮಟ್ಟದಲ್ಲಿ ಸೌರ ಬೀದಿ ದೀಪಗಳನ್ನು ಅಳವಡಿಸುವುದಕ್ಕಾಗಿ ಸೌರ ಬೆಳಕು ಕಾರ್ಯಕ್ರಮವನ್ನು ೨೦೦೯–೧೦ರಲ್ಲಿ ಪ್ರಾರಂಭಿಸಲಾಗಿರುತ್ತದೆ. ಪ್ರತಿಯೊಂದು

ಕಂದಾಯ ವಿಭಾಗದ ಆಯ್ಕೆ ಮಾಡಲಾದ ಪ್ರಾಯೋಗಿಕ ಜಿಲ್ಲೆಯಲ್ಲಿ ಮಾತ್ರ ಈ ಕಾರ್ಯಕ್ರಮವನ್ನು ಅಳವಡಿಸಲಾಗಿರುತ್ತದೆ. ಈ ಕಾರ್ಯಕ್ರಮವನ್ನು ಇ-ಪ್ರೊಕ್ಯೂರ್ಮೆಂಟ್ ಮೂಲಕ ಕೈಗೆತ್ತಿಕೊಳ್ಳಲಾಗಿದೆ. ೨೦೧೫-೧೬ರ ಸಾಲಿನಲ್ಲಿ ಬಾಗಲಕೋಟೆ, ಬಳ್ಳಾರಿ, ಮಂಡ್ಯ ಮತ್ತು ಗದಗ ಜಿಲ್ಲೆಗಳನ್ನು ಆಯ್ಕೆ ಮಾಡಲಾಗಿದ್ದು, ಇ-ಟೆಂಡರಿಂಗ್ ಚಟುವಟಿಕೆಗಳು ಪ್ರಕ್ರಿಯೆಯಲ್ಲಿವೆ. ಪ್ರಾಯೋಗಿಕ ಜಿಲ್ಲೆಗಳಿಗೆ ರೂ.೧೫೫ ಲಕ್ಷಗಳನ್ನು ಬಿಡುಗಡೆ ಮಾಡಲಾಗಿರುತ್ತದೆ.

### ಗ್ರಾಮೀಣ ಇಂಧನ ಅಭಿವೃದ್ಧಿಗಾಗಿ ಸಾಂಸ್ಥಿಕ ಬೆಂಬಲ:

ಮಹಾತ್ಮ ಗಾಂಧಿ ಗ್ರಾಮೀಣ ಇಂಧನ ಮತ್ತು ಅಭಿವೃದ್ಧಿ ಸಂಸ್ಥೆ: ಮಹಾತ್ಮ ಗಾಂಧಿ ಗ್ರಾಮೀಣ ಇಂಧನ ಮತ್ತು ಅಭಿವೃದ್ಧಿ ಸಂಸ್ಥೆ, ಬೆಂಗಳೂರು ಇದು ದಕ್ಷಿಣದ ಪ್ರಾದೇಶಿಕ ಸಂಸ್ಥೆಯಾಗಿದ್ದು, ನೋಂದಾಯಿತ ಸಂಸ್ಥೆಯಾದ ಇದನ್ನು ಭಾರತ ಸರ್ಕಾರದ ಹೊಸ ಮತ್ತು ನವೀಕರಿಸಬಹುದಾದ ಇಂಧನ ಸಚಿವಾಲಯದ, ಕರ್ನಾಟಕ ಸರ್ಕಾರದ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ನೆರವಿನೊಂದಿಗೆ ಸ್ಥಾಪಿಸಲಾಗಿದೆ. ದಕ್ಷಿಣದ ರಾಜ್ಯಗಳ/ಕೇಂದ್ರಾಡಳಿತ ಪ್ರದೇಶಗಳ ತರಬೇತಿ ಅವಶ್ಯಕತೆಗಳ ಪೂರೈಕೆಗಾಗಿ ೨೦೦೦ದ ಸಾಲಿನಲ್ಲಿ ಇದನ್ನು ಸ್ಥಾಪಿಸಲಾಗಿರುತ್ತದೆ. ಗ್ರಾಮೀಣ ಇಂಧನದಲ್ಲಿ ಇತ್ತೀಚಿನ ಬೆಳವಣಿಗೆ, ಅಂತರ್ಜಲದ ಸಂರಕ್ಷಣೆ, ಮಳೆನೀರು ಕೊಯ್ಲು ಮತ್ತು ಪರಿಸರ ರಕ್ಷಣೆ ಬಗ್ಗೆ ಗ್ರಾಮೀಣ ಜನಸಮುದಾಯಕ್ಕೆ ಪ್ರಚಾರ ಮಾಡುವ ದೃಷ್ಟಿಕೋನವನ್ನು ಮಹಾತ್ಮ ಗಾಂಧಿ ಗ್ರಾಮೀಣ ಇಂಧನ ಮತ್ತು ಅಭಿವೃದ್ಧಿ ಸಂಸ್ಥೆಯು ಹೊಂದಿರುತ್ತದೆ. ಈ ಕೆಳಗಿನ ಚಟುವಟಿಕೆಗಳನ್ನು ಕೈಗೊಳ್ಳಲು ಮಹಾತ್ಮ ಗಾಂಧಿ ಗ್ರಾಮೀಣ ಇಂಧನ ಮತ್ತು ಅಭಿವೃದ್ಧಿ ಸಂಸ್ಥೆಯು ಸ್ವಯಂ ಬದ್ಧವಾಗಿದೆ.

೧. ಸಾಮರ್ಥ್ಯ ನಿರ್ಮಿಸುವುದು.

೨. ಗ್ರಾಮೀಣ / ನವೀಕರಿಸ ಬಹುದಾದ ಇಂಧನ ತಾಂತ್ರಿಕತೆಯನ್ನು ಪ್ರದರ್ಶಿಸುವುದು.

೩. ವಿಕೇಂದ್ರಿತ ಗ್ರಾಮೀಣ ಇಂಧನ ಅಧಾರಿತ ಉದ್ಯಮವನ್ನು ಪ್ರದರ್ಶಿಸುವುದು.

೪. ಗ್ರಾಮೀಣ ಇಂಧನದ ಬೆಳವಣಿಗೆ/ ಮಳೆನೀರು ಕೊಯ್ಲು/ ಪರಿಸರ ರಕ್ಷಣೆ ಇತ್ಯಾದಿಗಳ ಬಗ್ಗೆ ಮಾಹಿತಿಯನ್ನು ದಾಖಲಿಸಿ ಪ್ರಚುರಪಡಿಸುವುದು.

೫. ಗ್ರಾಮೀಣ ಇಂಧನದ ಮೇಲೆ ಸಂಶೋಧನೆ ಮಾಡುವುದು ಮತ್ತು

೬. ಗ್ರಾಮೀಣ ಇಂಧನದ ಬಗ್ಗೆ ಸಲಹಾ ಸೇವೆಗಳನ್ನು ಒದಗಿಸುವುದು, ಗ್ರಾಮೀಣ ಇಂಧನ ಮತ್ತು ಸಂಬಂಧಿತ ಗ್ರಾಮೀಣ ಅಭಿವೃದ್ಧಿ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲು ಗ್ರಾಮವನ್ನು ದತ್ತು ಪಡೆದುಕೊಳ್ಳುವುದು.

### ಕರ್ನಾಟಕದಲ್ಲಿ ಗ್ರಾಮೀಣ ವಿದ್ಯುದೀಕರಣದ ವಿವರಗಳು

| ವರ್ಷಾಂತ್ಯ | ವಿದ್ಯುದೀಕರಣಗೊಳಿಸಲಾದ ಪಂಪ್ ಸೆಟ್‌ಗಳು (ಸಂಚಿತ) |
|---|---|
| ೧೯೯೯-೦೦ | ೧೧.೮೨ |
| ೨೦೦೦-೦೧ | ೧೨.೬೪ |
| ೨೦೦೧-೦೨ | ೧೩.೧೬ |
| ೨೦೦೨-೦೩ | ೧೪.೦೨ |
| ೨೦೦೩-೦೪ | ೧೪.೧೬ |
| ೨೦೦೪-೦೫ | ೧೪.೩೪ |
| ೨೦೦೫-೦೬ | ೧೫.೦೯ |
| ೨೦೦೬-೦೭ | ೧೭.೦೫ |
| ೨೦೦೭-೦೮ | ೧೭.೨೩ |
| ೨೦೦೮-೦೯ | ೧೭.೫೩ |
| ೨೦೦೯-೧೦ | ೧೭.೯೧ |
| ೨೦೧೦-೧೧ | ೧೮.೨೩ |
| ೨೦೧೧-೧೨ | ೧೯.೪೯ |
| ೨೦೧೨-೧೩ | ೨೦.೫೦ |
| ೨೦೧೩-೧೪ | ೨೧.೪೯ |
| ೨೦೧೪-೧೫ | ೨೨.೦೩ |
| ೨೦೧೫-೧೬ (೦) | ೨೩.೪೪ |

ನಿರೀಕ್ಷಿತ ಆಧಾರ: ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

### ವಿದ್ಯುತ್ ಕ್ಷೇತ್ರದಲ್ಲಿ ಹೂಡಿಕೆ (ಕರ್ನಾಟಕ ವಿದ್ಯುತ್ ನಿಗಮ ನಿಯಮಿತವು ಯೋಜಿಸಿದಂತೆ)

೧೨ನೆಯ ಪಂಚವಾರ್ಷಿಕ ಯೋಜನೆಯ ಅವಧಿಯಲ್ಲಿ (೨೦೧೨-೧೭) ರಾಜ್ಯದ ವಿದ್ಯುತ್ ಉತ್ಪಾದನಾ ಸಾಮರ್ಥ್ಯವನ್ನು ಹೆಚ್ಚಿಸಲು ಹಲವಾರು ಯೋಜನೆಗಳನ್ನು ಕರ್ನಾಟಕ ವಿದ್ಯುತ್ ನಿಗಮ ನಿಯಮಿತವು ಯೋಜಿಸಿದೆ. ಈ ಯೋಜನೆಗಳ ಒಟ್ಟು ಯೋಜಿತ ಸ್ಥಾಪಿತ ಸಾಮರ್ಥ್ಯ ಸೇರ್ಪಡೆಗಳನ್ನು ಮುಂದಿನ ಐದು ವರ್ಷಗಳಲ್ಲಿ ಸುಮಾರು ೬೩೫೦ ಮೆ.ವ್ಯಾ. ಆಗಬಹುದು ಎಂದು ನಿರೀಕ್ಷಿಸಲಾಗಿದೆ. ಹಾಗೆಯೇ ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತವು ವಿದ್ಯುತ್ ಕೇಂದ್ರಗಳನ್ನು ಮತ್ತು ಮಾರ್ಗಗಳನ್ನು ನಿರ್ಮಿಸುತ್ತಿದ್ದು, ನೆಟ್ವರ್ಕ್ ದಟ್ಟತೆಯನ್ನು ಸರಾಗಗೊಳಿಸಲು ವ್ಯವಸ್ಥೆಯನ್ನು ಬಲಪಡಿಸುತ್ತಿದೆ. ಕಳೆದ ನಾಲ್ಕು ವರ್ಷಗಳ ಯೋಜನಾ ಹೂಡಿಕೆ ಮತ್ತು ಮಾಡಲಾದ ವೆಚ್ಚದ ವಿವರಗಳನ್ನು ಕೋಷ್ಟಕ ೫.೫೧ರಲ್ಲಿ ನೀಡಲಾಗಿದೆ ಮತ್ತು ೧೯೯೯-೨೦೦೦ ದಿಂದ ವಿದ್ಯುತ್ ಅಭಿವೃದ್ಧಿಯಲ್ಲಿ ಹೂಡಿಕೆ ವಿವರವನ್ನು ಕೋಷ್ಟಕ ೫.೫೨ರಲ್ಲಿ ನೀಡಲಾಗಿದೆ.

### ಕೋಷ್ಟಕ ೫.೫೧: ವಿದ್ಯುತ್ ಕ್ಷೇತ್ರದಲ್ಲಿ ಹೂಡಿಕೆ (ರೂ.ಕೋಟಿಗಳಲ್ಲಿ)

| ವರ್ಷ | ಆಂತರಿಕ ಮತ್ತು ಬಾಹ್ಯ ಆಯವ್ಯಯ ಸಂಪನ್ಮೂಲ | | | | ವಿದ್ಯುತ್ ಯೋಜನೆಗಳಿಗೆ ಬಂಡವಾಳ ಹೂಡಿಕೆ | | ವಿದ್ಯುತ್ ಯೋಜನೆಗಳಿಗೆ ಸಾಲಗಳು | | ಒಟ್ಟು ಹೂಡಿಕೆ | |
|---|---|---|---|---|---|---|---|---|---|---|
| | ಕರ್ನಾಟಕ ವಿದ್ಯುತ್ ನಿಗಮ | | ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ | | | | | | | |
| | ಯೋಜನಾ ಹೂಡಿಕೆ | ವೆಚ್ಚ | ಯೋಜನಾ ಹೂಡಿಕೆ | ವೆಚ್ಚ | ಯೋಜನಾ ಹೂಡಿಕೆ | ವೆಚ್ಚ | ಯೋಜನಾ ಹೂಡಿಕೆ | ವೆಚ್ಚ | ಯೋಜನಾ ಹೂಡಿಕೆ | ವೆಚ್ಚ |
| ೨೦೧೩-೧೪ | ೨೮೦೮.೦೦ | ೨೩೩೯.೨೬ | ೧೨೫೦.೦೦ | ೧೨೫೦.೦೦ | ೭೫೮.೭೦ | ೭೫೮.೭೦ | ೮೧.೭೪ | ೮೧.೭೪ | ೪೮೯೮.೪೪ | ೪೪೨೯.೭೦ |
| ೨೦೧೪-೧೫ | ೨೮೫೦.೦೦ | ೨೫೮೮.೫೫ | ೧೨೦೦.೦೦ | ೧೨೦೦.೦೦ | ೮೨೦.೦೦ | ೭೭೦.೦೦ | ೮೦.೦೦ | ೫೭.೫೯ | ೪೯೫೦.೦೦ | ೪೬೧೬.೧೪ |
| ೨೦೧೫-೧೬ (ಡಿಸೆಂಬರ್ ೨೦೧೫ರವರೆಗೆ) | ೨೬೮೫.೦೦ | ೩೨೭.೭೦ | ೧೨೦೦.೦೦ | ೧೨೬೨.೩೮ | ೮೪೭.೦೨ | ೬೧೯.೮೮ | ೭೩.೦೦ | ೦.೦೦ | ೪೮೦೫.೦೨ | ೨೨೦೯.೯೬ |

ಆಧಾರ: ಡೀಟೈಲ್ಸ್ ಆಫ್ ಪ್ರಾವಿಶನ್ ಫಾರ್ ಪ್ಲಾನ್ ಸ್ಕೀಂಸ್, ಆರ್ಥಿಕ ಇಲಾಖೆ, ಕರ್ನಾಟಕ ಸರ್ಕಾರ

### ಕೋಷ್ಟಕ ೫.೫೨: ಕರ್ನಾಟಕದಲ್ಲಿ ವಿದ್ಯುತ್ ಅಭಿವೃದ್ಧಿಯಲ್ಲಿ ಹೂಡಿಕೆ (ರೂ.ಕೋಟಿಗಳಲ್ಲಿ)

| ವರ್ಷ | ವಿದ್ಯುತ್ ನಿಗಮ | ವಿದ್ಯುತ್ ಪ್ರಸರಣ ನಿಗಮ |
|---|---|---|
| ೧೯೯೯-೦೦ | ೧೮೮ | ೮೪೬.೮೦ |
| ೨೦೦೦-೦೧ | ೩೫೪ | ೮೯೨.೫೦ |
| ೨೦೦೧-೦೨ | ೪೩೭ | ೯೪೬.೮೯ |
| ೨೦೦೨-೦೩ | ೩೦೧ | ೧೦೮೨.೧೬ |
| ೨೦೦೩-೦೪ | ೪೨೯ | ೯೫೯.೦೧ |
| ೨೦೦೪-೦೫ | ೫೩೪ | ೧೧೯೯.೭೩ |
| ೨೦೦೫-೦೬ | ೬೯೬ | ೧೩೨೦.೭೦ |
| ೨೦೦೬-೦೭ | ೧೦೬೩ | ೮೬೯.೫೫ |
| ೨೦೦೭-೦೮ | ೭೧೭ | ೧೭೫೫.೧೨ |
| ೨೦೦೮-೦೯ | ೧೨೩೮ | ೧೮೦೮.೯೩ |
| ೨೦೦೯-೧೦ | ೯೫೨ | ೧೩೩೪.೦೦ |
| ೨೦೧೦-೧೧ | ೧೦೨೬ | ೧೦೯೪.೬೯ |
| ೨೦೧೧-೧೨ | ೧೨೦೬.೦೦ | ೧೧೩೨.೦೦ |
| ೨೦೧೨-೧೩ | ೨೩೬೩.೨ | ೭೪೭.೦೦ |
| ೨೦೧೩-೧೪ | ೨೮೦೮.೦೦ | ೧೨೫೦.೦೦ |
| ೨೦೧೪-೧೫ | ೨೫೮೮.೫೫ | ೭೯೭.೮೬ |
| ೨೦೧೫-೧೬ (ಡಿಸೆಂಬರ್ ೨೦೧೫ರವರೆಗೆ) | ೧೩೮೫.೪೯ | ೬೮೪.೫೧ |

ಆಧಾರ: ೧.ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ ೨. ಕರ್ನಾಟಕ ವಿದ್ಯುತ್ ನಿಗಮ ನಿಯಮಿತ

ವಿದ್ಯುತ್ ಸಚಿವಾಲಯವು ಕೇಸ್-II ರಡಿ ಹೊರಡಿಸಿದ ಹರಾಜು ಮಾರ್ಗದರ್ಶನಗಳಂತೆ ಪವರ್ ಕಂಪನಿ ಆಫ್ ಕರ್ನಾಟಕ ಲಿಮಿಟೆಡ್ ಇದು ಈ ಕೆಳಗಿನ ಯೋಜನೆಗಳನ್ನು ಹರಾಜು ಪ್ರಕ್ರಿಯೆಯ ಮೂಲಕಅನುಷ್ಠಾನಗೊಳಿಸುತ್ತದೆ.

೧. ಗುಲ್ಬರ್ಗಾದಲ್ಲಿ ೧೩೨೦ ಮೆ.ವ್ಯಾ. ಕಲ್ಲಿದ್ದಲು ಆಧಾರಿತ ಉಷ್ಣ ವಿದ್ಯುತ್ ಯೋಜನೆ

೨. ಘಟಪ್ರಭಾದಲ್ಲಿ ೧೩೨೦ ಮೆ.ವ್ಯಾ. ಕಲ್ಲಿದ್ದಲು ಆಧಾರಿತ ಉಷ್ಣ ವಿದ್ಯುತ್ ಯೋಜನೆ

ಅಲ್ಲದೇ, ಸ್ವಾಯತ್ತ ವಿದ್ಯುತ್ ಉತ್ಪಾದಕರ ಮತ್ತು ಕೇಂದ್ರೀಯ ಉತ್ಪಾದಕ ಕೇಂದ್ರಗಳಡಿ ಕೆಳಗಿನ ಯೋಜನೆಗಳನ್ನು ಅನುಷ್ಠಾನಗೊಳಿಸಲು ಪವರ್ ಕಂಪನಿ ಆಫ್ ಕರ್ನಾಟಕ ಲಿಮಿಟೆಡ್ ಇದು ಮಧ್ಯವರ್ತಿ ಏಜೆನ್ಸಿಯಾಗಿರುತ್ತದೆ.

೧. ಹಾಸನದಲ್ಲಿ ಮೆ. ಹಾಸನ ಕಲ್ಲಿದ್ದಲು ಆಧಾರಿತ ಉಷ್ಣ ವಿದ್ಯುತ್ (ಖಾಸಗಿ) ನಿಗಮ ನಿಯಮಿತದಲ್ಲಿ (ಸ್ವಾಯತ್ತ ವಿದ್ಯುತ್ ಉತ್ಪಾದಕರು) ೫೦೦ ಮೆ.ವ್ಯಾ. ಸಾಮರ್ಥ್ಯದ ಕಲ್ಲಿದ್ದಲು ಆಧಾರಿತ ಉಷ್ಣ ವಿದ್ಯುತ್ ಯೋಜನೆಯನ್ನು ಪ್ರಾರಂಭಿಸುವುದು.

೨. ಕುಡಿಗಿ ಪ್ರಾದೇಶಿಕ ಉಷ್ಣ ವಿದ್ಯುತ್ ಸ್ಥಾವರ ೪೦೦೦ ಮೆ. ವ್ಯಾ. (ಕೇಂದ್ರ ವಲಯ).

೩. ಕೈಗಾದಲ್ಲಿರುವ ೫ ಮತ್ತು ೬ ರ ಘಟಕಗಳನ್ನು ೨*೨೨೦ ಮೆ. ವ್ಯಾ. ಸಾಮರ್ಥ್ಯದಿಂದ ೨*೭೦೦ ಮೆ.ವ್ಯಾ. ಸಾಮರ್ಥ್ಯಕ್ಕೆ ಉನ್ನತೀಕರಿಸುವುದು. (ಕೇಂದ್ರ ವಲಯ)

### ಕೇಂದ್ರ ಪುರಸ್ಕೃತ ಯೋಜನೆಗಳು:

#### ೧. ದೀನದಯಾಳ ಉಪಾಧ್ಯಾಯ ಗ್ರಾಮ ಜ್ಯೋತಿ ಯೋಜನೆ

• ಭಾರತ ಸರ್ಕಾರದ ವಿದ್ಯುತ್ ಸಚಿವಾಲಯವು ಕಛೇರಿ ಪತ್ರ ಸಂಖ್ಯೆ ೪೪/೪೪/೨೦೧೪-ಆರ್.ವಿ. ದಿ.೦೩-೧೨-೨೦೧೪ ರನುಸಾರ ಈ ಕೆಳಕಂಡ ಘಟಕಗಳೊಡನೆ ದೀನದಯಾಳ ಉಪಾಧ್ಯಾಯ ಗ್ರಾಮ ಜ್ಯೋತಿ ಯೋಜನೆಯನ್ನು

ಬಿಡುಗಡೆಗೊಳಿಸಲು/ಅನುಷ್ಠಾನಗೊಳಿಸಲು ಅನುಮೋದಿಸಿ ಸಮ್ಮತಿಸಿರುತ್ತದೆ.

೧. ಗ್ರಾಮೀಣ ಪ್ರದೇಶದಲ್ಲಿ ಕೃಷಿ ಮತ್ತು ಕೃಷಿಯೇತರ ಗ್ರಾಹಕರಿಗೆ ನ್ಯಾಯಯುತವಾಗಿ ವಿದ್ಯುತ್ ಅನ್ನು ಪೂರೈಸಲು ಕೃಷಿ ಮತ್ತು ಕೃಷಿಯೇತರ ಫೀಡರ್ ಗಳಾಗಿ ಪ್ರತ್ಯೇಕಿಸಲಾಗಿದೆ.

೨. ವಿತರಣೆಯ ಟ್ರಾನ್ಸ್‌ಫಾರ್ಮರ್‌ಗಳು /ಫೀಡರ್‌ಗಳು/ ಗ್ರಾಹಕರುಗಳ ಲೆಕ್ಕ ಹಾಕುವುದೂ ಸೇರಿದಂತೆ ಗ್ರಾಮೀಣ ಪ್ರದೇಶಗಳಲ್ಲಿ ಉಪ-ಪ್ರಸರಣ ಹಾಗೂ ವಿತರಣೆಯ ಮೂಲ ಸೌಕರ್ಯಗಳನ್ನು ಬಲಪಡಿಸುವುದು ಮತ್ತು ವೃದ್ಧಿಪಡಿಸುವುದು ಹಾಗೂ

೩. ಗ್ರಾಮೀಣ ವಿದ್ಯುದೀಕರಣದಡಿ ೧೨ ಮತ್ತು ೧೩ನೇ ಪಂಚವಾರ್ಷಿಕ ಯೋಜನೆಗಳಲ್ಲಿ ರಾಜೀವ್ ಗಾಂಧಿ ಗ್ರಾಮೀಣ ವಿದ್ಯುತ್ ಯೋಜನೆಯಡಿ ನಿಗದಿ ಪಡಿಸಲಾದ ಗುರಿಗಳನ್ನು ಪೂರ್ಣಗೊಳಿಸಲು ಆರ್ಥಿಕ ವ್ಯವಹಾರಗಳ ಸಂಪುಟ ಸಮಿತಿಯ ಅನುಮೋದನೆ ದಿನಾಂಕ ೦೧-೦೮-೨೦೧೩ರಲ್ಲಿ ರಾಜೀವ್ ಗಾಂಧಿ ಗ್ರಾಮೀಣ ವಿದ್ಯುತ್ ಯೋಜನೆಗಾಗಿ ಇರುವ ಅನುಮೋದಿತ ಹಣವನ್ನು ದೀನ ದಯಾಳು ಉಪಾಧ್ಯಾಯ ಗ್ರಾಮ ಜ್ಯೋತಿ ಯೋಜನೆಯಲ್ಲಿ ಮುಂದುವರೆಸಲಾಗಿರುತ್ತದೆ. ವಿದ್ಯುತ್ ಸಚಿವಾಲಯ ಮೇಲ್ವಿಚಾರಣಾ ಸಮಿತಿಯು ದಿನಾಂಕ ೦೩-೦೮-೨೦೧೫ರಂದು ದೀನ ದಯಾಳು ಉಪಾಧ್ಯಾಯ ಗ್ರಾಮ ಜ್ಯೋತಿ ಯೋಜನೆಯಡಿ ಯೋಜನೆಗಳಿಗೆ ಅನುಮೋದನೆಯನ್ನು ನೀಡಿರುತ್ತದೆ.

### ಏಕೀಕೃತ ವಿದ್ಯುತ್ ಅಭಿವೃದ್ಧಿ ಯೋಜನೆ:

ಭಾರತ ಸರ್ಕಾರವು ವಿದ್ಯುತ್ ಸಚಿವಾಲಯ ಏಕೀಕೃತ ವಿದ್ಯುತ್ ಅಭಿವೃದ್ಧಿ ಯೋಜನೆಯನ್ನು ಬಿಡುಗಡೆಗೊಳಿಸಲು/ ಅನುಷ್ಠಾನ'ಗೊಳಿಸಲು ಕೆಳಕಂಡ ಅಂಶಗಳೊಂದಿಗೆ ಅನುಮೋದನೆಯನ್ನು ಒದಗಿಸಿ ಸಮ್ಮತಿಸಿರುತ್ತದೆ.

- ನಗರ ಪ್ರದೇಶಗಳಲ್ಲಿ ಉಪ ಪ್ರಸರಣ ಹಾಗೂ ವಿತರಣಾ ಜಾಲಗಳನ್ನು ಬಲಪಡಿಸುವುದು.
- ನಗರ ಪ್ರದೇಶಗಳಲ್ಲಿ ವಿತರಣೆಯ ಟ್ರಾನ್ಸ್‌ಫಾರ್ಮರ್‌ಗಳು /ಫೀಡರ್‌ಗಳು/ಗ್ರಾಹಕರುಗಳ ಲೆಕ್ಕಹಾಕುವುದು.
- ವಿತರಣೆ ಕ್ಷೇತ್ರದ ಮಾಹಿತಿ ತಂತ್ರಜ್ಞಾನದ ವೃದ್ಧಿಗಾಗಿ ಮತ್ತು ವಿತರಣಾ ಜಾಲವನ್ನು ಬಲಪಡಿಸಲು ೧೨ ಮತ್ತು ೧೩ನೇ ಪಂಚವಾರ್ಷಿಕ ಯೋಜನೆಗಳಲ್ಲಿ ಪುನರ್ ರಚಿತ ವಿದ್ಯುತ್ ಅಭಿವೃದ್ಧಿ ಮತ್ತು ಸುಧಾರಣಾ ಕಾರ್ಯಕ್ರಮದಡಿ ನಿಗದಿಪಡಿಸಲಾದ ಗುರಿಗಳನ್ನು ಸಂಪೂರ್ಣಗೊಳಿಸಲು ಪುನರ್ ರಚಿತ ವಿದ್ಯುತ್ ಅಭಿವೃದ್ಧಿ ಮತ್ತು ಸುಧಾರಣಾ ಕಾರ್ಯಕ್ರಮದಡಿ ಅನುಮೋದಿತ ಹಣವನ್ನು ಏಕೀಕೃತ ವಿದ್ಯುತ್ ಅಭಿವೃದ್ಧಿ ಯೋಜನೆಗೆ ಮುಂದುವರೆಸುವುದು.

ವಿದ್ಯುತ್ ಸಚಿವಾಲಯದ ಮೇಲ್ವಿಚಾರಣಾ ಸಮಿತಿಯ ಏಕೀಕೃತ ವಿದ್ಯುತ್ ಅಭಿವೃದ್ಧಿ ಯೋಜನೆಯಡಿಯ ಕಾಮಗಾರಿಗಳಿಗೆ ಅನುಮೋದನೆಯನ್ನು ನೀಡಿರುತ್ತದೆ. ರಾಜ್ಯಕ್ಕೆ ಮಂಜೂರಾತಿಯ ವಿವರಗಳು ಕೆಳಕಂಡಂತಿದೆ.

**ರಾಜ್ಯಕ್ಕೆ ನೀಡಿರುವ ಅನುಮೋದನಾ ವಿವರಗಳು ಈ ಕೆಳಗಿನಂತಿರುತ್ತದೆ. ಕೋಟಿ ರೂ.ಗಳಲ್ಲಿ**

| ಕ್ರ. ಸಂ. | ವಿವರಗಳು | ಮೇಲ್ವಿಚಾರಣಾ ಸಮಿತಿಯಿಂದ ಅನುಮೋದಿತವಾದ ವೆಚ್ಚ |
|---|---|---|
| ೧ | ವಿದ್ಯುತ್ ರಹಿತ ಗ್ರಾಮಗಳಿಗೆ ವಿದ್ಯುದೀಕರಣ ಮಾಡುವುದು | ೫೪.೯೩ |
| ೨ | ವಿದ್ಯುತ್ ಅನ್ನು ಬಲಪಡಿಸುವುದು ಮತ್ತು ಗ್ರಾಮೀಣ ಕುಟುಂಬಗಳಿಗೆ ಒದಗಿಸುವುದು | ೨೭೯.೩೭ |
| ೩ | ಮಾಪನ ಮಾಡುವುದು | ೫೧೮.೪೪ |
| ೪ | ಸಂಸದ್ ಆದರ್ಶ ಗ್ರಾಮ ಯೋಜನೆ | ೫೦.೨೩ |
| ೫ | ಫೀಡರ್ ಪ್ರತ್ಯೇಕಿಸುವಿಕೆ | ೮೪೨.೨೪ |
| **ಒಟ್ಟು ಮೊತ್ತ** | | **೧೭೪೫.೫೪** |
| ಪ್ರಾಜೆಕ್ಟ್ ಮಾನೀಟೊರಿಂಗ್ ಏಜೆನ್ಸಿಯ ಶುಲ್ಕ | | ೮.೭೩ |
| **ಒಟ್ಟು ಯೋಜನಾ ವೆಚ್ಚ** | | **೧೭೫೪.೨೭** |

### ಹೊಸ ಪ್ರೋತ್ಸಾಹಗಳು, ಸವಾಲುಗಳು ಮತ್ತು ಫಲಿತಾಂಶಗಳು

#### ೨೦೧೫-೧೬ರಲ್ಲಿ ಕೈಗೆತ್ತಿಕೊಂಡ ಪ್ರೋತ್ಸಾಹಗಳು:

- ರಾಜ್ಯ ಸರ್ಕಾರವು ಫಲಾನುಭವಿಗಳಿಗೆ ಸೋಲಾರ್ ನೀರು ಪಂಪ್‌ಗಳನ್ನು ಒದಗಿಸುವುದರ ಮೂಲಕ ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ ಮೂಲಕ ಸೌರಶಕ್ತಿ ಯೋಜನೆಗಳನ್ನು ಅನುಷ್ಠಾನ'ಗೊಳಿಸಲು ಪ್ರಸ್ತಾಪಿಸಿರುತ್ತದೆ.
- ವಿಶೇಷ ಘಟಕ ಯೋಜನೆ ಮತ್ತು ಗಿರಿಜನ ಉಪಯೋಜನೆಯ ಫಲಾನುಭವಿಗಳಿಗೆ ಸೋಲಾರ್ ನೀರು ಪಂಪ್‌ಗಳನ್ನು ಪರಿಶಿಷ್ಟ ಜಾತಿ ಉಪಯೋಜನೆ ಮತ್ತು ಬುಡಕಟ್ಟು ಉಪಯೋಜನೆ ಕಾರ್ಯಕ್ರಮಗಳಡಿ ಒದಗಿಸುವುದು.
- ಎಲ್ಲಾ ವಿದ್ಯುತ್ ಸರಬರಾಜು ಕಂಪನಿಗಳಲ್ಲಿ ಹಂತ ಹಂತವಾಗಿ ನಗರ ಜ್ಯೋತಿ ಯೋಜನೆಯಡಿ ಎಲ್.ಇ.ಡಿ ಬೀದಿ ದೀಪಗಳನ್ನು ಅಳವಡಿಸುವುದು.

- ಸ್ವಯಂ ಚಾಲಿತ ವಿತರಣಾ ಪದ್ಧತಿಯನ್ನು ಇತರೇ ಕಾರ್ಪೊರೇಷನ್ ಪ್ರದೇಶಗಳಲ್ಲಿ ಮೇಲ್ದರ್ಜೆಗೇರಿಸುವುದು.
- ಯೋಜನೆಯನ್ನು ವಿವರವಾಗಿ ಅಧ್ಯಯನ ಮಾಡಿದ ನಂತರ ಪ್ರಾಯೋಗಿಕ ಆಧಾರದಲ್ಲಿ ಅನುಷ್ಠಾನಗೊಳಿಸಿದ ಹೈ ವೋಲ್ಟೇಜ್ ಡಿಸ್ಟ್ರಿಬ್ಯೂಷನ್ ಸಿಸ್ಟಮ್ ವಿದ್ಯುತ್ ಸರಬರಾಜು ಕಂಪನಿಗಳ ಇತರ ಉಪ ವಿಭಾಗಗಳಲ್ಲಿ ಮುಂದುವರಿಸುವುದು.
- ಸ್ಮಾರ್ಟ್ ಗ್ರಿಡ್ ಮತ್ತು ಸ್ಮಾರ್ಟ್ ಮೀಟರ್‌ಗಳ ಯೋಜನೆಯನ್ನು ಪ್ರಾಯೋಗಿಕ ಆಧಾರದಲ್ಲಿ ಅನುಷ್ಠಾನಗೊಳಿಸಲಾಗುವುದು.
- ಗ್ರೀನ್ ಎನರ್ಜಿ ಕಾರಿಡಾರ್ ಯೋಜನೆಯನ್ನು ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ ಮತ್ತು ಕೆ ಎಫ್ ಡಬ್ಲ್ಯೂ ನೆರವಿನಿಂದ ಅನುಷ್ಠಾನಗೊಳಿಸುವುದು.
- ಮುಂದಿನ ಬೆಳವಣಿಗೆ ಮತ್ತು ಸ್ಥಳಾಂತರಕ್ಕಾಗಿ ಪ್ರಸರಣ ಸಾಮರ್ಥ್ಯವನ್ನು ವೃದ್ಧಿಸುವುದು.
- ಜಂಟಿ ಉದ್ಯಮದ ಮೂಲಕ ತುಮಕೂರು ಜಿಲ್ಲೆಯ ಪಾವಗಡದಲ್ಲಿ ೨೦೦೦ ಮೆ.ವ್ಯಾ. ಸೌರ ವಿದ್ಯುತ್ ಘಟಕದ ಸ್ಥಾಪನೆಗಾಗಿ ಮೂಲ ಸೌಕರ್ಯ ಅಭಿವೃದ್ಧಿಪಡಿಸುವುದು. ಈ ಸೋಲಾರ್ ಪಾರ್ಕ್‌ಗಾಗಿ ೧೧,೦೦೦ ಎಕರೆ ಭೂಮಿಯನ್ನು ಸ್ವಾಧೀನ ಪಡಿಸಿಕೊಳ್ಳುವ ಪ್ರಕ್ರಿಯೆಯನ್ನು ಆರಂಭಿಸಲಾಗಿದ್ದು, ವಾರ್ಷಿಕ ಗುತ್ತಿಗೆ ಬಾಡಿಗೆ ಮೌಲ್ಯವನ್ನು ನಿಗದಿಪಡಿಸುವಂತೆ ತುಮಕೂರಿನ ಜಿಲ್ಲಾಧಿಕಾರಿಗಳು, ಇವರನ್ನು ಕೋರಲಾಗಿರುತ್ತದೆ.

## ಸ್ವಯಂಚಾಲಿತ ವಿತರಣಾ ವ್ಯವಸ್ಥೆ:

- ಸ್ವಯಂಚಾಲಿತ ವಿತರಣಾ ಪದ್ಧತಿಯನ್ನು ಮೇಲ್ದರ್ಜೆಗೇರಿಸುವುದರ ಮೂಲಕ ಖಚಿತ ಗುಣಮಟ್ಟದ ಮತ್ತು ಪ್ರಾಮಾಣಿಕ ವಿದ್ಯುತ್ ಪೂರೈಕೆ ಮಾಡುವುದಲ್ಲದೇ, ಗುಣಮಟ್ಟದ ಸೇವೆಯನ್ನು ಸುಧಾರಿಸಿ ಗ್ರಾಹಕರನ್ನು ತೃಪ್ತಿಗೊಳಿಸಲಾಗುವುದು.
- ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ ಸಂಸ್ಥೆಯು ಜಪಾನ್ ಅಂತರ್‌ರಾಷ್ಟ್ರೀಯ ಸಹಕಾರ ಏಜೆನ್ಸಿಯ ಆರ್ಥಿಕ ನೆರವಿನಡಿ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುತ್ತಿದೆ. ರಾಜ್ಯ ಸರ್ಕಾರವು ಬಜೆಟ್ ಬೆಂಬಲದೊಂದಿಗೆ ಇತರೇ ವಿದ್ಯುತ್ ಸರಬರಾಜು ಕಂಪನಿ ನಿಯಮಿತ ಸಂಸ್ಥೆಗಳಲ್ಲಿಯೂ ೨೦೧೪-೧೫ರಲ್ಲಿ ಇದೇ ರೀತಿಯ ಕಾರ್ಯಕ್ರಮಗಳನ್ನು ಪ್ರಾರಂಭಿಸಿದ್ದು, ೨೦೧೫-೧೬ನೇ ಸಾಲಿನಲ್ಲಿಯೂ ಸಹ ಮುಂದುವರೆಸಲು ಉದ್ದೇಶಿಸಿದೆ.

## ನಿರ್ದಿಷ್ಟ ಸವಾಲುಗಳು ಮತ್ತು ಇಲಾಖೆಯ ಭವಿಷ್ಯದ ಮುನ್ನೋಟ

- ನವೀಕರಿಸಬಹುದಾದ ಇಂಧನ ವಲಯದಿಂದ ನೈಸರ್ಗಿಕ ಸಂಪನ್ಮೂಲಗಳನ್ನು ಗರಿಷ್ಟವಾಗಿ ಬಳಸುವುದು
- ಉತ್ಪಾದನಾ ಸಾಮರ್ಥ್ಯವನ್ನು ಹೆಚ್ಚಿಸುವುದರಿಂದ ಏರುತ್ತಿರುವ ಬೇಡಿಕೆಯನ್ನು ಪೂರೈಸಲು ಸ್ವಾವಲಂಬನೆ ಸಾಧಿಸುವುದು.
- ಪ್ರಸರಣೆ ಮತ್ತು ವಿತರಣೆ ನಷ್ಟವನ್ನು ಕಡಿಮೆಗೊಳಿಸುವುದು
- ಒಟ್ಟಾರೆ ತಾಂತ್ರಿಕ ಮತ್ತು ವಾಣಿಜ್ಯ ನಷ್ಟವನ್ನು ಕಡಿಮೆಗೊಳಿಸುವುದು
- ವಿದ್ಯುತ್ ಪೂರೈಸಿ ಗ್ರಾಹಕ ಸ್ನೇಹಿಯಾಗುವುದು
- ವಿದ್ಯುತ್ ಅಪಘಾತಗಳನ್ನು ಕಡಿಮೆಗೊಳಿಸುವುದು

## ಕರ್ನಾಟಕದಲ್ಲಿ ವಿದ್ಯುತ್ ಅಭಿವೃದ್ಧಿಯ ಹಿನ್ನೋಟ

ಜಲವಿದ್ಯುತ್ ಅಭಿವೃದ್ಧಿಯಲ್ಲಿ ಕರ್ನಾಟಕ ಮೊದಲನೆಯ ಸ್ಥಾನವನ್ನು ಹೊಂದಿದ್ದು ೧೯೭೦ರ ದಶಕದವರೆಗೂ ವಿದ್ಯುತ್ ಉಳಿತಾಯವನ್ನು ಸಹ ಹೊಂದಿತ್ತು. ಇದು ವೇಗವಾಗಿ ಬೆಳೆಯುತ್ತಿರುವ ಕೈಗಾರಿಕೆಗಳು ಮತ್ತು ಇತರ ನಿರ್ಮಾಣಗಳ ಸಮಸ್ಯೆಯಿಂದಾಗಿ ಈಗ ತೀವ್ರ ವಿದ್ಯುತ್ ಅಭಾವವನ್ನು ಎದುರಿಸುತ್ತಿದೆ. ೧೯೯೮-೯೯ರಲ್ಲಿ ಮಿತಿಗೊಳ್ಳದಿರುವ ಬೇಡಿಕೆ ೨೬,೩೦೦ ದಶಲಕ್ಷ ಯೂನಿಟ್‌ಗಳಿಗೆ ಬದಲಾಗಿ ರಾಜ್ಯದ ವಿದ್ಯುಚ್ಛಕ್ತಿ ಹರಿವಿನ ಜಾಲದಿಂದ (ಗ್ರಿಡ್) ೧೭,೨೪೫ ದಶಲಕ್ಷ ಯೂನಿಟ್‌ಗಳು ಲಭ್ಯವಾಗಿ ೯,೦೫೫ ದಶಲಕ್ಷ ಯೂನಿಟ್‌ಗಳ ಕೊರತೆ ಸೃಷ್ಟಿಯಾಯಿತು. ಕೇಂದ್ರದ ನಿಲ್ದಾಣಗಳು (ಸೆಂಟ್ರಲ್ ಸ್ಟೇಷನ್‌ಗಳು) ೫,೫೮೯ ದಶಲಕ್ಷ ಯೂನಿಟ್‌ಗಳ ಕೊಡುಗೆಯನ್ನು ಕೊಟ್ಟ ನಂತರವೂ ರಾಜ್ಯವು ವಾರ್ಷಿಕ ೩೫,೫೦೬ ದಶಲಕ್ಷ ಯೂನಿಟ್‌ಗಳ ಕೊರತೆಯನ್ನು ಎದುರಿಸಬೇಕಾಯಿತು.

ಕೇಂದ್ರದ ವಿದ್ಯುತ್ ಪ್ರಾಧಿಕಾರದ ೧೫ನೇ ವಿದ್ಯುತ್ ಸಮೀಕ್ಷೆಯ ವರದಿಯ ಪ್ರಕಾರ ಒಂಬತ್ತನೇ ಯೋಜನೆಯ ಅಂತ್ಯದಲ್ಲಿ (೨೦೦೧-೦೨) ರಾಜ್ಯದ ವಿದ್ಯುತ್ ಬೇಡಿಕೆ ಮತ್ತು ಪೀಕ್‌ಲೋಡ್ ಅನುಕ್ರಮವಾಗಿ ೩೧,೨೦೮ ದಶಲಕ್ಷ ಯೂನಿಟ್‌ಗಳು ಮತ್ತು ೫,೪೨೨ ಮೆ.ವ್ಯಾ. ಎಂದು ಅಂದಾಜು ಮಾಡಲಾಗಿದೆ. ಜಲವಿದ್ಯುತ್‌ನ್ನು ಅವಲಂಬಿಸಿರುವುದೇ ತೀವ್ರ ವಿದ್ಯುತ್ ಕೊರತೆಗೆ ಬಹುಮುಖ್ಯ ಕಾರಣವಾಗಿದೆ. ಜಲೋತ್ಪನ್ನ ಮತ್ತು ಶಾಖೋತ್ಪನ್ನಗಳ ೭೦:೩೦ರ ಅನುಪಾತದಂತೆ ವಿದ್ಯುತ್ ಉತ್ಪಾದನೆ ಮಾಡುತ್ತಿರುವುದರಿಂದ ರಾಜ್ಯವು ಜಲವಿದ್ಯುತ್ ಉತ್ಪಾದಿಸುತ್ತಿರುವ ನದಿ ತಪ್ಪಲಿನಲ್ಲಿ ಅಧಿಕ ಪ್ರಮಾಣದ ಮಳೆಯನ್ನು ಅವಲಂಬಿಸಿರುವಂತೆ ಮಾಡಿದೆ. ಕರ್ನಾಟಕವು ಸುಮಾರು ೭,೮೦೦ ಮೆ.ವ್ಯಾ. ವಿದ್ಯುತ್ ಉತ್ಪಾದನಾ ಸಾಮರ್ಥ್ಯವನ್ನು ಹೊಂದಿದ್ದು, ಅದರಲ್ಲಿ ಸುಮಾರು ೨,೮೩೬ ಮೆ.ವ್ಯಾ. ವಿದ್ಯುತ್ತನ್ನು ಮಾತ್ರ ಪಡೆಯಲಾಗುತ್ತಿದ್ದು, ೪೭೨ ಮೆ.ವ್ಯಾ. ವಿದ್ಯುತ್ತನ್ನು ವಿವಿಧ ಹಂತದಲ್ಲಿರುವ ಜಲವಿದ್ಯುತ್ ಯೋಜನೆಗಳಿಂದ ನಿರೀಕ್ಷಿಸಲಾಗಿದೆ. ಅರಣ್ಯಗಳ ಮುಳುಗಡೆ, ವಸತಿ ಕಳೆದುಕೊಂಡವರಿಗೆ ಪುನರ್ ವಸತಿ

ಸೌಲಭ್ಯವನ್ನೊದಗಿಸುವುದು, ಅಂತರ ರಾಜ್ಯಗಳ ವ್ಯಾಜ್ಯ ಮೊದಲಾದ ಪರಿಸರ ವಿವಾದಗಳು ಲಭ್ಯವಿರುವ ಜಲವಿದ್ಯುತ್ತನ್ನು ಉಪಯೋಗಿಸಿಕೊಳ್ಳಲು ಅಡ್ಡಿಯುಂಟು ಮಾಡುತ್ತಿವೆ.

೧೮೮೭ ರಲ್ಲಿ ಗೋಕಾಕ್ ವಾಟರ್ ಪವರ್ ಅಂಡ್ ಮ್ಯಾನುಫ್ಯಾಕ್ಚರಿಂಗ್ ಕಂಪೆನಿ ಎಂದು ಖ್ಯಾತಿಗೊಂಡ ಗೋಕಾಕ್ ಗಿರಣಿಯ ಮಾಲೀಕರು ಘಟಪ್ರಭಾ ನದಿಗೆ ಗೋಕಾಕ್ ಜಲಪಾತದಲ್ಲಿ ತಮ್ಮ ನೂಲಿನ ಗಿರಣಿಗಾಗಿ ಜಲವಿದ್ಯುತ್ ಉತ್ಪಾದಿಸಲು ಅಂದಿನ ಮುಂಬೈ ಸರ್ಕಾರದೊಡನೆ ಕರಾರು ಮಾಡಿಕೊಂಡು ೧೭೦ ಅಡಿ ಆಳದ ಗೋಕಾಕ್ ಜಲಪಾತವನ್ನು ವಿದ್ಯುತ್ ಉತ್ಪಾದನೆಗಾಗಿ ಉಪಯೋಗಿಸುತ್ತಿದ್ದರು. ಇವರು ೧೯೧೧ ರಲ್ಲಿ ಫ್ರಾನ್ಸಿಸ್ ಹೈಡ್ರೋಟರ್ಬೈನ್ಸ್ ಮೂಲಕ ೫೦೦ ಕಿ.ವ್ಯಾ.ನಂತೆ ಮೂರು ಘಟಕಗಳಲ್ಲಿ ಮತ್ತು ೧೯೨೪ ರಲ್ಲಿ ೧೦೦೦ ಕಿ.ವ್ಯಾ.ನ ಒಂದು ಘಟಕದಲ್ಲಿ ಜಲ ವಿದ್ಯುತ್ ಉತ್ಪಾದಿಸಿದರೆಂದು ತಿಳಿದುಬಂದಿದೆ.

ಗಗನಚುಕ್ಕಿ ಮತ್ತು ಭರಚುಕ್ಕಿ ಎಂದು ಪ್ರಖ್ಯಾತವಾದ ಪೂರ್ವದಿಕ್ಕಿನ ಕಾವೇರಿ ಜಲಪಾತವನ್ನು ಉಪಯೋಗಿಸಿಕೊಂಡು ೧೯೦೨ರಲ್ಲಿ ೪.೩ ಮೆ.ವ್ಯಾ. ವಿದ್ಯುತ್ತನ್ನು ಉತ್ಪಾದಿಸಲಾಯಿತು. ಆಗ ಪ್ರಪಂಚದಲ್ಲೇ ಅತಿ ಉದ್ದವೆನಿಸಿದ್ದ ೧೪೭ ಕಿ.ಮೀ. ಉದ್ದದ ೭೮ ಕಿ.ವೋ. ವಿದ್ಯುತ್ ಜಾಲದ ಮೂಲಕ ಕೋಲಾರದ ಚಿನ್ನದ ಗಣಿಗೆ ವಿದ್ಯುತ್ ಪೂರೈಕೆ ಮಾಡಲಾಯಿತು. ಅದಾದ ಮೇಲೆ ವಿದ್ಯುತ್ ಉತ್ಪಾದನಾ ಕೇಂದ್ರವನ್ನು ೧೯೦೩ರಲ್ಲಿ ಎರಡನೆಯದು, ೧೯೦೭ರಲ್ಲಿ ಮೂರನೆಯದು, ೧೯೧೪-೧೫ ರಲ್ಲಿ ನಾಲ್ಕನೆಯದು, ೧೯೧೮ರಲ್ಲಿ ಐದನೆಯದು ಮತ್ತು ೧೯೧೯ರಲ್ಲಿ ಆರನೆಯದು, ಹೀಗೆ ಉತ್ಪಾದನಾ ಸ್ಟೇಷನ್‌ಗಳನ್ನು ವಿಸ್ತರಿಸಿಕೊಳ್ಳುವುದರ ಮೂಲಕ ವಿದ್ಯುತ್ ಉತ್ಪಾದನೆಯನ್ನು ಹೆಚ್ಚಿಸಲಾಯಿತು. ೧೯೨೫ರಲ್ಲಿ ಏಳನೆಯ ಉತ್ಪಾದನಾ ಸ್ಟೇಷನ್‌ಗೆ ಮಂಜೂರಾತಿ ಪಡೆದುಕೊಂಡಿದೆ. ಇಲ್ಲಿ ಉತ್ಪಾದಿಸುವ ವಿದ್ಯುತ್ತನ್ನು ಬೆಂಗಳೂರು ಮತ್ತು ಮೈಸೂರು ನಗರಗಳಿಗೆ ಹಾಗೂ ಪ್ರಮುಖ ಕೈಗಾರಿಕೆಗಳಿಗೆ ಪೂರೈಕೆ ಮಾಡಲಾಗುತ್ತದೆ. ೧೯೪೦ರಲ್ಲಿ ಶಿಂಷಾ ಪವರ್‌ಹೌಸ್ ಪ್ರಾರಂಭಗೊಂಡಿದ್ದು, ಇದರ ಉತ್ಪಾದನಾ ಸಾಮರ್ಥ್ಯ ೧೭.೨ ಮೆ. ವ್ಯಾ. ಆಗಿತ್ತು. ಇದು ಮಂಡ್ಯ ಜಿಲ್ಲೆಯ ಮಳವಳ್ಳಿ ತಾಲೂಕಿನ ಶಿಂಷಾಪುರದ ಸಮೀಪ ಶಿಂಷಾ ಮತ್ತು ಕಾವೇರಿ ನದಿಗಳು ಸಂಧಿಸುವ ಸ್ಥಳದಲ್ಲಿದೆ.

ಪಶ್ಚಿಮಾಭಿಮುಖವಾಗಿ ಹರಿಯುತ್ತಿರುವ ಶರಾವತಿ ನದಿಯು ಗೇರುಸೊಪ್ಪ ಸಮೀಪ ಧುಮ್ಮಿಕ್ಕುವ ಸ್ಥಳದಲ್ಲಿ ೪೮ ಮೆ. ವ್ಯಾ. ಸಾಮರ್ಥ್ಯದ ಮಹಾತ್ಮಗಾಂಧಿ ಜಲವಿದ್ಯುತ್ ಕೇಂದ್ರ (ಸ್ಟೇಷನ್)ವನ್ನು ೧೯೪೭-೪೮ನೇ ಸಾಲಿನಲ್ಲಿ ನಿರ್ಮಿಸಲಾಯಿತು. ರಾಜ್ಯದಲ್ಲಿ ಈಗ ಬಳಕೆಯಾಗುತ್ತಿರುವ ಅಧಿಕ ಪ್ರಮಾಣದ ವಿದ್ಯುತ್ತನ್ನು ಈ ಕೇಂದ್ರದಿಂದ ಉತ್ಪಾದಿಸಲಾಗುತ್ತಿದೆ.

ಭದ್ರಾನದಿಯ ಮುಖ್ಯ ಅಣೆಕಟ್ಟಿನ ಬಳಿಯಲ್ಲಿ ಭದ್ರ ಪವರ್‌ಹೌಸನ್ನು ೧೯೬೨ ರಲ್ಲಿ ನಿರ್ಮಿಸಲಾಯಿತು. ಹೊಸಪೇಟೆ ಸಮೀಪವಿರುವ ತುಂಗಭದ್ರಾ ಅಣೆಕಟ್ಟಿನ ಎಡದಂಡೆಯ ಮೇಲೆ ೧೯೬೨ ರಲ್ಲಿ ನಿರ್ಮಿಸಲಾಗಿರುವ ಮುನಿರಾಬಾದ್ ಪವರ್‌ಸ್ಟೇಷನ್‌ನಲ್ಲಿ ಒಂಬತ್ತು ಮೆ.ವ್ಯಾ. ಸಾಮರ್ಥ್ಯವಿರುವ ಮೂರು ಜನರೇಟಿಂಗ್ ಘಟಕಗಳಿವೆ. ತುಂಗಭದ್ರಾ ಬಲದಂಡೆಯ ಪವರ್‌ಹೌಸ್ ರಾಜ್ಯಕ್ಕೆ ೧೪.೪೦ ಮೆ. ವ್ಯಾ. ವಿದ್ಯುತ್ತನ್ನು ಉತ್ಪಾದನೆ ಮಾಡುತ್ತಿದೆ. ಇದು ಪ್ರತಿಶತ ೨೦ರಷ್ಟು ಮಾತ್ರವಿದ್ದು, ಉಳಿದ ಪ್ರತಿಶತ ೮೦ ರಷ್ಟನ್ನು ಆಂಧ್ರಪ್ರದೇಶಕ್ಕೆ ಬಿಟ್ಟುಕೊಡಲಾಗಿದೆ. ೧೯೭೧ರ ಮಾರ್ಚಿನಲ್ಲಿ ಕಾಳಿ ಜಲವಿದ್ಯುತ್ ಯೋಜನೆಯು ಕಾರ್ಯರೂಪಕ್ಕೆ ಬಂದಿತು. ೧೯೭೯-೮೦ರಲ್ಲಿ ವರಾಹಿ ಯೋಜನೆಯ ಕೆಲಸ ಆರಂಭಗೊಂಡಿತು.

ರಾಯಚೂರು ಶಾಖೋತ್ಪನ್ನ ಘಟಕವು ರಾಜ್ಯದಲ್ಲಿನ ಮೊಟ್ಟಮೊದಲ ಶಾಖೋತ್ಪನ್ನ ವಿದ್ಯುತ್ ಘಟಕವಾಗಿದೆ. ಕೇಂದ್ರ ಸರ್ಕಾರವು ಉತ್ತರ ಕನ್ನಡ ಜಿಲ್ಲೆಯ ಕೈಗಾದಲ್ಲಿ ಅಣುವಿದ್ಯುಚ್ಛಕ್ತಿ ಉತ್ಪಾದನೆಯ ಹೊಸ ಯೋಜನೆಯನ್ನು ಕೈಗೊಂಡಿದ್ದರಿಂದ ವಿದ್ಯುತ್ ಮೂಲಕ ಸೌಲಭ್ಯಗಳು ಅಧಿಕಗೊಂಡಂತಾಗಿದೆ. ದಿ:೨೯.೦೩.೧೯೮೫ರಲ್ಲಿ ೨೧೦ ಮೆ. ವ್ಯಾ. ಸಾಮರ್ಥ್ಯವಿರುವ ಆರ್.ಟಿ.ಪಿ.ಎಸ್.ನ ಮೊದಲ ಹಂತ, ದಿ:೦೨.೦೮.೧೯೮೬ರಲ್ಲಿ ೨೧೦ ಮೆ.ವ್ಯಾ. ಸಾಮರ್ಥ್ಯದ ಎರಡನೆಯ ಹಂತ, ದಿ: ೦೩.೧೦.೧೯೯೧ರಲ್ಲಿ ೨೧೦ ಮೆ.ವ್ಯಾ. ಸಾಮರ್ಥ್ಯದ ಮೂರನೆಯ ಹಂತ, ದಿ:೨೯-೦೯-೧೯೯೪ರಲ್ಲಿ ೨೧೦ ಮೇ.ವ್ಯಾ. ಸಾಮರ್ಥ್ಯದ ನಾಲ್ಕನೆ ಹಂತ, ದಿ:೩೧-೦೧-೧೯೯೯ರಲ್ಲಿ ೨೧೦ ಮೆ.ವ್ಯಾ. ಸಾಮರ್ಥ್ಯದ ಐದನೆಯ ಹಂತ, ದಿ:೨೨.೦೭.೧೯೯೯ರಲ್ಲಿ ೨೧೦ ಮೆ.ವ್ಯಾ. ಸಾಮರ್ಥ್ಯದ ಆರನೆಯ ಹಂತ ಮತ್ತು ದಿ:೧೮.೧೦.೨೦೦೦ರಲ್ಲಿ ೨೧೦ ಮೆ. ವ್ಯಾ. ಸಾಮರ್ಥ್ಯದ ಏಳನೆಯ ಹಂತ ಹಾಗೂ ದಿ:೧೧-೧೨-೨೦೧೦ರಲ್ಲಿ ೨೫೦ ಮೆ.ವ್ಯಾ. ಸಾಮರ್ಥ್ಯದ ಎಂಟನೇ ಘಟಕ ಹೀಗೆ ಎಂಟು ಹಂತಗಳಲ್ಲಿ ರಾಯಚೂರು ಶಾಖೋತ್ಪನ್ನ ವಿದ್ಯುತ್ ಘಟಕಗಳನ್ನು ಪ್ರಾರಂಭಿಸಲಾಗಿದೆ. ಬೆಂಗಳೂರು ಸಮೀಪವಿರುವ ಯಲಹಂಕದಲ್ಲಿ ಡೀಸಲ್ ಪವರ್ ಸ್ಟೇಷನ್ ಅನ್ನು ಪ್ರಾರಂಭಿಸಲಾಗಿದೆ.

ವಿದ್ಯುತ್ ಉತ್ಪಾದನೆಗಾಗಿ ೧೯೯೯-೨೦೦೦ನೇ ಸಾಲಿನ ಯೋಜನೆಯಲ್ಲಿ ರೂ. ೬೭೨.೧೮ ಕೋಟಿ ಅನುದಾನವನ್ನು ನಿಗದಿಪಡಿಸಲಾಗಿತ್ತು, ಅದನ್ನು ಪರಿಷ್ಕರಿಸಿ ರೂ.೩೨೫ ಕೋಟಿಗೆ ನಿಗದಿಪಡಿಸಲಾಯಿತು. ಆರಂಭಿಕ ೨೫೦ ಮೆ.ವ್ಯಾ. ಸಾಮರ್ಥ್ಯದ ವಿದ್ಯುತ್ ಉತ್ಪಾದನಾ ಯೋಜನೆ ಇದಾಗಿತ್ತು. ೧೯೯೯ ರ ಜುಲೈನಲ್ಲಿ ಕೊಡಸಳ್ಳಿ ಅಣೆಕಟ್ಟು ಮತ್ತು ಪವರ್‌ಹೌಸ್‌ನ (೪೦ ಮೆ.ವ್ಯಾ) ಮೂರನೇ ಘಟಕವನ್ನು ಯೋಜನೆಗೆ ನಿಗದಿಪಡಿಸಿದ್ದ ಹಣದಲ್ಲಿ ಸಾಧ್ಯವಾದಷ್ಟು ಉಳಿತಾಯ ಮಾಡಿ ೩೪ ತಿಂಗಳಲ್ಲಿ ಕಾರ್ಯರಂಭಗೊಳಿಸಲಾಗಿದೆ ಮತ್ತು ನಿಗದಿಪಡಿಸಿದ ಆರಂಭಿಕ ೨೫೦ ಮೆ.ವ್ಯಾ. ಸಾಮರ್ಥ್ಯದ ಗುರಿಯನ್ನು ಸಹ ಸಾಧಿಸಲಾಗಿದೆ.

### ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿ

ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯು ಇತರ ರಾಜ್ಯಗಳಲ್ಲಿರುವಂತೆ ಮುಖ್ಯವಾಗಿ ವಿದ್ಯುತ್ ಸಾಗಾಣಿಕೆ ಮತ್ತು ವಿತರಣೆ ಕಾರ್ಯನಿರ್ವಹಿಸುತ್ತದೆ. ಇದು ರಾಜ್ಯ ಸರ್ಕಾರವು ನಿಗದಿಪಡಿಸಿದ ಬೆಲೆಗೆ ಕರ್ನಾಟಕ ವಿದ್ಯುತ್

ನಿಗಮವು ಉತ್ಪಾದಿಸಿದ ವಿದ್ಯುತ್ತನ್ನು ಕೊಂಡುಕೊಳ್ಳುತ್ತದೆ. ರಾಜ್ಯದ ತುಂಗಭದ್ರಾ ನದಿಯ ಬಳಿ ಸ್ಥಾಪಿತವಾಗಿರುವ ಎರಡು ವಿದ್ಯುತ್ ಕೇಂದ್ರಗಳ ಕಾರ್ಯವನ್ನು ಕರ್ನಾಟಕ ಸರ್ಕಾರ, ಆಂಧ್ರಪ್ರದೇಶದ ಸರ್ಕಾರ ಮತ್ತು ಭಾರತ ಸರ್ಕಾರದ ಆಡಳಿತದ ವ್ಯಾಪ್ತಿಗೊಳಪಟ್ಟಿರುವ ತುಂಗಭದ್ರಾ ಮಂಡಳಿ ನಿರ್ವಹಿಸುತ್ತಿದೆ. ಇವುಗಳಿಂದ ಉತ್ಪಾದನೆಯಾದ ಶಕ್ತಿಯಲ್ಲಿ ಶೇ.೨೦ರಷ್ಟನ್ನು ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಗೆ ಕೊಡಲಾಗುತ್ತಿದೆ. ಕೇಂದ್ರ, ಹಂಚಿಕೆಯ ಜೊತೆಗೆ ಕರ್ನಾಟಕವೂ ನ್ಯಾಷನಲ್ ಥರ್ಮಲ್ ಪವರ್ ಕಾರ್ಪೋರೇಷನ್ ಮತ್ತು ಇತರೆ ಸಂಸ್ಥೆಗಳಿಂದಲೂ ಸಹ ವಿದ್ಯುತ್ತನ್ನು ಪಡೆದುಕೊಳ್ಳುತ್ತಿದೆ. ಇದರಲ್ಲಿ ಶೇ.೧೬ರಷ್ಟನ್ನು ಕರ್ನಾಟಕ ಪಡೆದುಕೊಂಡಿದೆ. ೧೯೯೩ (ಜೂನ್) ರಲ್ಲಿ ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯು ಈ ಕೆಳಗಿನ ಕೆಲವು ಪ್ರಮುಖ ವಿಶೇಷತೆಗಳಿಂದ ಕೂಡಿತ್ತು.

(೧)ಸ್ಥಾಪಿತ ಹಂತಗಳು ೫೩,೪೫,೮೦೫ (ಇನ್‌ಸ್ಟಲೇಷನ್ಸ್) (೨) ಕಾರ್ಮಿಕರು ೪೫,೩೮೧ (೩) ವಿವಿಧ ಸಾಮರ್ಥ್ಯದ ಉಪಕೇಂದ್ರಗಳು ೩೫೪ ಮತ್ತು ಅವುಗಳ ಒಟ್ಟು ಸಾಮರ್ಥ್ಯ ೮೨೨೩.೯೫ ಮೆ.ವ್ಯಾ. (೪) ವಿತರಣಾ ಮಾರ್ಗಗಳು ೩,೭೮,೫೪೩,೩೬೬ ಕಿ.ಮೀ (೫) ಒಟ್ಟು ೫,೧೫೪ ಮೆ.ವ್ಯಾ. ಸಾಮರ್ಥ್ಯವಿರುವ ವಿದ್ಯುತ್ ಟ್ರಾನ್ಸ್‌ಫಾರ್ಮರ್ಸ್ ೭೯,೬೬೫ ೬) ಕಡಿಮೆ ಸ್ಥಾಪಿತ ಸಾಮರ್ಥ್ಯದ ಇನ್‌ಸ್ಟಲೇಷನ್ಸ್‌ಗಳು ೨,೨೧,೯೪೮ ಮತ್ತು ವಿದ್ಯುದ್ದೀಕರಣಗೊಂಡ ನೀರಾವರಿ ಪಂಪ್ ಸೆಟ್ಟುಗಳು ೭,೩೩,೦೦೦.

ದಿ:೧೬-೦೭-೧೯೯೭ರಲ್ಲಿ ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯನ್ನು ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ ಎಂಬುದಾಗಿ ಮರುನಾಮಕರಣ ಮಾಡಲಾಯಿತು. ೦೧-೦೬-೨೦೦೨ರಲ್ಲಿ ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ ಇದರ ವಿತರಣಾ ವ್ಯವಸ್ಥೆಯನ್ನು ಬೆಸ್ಕಾಂ, ಹೆಸ್ಕಾಂ, ಗೆಸ್ಕಾಂ ಮತ್ತು ಮೆಸ್ಕಾಂಗಳೆಂಬ ನಾಲ್ಕು ಕಂಪನಿಗಳಾಗಿ ವಿಭಜಿಸಲಾಯಿತು. ಮತ್ತೆ ೦೧-೦೬-೨೦೦೫ರಲ್ಲಿ ಮೆಸ್ಕಾಂನ್ನು ವಿಭಜಿಸಿ ಮಂಗಳೂರು ವಿದ್ಯುತ್ ಸರಬರಾಜು ಕಂಪನಿ ಹಾಗೂ ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ಎಂಬ ಕಂಪನಿಗಳಾಗಿ ವಿಭಜಿಸವೆ. ವಿದ್ಯುತ್ ವಿತರಣಾ ವ್ಯವಸ್ಥೆಯನ್ನು ನೀಡಲಾಯಿತು.

ಕರ್ನಾಟಕ ವಿದ್ಯುಚ್ಛಕ್ತಿ ನಿಗಮವು ತಪಾಸಣೆ ಮಾಡುವ, ನಕ್ಷೆ ತಯಾರಿಸುವ, ನಿರ್ಮಾಣ ಮಾಡುವ, ಉತ್ಪಾದಕ ಸ್ಥಾವರಗಳಲ್ಲಿನ ಯಂತ್ರಗಳನ್ನು ನಡೆಸುವ ಮತ್ತು ಸಲಹುವ ಹಾಗೂ ವಿದ್ಯುತ್ತನ್ನು ಉತ್ಪಾದಿಸುವ ಕಾರ್ಯಕ್ಕೆ ಸಂಬಂಧಿಸಿದಂತೆ ಸರ್ಕಾರದ ಸ್ವಾಧೀನದಲ್ಲಿರುವ ಕಂಪನಿಯಾಗಿರುವುದು.

ಸಾರ್ವಜನಿಕ ವಲಯದ ಸ್ಥಾಪಿತ ಸಾಮರ್ಥ್ಯ (ನವೆಂಬರ್ ೨೦೧೦ರವರೆಗೆ) ೫೯೭೫.೯೧ ಮೆ. ವ್ಯಾ. ಎಂದು ನಿರೀಕ್ಷಿಸಲಾಗಿತ್ತು. ಈ ಸಾಮರ್ಥ್ಯ ೨೦೦೯-೧೦ನೇ ಸಾಲಿನ ಸಾಮರ್ಥ್ಯ ೫೭೨೫.೯೬ ಮೆ.ವ್ಯಾ.ಗೆ ಹೋಲಿಸಿದಾಗ ಸ್ವಲ್ಪ ಹೆಚ್ಚಳ ಕಂಡುಬಂದಿರುತ್ತದೆ. ಸಾರ್ವಜನಿಕ ವಲಯದ ಸ್ಥಾಪಿತ ಸಾಮರ್ಥ್ಯ ಅಂದಾಜು ೫೯೭೫.೯೧ ಮೆ.ವ್ಯಾ. ನಲ್ಲಿ ಶೇ.೬೧ರಷ್ಟು ಜಲ ವಿದ್ಯುತ್ ಹಾಗೂ ಶೇ.೩೭ ರಷ್ಟು ಶಾಖೋತ್ಪನ್ನದಿಂದ ಸ್ಥಾಪಿಸಿದ್ದು, ಇವೆರಡರಿಂದ ಶೇ.೯೮ ರಷ್ಟು ಸ್ಥಾಪಿತ ಸಾಮರ್ಥ್ಯವಿರುತ್ತದೆ. ಇನ್ನುಳಿದ ಶೇ.೨ ರಷ್ಟನ್ನು ಡೀಸೆಲ್, ವಾಯು ಹಾಗೂ ಸೌರಶಕ್ತಿಯಿಂದ ಉತ್ಪಾದಿಸಲಾಗುತ್ತಿದೆ.

ಖಾಸಗಿ ವಲಯದ ಸಾಮರ್ಥ್ಯವು ೩೧ ಮಾರ್ಚ್ ೨೦೧೦ರಂತೆ ಜಲ, ಶಾಖೋತ್ಪನ್ನ ಹಾಗೂ ಸಹ ಉತ್ಪಾದನೆ ಮತ್ತು ಬಯೋಮಾಸ್ ಸೇರಿಸಿ ೨೯೫೯.೯೫ ಮೆ.ವ್ಯಾ. ಸ್ಥಾಪಿತ ಸಾಮರ್ಥ್ಯವಿರುತ್ತದೆ. ಖಾಸಗಿ ವಲಯದ ಸಾಮರ್ಥ್ಯ ನವೆಂಬರ್ ೨೦೧೦ಕ್ಕೆ ೩೭೨೫.೭೫ ಮೆ.ವ್ಯಾ. ರಷ್ಟು ಅಂದಾಜು ಮಾಡಲಾಗಿದೆ. ಈ ವರ್ಷದಲ್ಲಿ ಖಾಸಗಿ ವಲಯದ ಸ್ಥಾಪಿತ ಸಾಮರ್ಥ್ಯವು ಸಾಕಷ್ಟು ಹೆಚ್ಚಳವಾಗಿರುತ್ತದೆ. ಇದರಿಂದ ಸ್ಥಾಪಿತ ಸಾಮರ್ಥ್ಯವು ೨೦೦೯-೧೦ನೇ ಸಾಲಿಗೆ ಹೋಲಿಸಿದಾಗಿ ೮೬೮೫.೯೧ ಎಂ.ಯು ನಿಂದ ೨೦೧೦-೧೧ನೇ ಸಾಲಿನಲ್ಲಿ ೯೭೦೧.೬೬ ಎಂ.ಯುಗೆ ಹೆಚ್ಚಳವಾಗಿರುತ್ತದೆ.

ವಿದ್ಯುಚ್ಛಕ್ತಿಯ ಸಾಗಾಣಿಕೆ ಮತ್ತು ವಿತರಣೆಯು ಅನೇಕ ದೋಷಗಳಿಂದ ಕೂಡಿರುತ್ತದೆ. ಲೈನ್‌ಗಳಲ್ಲಿ ಉಂಟಾಗುವ ನಷ್ಟ, ಪದೇ ಪದೇ ವಿದ್ಯುತ್ ಸ್ಥಗಿತ ಮತ್ತು ವೋಲ್ಟೇಜಿನಲ್ಲಿ ವ್ಯತ್ಯಯ ಮೊದಲಾದವುಗಳು ಸಾಗಾಣಿಕೆಯಲ್ಲಿನ ದೋಷಗಳಾಗಿವೆ. ಸಾಗಾಣಿಕೆ ಮತ್ತು ಹಂಚಿಕೆಯಲ್ಲಿ ಉಂಟಾಗುವ ನಷ್ಟವನ್ನು ಕಡಿಮೆ ಮಾಡುವುದಕ್ಕಾಗಿ ಪ್ರಮುಖ ಸಾಗಾಣಿಕಾ ಲೈನ್‌ಗಳ ನಿರ್ಮಾಣ ಮತ್ತು ಸಬ್‌ಸ್ಟೇಷನ್ ಹಾಗೂ ಸಿಸ್ಟಂ ಸುಧಾರಣಾ ಕಾರ್ಯವನ್ನು ತೀವ್ರಗೊಳಿಸಲಾಗಿದೆ. ವಿದ್ಯುತ್ತಿನ ಕಳ್ಳತನವನ್ನು ತಪ್ಪಿಸಲು ಕರ್ನಾಟಕ ವಿದ್ಯುತ್ ಸಾಗಾಣಿಕಾ ನಿಗಮದ ಜಾಗೃತ ದಳವನ್ನು ಬಲಪಡಿಸಲಾಗಿದೆ. ಅನುಮಾನಾಸ್ಪದ ಜೋಡಣೆ ಇರುವ ಕಡೆ (ಇನ್‌ಸ್ಟಲೇಷನ್) ಅದನ್ನು ರಕ್ಷಿಸಲು ಜೋಡಣೆ ರಕ್ಷಣಾ ಪ್ಲಾಸ್ಟಿಕ್ ಕೊಳವೆಗಳನ್ನು ಒದಗಿಸಲಾಗಿದೆ. ವಿದ್ಯುತ್ ಕಳ್ಳತನ ಮಾಡುವುದು ಶಿಕ್ಷಾರ್ಹ ಅಪರಾಧವಾಗಿಸುವ ದಿಶೆಯಲ್ಲಿ ರಾಜ್ಯ ಸರ್ಕಾರ ಅವಶ್ಯಕ ಕಾನೂನನ್ನು ಜಾರಿಗೆ ತರುವ ಪ್ರಸ್ತಾವನೆಯನ್ನು ಹೊಂದಿದೆ. ಈಗಿರುವ ಕಾಯಿದೆಯಲ್ಲಿ ವಿದ್ಯುತ್ ಕಳ್ಳತನ ಮಾಡುವವರಿಗೆ ಯಾವ ಶಿಕ್ಷೆಯನ್ನು ನಿಗದಿಪಡಿಸಿರುವುದಿಲ್ಲ.

ಕರ್ನಾಟಕದಲ್ಲಿ ಸೌರಶಕ್ತಿಯಿಂದ ವಿದ್ಯುತ್ ಉತ್ಪಾದಿಸುವ ಘಟಕಗಳನ್ನು ಸ್ಥಾಪಿಸಲಾಗುತ್ತಿದೆ. ಅವುಗಳಲ್ಲಿ ಕೋಲಾರ ಜಿಲ್ಲೆಯ ಬಂಗಾರಪೇಟೆ ತಾಲೂಕು ಎಲೇಸಂದ್ರ ಗ್ರಾಮದಲ್ಲಿ ೧೫ ಎಕರೆ ವಿಸ್ತೀರ್ಣದಲ್ಲಿ ಸೌರಶಕ್ತಿ ಘಟಕವನ್ನು ಈಗಾಗಲೇ ರಾಷ್ಟ್ರಕ್ಕೆ ಸಮರ್ಪಿಸಲಾಗಿದೆ. ಇದರ ಒಟ್ಟು ವೆಚ್ಚ ರೂ. ೫೮.೭೫ ಕೋಟಿಗಳಾಗಿದ್ದು, ಇದರ ಸ್ಥಾಪಿತ ಸಾಮರ್ಥ್ಯ ಮೂರು ಮೆ. ವ್ಯಾ.ಗಳಾಗಿದೆ. ಇಟ್ನಾಳ್ ಸೌರಶಕ್ತಿ ಉತ್ಪಾದನಾ ಕೇಂದ್ರ ಬೆಳಗಾವಿ ಜಿಲ್ಲೆಯಲ್ಲಿ ನಿರ್ಮಾಣದ ಹಂತದಲ್ಲಿದೆ. ಪವನ ವಿದ್ಯುತ್ ಉತ್ಪಾದನಾ ಕೇಂದ್ರ ಮುಖ್ಯವಾಗಿ ಕಪ್ಪತಗುಡ್ಡದಲ್ಲಿದ್ದು ಇದರ ಸ್ಥಾಪಿತ ಸಾಮರ್ಥ್ಯ ೪.೫೬ ಮೆ.ವ್ಯಾ.ಆಗಿದೆ. ಹೆಚ್ಚಿನ ವಿವರಗಳಿಗೆ ಕೋಷ್ಟಕ: ೫.೫೩ನ್ನು ನೋಡಿ.

## ಕೋಷ್ಟಕ ೫.೫೩: ದಿನಾಂಕ ೩೧-೦೩-೨೦೧೨ರಲ್ಲಿ ಕರ್ನಾಟಕ ವಿದ್ಯುತ್ ನಿಗಮ (ನಿ) ಸ್ವಾಧೀನದಲ್ಲಿದ್ದ ವಿವಿಧ ನದಿ ಕಣಿವೆಗಳಲ್ಲಿನ ಬೃಹತ್ ವಿದ್ಯುತ್ ಪವರಸ್ಟೇಷನ್‌ಗಳ ವಿವರ

| ಕ್ರ.ಸಂ. | ಪವರ್ ಸ್ಟೇಷನ್‌ಗಳು | ಘಟಕಗಳ ಸಂಖ್ಯೆ x ಉತ್ಪಾದನಾ ಸಾಮರ್ಥ್ಯ (ಮೆ.ವ್ಯಾ) | ಸ್ಥಾಪಿತ ಸಾಮರ್ಥ್ಯ (ಮೆ.ವ್ಯಾ.ಗಳಲ್ಲಿ) |
|---|---|---|---|
| ೧ | ೨ | ೩ | ೪ |
| ಎ) | **ಜಲವಿದ್ಯುತ್** | | |
| ೧. | **ಕಾವೇರಿ ನದಿ ಕಣಿವೆ ಯೋಜನೆ** | | |
| | ಅ) ಶ್ರೀ ಶೇಷಾದ್ರಿ ಐಯ್ಯರ್ ಜಲವಿದ್ಯುತ್ ಸ್ಟೇಷನ್ (ಶಿವಸಮುದ್ರ)<br>ಆ) ಶಿಂಷಾ ಜಲವಿದ್ಯುತ್ ಸ್ಟೇಷನ್ | ೪ x ೬<br>೬ x ೩<br>೨ x ೮.೬೦ | ೪೨.೦೦<br>೧೭.೨೦ |
| | **ಒಟ್ಟು** | | **೫೯.೨೦** |
| ೨. | **ಶರಾವತಿ ಜಲವಿದ್ಯುತ್ ಯೋಜನೆ** | | |
| | ಅ) ಲಿಂಗನ ಮಕ್ಕಿ ಅಣೆಕಟ್ಟು ಪವರ್ ಹೌಸ್ | ೨ x ೨೭.೫೦ | ೫೫.೦೦ |
| | ಆ) ಮಹಾತ್ಮಗಾಂಧಿ ಜಲವಿದ್ಯುತ್ ಸ್ಟೇಷನ್ | ೪ x ೨೧.೬೦<br>೪ x ೧೩.೨೦ | ೧೩೯.೨೦ |
| | ಇ) ಶರಾವತಿ ಜನರೇಟಿಂಗ್ ಸ್ಟೇಷನ್ | ೧೦ x ೧೦೩.೫೦ | ೧೦೩೫.೦೦ |
| | ಈ) ಗೇರು ಸೊಪ್ಪೆ ಅಣೆಕಟ್ಟು ಪವರ್ ಹೌಸ್ | ೪ x ೬೦ | ೨೪೦.೦೦ |
| | **ಒಟ್ಟು** | | **೧೪೬೯.೨೦** |
| ೩. | **ಕಾಳಿನದಿ ಜಲವಿದ್ಯುತ್ ಯೋಜನೆ** | | |
| | ಅ) ಸೂಪ ಅಣೆಕಟ್ಟು ಪವರ್ ಹೌಸ್ | ೨ x ೫೦ | ೧೦೦.೦೦ |
| | ಆ) ನಾಗಝರಿ ಪವರ್ ಹೌಸ್ | ೫೦ x ೧೫೦ | ೮೮೫ |
| | | ೧ x ೧೩೫ | |
| | ಇ)ಕದ್ರ ಅಣೆಕಟ್ಟು ಪವರ್‌ಹೌಸ್ | ೩ x ೫೦ | ೧೫೦.೦೦ |
| | ಈ) ಕೊಡಸಳ್ಳಿ ಅಣೆಕಟ್ಟು ಪವರ್ ಹೌಸ್ | ೩ x ೪೦ | ೧೨೦.೦೦ |
| | **ಒಟ್ಟು** | | **೧೨೨೫.೦೦** |
| ೪. | **ವರಾಹಿ ಜಲವಿದ್ಯುತ್ ಯೋಜನೆ** | | |
| | ಅ) ಮಿನಿ ಡ್ಯಾಮ್ ಪವರ್ ಹೌಸ್ | ೨ x ೪.೫೦ | ೯.೦೦ |
| | ಆ) ವರಾಹಿ ಅಂಡರ್‌ಗ್ರೌಂಡ್ ಪವರ್‌ಹೌಸ್ | ೪ x ೧೧೫ | ೪೬೦.೦೦ |
| | ಒಟ್ಟು | | ೪೬೯.೦೦ |
| ೫. | **ಕೃಷ್ಣಾ ನದಿ ಕಣಿವೆ ಯೋಜನೆ** | | |
| | ಅ) ಆಲಮಟ್ಟಿ ಅಣೆಕಟ್ಟು ಪವರ್‌ಹೌಸ್ | ೧ x ೧೫<br>೫ x ೫೫ | ೨೯೦.೦೦ |
| | **ಒಟ್ಟು** | | **೨೯೦.೦೦** |
| ೬. | **ಮಿನಿ ಜಲವಿದ್ಯುತ್ ಯೋಜನೆಗಳು** | | |
| | ಅ) ಭದ್ರಾ ಬಲದಂಡೆ ಪವರ್ ಹೌಸ್ | ೧ x ೭.೨<br>೧ x ೬ | ೧೩.೨೦ |
| | ಆ) ಭದ್ರಾ ಎಡದಂಡೆ ಪವರ್ ಹೌಸ್ | ೨ x ೧೨<br>೧ x ೨ | ೨೬.೦೦ |
| | ಇ) ಮುನಿರಾಬಾದ್ ಪವರ್ ಹೌಸ್ | ೨ x ೯<br>೧ x ೧೦ | ೨೮.೦೦ |
| | ಈ) ಘಟಪ್ರಭಾ | ೨ x ೧೬ | ೩೨.೦೦ |
| | ಉ) ಮಲ್ಲಾಪುರ | ೨ x ೪.೫ | ೯.೦೦ |

| | | | |
|---|---|---|---|
| | ಊ) ಸಿರವಾರ | ೧ x ೧ | ೧.೦೦ |
| | ಋ)ಕಲ್‌ಮಲ | ೧ x ೦.೪೦ | ೦.೪೦ |
| | ೠ) ಗಣೆಕಲ್ | ೧ x ೦.೩೫ | ೦.೩೫ |
| | **ಒಟ್ಟು** | | **೧೦೯.೯೫** |
| | **(ಎ) ಜಲವಿದ್ಯುತ್‌ನ ಒಟ್ಟು ಮೊತ್ತ** | | **೩೬೫೨.೩೫** |
| **ಬಿ)** | **ಶಾಖೋತ್ಪನ್ನ** | | |
| | ಅ) ರಾಯಚೂರು ಶಾಖೋತ್ಪನ್ನ ಪವರ್‌ಸ್ಟೇಷನ್ | ೭ x ೨೧೦ | ೧೪೭೦.೦೦ |
| | ಆ) ರಾಯಚೂರು ಶಾಖೋತ್ಪನ್ನ ಪವರ್‌ಸ್ಟೇಷನ್ | ೧ x ೨೫೦ | ೨೫೦ |
| | ಇ)ಬಳ್ಳಾರಿ ಶಾಖೋತ್ಪನ್ನ ಪವರ್‌ಸ್ಟೇಷನ್ | ೧ x ೫೦೦ | ೫೦೦.೦೦ |
| **ಸಿ)** | **ಡೀಸೆಲ್ ಜನರೇಟಿಂಗ್ ಸ್ಟೇಷನ್** | | |
| | ಅ) ಯಲಹಂಕ ಡೀಸೆಲ್ ಜನರೇಟಿಂಗ್ ಸ್ಟೇಷನ್ | ೬ | ೧೦೮.೦೦ |
| | ಶಾಖೋತ್ಪನ್ನ + ಡೀಸೆಲ್ ಒಟ್ಟು ಮೊತ್ತ | | ೨೩೨೮.೦೦ |
| **ಡಿ)** | **ಪವನ (ಗಾಳಿ)** | | |
| | ಅ)ಕಪ್ಪದ ಗುಡ್ಡ ಪವನ ಫಾರಂ | ೯ x ೦.೨೨೫<br>೧೧ x ೦.೨೩ | ೪.೫೫೫ |
| **ಇ)** | **ಸೌರ ಶಕ್ತಿ** | | |
| | ಸೋಲಾರ್ ಪಿವಿ ಪ್ಲಾಂಟ್ ಕೋಲಾರ ಜಿಲ್ಲೆ | | ೩.೦೦ |
| | ಸೋಲಾರ್ ಪಿವಿ ಪ್ಲಾಂಟ್ ಬೆಳಗಾವಿ ಜಿಲ್ಲೆ | | ೩.೦೦ |
| | **ಒಟ್ಟು ಮೊತ್ತ** | | **೫೯೯೦.೯೦೫** |
| | **ಮುಂದುವರಿದ ಯೋಜನೆಗಳು** | | |
| **ಎ)** | **ಶಾಖೋತ್ಪನ್ನ** | | |
| | ಅ) ಬಳ್ಳಾರಿ ಶಾಖೋತ್ಪನ್ನ ಪವರ್ ಸ್ಟೇಷನ್ ಘಟಕ-೨ | ೧ x ೫೦೦ | ೫೦೦.೦೦ |
| | ಆ) ಎರಮರಸ್ ಶಾಖೋತ್ಪನ್ನ ಪವರ ಸ್ಟೇಷನ್ | ೨ x ೮೦೦ | ೧೬೦೦.೦೦ |
| | ಇ) ಎಡ್ಲಪುರ ಶಾಖೋತ್ಪನ್ನ ಪವರ್‌ಸ್ಟೇಷನ್ | ೧ x ೮೦೦ | ೮೦೦.೦೦ |
| | ಈ) ಬಳ್ಳಾರಿ ಶಾಖೋತ್ಪನ್ನ ಪವರ್ ಸ್ಟೇಷನ್ ಘಟಕ-೩ | ೧ x ೭೦೦ | ೭೦೦.೦೦ |
| | **ಒಟ್ಟು** | | **೩೬೦೦.೦೦** |
| **ಬಿ)** | **ಜಲವಿದ್ಯುತ್** | | |
| | ಆರ್‌ಎಂ ಅಂಡ್ ಯು ಆಫ್ ಎನ್‌ಪಿಹೆಚ್ ಘಟಕ -೬ | ೧ x ೧೫ | ೧೫ |
| **ಸಿ)** | **ಸಂಪ್ರದಾಯವಲ್ಲದ** | | |
| | ಅ) ಸೋಲಾರ್ ಫೋಟೋ ವೋಲ್‌ಟಾಯಿಕ್ ಯೋಜನೆ | | ೩ |
| | ಆ) ಶಿವನಸಮುದ್ರದಲ್ಲಿರುವ ಸೋಲಾರ್ ಫೋಟೋ ವೋಲ್‌ಟಾಯಿಕ್ ಯೋಜನೆ | | ೫ |
| | **ಎ+ಬಿ+ಸಿ ಯ ಒಟು** | | **೩೬೨೩** |
| | **ಕೆಪಿಸಿಎಲ್‌ನ ಹೊಸ ಯೋಜನೆಗಳು** | | |
| ೧. | ಛತ್ತಿಸ್‌ಗರ್ ಶಾಖೋತ್ಪನ್ನ ಪ್ಲಾಂಟ್ | ೨ x ೮೦೦ | ೧೬೦೦ |
| ೨. | ತದಡಿ ಗ್ಯಾಸ್ ಮೂಲದ ಯೋಜನೆ | | ೨೧೦೦ |
| ೩. | ಬಿಡದಿ ಗ್ಯಾಸ್ ಸಂಯುಕ್ತ ಮೂಲದ ಸೈಕಲ್ ಪವರ್ ಪ್ಲಾಂಟ್ | | ೭೦೦ |
| ೪. | ಗುಡಿಯ ಜಲವಿದ್ಯುತ್ ಯೋಜನೆ | ೨ x ೨೦೦ | ೪೦೦ |
| ೫. | ಶಿವನಸಮುದ್ರ ಕಾಳಕ ಯೋಜನೆ | ೩ x ೧೦೦<br>೧ x ೪೫ | ೩೪ |
| ೬. | ಘಟಪ್ರಭಾ | | ೨೦ |
| ೭. | ಮುನಿರಾಬಾದ್ | | ೧೦ |
| | **ಒಟ್ಟು** | | **೫೧೭೫** |

* * * * *